ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ನಾಯಿ ಕಚ್ಚಿದಾಗ ಆತಂಕ ಪಡದೆ, ಸೂಕ್ತ ಚಿಕಿತ್ಸೆಯನ್ನು ಪಡೆಯಬೇಕು

ಆಳ–ಅಗಲ

ಉದ್ಯೋಗಯೋಗ್ಯತೆ: ಮುಂಚೂಣಿಯಲ್ಲಿ ಕರ್ನಾಟಕ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,540	23,753	₹79,770 (ಬೆಂಗಳೂರು)	₹92,600 (ಬೆಂಗಳೂರು)	85.11

ಐ.ಟಿಗೂ 'ಕಾವೇರಿ' ಲಾಗಿನ್

ಆದಾಯ ತೆರಿಗೆ ವಂಚನೆ ತಡೆ: ಸ್ಥಿರಾಸ್ತಿ ನೋಂದಣಿ ಮೇಲೆ ನಿಗಾಕ್ಕೆ ಅವಕಾಶ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಆದಾಯ ತೆರಿಗೆ ವಂಚನೆ ತಡೆಯುವ ಉದ್ದೇಶದಿಂದ ಸ್ಥಿರಾಸ್ತಿಗಳ ನೋಂದಣಿ, ಪರಭಾರೆ ವಹಿವಾಟುಗಳನ್ನು ನೇರವಾಗಿ ಪರಿಶೀಲಿಸಲು ಅವಕಾಶವಾಗುವಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು 'ಕಾವೇರಿ-2' ತಂತ್ರಾಂಶದಲ್ಲಿ ಆದಾಯ ತೆರಿಗೆ (ಐ.ಟಿ.) ಅಧಿಕಾರಿಗಳಿಗೆ ಪ್ರತ್ಯೇಕ ಲಾಗಿನ್ ಒದಗಿಸಲಿದೆ.

ತೆರಿಗೆ ವಂಚನೆಯ ಸಂಶಯ ವ್ಯಕ್ತವಾಗುವ ಪ್ರತಿ ಪ್ರಕರಣದ ದಾಖಲೆಗಳನ್ನು ಪ್ರತ್ಯೇಕವಾಗಿ ಐ.ಟಿ. ಅಧಿಕಾರಿಗಳಿಗೆ ಒದಗಿಸುವುದು ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಹೊರೆಯಾಗುತ್ತಿದೆ ಎಂಬ ಕಾರಣದಿಂದ ಪ್ರತ್ಯೇಕ ಲಾಗಿನ್ ರೂಪಿಸಲಾಗಿದೆ. ಐ.ಟಿ. ಅಧಿಕಾರಿಗಳಿಗೆ ಕಾವೇರಿ ತಂತ್ರಾಂಶದೊಳಕ್ಕೆ ಲಾಗಿನ್ ಆಗಲು ಅವಕಾಶ ನೀಡುವ ಪ್ರಸ್ತಾವಕ್ಕೆ ರಾಜ್ಯ ಸರ್ಕಾರವೂ ಒಪ್ಪಿಗೆ ನೀಡಿದೆ.

ಇದೇ ವರ್ಷದ ಜನವರಿಯಲ್ಲಿ ನಗರದ ಹೆಬ್ಬಾಳ, ಹಲಸೂರು ಮತ್ತು ಇಂದಿರಾನಗರ ಉಪ ನೋಂದಣಿ ಕಚೇರಿಗಳಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು. ಭಾರಿ ಮೊತ್ತದ ಸ್ಥಿರಾಸ್ತಿ ನೋಂದಣಿ, ಪರಭಾರೆಗೆ ಸಂಬಂಧಿಸಿದ ವಹಿವಾಟುಗಳಲ್ಲಿ ಖರೀದಿದಾರರ ಪ್ಯಾನ್ ಸಂಖ್ಯೆ ಉಲ್ಲೇಖಿಸದೇ ಇರುವುದನ್ನು ಪತ್ತೆ ಹಚ್ಚಲಾಗಿತ್ತು. ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿಗಳ ನೋಂದಣಿ ದಾಖಲೆಗಳಲ್ಲಿ ಪ್ಯಾನ್ ಸಂಖ್ಯೆಯ ಉಲ್ಲೇಖವೇ ಇರಲಿಲ್ಲ, ಹಲವು ಪ್ರಕರಣಗಳಲ್ಲಿ ಪ್ಯಾನ್ ಸಂಖ್ಯೆಯನ್ನೇ ತಪ್ಪಾಗಿ ಉಲ್ಲೇಖಿಸಿರುವುದು ಕಂಡುಬಂದಿತ್ತು.

ಮೂರೂ ಉಪ ನೋಂದಣಿ ಕಚೇರಿಗಳಲ್ಲಿ ನಡೆದಿರುವ ಸುಮಾರು ₹3,000 ಕೋಟಿ ಮೌಲ್ಯದ ಆಸ್ತಿಗಳ ನೋಂದಣಿ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಆದಾಯ ತೆರಿಗೆ ಅಧಿಕಾರಿಗಳು ರಾಜ್ಯದ ಕಂದಾಯ ಇಲಾಖೆಯನ್ನು ಕೋರಿದ್ದರು. ಐ.ಟಿ ಅಧಿಕಾರಿಗಳು ಕೋರಿದಾಗಲೆಲ್ಲ ದಾಖಲೆ ಒದಗಿಸುವ ಬದಲಿಗೆ ನೇರವಾಗಿ ತಂತ್ರಾಂಶದಲ್ಲೇ ಒಳ ಪ್ರವೇಶಿಸಿ ನಿರಂತರ ಪರಿಶೀಲನೆಗೆ ಅವಕಾಶ ಕಲ್ಪಿಸಲು ಇಲಾಖೆ ತೀರ್ಮಾನ ಕೈಗೊಂಡಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಆಯುಕ್ತ ಕೆ.ಎ. ದಯಾನಂದ, 'ಐ.ಟಿ. ಅಧಿಕಾರಿಗಳು ಕಾವೇರಿ ತಂತ್ರಾಂಶವನ್ನು ಬಳಸಿಕೊಂಡೇ ದಾಖಲೆಗಳನ್ನು ಪರಿಶೀಲಿಸಲು ಹಿಂದೆಯೇ ಅವಕಾಶ ಇತ್ತು. ಆದರೆ, ಅವರು ನಮ್ಮ ಕೇಂದ್ರ ಕಚೇರಿಗೆ ಬರಬೇಕಿತ್ತು. ಈಗ ಅವರು ಇರುವ ಸ್ಥಳದಿಂದಲೇ ನೇರವಾಗಿ ಲಾಗಿನ್ ಆಗಿ ದಾಖಲೆ ಪರಿಶೀಲಿಸಲು ಅವಕಾಶ ಕಲ್ಪಿಸಲಾಗುತ್ತಿದೆ' ಎಂದು ತಿಳಿಸಿದರು.

ಪ್ರತ್ಯೇಕ ಲಾಗಿನ್ ಅನ್ನು ಈಗಾಗಲೇ ರೂಪಿಸಲಾಗಿದೆ. ಕೆಲವೇ ದಿನಗಳೊಳಗೆ ಐ.ಟಿ. ಅಧಿಕಾರಿಗಳ ಬಳಕೆಗೆ ಅದನ್ನು ಮುಕ್ತಗೊಳಿಸಲಾಗುವುದು. ಆ ಬಳಿಕ ಕಾವೇರಿ ತಂತ್ರಾಂಶದ ಮೂಲಕ ನಡೆಯುವ ಪ್ರತಿಯೊಂದು ನೋಂದಣಿ ವಹಿವಾಟನ್ನೂ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಆ ಕ್ಷಣದಲ್ಲೇ ಪರಿಶೀಲಿಸಬಹುದು ಎಂದರು.

6ನೇ ಪುಟ ನೋಡಿ

ಮುಖ್ಯಾಂಶಗಳು

- ಐ.ಟಿ. ಅಧಿಕಾರಿಗಳು ಕುಳಿತಲ್ಲಿಂದಲೇ ವಹಿವಾಟು ಪರಿಶೀಲಿಸಬಹುದು
- ತಪಾಸಣೆಗಾಗಿ ದಾಖಲೆ ಸಲ್ಲಿಸುವ ಹೊರೆಯಿಂದ ನೋಂದಣಿ ಇಲಾಖೆಗೆ ಮುಕ್ತಿ
- ದೊಡ್ಡ ಮೊತ್ತದ ವಹಿವಾಟುಗಳ ಮಾಹಿತಿ ಸಂಗ್ರಹ ಸುಲಭವಾಗಲಿದೆ

ಶೀಘ್ರದಲ್ಲಿ ಡಿಜಿಟಲ್ ಚಲನ್

ಸ್ಥಿರಾಸ್ತಿಗಳ ನೋಂದಣಿ ವಹಿವಾಟಿನಲ್ಲಿ ಮುದ್ರಾಂಕ ಶುಲ್ಕ ವಂಚಿಸುವುದನ್ನು ತಪ್ಪಿಸಲು 'ಡಿಜಿಟಲ್ ಚಲನ್'ಗಳ ಬಳಕೆಯನ್ನು ಆರಂಭಿಸಲು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಮುಂದಾಗಿದೆ. 2025ರ ಫೆಬ್ರುವರಿಯಲ್ಲಿ ಹೊಸ ವ್ಯವಸ್ಥೆ ಜಾರಿಗೆ ಬರುವ ಸಾಧ್ಯತೆ ಇದೆ.

'ಈಗ ಇರುವ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳು ಅಥವಾ ನೋಂದಾಯಿತ ಏಜೆನ್ಸಿಗಳಲ್ಲಿ ಇ-ಸ್ಟಾಂಪ್ (ಮುದ್ರಾಂಕ ಕಾಗದ) ಖರೀದಿಸಲು ಅವಕಾಶವಿದೆ. ಆಗ ಆಸ್ತಿಯ ಮೌಲ್ಯವನ್ನು ಕಡಿಮೆ ತೋರಿಸಿ, ಮುದ್ರಾಂಕ ಶುಲ್ಕ ವಂಚಿಸುತ್ತಿರುವ ಪ್ರಕರಣಗಳು ನಡೆಯುತ್ತಿವೆ. ಅವುಗಳನ್ನು ತಪ್ಪಿಸಲು ಡಿಜಿಟಲ್ ಚಲನ್ ಜಾರಿಗೊಳಿಸಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಇಲಾಖೆಯ ವೆಬ್‌ಸೈಟ್‌ನಲ್ಲಿ ಸಂಬಂಧಿಸಿದ ಲಿಂಕ್‌ನಲ್ಲಿ ಪ್ರವೇಶಿಸಿ ಆಸ್ತಿಯ ಮೌಲ್ಯ ನಮೂದಿಸಿದರೆ ಸ್ವಯಂಚಾಲಿತವಾಗಿ ಮುದ್ರಾಂಕ ಕಾಗದ ಸಿದ್ಧವಾಗುತ್ತದೆ. ಶುಲ್ಕದ ಮೊತ್ತವನ್ನೂ ಸ್ವಯಂಚಾಲಿತವಾಗಿ ನಿರ್ಧರಿಸಲಾಗುತ್ತದೆ. ಆ ಮೂಲಕ ಮುದ್ರಾಂಕ ಶುಲ್ಕದ ವಂಚನೆಗೆ ಕಡಿವಾಣ ಬೀಳುತ್ತದೆ' ಎಂದು ವಿವರಿಸಿದರು.

ಶ್ಯಾಮ್ ಬೆನಗಲ್ ನಿಧನ

ಮುಂಬೈ (ಪಿಟಿಐ): 1970 ಮತ್ತು 80ರ ದಶಕದಲ್ಲಿ 'ಅಂಕುರ್', 'ನಿಶಾಂತ್' ಮತ್ತು 'ಮಂಥನ್' ಮುಂತಾದ ಚಲನ-ಚಿತ್ರಗಳ ಮೂಲಕ ಹೊಸ ಅಲೆಯ ಸಿನಿಮಾ ಚಳವಳಿಗೆ ನಾಂದಿ ಹಾಡಿದ್ದ ಚಲನಚಿತ್ರ ನಿರ್ದೇಶಕ ಶ್ಯಾಮ್ ಬೆನಗಲ್ (90) ಸೋಮವಾರ ಇಲ್ಲಿ ನಿಧನರಾದರು.

ಅವರಿಗೆ ಪತ್ನಿ ನೀರಾ ಬೆನಗಲ್ ಮತ್ತು ಪುತ್ರಿ ಪಿಯಾ ಬೆನಗಲ್ ಇದ್ದಾರೆ.

'ತಂದೆಯವರು ದೀರ್ಘಕಾಲದಿಂದ ಮೂತ್ರಪಿಂಡದ ಕಾಯಿಲೆಯಿಂದ ಬಳಲುತ್ತಿದ್ದರು. ರೋಗ ಉಲ್ಬಣಿಸಿದ ಕಾರಣ ವೊಕಾರ್ಟ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸಂಜೆ 6.38ಕ್ಕೆ ಅವರು ನಿಧನರಾದರು' ಎಂದು ಪುತ್ರಿ ಪಿಯಾ ತಿಳಿಸಿದ್ದಾರೆ.

ಬೆನಗಲ್ ಅವರಿಗೆ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗುತ್ತಿತ್ತು ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಅವರು 10 ದಿನಗಳ ಹಿಂದೆಯಷ್ಟೇ (ಡಿ.14ರಂದು) ತಮ್ಮ 90ನೇ ಹುಟ್ಟುಹಬ್ಬ ಆಚರಿಸಿದ್ದರು.

ನುಡಿನಮನ 5



14.12.1934 - 23.12.2024

ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲು ಸಾಧ್ಯವಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ಭೂಸ್ವಾಧೀನಕ್ಕಾಗಿ ಅಂತಿಮ ಅಧಿಸೂಚನೆ ಹೊರಡಿಸಿರುವ ಜಮೀನುಗಳನ್ನು ಪ್ರಕ್ರಿಯೆಯಿಂದ ಕೈ ಬಿಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿಯ ರೈತರ ನಿಯೋಗದ ಜತೆ ಮಾತುಕತೆ ನಡೆಸಿದ ನಂತರ ಅವರು ಮಾತನಾಡಿದರು.

ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ ವ್ಯಾಪ್ತಿಯಲ್ಲಿ 1,777 ಎಕರೆ ಭೂಸ್ವಾಧೀನಕ್ಕೆ ಕೆಐಎಡಿಬಿ ಈಗಾಗಲೇ ಅಧಿಸೂಚನೆಯನ್ನು ಹೊರಡಿಸಿದೆ. 430 ಎಕರೆಗೆ ಅಂತಿಮ ಅಧಿಸೂಚನೆ ಹೊರಬಿದ್ದಿದೆ. ಈ ಹಂತದಲ್ಲಿ ಹಸ್ತಕ್ಷೇಪ ಸಾಧ್ಯವಿಲ್ಲ ಎಂದರು.

'ಭೂಸ್ವಾಧೀನ ಪ್ರಕ್ರಿಯೆಯನ್ನು ಈಗಾಗಲೇ ಮೂರು ಬಾರಿ ನಡೆಸಲಾಗಿದೆ. ಹೊಸದಾಗಿ ಭೂಸ್ವಾಧೀನ ನಡೆಸಬಾರದು' ಎಂಬ ರೈತರ ಮನವಿಗೆ ಪ್ರತಿಕ್ರಿಯಿಸಿದ ಅವರು, ಅಂತಿಮ ಅಧಿಸೂಚನೆ ಹೊರಡಿಸಲಾದ ಜಮೀನು ವಾಪಸ್ ನೀಡಲು ಅವಕಾಶ ಇಲ್ಲ. ಆದರೂ, ರೈತರ ಹಿತಾಸಕ್ತಿ ಪರಿಗಣಿಸಲಾಗುವುದು. ಈ ಕುರಿತು ಜನಪ್ರತಿನಿಧಿಗಳು ಹಾಗೂ ಅಡ್ವೊಕೇಟ್ ಜನರಲ್ ಅವರ ಜತೆ ಸಮಾಲೋಚನೆ ನಡೆಸಿದ ನಂತರ ಅಗತ್ಯ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಸಚಿವರಾದ ಎಂ.ಬಿ.ಪಾಟೀಲ, ಕೆ.ಎಚ್. ಮುನಿಯಪ್ಪ, ಐದನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರಾದ ಸಿ. ನಾರಾಯಣಸ್ವಾಮಿ ಉಪಸ್ಥಿತರಿದ್ದರು.

'ಕಾಂಗ್ರೆಸ್ ಅಧಿವೇಶನ ಬಳಿಕ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸಾಧ್ಯತೆ'

ಪ್ರಜಾವಾಣಿ ವಾರ್ತೆ

ಎಂ.ಬಿ.ಪಾಟೀಲ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಪಕ್ಷ ತೀರ್ಮಾನ ಮಾಡುತ್ತದೆ. ಬೆಳಗಾವಿಯಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನದ ಬಳಿಕ ಹೈಕಮಾಂಡ್ ನಾಯಕರು ಈ ಬಗ್ಗೆ ನಿರ್ಧಾರ ಮಾಡುತ್ತಾರೆ' ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಸಂಪುಟ ಪುನರ್ ರಚನೆ ವಿಚಾರ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಯ ಪರಮಾಧಿಕಾರ' ಎಂದರು.

ಘೋರ ಅಪರಾಧ: 'ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಆಕ್ಷೇಪಾರ್ಹ ಪದ ಬಳಸಿದ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಬಹಿರಂಗವಾಗಿ ಕ್ಷಮೆ ಕೇಳಿದರೆ ಎಲ್ಲವೂ ಮುಗಿಯುತ್ತದೆ' ಎಂದೂ ಅವರು ಹೇಳಿದರು.

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕೆಂಪೇಗೌಡ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಎಲ್‌ಇಡಿ ಪರದೆಗಳು ಸ್ಥಗಿತಗೊಂಡಿವೆ

ಅವ್ಯವಸ್ಥೆಯ ಆಗರವಾದ ಕೆಂಪೇಗೌಡ ಮೆಜೆಸ್ಟಿಕ್ ಬಸ್ ನಿಲ್ದಾಣ • ಮಳಿಗೆಗಳಲ್ಲಿ ತಿನಿಸುಗಳಿಗೆ ನಿಗದಿಗಿಂತ ಹೆಚ್ಚು ಹಣ

ನೀರಿಲ್ಲ, ಮಾಹಿತಿ ಇಲ್ಲ, ಸ್ವಚ್ಛತೆ ಇಲ್ಲವೇ ಇಲ್ಲ..

• ಖಲೀಲಅಹ್ಮದ ಶೇಖ

ಬೆಂಗಳೂರು: ಸಂಚಾರ ನಿಯಂತ್ರಣಾಧಿಕಾರಿಗಳಿಲ್ಲದ ಕುರ್ಚಿಗಳು, ಬಸ್‌ಗಳ ಮಾಹಿತಿಯಿಲ್ಲದೇ ಒಂದು ಪ್ಲಾಟ್‌ ಫಾರ್ಮ್‌ನಿಂದ ಮತ್ತೊಂದು ಪ್ಲಾಟ್‌ ಫಾರ್ಮ್‌ಗೆ ಅಲೆಯುವ ಪ್ರಯಾಣಿಕರು, ಸ್ಥಗಿತಗೊಂಡ ಶುದ್ಧ ಕುಡಿಯುವ ನೀರಿನ ಘಟಕ, ಮರೀಚಿಕೆಯಾದ ಸ್ವಚ್ಛತೆ...

ಇದು ರಾಜಧಾನಿ ಬೆಂಗಳೂರಿನ ಸಾರ್ವಜನಿಕ ಸಾರಿಗೆಯ ಜೀವನಾಡಿಯಾಗಿರುವ ಕೆಂಪೇಗೌಡ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಕಂಡುಬರುವ ದೃಶ್ಯಗಳು.

ನಗರದ ಎಲ್ಲ ಬಡಾವಣೆಗಳಿಗೆ ಮೆಜೆಸ್ಟಿಕ್ ಬಸ್ ನಿಲ್ದಾಣವೇ ಸಂಪರ್ಕ ಕೊಂಡಿಯಾಗಿದೆ. ಆದ್ದರಿಂದ, ಇಲ್ಲಿಗೆ ಪ್ರತಿನಿತ್ಯ ಬೆಂಗಳೂರಿಗರು ಸೇರಿದಂತೆ ರಾಜ್ಯ ಮತ್ತು ಹೊರರಾಜ್ಯಗಳಿಂದ ಲಕ್ಷಾಂತರ ಜನ ಪ್ರಯಾಣಿಕರು ಬಂದು ಬೇರೆ ಕಡೆಗೆ ತೆರಳುತ್ತಾರೆ. ಆದರೆ, ಇಲ್ಲಿ ಮೂಲಸೌಕರ್ಯದ ಕೊರತೆಯಿಂದ ಪ್ರಯಾಣಿಕರು ಪ್ರಯಾಸ ಪಡುತ್ತಿದ್ದಾರೆ.

ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಬಸ್‌ಗಳ ಸಂಚಾರದ ಸಮಯದಕುರಿತು ಮಾಹಿತಿ ನೀಡುವ ಎಲ್‌ಇಡಿ ಪರದೆಗಳು ಸ್ಥಗಿತಗೊಂಡಿವೆ. ಪ್ರಯಾಣಿಕರಿಗೆ ಬಸ್‌ಗಳ ಮಾಹಿತಿ ನೀಡಲು ಸಂಚಾರ ನಿಯಂತ್ರಣಾಧಿಕಾರಿಗಳು ಲಭ್ಯವಿರುವುದಿಲ್ಲ. ಅವರು ಕುಳಿತು ಕೊಳ್ಳುವ ಆಸನಗಳ ಮೇಲೆ ಲಗೇಜ್ ಬ್ಯಾಗ್‌ಗಳಿರುತ್ತವೆ ಅಥವಾ ಪ್ರಯಾಣಿಕರು ಕುಳಿತಿರುತ್ತಾರೆ!

ರಾತ್ರಿ 8 ಗಂಟೆಯ ನಂತರ ಇಲ್ಲಿಗೆ ಬರುವ ಪ್ರಯಾಣಿಕರು ಬಸ್‌ಗಳ ಮಾಹಿತಿ ಸಿಗದೇ ಪರದಾಡುತ್ತಾರೆ. ಅದರಲ್ಲೂ ಮಹಿಳೆಯರು, ಬರುವ ಬಸ್‌ಗಳನ್ನು ಎದುರು ನೋಡುತ್ತಾ, ಭೀತಿಯಲ್ಲಿ ಕಾಯಬೇಕಾದ ಪರಿಸ್ಥಿತಿ ಇದೆ. ಶಿವಾಜಿನಗರದ ಬಸ್‌ಗಳು ನಿಲ್ಲುವ ಪ್ಲಾಟ್‌ಫಾರ್ಮ್‌ಗೆ ಅಳವಡಿಸಿರುವ ಗೇಟ್ ಕಿತ್ತುಹೋಗಿದ್ದು, ಪ್ರಯಾಣಿಕರ ಓಡಾಟಕ್ಕೆ ಸಮಸ್ಯೆಯಾಗಿದೆ. ಬಸ್ ನಿಲ್ದಾಣದಲ್ಲಿ ಸ್ವಚ್ಛತೆ ಕೊರತೆ ಇದೆ. ಕೆಲ ಪ್ಲಾಟ್‌ಫಾರ್ಮ್‌ಗಳು ಗಬ್ಬೆದ್ದು ನಾರುತ್ತಿವೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ.

'ಬಸ್ ನಿಲ್ದಾಣದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ ಸ್ಥಗಿತಗೊಂಡು ವರ್ಷವಾದರೂ ಸರಿಪಡಿಸಿಲ್ಲ. ಮಕ್ಕಳು, ಮಹಿಳೆಯರು ಮತ್ತು ವೃದ್ಧರು ಕುಡಿಯುವ ನೀರಿಲ್ಲದೇ ಪರದಾಡುವ ಸ್ಥಿತಿ ಇದೆ' ಎಂದು ಚಿಕ್ಕಪೇಟೆಯ ಸುರೇಶ್ ಬೇಸರ ವ್ಯಕ್ತಪಡಿಸಿದರು.

'ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಮಳಿಗೆಗಳಲ್ಲಿ ಯಾವುದೇ ವಸ್ತುಗಳನ್ನು ಖರೀದಿಸಿದರೂ ಗರಿಷ್ಠ ಮಾರಾಟ ದರಕ್ಕಿಂತ ಹೆಚ್ಚು ಹಣ ಪಡೆಯುತ್ತಾರೆ. ತಂಪು ಪಾನೀಯ, ತಿನಿಸುಗಳು, ಸಿದ್ಧ ಆಹಾರ, ಸಿಹಿ ತಿನಿಸುಗಳ ಮೇಲೆ ವ್ಯಾಪಾರಿಗಳು ಶೇ 10ರಿಂದ 20ರಷ್ಟು ಅಧಿಕ ಹಣ ತೆಗೆದುಕೊಳ್ಳುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಶುದ್ಧ ಕುಡಿಯುವ ನೀರಿನ ಘಟಕದ ದುರಸ್ತಿಗೊಳಿಸಲಾಗುವುದು. ಸ್ವಚ್ಛತೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು. ಎಲ್‌ಇಡಿ ಪರದೆಗಳ ಟೆಂಡರ್ ಮುಗಿದ ಕಾರಣ ಸ್ಥಗಿತಗೊಳಿಸಲಾಗಿದೆ' ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಪ್ರಭಾಕರ್ ರೆಡ್ಡಿ ಪ್ರತಿಕ್ರಿಯಿಸಿದರು.

ಕೆಂಪೇಗೌಡ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸ್ಥಗಿತಗೊಂಡಿರುವ ಶುದ್ಧ ಕುಡಿಯುವ ನೀರಿನ ಘಟಕ ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಪ್ರಯಾಣಿಕರು ಏನಂತಾರೆ

ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸ್ವಚ್ಛತೆಯಿಲ್ಲದೆ ಶೌಚಾಲಯಗಳು ಗಬ್ಬು ನಾರುತ್ತಿವೆ. ಶೌಚಾಲಯ ನಿರ್ವಹಿಸುವ ಸಿಬ್ಬಂದಿ ಪ್ರಯಾಣಿಕರಿಂದ ಹೆಚ್ಚು ಹಣ ವಸೂಲಿ ಮಾಡುತ್ತಿದ್ದಾರೆ

ಜಗದೀಶ್, ಕೆಂಗೇರಿ ನಿವಾಸಿ

ದೇಶದ ವಿವಿಧ ಭಾಗಗಳಿಂದ ಬರುವ ಪ್ರಯಾಣಿಕರಿಗೆ ಬಸ್‌ಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಆದ್ದರಿಂದ, ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಬಸ್‌ಗಳ ತೆರಳುವ ಮಾರ್ಗ, ಸಮಯ ತಿಳಿಸುವ ಎಲ್‌ಇಡಿ ಪರದೆಗಳನ್ನು ಅಳವಡಿಸಬೇಕು

ಮಂಜುನಾಥ್, ಪ್ರಯಾಣಿಕ ಕೋರಮಂಗಲ

ನಿತ್ಯ 6 ಲಕ್ಷ ಜನ ಪ್ರಯಾಣಿಸುತ್ತಿದ್ದಾರೆ. ಅವರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ

ರಾಮಚಂದ್ರನ್ ಆರ್,
ವ್ಯವಸ್ಥಾಪಕ ನಿರ್ದೇಶಕರು, ಬಿಎಂಟಿಸಿ

ಬಿಡಿಎ: ಭೀಮನಕುಪ್ಪೆಯಲ್ಲಿ ₹ 18 ಕೋಟಿ ಆಸ್ತಿ ವಶ

ಭೀಮನಕುಪ್ಪೆ ಗ್ರಾಮದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ಜೆಸಿಬಿ ಮೂಲಕ ತೆರವು ಮಾಡಲಾಯಿತು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರಿಸಿದ್ದು, ಸೋಮವಾರ ನಡೆದ ಕಾರ್ಯಾಚರಣೆಯಲ್ಲಿ ಭೀಮನಕುಪ್ಪೆ ಗ್ರಾಮದಲ್ಲಿ ಸುಮಾರು ₹18 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಭೀಮನಕುಪ್ಪೆ ಗ್ರಾಮದ ಸರ್ವೆ ನಂಬರ್ 152/1ರಲ್ಲಿನ 1 ಎಕರೆ 20 ಗುಂಟೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ ಸುಮಾರು 35 ಶೆಡ್‌ಗಳನ್ನು ತೆರವುಗೊಳಿಸಲಾಗಿದೆ. ₹ 18 ಕೋಟಿ ಮೌಲ್ಯದ ಈ ಆಸ್ತಿಯನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು.

ಸ್ಥಳೀಯ ಪೊಲೀಸರ ಸಹಕಾರ ಪಡೆದು ಜೆಸಿಬಿಯಿಂದ ಶೆಡ್‌ಗಳನ್ನು ತೆರವು ಮಾಡಿ, ಬೇಲಿ ಹಾಕಲಾಯಿತು.

ಪ್ರಾಧಿಕಾರದ ಕಾರ್ಯನಿರತ ಪಡೆಯ ಎಸ್‌ಪಿ, ನಾಡಪ್ರಭು ಕೆಂಪೇಗೌಡ ಬಡಾವಣೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಾರ್ಯಾಚರಣೆಯ ನೇತೃತ್ವದ ವಹಿಸಿದ್ದರು.

ಕಟ್ಟಡ ಕಾರ್ಮಿಕರ ಸಮಾವೇಶ 26ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ವರ್ಕರ್ಸ್ ಸೆಂಟ್ರಲ್ ಯೂನಿಯನ್‌ನಿಂದ ಇದೇ 26ರಂದು ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಕಟ್ಟಡ ಕಾರ್ಮಿಕರ ಸಮಾವೇಶ ಆಯೋಜಿಸಲಾಗಿದೆ ಎಂದು ಯೂನಿಯನ್ ಅಧ್ಯಕ್ಷ ಎನ್.ಪಿ. ಸ್ವಾಮಿ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರ ರದ್ದುಗೊಳಿಸಿರುವ ಕಾರ್ಮಿಕರ ಕಾನೂನುಗಳನ್ನು ಮತ್ತೆ ಜಾರಿಗೊಳಿಸಬೇಕು. ಕಟ್ಟಡ ಕಾರ್ಮಿಕರ ಪಿಂಚಣಿಯನ್ನು ₹3 ಸಾವಿರದಿಂದ ₹5 ಸಾವಿರಕ್ಕೆ ಹೆಚ್ಚಿಸಬೇಕು. ಇಎಸ್‌ಐ ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಲಾಗುವುದು' ಎಂದು ಮಾಹಿತಿ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕಾರ್ಮಿಕ ಸಚಿವ ಸಂತೋಷ್ ಲಾಡ್ ಪಾಲ್ಗೊಳ್ಳಲಿದ್ದಾರೆ ಎಂದರು.

61 ಸಾವಿರ ಇ–ಖಾತಾ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಅಂತಿಮ ಇ–ಖಾತಾ ಪಡೆಯಲು 67 ಸಾವಿರ ಅರ್ಜಿಗಳು ಸ್ವೀಕೃತಗೊಂಡಿದ್ದು, ಎಲ್ಲ ಅರ್ಜಿಗಳನ್ನೂ ವಿಲೇವಾರಿ ಮಾಡಿ ಇ–ಖಾತಾಗಳನ್ನು ವಿತರಿಸಲಾಗಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಎಂಟೂ ವಲಯಗಳ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, 'ನಿತ್ಯ ಬರುವ ಅರ್ಜಿಗಳನ್ನು ನಿಗದಿತ ಸಮಯದೊಳಗಾಗಿ ವಿಲೇವಾರಿ ಮಾಡಲಾಗುತ್ತಿದೆ' ಎಂದರು.

ಹೆಚ್ಚು ಬಾಕಿ ಆಸ್ತಿ ತೆರಿಗೆ ಉಳಿಸಿಕೊಂಡಿರುವ ಸುಸ್ತಿದಾರರ ವಲಯವಾರು ಪಟ್ಟಿ ಮಾಡಿ, ಅವರಿಂದ ತೆರಿಗೆಯನ್ನು ವಸೂಲಿ ಮಾಡಬೇಕು. ವಾಣಿಜ್ಯ ಕಟ್ಟಡಗಳಿಗೆ ಬೀಗ ಮುದ್ರೆ ಹಾಕಿ ಬಾಕಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಬೇಕು ಅಧಿಕಾರಿಗಳಿಗೆ ಸೂಚಿಸಿದರು.

ಬಿಬಿಎಂಪಿಯ ಸಹಾಯ 2.0, ಐಪಿಜಿಆರ್‌ಎಸ್, ಸಾಮಾಜಿಕ ಜಾಲತಾಣಗಳಲ್ಲಿ ಬರುವ ದೂರುಗಳನ್ನು ಆದ್ಯತೆ ಮೇರೆಗೆ ಇತ್ಯರ್ಥಪಡಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದರು. ವಿಶೇಷ ಆಯುಕ್ತರಾದ ಡಾ. ಕೆ. ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಆಯುಕ್ತರು ಉಪಸ್ಥಿತರಿದ್ದರು.

ಉಚಿತ ತರಬೇತಿ

ಬೆಂಗಳೂರು: ನಗರದ ಟಾಟಾ ಸ್ಟ್ರೈವ್ ಕೌಶಲ ಅಭಿವೃದ್ಧಿ ಕೇಂದ್ರದಿಂದ 'ಫ್ರಂಟ್ ಆಫೀಸ್ ಅಸೋಸಿಯೇಟ್' ಕೋರ್ಸ್‌ಗಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ.

ತರಬೇತಿ ಉಚಿತವಾಗಿದೆ. ತರಬೇತಿಯ ನಂತರ ಉದ್ಯೋಗಾವಕಾಶಕ್ಕೂ ಸಂಸ್ಥೆ ನೆರವಾಗಲಿದೆ. ಆಸಕ್ತರು ತರಬೇತಿ ಕುರಿತ ಹೆಚ್ಚಿನ ಮಾಹಿತಿಗೆ 9483538667ಗೆ ಸಂಪರ್ಕಿಸಬಹುದು.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 50/2024, ದಿನಾಂಕ: 18.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8246919	ಆರ್‌ಡಿಎಸ್‌ಒ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಒ/ಎಸ್‌ಪಿಎನ್/ಟಿಸಿ/107/2018 (ವರ್ಷನ್ 2.1) ಅಥವಾ ಇತ್ತೀಚಿನ ಕೀಪ್ಯಾಡ್ ಮತ್ತು ಡಿಸ್‌ಪ್ಲೇ ರಹಿತ 5 ವ್ಯಾಟ್ ವಿಹೆಚ್‌ಎಫ್ ಡಿಜಿಟಲ್ ವಾಕೀ ಟಾಕೀ ಸೆಟ್‌ಗಳ ಪೂರೈಕೆ (ಪರಿಮಾಣ: 1107 ಸಂ.).

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 13.01.2025, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/642/AAMO/PRB/SWR/2024-25 — ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY

ಅಂತರರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರಗಳ ಪ್ರಾಧಿಕಾರ

ಇಫೈಲ್ ನಂ. ಐಎಫ್‌ಎಸ್‌ಸಿಎ–ಅಡ್ಮಿನ್/1/2023–ಜಿಎ — ಡಿಸೆಂಬರ್ 23, 2024

ಖಾಲಿಹುದ್ದೆ ಭರ್ತಿಗೆ ಅಧಿಸೂಚನೆ

ಭಾರತ ಸರ್ಕಾರದ ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆ ಅಡಿಯಲ್ಲಿನ ಏಕೀಕೃತ ನಿಯಂತ್ರಣಾ ಅಂಗವಾಗಿರುವ ಅಂತರರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರಗಳ ಪ್ರಾಧಿಕಾರ (ಐಎಫ್‌ಎಸ್‌ಸಿಎ) ಇವರು, ಸಮಾಲೋಚಕರ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಹ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಗುಜರಾತ್ ರಾಜ್ಯದ ಗಾಂಧಿನಗರದಲ್ಲಿನ ಜಿಐಎಫ್‌ಟಿ ಸಿಟಿ ಉದ್ಯೋಗ ನಿಯೋಜನೆಯ ಸ್ಥಳವಾಗಿರುತ್ತದೆ.

2. ಅರ್ಜಿ ಸಲ್ಲಿಸಲು ಬಯಸುವವರು, www.ifsca.gov.in/career ವೆಬ್‌ಸೈಟ್‌ಗೆ ಭೇಟಿ ನೀಡಿ, ಅರ್ಹತಾ ಮಾನದಂಡ ಮತ್ತು ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ಅಗತ್ಯ ದಾಖಲಾತಿಗಳ ವಿವರಗಳನ್ನು ಒಳಗೊಂಡಿರುವ ವಿಸ್ತ್ರತವಾದ ಅಧಿಸೂಚನೆಗಳನ್ನು ಪರಿಶೀಲಿಸಬೇಕೆಂದು ಕೋರಲಾಗಿದೆ.

CBC15228/12/0009/2425 — ಜನರಲ್ ಮ್ಯಾನೇಜರ್ (ಅಡ್ಮಿನ್. & ಎಚ್‌ಆರ್)

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂ.: 565/ATVM Facilitator/12/2024

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗೆ ಸಹಿ ಮಾಡಿದವರು, ಎಟಿವಿಎಂ ಯಂತ್ರಗಳ ಮೂಲಕ ರೀಚಾರ್ಜ್ ಬೋನಸ್ ಆಧಾರದ ಮೇಲೆ ದಿನಾಂಕ 31.03.2025 ವರೆಗೆ ಕಾಯ್ದಿರಿಸದ / ಸಾಮಾನ್ಯ ಟಿಕೆಟ್‌ಗಳನ್ನು ವಿತರಿಸುವ ಸಲುವಾಗಿ ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಕೆಳಗೆ ಸೂಚಿಸಿರುವ ನಿಲ್ದಾಣಗಳಲ್ಲಿ ಎಟಿವಿಎಂ ಫೆಲಿಸಿಟೇಟರ್‌ಗಳಾಗಿ ತಮ್ಮನ್ನು ತೊಡಗಿಸಿಕೊಳ್ಳಲು ನಿವೃತ್ತ ರೈಲ್ವೆ ನೌಕರರಿಂದ / ಸಾಮಾನ್ಯ ಸಾರ್ವಜನಿಕರಿಂದ ಮೊಹರು ಬಂದ್ ಮಾಡಿದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕ್ರ	ನಿಲ್ದಾಣದ ಹೆಸರು	ಸ್ಟೇಷನ್ ದರ್ಜೆ	ಒಟ್ಟು ಹುದ್ದೆಗಳು	ಕ್ರ	ನಿಲ್ದಾಣದ ಹೆಸರು	ಸ್ಟೇಷನ್ ದರ್ಜೆ	ಒಟ್ಟು ಹುದ್ದೆಗಳು
[illegible]	[illegible]	[illegible]	[illegible]	[illegible]	[illegible]	[illegible]	[illegible]

ಒಟ್ಟು 56

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

PUB/644/AAMO/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. 34 UBL 2024-25 ದಿನಾಂಕ: 16.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರಸಂ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಬಾದಾಮಿ – ಹೊಟಗಿ (ಬಿಡಿಎಂ–ಹೆಚ್‌ಜಿ): ಸಹಾಯಕ ವಿಭಾಗೀಯ ಇಂಜಿನಿಯರ್ / ವಿಜಯಪುರ ಉಪ ವಿಭಾಗದಲ್ಲಿ ಆಲಿಯಾಬಾದ – ಮಿಂಚನಾಳ (ಎವೈಬಿ – ಎಂಎನ್‌ಎಲ್) ನಡುವೆ ಕಿಮೀ. 203/300–400 ರಲ್ಲಿ ನಿಯಮಿತ ಎತ್ತರದ ಸಬ್‌ವೇ ನಂ. 88 (ಬ್ರಿಡ್ಜ್ ಸಂ. 79–ಬಿ) ಗೆ ಬೇಕಾದ ಅಭಿವೃದ್ಧಿ ಕೆಲಸಗಳು, ರೀಟೇನಿಂಗ್ ವಾಲ್, ಅಪ್ರೋಚ್ ರಸ್ತೆ ಮತ್ತು ಹೈಟ್ ಗೇಜ್‌ಗಳು.	ರೂ. 2,17,06,924.00
2	ಹುಬ್ಬಳ್ಳಿ ವಿಭಾಗ: [illegible]	ರೂ. 2,01,37,395.00
3	ಹುಬ್ಬಳ್ಳಿ ವಿಭಾಗ: [illegible]	ರೂ. 93,99,025.00
4	ಹುಬ್ಬಳ್ಳಿ ವಿಭಾಗ: [illegible]	ರೂ. 2,32,57,946.00
5	ಹುಬ್ಬಳ್ಳಿ ವಿಭಾಗ: [illegible]	ರೂ. 2,73,60,055.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.01.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/640/AAMO/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: E-GSU-ELE-2024-25-OT-12 ದಿನಾಂಕ: 14.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ದಂಡು – ವೈಟ್‌ಫೀಲ್ಡ್ ವಿಭಾಗದ ಚತುಷ್ಪಥೀಕರಣಕ್ಕೆ ಸಂಬಂಧಿಸಿದಂತೆ ಕೃಷ್ಣರಾಜಪುರಂ ಯಾರ್ಡ್‌ನಲ್ಲಿ ಈಗಿರುವ ಓಹೆಚ್‌ಇ ವ್ಯವಸ್ಥೆಯ ಮೇಲೆ 25 ಕೆವಿ, 50 ಹರ್ಟ್ಸ್, ಸಿಂಗಲ್ ಫೇಸ್, ಎಸಿ ವಿದ್ಯುತೀಕರಣದ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭ ಹಾಗೂ ಅವಶ್ಯಕತೆಗನುಸಾರ ಮಾರ್ಪಾಡು ಕೆಲಸಗಳು.	ರೂ. 9,09,02,664.25

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.01.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/646/AAMO/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: SnT_GSUMYS_Slidingboom ದಿನಾಂಕ: 07.01.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು (ಎಂವೈಎಸ್) [illegible]	ರೂ. 2,43,36,408.36

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.01.2025, 15:00 ಗಂಟೆಯವರೆಗೆ

PUB/641/AAMO/PRB/SWR/2024-25

South Western Railway - SWR | SWRRLY | SWRRLY

ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ವಡೋದರ

(ಭಾರತ ಸರಕಾರದ ಶಿಕಷಣ ಸಚಿವಾಲಯ ಅಡಿಯಲ್ಲಿನ ರಾಷ್ಟ್ರೀಯ ಪ್ರಾಮುಖ್ಯತೆಯ ಒಂದು ಸಂಸ್ಥೆ) ಬ್ಲಾಕ್ ನಂ. 9, ಕೇರಾಫ್ ಸರಕಾರಿ ಇಂಜಿನಿಯರಿಂಗ್ ಕಾಲೇಜ್ ಕ್ಯಾಂಪಸ್, ಸೆಕ್ಟರ್ 28, ಗಾಂಧಿನಗರ, ಗುಜರಾತ್–382028 ಯುಆರ್‌ಎಲ್: www.iiitvadodara.ac.in

ನಂ. ಐಐಐಟಿವಿ/ಎಸ್ಟಾ/ರೆಕ್ಟ್/ಫಾಕಲ್ಟಿ/24–25/001 — 09 ಡಿಸೆಂಬರ್ 2024

ಫಾಕಲ್ಟಿ ಹುದ್ದೆಗಳಿಗೆ ನೇಮಕಾತಿ

1. ಐಐಐಟಿವಿ ವಡೋದರ [ಪ್ರಸ್ತುತ ಗುಜರಾತ್‌ನ ಗಾಂಧಿನಗರದಲ್ಲಿ ಮತ್ತು (ಕೇಂದ್ರಾಡಳಿತ ಪ್ರದೇಶ) ದಿಯು ಎಂಬಲ್ಲಿ ಅಸ್ತಿತ್ವದಲ್ಲಿರುವ] ಇವರು, ಅಸೋಸಿಯೇಟ್ ಪ್ರೊಫೆಸರ್, ಅಸಿಸ್ಟಂಟ್ ಪ್ರೊಫೆಸರ್ ಗ್ರೇಡ್–1 ಮತ್ತು 2 ಹಂತಗಳಲ್ಲಿನ ಫಾಕಲ್ಟಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
2. ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಇಂಜಿನಿಯರಿಂಗ್, ಭೌತಶಾಸ್ತ್ರ, ಗಣಿತ, ಸಂಭವನೀಯತೆ ಮತ್ತು ಸಂಖ್ಯಾಶಾಸ್ತ್ರ, ಲಿಂಗ್ವಿಸ್ಟಿಕ್ಸ್, ಸಾಮಾಜಿಕ ವಿಜ್ಞಾನಗಳು, ಅರ್ಥಶಾಸ್ತ್ರ, ಮನಶಾಸ್ತ್ರಗಳಂತಹ ವಿಶಾಲವಾದ ಕ್ಷೇತ್ರಗಳಲ್ಲಿ ಅರ್ಜಿಗಳು ಅವಶ್ಯಕವಾಗಿರುತ್ತವೆ.
3. ಆನ್‌ಲೈನ್ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ 25 ಜನವರಿ, 2025 ಮತ್ತು ಅರ್ಜಿಯ ಕರಡು ಪ್ರತಿಯನ್ನು ಸಂಸ್ಥೆಯ ವಿಳಾಸದಲ್ಲಿ ಸ್ವೀಕರಿಸುವ ಕೊನೆಯ ದಿನಾಂಕ 31 ಜನವರಿ, 2025.
4. ಆಸಕ್ತಿಯುಳ್ಳ ಅಭ್ಯರ್ಥಿಗಳು ವಿದ್ಯಾರ್ಹತೆ, ಅನುಭವ, ಸಾಮಾನ್ಯ ವಿವರ, ಅಜಿ ನಮೂನೆ ಮತ್ತು ವಿವಿಧ ಪ್ರಮಾಣಪತ್ರಗಳ ನಮೂನೆಗಳನ್ನು ಸಂಸ್ಥೆಯ ವೆಬ್‌ಸೈಟ್ (http:www.iiitvadodara.ac.in)ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

(CBC 21346/12/0011/2425) — ನಿರ್ದೇಶಕರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ:ಬೆಂಅಪ್ರಾ/2024–25/ವಿದ್ಯುತ್/ವರ್ಕ್–ಇಂಡೆಂಟ್77 ದಿನಾಂಕ:23.12.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು **"ಸರ್ ಎಂ.ವಿ. ಲೇಔಟ್‌ನಲ್ಲಿ 2024–25ರ ವರ್ಷಾವಧಿಯಲ್ಲಿ 1ನೇ, 5ನೇ ಮತ್ತು 6ನೇ ಬ್ಲಾಕ್‌ನಲ್ಲಿ ಉದ್ಯಾನಗಳು ಸೇರಿದಂತೆ 1 ರಿಂದ 9ನೇ ಬ್ಲಾಕ್‌ನಲ್ಲಿ ಬೀದಿ ದೀಪಗಳ ಜೊತೆಗೆ ವಿದ್ಯುತ್ ವಿತರಣೆ ವ್ಯವಸ್ಥೆ ಮತ್ತು ಸಹಾಯಕ ಭಾಗಗಳ ವಾರ್ಷಿಕ ನಿರ್ವಹಣೆ" ಗಾಗಿ** ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಿದೆ.

ಟೆಂಡರ್ ದಿನಾಂಕಗಳು: (1) ಟೆಂಡರ್‌ಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 23.12.024.** (2) ಇ–ಪೋರ್ಟಲ್‌ನಲ್ಲಿ ಟೆಂಡರುಗಳನ್ನು ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **07.01.2025, ಸಂಜೆ 04.00 ಗಂಟೆಗೆ** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **09.01.2025 ರಂದು ಬೆಳಿಗ್ಗೆ 11.00 ಗಂಟೆ ನಂತರ.** (4) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ಇ–ಪ್ರೋಕ್ ಪೋರ್ಟಲ್ ನೋಡಿ.**

ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: https://kppp.karnataka.gov.in ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನೋಡಿ ಅಥವಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್), ಇವರ ಕಚೇರಿ, ಬಿಡಿಎ, ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು, ಸಂಪರ್ಕ ಸಂ.: +91 9845630164 ಇಲ್ಲಿ ಸಂಪರ್ಕಿಸಿ. ವಿಚಾರಣೆಗಳಿಗಾಗಿ ಸಂಪರ್ಕಿಸಿ ಇ–ಮೇಲ್ ಐಡಿ: eeelec.bda@gmail.com

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್),
ವಿದ್ಯುತ್ ವಿಭಾಗ, ಬೆಂಅಪ್ರಾ, ಬೆಂಗಳೂರು

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, ಫ್ಯಾಕ್ಸ್: (080)–28392310]

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ರಲ್ಲಿ ವರ್ಕ್‌ಸ್ಟೇಷನ್‌ಗಳು, ಪ್ರಿಂಟರ್ ಟೇಬಲ್, ಎಕ್ಸ್‌ಟೆನ್ಶನ್ ಟೇಬಲ್ ಮತ್ತು ಬೀರುಗಳ ಪೂರೈಕೆಗಾಗಿ ಒಪ್ಪಂದ. ಎನ್‌ಐಇಟಿ: CMG/LEOS/2024-25/LMN-11, ದಿನಾಂಕ: 16.12.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ. 13.68 ಲಕ್ಷಗಳು, ಇಎಂಡಿ: ರೂ. 27,361/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 04 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 18.12.2024, **ಮುಕ್ತಾಯವಾಗುವ ದಿನಾಂಕ :** 03.01.2025

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್ ಕ್ಯಾಂಪಸ್‌ಗಳು, ಪೀಣ್ಯ, ಬೆಂಗಳೂರು–560058 ರಲ್ಲಿ ಒಂದು ವರ್ಷದ ಅವಧಿಗೆ ಅಗ್ನಿಶಾಮಕಗಳ ಆವರ್ತಕ ನಿರ್ವಹಣೆಗಾಗಿ ದರ ಒಪ್ಪಂದ, ಹೈಡ್ರಾಲಿಕ್ ಒತ್ತಡ ಪರೀಕ್ಷೆ ಮತ್ತು ವಿವಿಧ ರೀತಿಯ ಅಗ್ನಿಶಾಮಕಗಳ ಪ್ರತಿಫಲನ. ಎನ್‌ಐಇಟಿ: LEOS/CMG/EMN-13/2024-25 ದಿನಾಂಕ: 13.12.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ: ರೂ. 8.40 ಲಕ್ಷಗಳು, ಇಎಂಡಿ: ರೂ. 16,800/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 12 ತಿಂಗಳು, ಟೆಂಡರ್ ಡಾಕ್ಯುಮೆಂಟ್‌ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: **ತೆರೆಯುವ ದಿನಾಂಕ:** 18.12.2024, **ಮುಕ್ತಾಯವಾಗುವ ದಿನಾಂಕ :** 03.01.2025

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು www.isro.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/–
ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ನೋಂದಣಿ 37/ಸೌಕಾ/ನೋಂದಣಿ 2297/2010–11
"ಪುಣ್ಯಕೋಟಿ", ನಂ.1587, 3ನೇ ಮುಖ್ಯರಸ್ತೆ, ಚಂದ್ರ ಬಡಾವಣೆ, ಬೆಂಗಳೂರು–560 040.
ದೂರವಾಣಿ ಸಂಖ್ಯೆ: 080-23185584, 9538475454, 9980147199.

ಸ್ಥಿರಾಸ್ಥಿ ಹರಾಜು ಪ್ರಕಟಣೆ

ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ, ಬೆಂಗಳೂರು. ಈ ಸಹಕಾರಿಯ ಸುಸ್ತಿದಾರರಾದ ಶ್ರೀಮತಿ. ವರಲಕ್ಷ್ಮಿ .ಸಿ.ಎನ್. ಇವರಿಂದ ಬಾಕಿಯಿರುವ ಈ ಕೆಳಕಂಡ ಮೊತ್ತಗಳ ವಸೂಲಿ ಬಗ್ಗೆ ಸದರಿಯವರಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ವಸೂಲಾತಿ ಅಧಿಕಾರಿಗಳು (ನಿ–441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ಸಂಘ ನಿಯಮಿತ, ಬೆಂಗಳೂರು ಇವರ ಆದೇಶ ಇಪಿ.ಸಂಖ್ಯೆ:ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ/153/2023–24, ದಿನಾಂಕ: 10.07.2024 ರ ಮೇರೆಗೆ ದಿನಾಂಕ 06.01.2025 ರ ಸೋಮವಾರದಂದು ಹಗಲು 11.30 ಘಂಟೆಗೆ ಸ್ಥಿರಾಸ್ಥಿ ಇರುವ ವಿಳಾಸದಲ್ಲಿ ಮೇಲ್ಕಂಡ ಆದೇಶಗಳಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದೆಂದು ಈ ಮೂಲಕ ತಿಳಿಸಿದೆ.

ಶ್ರೀಮತಿ ವರಲಕ್ಷ್ಮಿ ಸಿ.ಎನ್

ಹರಾಜಿನ ಷರತ್ತುಗಳನ್ನು ಸಹಕಾರಿಯ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸುಸ್ತಿದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ಥಿಯ ವಿವರಗಳು	ತೀರ್ಪು ಮೊಬಲಗು (ರೂ.ಗಳಲ್ಲಿ)	ಷರಾ
ಶ್ರೀಮತಿ. ವರಲಕ್ಷ್ಮಿ . ಸಿ.ಎನ್. #14, 1ನೇ ಕ್ರಾಸ್, ಸಿ ಮುಖ್ಯರಸ್ತೆ, ಹೆಬ್ಬಾಳ ಮಿಲ್ ರಸ್ತೆ, ಗಂಗಾನಗರ ಬಡಾವಣೆ, ಬೆಂಗಳೂರು–560032.	ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ ಹೋಬಳಿ, ನಾರಾಯಣಪುರ ಗ್ರಾಮದ ನಿವೇಶನ ಸಂಖ್ಯೆ.7, ಖಾತಾ ಸಂಖ್ಯೆ.349,27, ಸ್ವತ್ತಿನ ಸಂಖ್ಯೆ.50/1 ಹೊಂದಿರುವ ಹಾಗೂ ಈ ಕೆಳಕಂಡ ಚಕ್ಕುಬಂದಿಯ ಮಧ್ಯೆ ಇರುವ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ: 40 ಅಡಿಗಳು, ಒಟ್ಟು 1200 ಚದರ ಅಡಿಗಳು, ಈ ರೀತಿ ಅಳತೆ ಮತ್ತು ಕೆಳಕಂಡ ಚಕ್ಕುಬಂದಿಗೊಳಪಟ್ಟ ನಿವೇಶನ ಹರಾಜು ಪ್ರಕ್ರಿಯೆಗೆ ಸಂಬಂಧಪಟ್ಟದಾಗಿರುತ್ತದೆ. ಚಕ್ಕುಬಂದಿ:–ಪೂರ್ವಕ್ಕೆ: ದೇವಣ್ಣನವರ ಆಸ್ತಿ, ಪಶ್ಚಿಮ: ಸೈಟ್ ನಂ.06. ಉತ್ತರಕ್ಕೆ: 25 ಅಡಿ ರಸ್ತೆ, ದಕ್ಷಿಣಕ್ಕೆ: ಸೈಟ್ ನಂ.01.	36,95,785 ಒಟ್ಟು=36,95,785	ಆದೇಶ ಇಪಿ.ನಂ:ಕ. ರಾ.ಸೌ. ಸಂ.ಸ.ನಿ/ಸ. ಸಂ.ಸ.ನಿ/ವ.ಅ/ 153/2023–24

ವಿಶೇಷ ಸೂಚನೆ: ಮೇಲೆ ಹೇಳಿರುವ ತೀರ್ಪು ಮೊಬಲಗು ಹಾಗೂ **ದಿನಾಂಕ: 28.04.2022** ರಿಂದ ಬಾಕಿಯಿರುವ ಬಡ್ಡಿ ಹಾಗೂ ನ್ಯಾಯಾಲಯದ ವೆಚ್ಚಗಳನ್ನು ಸಹ ಪಾವತಿಸಬೇಕಾಗಿರುತ್ತದೆ. ಆಸಕ್ತಿಯುಳ್ಳವರು ಈ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ:18.12.2024

ಸಹಿ/– ದೀಪು.ಎಸ್., ಮಾರಾಟಾಧಿಕಾರಿ
ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿಯಮಿತ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

CHANGE OF NAME
I, **Swetha Sharoff Herale**, residing at #201, 2nd Floor, Shubha Apartment, 24th Main, 1st Cross, Puttenahalli, J.P. Nagar 7th Phase, Bengaluru-560078, have changed my name to **SWETHA HERAALE** vide affidavit dated 23.12.2024, before notary T.R. Raghavendra Rao, Bengaluru.

I, KALPANA R/a#143 Sri Mandarthi Nilaya Opposite Pragathi Hospital Vasanthpura Main Road, Bengaluru-560062,have changed name KALPANA MAHESH SHETTY vide affidavit 23.12.2024 before`Notary Hemalatha, Bengaluru

CHANGE OF NAME
I, **B.J.PHANIRAJA,** residing at #19, Central Street, Kumara Park West, Bengaluru- 560020, declare that both the names **B.J. PHANIRAJA & B.J.PHANIRAJ** belongs to me only. vide affidavit dated 20/12/2024, before notary B.Chitra, Bengaluru. Henceforth I shall be called as **B.J. PHANIRAJA** only

I, BHARGAVI SULOCHANA W/o.P.Vijayan R/a#2/1 Gurutheertham Lakeshore Homes Kasavanahalli Carmelaram Post Bangalore- 560035 have changed my Name to SULOCHANA VIJAYAN vide`affidavit dated:20.12.2024 before`Notary H.G.Venkataramu Bangalore

CONNECT ಕ್ಲಾಸಿಫೈಡ್ಸ್



ಮೀನಾ ಬಜಾರ್
Meena BAZAR
Arts, Crafts, Handlooms and Lifestyle Exhibition
Christmas and New Year Shopping Carnival
13th to 29th December 2024
10.30 AM - 7 PM | 17 Days Exhibition
Venue:
Karnataka Chitrakala Parishath
Kumara Krupa Road, Near Shivananda Circle, Bengaluru - 01
100+ Stalls | Live Performance
Entry Free

Hulivesha Live
28th Dec 2024 | 5 pm - 6.30 pm

Yakshagana Live
29th Dec 2024 | 5 pm - 6.30 pm

For Details Contact : 6364685716 / 9036658774
HANDLOOMS | HOME DECOR | HANDICRAFTS | CLOTHING | JEWELLERY

I SATHVIK Raghavendra Yaragambally S/o Raghavendra Y S 18 years r/at #301 Krishna Apartment, Arehalli, Bangalore-560061 has changed my name to Sathvik Raghavendra by swearing to an affidavit before notary H G Padmanabha Rao on 21/12/2024

I, UDAIVEER SINGH RAJENDRASINGH PRADHAN R/o, D3 101, Godrej Eternity, Mallasandra, Talghattapura, Bengaluru- 62 have changed my name as UDAIVEER SINGH PRADHAN Vide affidavit dated 19/12/2024 before Notary Mahesha J.J., Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ALL ARE WELCOME | ENTRY FREE
தமிழ்ப் புத்தகத் திருவிழா 2024 பெங்களூரு
TAMIL BOOK FESTIVAL
Time: 10am to 9pm
KANNADA, ENGLISH BOOKS ALSO AVAILABLE
20th - 29th December-2024
The Institution of Engineers
#3, Dr. B.R. Ambedkar Veedhi, Opp. Indian Express, Bengaluru
FREE PARKING
9916542367
6363118988

ಇದೇ 25 ರಂದು ಮಲ್ಲೇಶ್ವರ ಕ್ಷೇತ್ರದಲ್ಲಿ ಚಾಲನೆ • 9 ಸಾವಿರ ಮಕ್ಕಳಿಗೆ ಪ್ರಯೋಜನ

ಸರ್ಕಾರಿ ಶಾಲೆಗಳಲ್ಲಿ 'ಬುನಾದಿ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಎಲ್ಲ ಸರ್ಕಾರಿ ಮತ್ತು ಬಿಬಿಎಂಪಿ ಶಾಲೆಗಳಲ್ಲಿ ಹಂತ ಹಂತವಾಗಿ ನರ್ಸರಿ ಶಿಕ್ಷಣ ಮತ್ತು ಬುನಾದಿ ಭಾಷಾ ಹಾಗೂ ಸಂಖ್ಯಾ ಸಾಮರ್ಥ್ಯ ಅಭಿಯಾನ ಆರಂಭಿಸಲಾಗುತ್ತಿದೆ.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನವಾದ ಡಿ.25 ರಂದು (ಸುಶಾಸನ ದಿವಸ) ಈ ಅಭಿಯಾನಕ್ಕೆ ಚಾಲನೆ ದೊರಕಲಿದೆ.

ಬುನಾದಿ ಭಾಷಾ ಮತ್ತು ಸಂಖ್ಯಾ ಸಾಮರ್ಥ್ಯಗಳ (ಎಫ್‌ಎಲ್‌ಎನ್) ಅಭಿಯಾನದೊಂದಿಗೆ, ಬಾಲ್ಯ ಕಲಿಕೆಯ ಮೂಲಕ ಆ ವಿದ್ಯಾರ್ಥಿಯ ಜೀವಮಾನದ ಕಲಿಕೆಗೇ ಸದೃಢ ಅಡಿಪಾಯವನ್ನು ಹಾಕಲಾಗುವುದು ಎಂದು ಕ್ಷೇತ್ರದ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಲ್ಲೇಶ್ವರದ ಸರ್ಕಾರಿ ಶಾಲೆಗಳಲ್ಲಿ ಶೇ 100 ಎಫ್‌ಎಲ್‌ಎನ್ ಸಾಧಿಸುವ ದೇಶದ ಮೊದಲ ವಿಧಾನಸಭಾ ಕ್ಷೇತ್ರವನ್ನಾಗಿ ಮಾಡುವ ಗುರಿ ಹೊಂದಿದ್ದೇವೆ.

ಡಾ.ಸಿ.ಎನ್.ಅಶ್ವತ್ಥನಾರಾಯಣ
ಶಾಸಕ, ಮಲ್ಲೇಶ್ವರ

'ಅಂಗನವಾಡಿಗಳು ಮತ್ತು ಬಿಬಿಎಂಪಿ ಶಿಶುವಿಹಾರಗಳ ಸಹಯೋಗದಲ್ಲಿ 20 ಕೇಂದ್ರಗಳಲ್ಲಿ ಹಂತ-ಹಂತವಾಗಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಆರಂಭಿಸಲಾಗುವುದು. ಪ್ರತಿಯೊಂದು ಮಗುವಿಗೂ ಉತ್ತಮ ಗುಣಮಟ್ಟದ ಆರಂಭಿಕ ಹಂತದ ಶಿಕ್ಷಣ ಖಚಿತಪಡಿಸುವುದು ನಮ್ಮ ಗುರಿ' ಎಂದು ಅವರು ವಿವರಿಸಿದರು. 'ಇದು ಕೇಂದ್ರ ಸರ್ಕಾರದ ಕಾರ್ಯಕ್ರಮ. ಮಲ್ಲೇಶ್ವರ ಕ್ಷೇತ್ರದಲ್ಲಿ ಶೇ 100ರಷ್ಟು ಅನುಷ್ಠಾನ ಮಾಡುತ್ತೇವೆ. ನರ್ಸರಿ ಹಂತ, 1 ರಿಂದ 3 ಮತ್ತು 4 ರಿಂದ 7ನೇ ತರಗತಿವರೆಗಿನ ಮಕ್ಕಳಿಗೆ ಮೂರು ಹಂತದಲ್ಲಿ ಬುನಾದಿ ಶಿಕ್ಷಣ ಮತ್ತು ಸಂಖ್ಯಾ ಸಾಮರ್ಥ್ಯವನ್ನು ಬೆಳೆಸಲಾಗುವುದು. ಇದು ಗ್ರಹಿಕೆ ಆಧಾರಿತ ಕಲಿಕೆಯ ವಿಧಾನವಾಗಿದೆ. ನೋಡಿ, ಕೇಳಿ ಮತ್ತು ಮುಟ್ಟಿ ಕಲಿಯುವ ವಿಧಾನ. ಶಾಲಾ ಕೊಠಡಿಗೆ ಸೀಮಿತವಾಗಿರುವುದಿಲ್ಲ' ಎಂದು ಅವರು ಹೇಳಿದರು.

'ಸರ್ಕಾರಿ, ಬಿಬಿಎಂಪಿ ಶಾಲೆಗಳು ಮತ್ತು ನರ್ಸರಿಯ 9,000 ಮಕ್ಕಳಿಗೆ ಇದರಿಂದ ಪ್ರಯೋಜನ ಸಿಗಲಿದೆ. ಇದಕ್ಕಾಗಿ ಶಿಕ್ಷಕರಿಗೂ ತರಬೇತಿ ನೀಡುವ ಕಾರ್ಯ ಆರಂಭವಾಗಿದೆ. ಶಾಲೆಗಳಿಗೆ ಅಗತ್ಯವಾಗಿರುವ ಸೌಲಭ್ಯಗಳು, ಆಟ ಮತ್ತು ಪಾಠದ ಕಲಿಕೆಯ ಉಪಕರಣಗಳನ್ನೂ ಒದಗಿಸಲಾಗುವುದು. ನರ್ಸರಿ ಮಕ್ಕಳಿಗೆ ಬೋಧನೆಗಾಗಿ ಹಿಮಾಂಶು ವಿದ್ಯಾಪೀಠದಲ್ಲಿ ಮಾಂಟೆಸ್ಸರಿ ತರಬೇತಿ ನೀಡಲಾಗುತ್ತಿದೆ' ಎಂದು ಅಶ್ವತ್ಥನಾರಾಯಣ ತಿಳಿಸಿದರು.

ಅಭಿಯಾನದ ಉದ್ದೇಶಗಳು

- ಮಕ್ಕಳು 9 ನೇ ವಯಸ್ಸಿನ ಒಳಗೆ ಕಡ್ಡಾಯವಾಗಿ ಕಲಿಯಬೇಕಾದ ಭಾಷಾ ಮತ್ತು ಸಂಖ್ಯಾ ಸಾಮರ್ಥ್ಯಗಳನ್ನು ಬುನಾದಿ ಸಾಮರ್ಥ್ಯಗಳೆನ್ನಲಾಗುತ್ತದೆ.
- ಇದೇ ಸಾಲಿನಿಂದ 7 ನೇ ತರಗತಿಯಿಂದ ಹಿಡಿದು ಅಂಗನವಾಡಿ ಹಂತದವರೆಗೆ ಎಲ್ಲಾ ವಿದ್ಯಾರ್ಥಿಗಳ ಬುನಾದಿ ಸಾಮರ್ಥ್ಯಗಳ ಕಲಿಕೆಗೆ ವಿಶೇಷ ಆದ್ಯತೆ ನೀಡಲಾಗುವುದು. ಇದನ್ನು ಸಾಧಿಸಲು ಶಾಲಾ ಮಟ್ಟದಲ್ಲಿ ಕಾರ್ಯ ಯೋಜನೆ ರೂಪಿಸಿ, ಜಾರಿಗೊಳಿಸಲಾಗುವುದು.
- 4 ರಿಂದ 7 ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಬುನಾದಿ ಸಾಮರ್ಥ್ಯದ ಪರೀಕ್ಷೆ ನಡೆಸುವ ಮೂಲಕ ಕೊರತೆಗಳನ್ನು ಗುರುತಿಸಿ, ಆ ಕೊರತೆಗಳನ್ನು ನೀಗಿಸಲು ಅಗತ್ಯ ಕಲಿಕಾ ಸಾಮಗ್ರಿಗಳನ್ನು ಒದಗಿಸಲಾವುದು.
- ಕಲಿಕಾ ಸಾಮಗ್ರಿಗಳ ಬಳಕೆಗೆ ಯೋಜನೆ ಮತ್ತು ತರಬೇತಿಯನ್ನು ಹಮ್ಮಿಕೊಂಡು, ಪ್ರತಿ ಶಾಲೆಯಲ್ಲಿ ಪ್ರತಿ ತಿಂಗಳೂ ಪ್ರಗತಿ ಪರಿಶೀಲನೆ ನಡೆಸಲಾಗುತ್ತದೆ.
- ಶೈಕ್ಷಣಿಕ ವರ್ಷದ ಆರಂಭ ಮತ್ತು ಅಂತ್ಯದಲ್ಲಿ ಸಾಮರ್ಥ್ಯ ಪರೀಕ್ಷೆ ನಡೆಸಿ, ಫಲಿತಾಂಶದ ಆಧಾರದ ಮೇಲೆ ಮುಂದಿನ ಯೋಜನೆ ರೂಪಿಸಲಾಗುತ್ತದೆ.
- ಈ ಅಭಿಯಾನದಲ್ಲಿ ಸರ್ಕಾರೇತರ ಸೇವಾ ಸಂಸ್ಥೆಗಳು, ಸಂಪನ್ಮೂಲ ವ್ಯಕ್ತಿಗಳು ಹಾಗೂ ಶಿಕ್ಷಣ ಫೌಂಡೇಶನ್‌ನ ಸಹಯೋಗವಿದೆ.

ಬೆಂ.ವಿ.ವಿಯಲ್ಲಿ ಜಿಎಸ್‌ಎಸ್ ಸ್ಮರಣೆ

ಬೆಂಗಳೂರು: 'ಜಿ.ಎಸ್. ಶಿವರುದ್ರಪ್ಪ ಅವರು 20ನೇ ಶತಮಾನವನ್ನು ಜೀವಿಸಿದ್ದರು. ಈ ಕಾಲಮಾನದ ಎಲ್ಲಾ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದರು. ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಆಹ್ವಾನಿಸಿಕೊಂಡು ವೈವಿಧ್ಯಮಯ ಭಾವಗೀತೆಗಳನ್ನು ನೀಡಿದ ಕವಿ' ಎಂದು ಲೇಖಕ ಕಾ.ವೆಂ ಶ್ರೀನಿವಾಸಮೂರ್ತಿ ಬಣ್ಣಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಮತ್ತು ಸಂಗೀತ ಧಾಮ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ 'ನೆನಪಿನಂಗಳದಲ್ಲಿ ಜಿ.ಎಸ್.ಎಸ್ – ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಕವಿತೆಗಳ ಗಾಯನ ಮತ್ತು ವ್ಯಾಖ್ಯಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಜಿ.ಎಸ್.ಶಿವರುದ್ರಪ್ಪ (ಜಿಎಸ್‌ಎಸ್) ಅವರು ದಯೆ, ಪ್ರೀತಿ, ಕರುಣೆ, ಅನುಕಂಪ ಇವುಗಳೇ ನಮ್ಮ ದೇವರು ಎಂದು ದೇವರ ಕುರಿತು ಹೊಸ ಪರಿಕಲ್ಪನೆ ನೀಡಿದ್ದರು' ಎಂದು ವಿವರಿಸಿದರು. 'ಜಿಎಸ್‌ಎಸ್ ಅಗಲಿ ಇಂದಿಗೆ ದಶಕವಾದರೂ ಅವರು ನಮ್ಮೊಳಗೆ ಬಿತ್ತಿ ಹೋದ ಬೌದ್ಧಿಕ ಚಿಂತನೆ, ಸಾಮಾಜಿಕ ಪ್ರಜ್ಞೆ, ಸಾಹಿತ್ಯ ಸಾಕ್ಷಿ ಇಂದಿಗೂ ಜೀವಂತ. ಅವರ ಸಾಹಿತ್ಯದಲ್ಲಿ ನವೋದಯದ ಮನೋಧರ್ಮ, ನವ್ಯದ ಸ್ಪರ್ಶ, ಬಂಡಾಯ ಸಾಹಿತ್ಯದ ಮನೋಪರ್ವವನ್ನು ಕಾಣಬಹುದು' ಎಂದರು. ಕಾರ್ಯಕ್ರಮದಲ್ಲಿ ಗಾಯಕ ಮೃತ್ಯುಂಜಯ ದೊಡ್ಡವಾಡ ಅವರು ಶಿವರುದ್ರಪ್ಪನವರ ಜನಪ್ರಿಯ ಕವಿತೆಗಳನ್ನು ಹಾಡಿದರು. ಪ್ರಾಧ್ಯಾಪಕ ಪ್ರೊ.ಡಿ.ಕೆ. ಚಿತ್ತಯ್ಯ ಪೂಜಾರ್, ವಿದ್ಯಾರ್ಥಿಗಳು ಹಾಜರಿದ್ದರು.

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಪೀಠ

ಅರ್ಕಾವತಿ ಮಲಿನ: ಎನ್‌ಜಿಟಿ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಅರ್ಕಾವತಿ ನದಿ ನೀರಿನ ಮಾದರಿಗಳಲ್ಲಿ ಭಾರ ಲೋಹಗಳು, ವಿಷಕಾರಿ ಅಂಶಗಳು ಕಂಡು ಬಂದಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಪ್ರಧಾನ ಪೀಠ ನೋಟಿಸ್ ಜಾರಿ ಮಾಡಿದೆ.

ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪೀಠವು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಅರಣ್ಯ ಹಾಗೂ ಪರಿಸರ ಇಲಾಖೆ, ಬಿಬಿಎಂಪಿ



ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಿ ನೋಟಿಸ್ ನೀಡಿದೆ.

ಈ ನದಿಯು ಕೃಷಿ ಹಾಗೂ ತೋಟಗಾರಿಕಾ ಚಟುವಟಿಕೆಗಳಿಗೆ ಪ್ರಮುಖ ಮೂಲವಾಗಿದೆ. ಅರ್ಕಾವತಿ ನದಿ ಮಾಲಿನ್ಯ ತಡೆಗಟ್ಟಿ ಪುನರುಜ್ಜೀವನಕ್ಕೆ ಕ್ರಮ ಕೈಗೊಳ್ಳುವಂತೆ ಹೈಕೋರ್ಟ್ 20 ವರ್ಷಗಳ ಹಿಂದೆಯೇ ಆದೇಶ ನೀಡಿದೆ. ಆದರೆ, ಕೊಳಚೆ ನೀರು ವ್ಯಾಪಕ ಪ್ರಮಾಣದಲ್ಲಿ ಜಲಮೂಲ ಸೇರುತ್ತಿದೆ. ನದಿಯಲ್ಲಿ ಭಾರವಾದ ಲೋಹಗಳು, ಹೆಚ್ಚಿನ ಮಟ್ಟದ ಪಾದರಸ, ವಿಷಕಾರಿ ವಸ್ತುಗಳು, ಡಿಡಿಟಿ ಕೀಟನಾಶಕದ ಅಂಶಗಳು, ಕ್ಯಾನ್ಸರ್‌ಗೆ ಕಾರಣವಾಗುವ ಪಾಲಿಸೈಕ್ಲಿಕ್ ಅರೋಮ್ಯಾಟಿಕ್ ಹೈಡ್ರೋಕಾರ್ಬನ್‌ಗಳು ಕಂಡುಬಂದಿವೆ ಎಂದು ಎನ್‌ಜಿಟಿ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ನಂದಿ ಬೆಟ್ಟದಲ್ಲಿ ಹುಟ್ಟುವ ಈ ನದಿಯು ವೃಷಭಾವತಿಗೆ ಸೇರುವ ತನಕ ಮಲಿನಗೊಳ್ಳುತ್ತಲೇ ಸಾಗಿದೆ. ಬೆಂಗಳೂರಿನ ಬಹುತೇಕ ಕೊಳಚೆ ನೀರು ಈ ನದಿಯಲ್ಲೇ ಹರಿದು ಹೋಗುತ್ತದೆ. ತಿಪ್ಪಗೊಂಡನಹಳ್ಳಿ ಜಲಾಶಯದ ಆಸುಪಾಸು, ದೊಡ್ಡ ಮುದವಾಡಿ ಸೇತುವೆ ಸೇರಿದಂತೆ ಮೂರು ಕಡೆಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ಪರಿಶೀಲನೆ ನಡೆಸಿದಾಗ ಈ ಮಾಹಿತಿ ಹೊರಬಿದ್ದಿದೆ. ಯುರೋಪಿಯನ್ ಒಕ್ಕೂಟ ನಿಗದಿಪಡಿಸಿದ ನೀರಿನ ಗುಣಮಟ್ಟದ ಮಾನದಂಡಗಳಿಗಿಂತ ಇಲ್ಲಿ ಡಿಡಿಟಿ ಪ್ರಮಾಣವು 75 ಪಟ್ಟು ಹೆಚ್ಚಾಗಿದೆ ಎಂದು ಪೀಠ ಹೇಳಿದೆ.

ಪ್ರಕರಣವನ್ನು ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸಿರುವ ಪ್ರಧಾನ ಪೀಠವು ವಿಚಾರಣೆಯನ್ನು ಫೆಬ್ರುವರಿ 10ಕ್ಕೆ ಮುಂದೂಡಿದೆ.

ಅಪಘಾತ: ದಂಪತಿ ಸಾವು

ದೊಡ್ಡಬಳ್ಳಾಪುರ: ಕನ್ನಮಂಗಲ ಗೇಟ್ ಬಳಿ ಸೋಮವಾರ ಸಂಜೆ ದ್ವಿಚಕ್ರ ವಾಹನದಲ್ಲಿ ದೇವಸ್ಥಾನಕ್ಕೆ ಹೊರಟಿದ್ದ ದಂಪತಿ ಕ್ಯಾಂಟರ್ ಡಿಕ್ಕಿ ಹೊಡೆದು ಮೃತಪಟ್ಟಿದ್ದಾರೆ.

ರಾಮದೇವನಹಳ್ಳಿ ನಿವಾಸಿ ಅನ್ನದಾನಯ್ಯ (65), ನಾಗರತ್ನಮ್ಮ (58) ಮೃತ ದಂಪತಿ. ರಾಮದೇವನಹಳ್ಳಿಯಿಂದ ಚಿಕ್ಕ ಮಧುರೆ ಶನಿ ದೇವರ ದೇಗುಲಕ್ಕೆ ತೆರಳುವಾಗ ಅಪಘಾತ ಸಂಭವಿಸಿದೆ.

ಗಂಭೀರವಾಗಿ ಗಾಯಗೊಂಡಿದ್ದ ದಂಪತಿಯನ್ನು ಕೂಡಲೇ ಅವರನ್ನು ನೆಲಮಂಗಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿಸಿತು. ಚಿಕಿತ್ಸೆಗೆ ಸ್ಪಂದಿಸದೆ ದಂಪತಿ ಮೃತಪಟ್ಟಿದ್ದಾರೆ. ದೊಡ್ಡಬೆಳವಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ಸ್ಥಳ ಗುರುತಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು. ಮಹದೇವಪುರ ವಲಯ ವ್ಯಾಪ್ತಿಯಲ್ಲಿ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಸಂದರ್ಭದಲ್ಲಿ, ನಿವಾಸಿಯೊಬ್ಬರು 'ಸಾರ್ವಜನಿಕ ಶೌಚಾಲಯ' ನಿರ್ಮಿಸಲು ಮನವಿ ಮಾಡಿದರು.

ತುಷಾರ್ ಗಿರಿನಾಥ್ ಪ್ರತಿಕ್ರಿಯಿಸಿ, 'ಪಾಲಿಕೆ ವ್ಯಾಪ್ತಿಯಲ್ಲಿ 200 ಹೈಟೆಕ್ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ. ಈ ಸಂಬಂಧ ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಖಾಲಿ ಜಾಗ/ ಸಾರ್ವಜನಿಕ ಸ್ಥಳಗಳನ್ನು ಗುರುತಿಸಬೇಕು. ಬಳಿಕ ಟೆಂಡರ್ ಕರೆದು ಕಾಲಮಿತಿಯೊಳಗೆ ಶೌಚಾಲಯ ನಿರ್ಮಿಸಬೇಕು' ಎಂದರು.

ಕೆ.ಆರ್. ಪುರ ವ್ಯಾಪ್ತಿಯ ಆರ್.ಎನ್.ಎಸ್ ಕಾಲೊನಿ, ಜೈಭುವನೇಶ್ವರಿ ಬಡಾವಣೆ, ಬನಶಂಕರಿ ಬಡಾವಣೆ ಸುತ್ತಮುತ್ತಲಿನ ಚರಂಡಿಗಳ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಇದರಿಂದ ಸೊಳ್ಳೆಕಾಟ ಹೆಚ್ಚಾಗಿದೆ ಎಂದು ನಾಗರಿಕರು ದೂರಿದರು. 'ವಲಯ ಆಯುಕ್ತರು ಹಾಗೂ ಜಂಟಿ ಆಯುಕ್ತರು ಸ್ಥಳ ಪರಿಶೀಲನೆ ನಡೆಸಬೇಕು. ಸೊಳ್ಳೆ ಉತ್ಪತ್ತಿ ತಾಣಗಳನ್ನು ಗುರುತಿಸಿ ಔಷಧ ಸಿಂಪಡಣೆ ಹಾಗೂ ಫಾಗಿಂಗ್ ಮಾಡಿ ಸೊಳ್ಳೆ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಆರೋಗ್ಯ ವೈದ್ಯಾಧಿಕಾರಿಗೆ ಮುಖ್ಯ ಆಯುಕ್ತರು ಸೂಚಿಸಿದರು.

ಕಳೆದ ಬಾರಿಯ ಕಾರ್ಯಕ್ರಮದಲ್ಲಿ ನಾಗರಿಕರು ಸಲ್ಲಿಸಿದ ಬಹುತೇಕ ದೂರುಗಳಿಗೆ ಪರಿಹಾರ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ 30ಕ್ಕೂ ಹೆಚ್ಚು ದೂರುಗಳು ಬಂದಿವೆ. ಅವುಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ತುಷಾರ್ ಗಿರಿನಾಥ್ ಸೂಚಿಸಿದರು. ವಲಯ ಆಯುಕ್ತ ರಮೇಶ್, ವಲಯ ಜಂಟಿ ಆಯುಕ್ತೆ ದಾಕ್ಷಾಯಿಣಿ, ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್, ಉಪ ಆಯುಕ್ತ ಶಶಿ ಕುಮಾರ್, ಮುಖ್ಯ ಎಂಜಿನಿಯರ್ ಲೋಕೇಶ್ ಉಪಸ್ಥಿತರಿದ್ದರು.

ಆನೇಕಲ್: ಕಾಡಿಗೆ ಓಡಿಸಿದ ಅರಣ್ಯ ಸಿಬ್ಬಂದಿ

ಆಹಾರ ಅರಸಿ ಬಂದ ಆನೆ ಹಿಂಡು

ಪ್ರಜಾವಾಣಿ ವಾರ್ತೆ

ಆನೇಕಲ್: ಕರ್ನಾಟಕ-ತಮಿಳುನಾಡು ಗಡಿಭಾಗದಲ್ಲಿ ಮತ್ತೆ ಕಾಡಾನೆ ಹಿಂಡು ಕಾಣಿಸಿಕೊಂಡಿದೆ. ಸೋಮವಾರ ಬೆಳಗ್ಗೆ 8ರ ಸುಮಾರಿಗೆ ಪ್ರತ್ಯಕ್ಷವಾದ ಆನೆ ಹಿಂಡು ಸಂಜೆಯರೆವಗೂ ಗಡಿಗ್ರಾಮಗಳಲ್ಲಿ ಸುತ್ತಾಡಿತು.

ಆಹಾರ ಅರಸಿ ಬಂದಿರುವ ಹಿಂಡು ತಾಲ್ಲೂಕಿನ ಗಡಿಭಾಗ ಮೆಣಸಿಗನಹಳ್ಳಿ, ವಣಕನಹಳ್ಳಿ ಬಳಿ ಬೀಡುಬಿಟ್ಟಿತ್ತು. ಗುಂಪಿನಲ್ಲಿ ಆರು ಆನೆಗಳಿದ್ದವು.

ವಣಕನಹಳ್ಳಿ, ಮೆಣಸಿಗನಹಳ್ಳಿ, ಕಾಳನಾಯಕನಹಳ್ಳಿ, ತಮಿಳುನಾಡಿ ಗಡಿಭಾಗದ ಕೊಮಾರನಹಳ್ಳಿ ಸಮೀಪ ಕಾಡಾನೆ ಹಿಂಡು ಸಂಚರಿಸಿದೆ.

ಮೆಣಸಿಗನಹಳ್ಳಿಯಲ್ಲಿ ಕಾಡಾನೆಗಳು ನೀಲಗಿರಿ ತೋಪಿಗೆ ನುಗ್ಗುತ್ತಿರುವುದನ್ನು ಗಮನಿಸಿದ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಆನೇಕಲ್ ತಾಲ್ಲೂಕಿನ ಮೆಣಸಿಗನಹಳ್ಳಿ ಬಳಿ ಕಂಡು ಬಂದ ಕಾಡಾನೆಗಳ ಹಿಂಡು

ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಕಾಡಾನೆ ಓಡಿಸಲು ಕಾರ್ಯಾಚರಣೆ ಆರಂಭಿಸಿದರು. ಬೆದರಿದ ಆನೆಗಳು ನೀಲಗಿರಿ ತೋಪಿನಿಂದ ರೈತರ ತೋಟಗಳತ್ತ ನುಗ್ಗಿದ್ದವು. ಸಂಜೆ 7ರ ವೇಳೆಗೆ ಎಲ್ಲ ಕಾಡಾನೆಗಳನ್ನು ಕಾಡಿನತ್ತು ಓಡಿಸುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ವಿಯಾದರು.

ಅಕ್ಟೋಬರ್, ನವೆಂಬರ್‌ನಿಂದ ಕಾಡಾನೆಗಳ ಹಿಂಡು ಗಡಿಭಾಗದ ಗ್ರಾಮಗಳಲ್ಲಿ ಓಡಾಡುವುದು ಸಾಮಾನ್ಯವಾಗಿದೆ.

ಬುಗಡಿಹಳ್ಳಿ ಡೇರಿಗೆ ಪದಾಧಿಕಾರಿಗಳ ಆಯ್ಕೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಬುಗಡಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿ ವಿ. ರಾಮಮೂರ್ತಿ ಆಯ್ಕೆಯಾಗಿದ್ದು, ನಿರ್ದೇಶಕರಾಗಿ ಮಂಜುನಾಥ್ ಆರ್., ಗೋವಿಂದಪ್ಪ, ರಂಗಸ್ವಾಮಿ, ಚಿಕ್ಕಣ್ಣ, ಕಿಟ್ಟಯ್ಯ, ರಾಜಣ್ಣ, ತಿಮ್ಮಯ್ಯ, ನಾಗರಾಜು ಹಾಗೂ ಮಹಿಳಾ ವರ್ಗದಿಂದ ರೇಣುಕಮ್ಮ, ಕಲ್ಪನಾ ಮತ್ತು ಮಂಜಮ್ಮ ಆಯ್ಕೆಯಾಗಿದ್ದಾರೆ. ಸಹಕಾರ ಇಲಾಖೆಯ ಭಾಸ್ಕರ್ ಅವರು ಚುನಾವಣಾಧಿಕಾರಿಯಾಗಿದ್ದರು.

ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ಮುಖಂಡರಾದ ಸುಂದರ್, ಚಿಕ್ಕಣ್ಣ, ಗೋವಿಂದರಾಜು, ಕಾಂತರಾಜು, ಕೃಷಿಕ ಸಮಾಜದ ವೆಂಕಟೇಶಯ್ಯ ಹಾಗೂ ಡೇರಿ ಕಾರ್ಯದರ್ಶಿ ಭರತ್ ಅಭಿನಂದಿಸಿದರು.

ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಬೇಸರ

ಚಿತ್ರರಂಗಕ್ಕೆ 'ಪ್ಯಾನ್ ಇಂಡಿಯಾ' ಭೂತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದಲ್ಲಿ ಸಿನಿಮಾ ಮಾಡಲು ಒಳ್ಳೆಯ ಕಥೆ, ಕಾದಂಬರಿಗಳು ಇವೆ. ಇವತ್ತು ಪುಸ್ತಕ ಆಧಾರಿತ ಕತೆ ಹೇಳಲು ಮುಂದಾದರೆ ಸಿನಿಮಾ ರಂಗದವರು ಮನೆಗೆ ಸೇರಿಸುವುದಿಲ್ಲ. ಅವರಿಗೆ 'ಪ್ಯಾನ್ ಇಂಡಿಯಾ' ಭೂತ ಹಿಡಿದಿದೆ ಎಂದು ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ಹೇಳಿದರು.

ಸರ್ಕಾರಿ ಕಲಾ ಕಾಲೇಜಿನಲ್ಲಿ ಸೋಮವಾರ ಏರ್ಪಡಿಸಿದ್ದ 'ನಾಡೋಜ ಬರಗೂರು ಪ್ರತಿಷ್ಠಾನ' ಕೊಡಮಾಡುವ 'ನಾಡೋಜ ಬರಗೂರು ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದರು. 'ಇಲ್ಲಿನ ಸಂಸ್ಕೃತಿ, ಮಣ್ಣಿನ ಸೊಗಡಿನ ಕಥೆಗಳು ನಮ್ಮಲ್ಲಿ ಇವೆ. ಆದರೆ, ಆ ಕಥೆಗಳನ್ನು ಜನರಿಗೆ ತಲುಪಿಸುತ್ತಿಲ್ಲ. ಅನ್ಯ ಭಾಷೆಯ ಮೊರೆ ಹೋಗಿ ನಮ್ಮ ಜನರ ದಾರಿ ತಪ್ಪಿಸುತ್ತಿದ್ದೀವೆಯೆನೋ ಅನಿಸುತ್ತಿದೆ' ಎಂದು ಹೇಳಿದರು.

'ಬಾಹುಬಲಿ ಸಿನಿಮಾವನ್ನು ರಾಜ್‌ಕುಮಾರ್ ಅವರ ಸಿನಿಮಾದ ಕತೆಗಳಿಂದ ಕದ್ದು ಮಾಡಲಾಗಿದೆ. ಕನ್ನಡದ ಕತೆಗೆ, ಸಿನಿಮಾಗಳಿಗೆ ಹೊಸ ಬಣ್ಣ ಬಳಿದು ಸಿನಿಮಾ ಮಾಡುತ್ತಿದ್ದಾರೆ. ಜನ ಅದನ್ನೇ ಅದ್ಭುತ ಕತೆ ಎಂದು ಕೊಂಡಾಡುತ್ತಿದ್ದಾರೆ' ಎಂದರು.

ಚಿತ್ರನಟಿ ಸುಧಾರಾಣಿ, ಸಾಹಿತಿ ಕರೀಗೌಡ ಬೀಚನಹಳ್ಳಿ, ಚಿತ್ರ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು, ಸಾಹಿತಿ ಬಸವರಾಜ ಕಲ್ಗುಡಿ ಅವರಿಗೆ ನಾಡೋಜ ಬರಗೂರು ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಶಮಿತಾ ಮಲ್ನಾಡ್, ಆಕಾಂಕ್ಷ ಬರಗೂರು, ಬರಗೂರು ರಾಮಚಂದ್ರಪ್ಪ, ಹಂ.ಪ.ನಾಗರಾಜಯ್ಯ, ಸುಂದರ್ ರಾಜ್ ಅರಸು, ಮೈತ್ರಿ ಬರಗೂರು, ಸರ್ಕಾರಿ ಕಲಾ ಕಾಲೇಜು ಪ್ರಾಂಶುಪಾಲ ಶ್ರೀನಿವಾಸ್ ನಾಯಕ್ , ಕರಿಯಪ್ಪ ಮಾಳಿಗೆ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

70ರ ದಶಕದಲ್ಲಿ ಶುಕ್ರವಾರ, ಶನಿವಾರ, ಭಾನುವಾರ ಇಡೀ ಭಾರತೀಯ ಚಿತ್ರರಂಗ ಕನ್ನಡ ಸಿನಿಮಾ ಹಕ್ಕುಗಳನ್ನು ಪಡೆಯಲು ಬೆಂಗಳೂರಿನಲ್ಲಿ ಇರುತ್ತಿತ್ತು. ಆದರೆ ಈಗ ಕನ್ನಡ ಚಿತ್ರರಂಗಕ್ಕೆ ಗ್ರಹಣ ಹಿಡಿದಿದೆ. ಕನ್ನಡ ಸಾಹಿತ್ಯ ಮತ್ತು ಸಿನಿಮಾ ಪರಸ್ಪರ ಪೂರಕವಾಗಿರಬೇಕು, ವಿರುದ್ಧ ದಿಕ್ಕಿನಲ್ಲಿ ಸಾಗಬಾರದು. ಕೇರಳದಲ್ಲಿ ಎಂ.ಟಿ. ವಾಸುದೇವನ್ ನಾಯರ್ ಅವರು ಪುಸ್ತಕದ ಹಕ್ಕುಗಳನ್ನು ಕೊಟ್ಟಿದ್ದಾರೆ. ಆದರೆ, ರಾಜ್ಯದಲ್ಲಿ ಕೆಲವರು ಮನೆಗೆ ಸೇರಿಸುವುದಿಲ್ಲ. ಕನ್ನಡದಲ್ಲಿಒಳ್ಳೆಯ ಕಥೆಗಳಿವೆ. ಆದರೆ, ಸಿನಿಮಾ ಮಾಡಲು ಒಪ್ಪಿಕೊಳ್ಳುವುದಿಲ್ಲ. ಜಾತಿಗೆ ಮಣೆ ಹಾಕಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2023ನೇ ಸಾಲಿನ ನಾಡೋಜ ಬರಗೂರು ಪ್ರಶಸ್ತಿಯನ್ನು ರಾಜೇಂದ್ರಸಿಂಗ್ ಬಾಬು (ಸಿನಿಮಾ), ಬಸವರಾಜು ಕಲ್ಗುಡಿ (ಸಾಹಿತ್ಯ), 2024ನೇ ಸಾಲಿನಲ್ಲಿ ಸುಧಾರಾಣಿ (ಸಿನಿಮಾ), ಕರೀಗೌಡ ಬೀಚನಹಳ್ಳಿ (ಸಾಹಿತ್ಯ) ಅವರಿಗೆ ವಿದ್ವಾಂಸ ಹಂ.ಪ.ನಾಗರಾಜಯ್ಯ ಪ್ರದಾನ ಮಾಡಿದರು. ಪ್ರಶಸ್ತಿಯು ನೆನಪಿನ ಕಾಣಿಕೆ, ಪ್ರಮಾಣ ಪತ್ರ ಹಾಗೂ ₹10 ಸಾವಿರ ನಗದು ಒಳಗೊಂಡಿದೆ.

ಕ್ರಿಸ್‌ಮಸ್, ಹೊಸ ವರ್ಷಾಚರಣೆ • ಬಂದೋಬಸ್ತ್‌ಗೆ ಗೃಹ ಸಚಿವ ಜಿ.ಪರಮೇಶ್ವರ ಸೂಚನೆ

ಅನಾಹುತ ಸಂಭವಿಸಿದರೆ ಡಿಸಿಪಿಗಳೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ವೇಳೆ ನಗರದಲ್ಲಿ ಯಾವುದೇ ರೀತಿಯ ಅನಾಹುತಗಳು ಸಂಭವಿಸದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂಭ್ರಮದ ವೇಳೆ ಕಳೆದ ವರ್ಷ ಅಚ್ಚುಕಟ್ಟಾಗಿ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲಾಗಿತ್ತು. ಅದೇ ರೀತಿಯಲ್ಲಿ ಈ ವರ್ಷವೂ ಬಂದೋಬಸ್ತ್ ಕೈಗೊಳ್ಳಬೇಕು' ಎಂದು ಸೂಚಿಸಿದರು.

'ಯಾವುದೇ ರೀತಿಯ ಅನಾಹುತಗಳು ಸಂಭವಿಸಿದರೆ ಸಂಬಂಧಪಟ್ಟ ಡಿಸಿಪಿ, ಎಸಿಪಿ, ಇನ್‌ಸ್ಪೆಕ್ಟರ್‌ಗಳನ್ನೇ ಹೊಣೆ ಮಾಡಲಾಗುವುದು. ಈ ವಿಚಾರದಲ್ಲಿ ಯಾರು ಏನೇ ಹೇಳಿದರೂ ಕೇಳುವುದಿಲ್ಲ' ಎಂದು ಎಚ್ಚರಿಸಿದರು.

'ಬಿಬಿಎಂಪಿ, ಬಿಎಂಟಿಸಿ, ಬಿಎಂಆರ್‌ಸಿಎಲ್, ಆರೋಗ್ಯ ಮತ್ತು ಅಗ್ನಿಶಾಮಕ ಇಲಾಖೆಯ ನೆರವು ಪಡೆದುಕೊಳ್ಳಬೇಕು. ಅಗ್ನಿ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮದ್ಯ ಸೇವಿಸಿ ವಾಹನ ಚಾಲನೆ, ವ್ಹೀಲಿ ಮಾಡುವ ಕಿಡಿಗೇಡಿಗಳು ಹಾಗೂ ಹಳೇ ಪ್ರಕರಣಗಳ ಆರೋಪಿಗಳ ಮೇಲೆ ನಿಗಾ ಇರಿಸಬೇಕು' ಎಂದು ಸೂಚನೆ ನೀಡಿದರು.

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ (ಎಡದಿಂದ) ಸಿಸಿಬಿ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಚಂದ್ರಗುಪ್ತ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಗೃಹ ಸಚಿವ ಜಿ.ಪರಮೇಶ್ವರ ಹಾಗೂ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪಾಲ್ಗೊಂಡಿದ್ದರು

> **ಬೆಂಗಳೂರು ವಿಶ್ವದ ಗಮನ ಸೆಳೆಯುವ ನಗರ. ಸಣ್ಣಪುಟ್ಟ ಘಟನೆಗಳನ್ನೂ ನಿರ್ಲಕ್ಷಿಸದೇ ಅತ್ಯಂತ ಜವಾಬ್ದಾರಿಯಾಗಿ ಬಂದೋಬಸ್ತ್ ಕೈಗೊಳ್ಳಬೇಕು**
> **ಜಿ.ಪರಮೇಶ್ವರ,** ಗೃಹ ಸಚಿವ

ಏಳು ಲಕ್ಷ ಜನ ಸೇರುವ ಸಾಧ್ಯತೆ: ನಗರದಲ್ಲಿ ಹೊಸ ವರ್ಷ ಆಚರಣೆಗೆ ಏಳು ಲಕ್ಷ ಜನರು ಸೇರುವ ಸಾಧ್ಯತೆ ಇದ್ದು, ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಗೃಹ ಸಚಿವರು ಸೂಚನೆ ನೀಡಿದರು.

ಸಭೆಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್, ಸಿಸಿಬಿ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಚಂದ್ರಗುಪ್ತ, ಎಲ್ಲ ವಿಭಾಗದ ಡಿಸಿಪಿಗಳು, ಎಸಿಪಿಗಳು ಪಾಲ್ಗೊಂಡಿದ್ದರು.

ಹೊಸ ವರ್ಷಕ್ಕೆ ಮಾರ್ಗಸೂಚಿ ಸಿದ್ಧ

- ಮಾಲ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು
- ಪೊಲೀಸ್ ಸಿಬ್ಬಂದಿ ಹೆಲ್ಮೆಟ್ ಹಾಗೂ ಲಾಠಿಯನ್ನು ಹೊಂದಿರಬೇಕು
- ಎಲ್ಲ ಅಧಿಕಾರಿಗಳೂ ಸರ್ವೀಸ್ ರಿವಾಲ್ವರ್ ಅನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು
- ಹೆಣ್ಣು ಮಕ್ಕಳನ್ನು ಚುಡಾಯಿಸುವವರು ಹಾಗೂ ದಾಂದಲೆ ನಡೆಸುವವರನ್ನು ಕೂಡಲೇ ವಶಕ್ಕೆ ಪಡೆದುಕೊಂಡು ಕ್ರಮ ತೆಗೆದುಕೊಳ್ಳಬೇಕು
- ರಸ್ತೆ ಮೇಲೆ ಬಾಟಲಿ ಒಡೆದು ದಾಂದಲೆ ನಡೆಸುವವರನ್ನು ತಕ್ಷಣವೇ ವಶಕ್ಕೆ ಪಡೆದುಕೊಳ್ಳಬೇಕು
- ಹೆಚ್ಚಿನ ಜನರು ಜಮಾವಣೆ ಆಗುವ ಸ್ಥಳದಲ್ಲಿ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಮಾಡಿರಬೇಕು
- ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆ ಹಾಗೂ ಮಹಾತ್ಮ ಗಾಂಧಿ ರಸ್ತೆಯಲ್ಲಿ ಆಗಮನ ಹಾಗೂ ನಿರ್ಗಮನ ದ್ವಾರಗಳನ್ನು ಅಳವಡಿಸಬೇಕು

ಎಂ.ಜಿ. ರಸ್ತೆಯಲ್ಲಿ ನಿರ್ಬಂಧ ಇಲ್ಲ

ಡಿಸೆಂಬರ್ 31ರಂದು ಮೆಟ್ರೊ, ಆಟೊಗಳು, ಬಸ್‌ಗಳ ಓಡಾಟ ಸೇರಿದಂತೆ ಹಲವು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆಯಲ್ಲಿ ಸಂಭ್ರಮಾಚರಣೆಗೆ ಯಾವುದೇ ನಿರ್ಬಂಧ ಇಲ್ಲ. ಅಲ್ಲಿ ಹೆಚ್ಚಿನ ಜನರು ಸೇರಲಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಗೃಹ ಸಚಿವರ ಸೂಚನೆಗಳು

- ಗುಪ್ತದಳ ಅಧಿಕಾರಿಗಳ ಜತೆಗೆ ಪೊಲೀಸ್ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿ ಇರಬೇಕು
- ಮಹಿಳಾ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು
- ಸಣ್ಣಪುಟ್ಟ ಅನಾಹುತಗಳು ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು
- ಹೊಸ ವರ್ಷ ಆಚರಿಸುವವರಿಗೆ ಅಡಚಣೆ ಮಾಡುವುದು ಬೇಡ; ಅವರಿಗೆ ಸುರಕ್ಷತೆ ನೀಡಬೇಕು
- ತೊಂದರೆ ಉಂಟು ಮಾಡುವ ಕಿಡಿಗೇಡಿಗಳ ಮೇಲೆ ನಿಗಾವಹಿಸಿ ಕ್ರಮ ಜರುಗಿಸಬೇಕು
- ನಗರದ ಪೊಲೀಸ್ ಅಧಿಕಾರಿ, ಸಿಬ್ಬಂದಿಗೆ ರಜೆ ನೀಡುವುದು ಬೇಡ. ತೀರಾ ಅಗತ್ಯ ಮತ್ತು ಅನಿವಾರ್ಯತೆ ಇದ್ದವರಿಗೆ ರಜೆ ನೀಡಬಹುದು

ಸುದ್ದಿ 2 ನಿಮಿಷ

ಮದ್ಯ ಸೇವಿಸಿ ವಾಹನ ಚಾಲನೆ 769 ಚಾಲಕರ ವಿರುದ್ಧ ಪ್ರಕರಣ

ಬೆಂಗಳೂರು: ಮದ್ಯ ಸೇವಿಸಿ ವಾಹನ ಚಾಲನೆ ಮಾಡುವವರು ಹಾಗೂ ಅತಿ ವೇಗದ ಚಾಲನೆ ವಿರುದ್ಧ ಒಂದು ವಾರ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ವಿಭಾಗದ ಪೊಲೀಸರು, 60,903 ವಾಹನ ಚಾಲಕರನ್ನು ತಪಾಸಣೆ ನಡೆಸಿ, 769 ಪ್ರಕರಣಗಳನ್ನು ದಾಖಲಿಸಿದ್ದಾರೆ.

ಆರೋಪಿತ ಚಾಲಕರ ಚಾಲನಾ ಪರವಾನಗಿ (ಡಿಎಲ್) ರದ್ದುಗೊಳಿಸುವಂತೆ ಸಾರಿಗೆ ಇಲಾಖೆಗೆ ಪತ್ರ ಬರೆಯಲಾಗುವುದು. ಅದೇ ರೀತಿ ನಗರದಲ್ಲಿ ಅತಿ ವೇಗವಾಗಿ ವಾಹನ ಚಲಾಯಿಸುತ್ತಿದ್ದ 241 ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ₹2.41 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೊಸ ವರ್ಷಾಚರಣೆ ಸಮೀಪಿಸುತ್ತಿರುವ ಕಾರಣ ನಗರದಲ್ಲಿ ಮದ್ಯ ಸೇವಿಸಿ ವಾಹನ ಚಲಾಯಿಸುವವರು ಹಾಗೂ ಅತಿ ವೇಗದ ವಾಹನ ಚಾಲನೆಯ ವಿರುದ್ಧ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಈ ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಹಂತ ಹಂತವಾಗಿ ರಸ್ತೆಗಳ ಅಭಿವೃದ್ಧಿ'

ಪೀಣ್ಯ,ದಾಸರಹಳ್ಳಿ: 'ಕ್ಷೇತ್ರದಲ್ಲಿ ಹಲವು ಕಡೆ ರಸ್ತೆಗಳು ಅಭಿವೃದ್ಧಿ ಕಾಣದೆ ಹದಗೆಟ್ಟಿವೆ. ಅಂಥ ರಸ್ತೆಗಳನ್ನು ಗುರುತಿಸಿ ಡಾಂಬರೀಕರಣಕ್ಕೆ ಚಾಲನೆ ನೀಡಲಾಗಿದೆ' ಎಂದು ದಾಸರಹಳ್ಳಿ ಶಾಸಕ ಎಸ್. ಮುನಿರಾಜು ಹೇಳಿದರು

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವಿವಿಧ ಭಾಗಗಳಲ್ಲಿ ಅಂದಾಜು ₹1.58 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

'ಕ್ಷೇತ್ರದ ಇನ್ನೂ ಹಲವೆಡೆ ರಸ್ತೆಗಳು ಹಾಳಾಗಿವೆ. ಹಂತ ಹಂತವಾಗಿ ಎಲ್ಲ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ಭರವಸೆ ನೀಡಿದರು.

ಇದೇ ವೇಳೆ ಲಗ್ಗೆರೆಯ ಎಂ.ಇ.ಐ ಕಾಲೊನಿ, 1ನೇ ಕ್ರಾಸ್‌ನಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿ, ರಾಜಗೋಪಾಲ ನಗರ ಮುಖ್ಯರಸ್ತೆ, ಗಣಪತಿನಗರದ ಇಂಡಿಯನ್ ಬೇಕರಿ ಹತ್ತಿರ ರಸ್ತೆ, ಶಿವಪುರದ 18ನೇ ಕ್ರಾಸ್ ರಸ್ತೆಗಳಿಗೆ ಡಾಂಬರೀಕರಣ ಹಾಗೂ ರುಕ್ಮಿಣಿನಗರದ ನೆಲಗದರನಹಳ್ಳಿ ಮುಖ್ಯರಸ್ತೆಯ 7ನೇ ಕ್ರಾಸ್ ಬಳಿ ವಾಟರ್ ಪೈಪ್ ಲೈನ್ ಕಾಮಗಾರಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡ್‌ನ ಬಿಜೆಪಿ ಅಧ್ಯಕ್ಷ ನಿಸರ್ಗ ಕೆಂಪರಾಜು, ದಾಸರಹಳ್ಳಿ ಕ್ಷೇತ್ರ ಘಟಕದ ಜೆಡಿಎಸ್ ಅಧ್ಯಕ್ಷ ಎಂ. ಮುನಿಸ್ವಾಮಿ, ಶ್ರೀನಿವಾಸ್ (ಜೆವಿಎಸ್), ಸ್ಥಳೀಯ ಮುಖಂಡರಾದ ಸುರೇಶ್ ಗೌಡ, ವಿಜಯ್ ಕುಮಾರ್, ಎಂಜಿನಿಯರ್‌ಗಳಾದ ವೆಂಕಟೇಶ್, ವಿಶಾಲ ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಸರಣಿ ಅಪಘಾತ: ಪ್ರಯಾಣಿಕರು ಪಾರು

ಬೆಂಗಳೂರು: ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಸಮೀಪದ ಸಿಗ್ನಲ್ ಬಳಿ ಕೆಎಸ್‌ಆರ್‌ಟಿಸಿ ಬಸ್‌ನ ಬ್ರೇಕ್ ವಿಫಲಗೊಂಡು, ಸಿಗ್ನಲ್‌ನಲ್ಲಿ ನಿಂತಿದ್ದ ಬಸ್, ಆಟೊ ಹಾಗೂ ಕಾರಿಗೆ ಡಿಕ್ಕಿ ಹೊಡೆದು ಸರಣಿ ಅಪಘಾತ ಸಂಭವಿಸಿದೆ. ಅದೃಷ್ಟವಶಾತ್ ಯಾರಿಗೂ ಪ್ರಾಣಾಪಾಯ ಸಂಭವಿಸಿಲ್ಲ.

ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಮೈಸೂರು– ಬೆಂಗಳೂರು ರಸ್ತೆಯಲ್ಲಿ ಭಾನುವಾರ ಮಧ್ಯಾಹ್ನ ಸುಮಾರು 3.30ಕ್ಕೆ ಈ ಘಟನೆ ನಡೆದಿದೆ. ಬಸ್ ಹಾಗೂ ಆಟೊ ಜಖಂಗೊಂಡಿದ್ದು, ಪ್ರಯಾಣಿಕರೊಬ್ಬರಿಗೆ ಸಣ್ಣಪುಟ್ಟ ಗಾಯವಾಗಿದ್ದು, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೈಸೂರು ಕಡೆಯಿಂದ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಅನ್ನು ಚಾಲಕ ಜ್ಞಾನಭಾರತಿ ಮೆಟ್ರೊ ರೈಲು ನಿಲ್ದಾಣದ ಬಳಿ ನಿಲುಗಡೆ ಮಾಡಲು ಬ್ರೇಕ್ ತುಳಿದಿದ್ದಾರೆ. ಆ ವೇಳೆ ಬ್ರೇಕ್ ವಿಫಲವಾಗಿ ಚಾಲಕನ ನಿಯಂತ್ರಣ ತಪ್ಪಿದ ಬಸ್ ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿ ಎದುರು ನಿಂತಿದ್ದ ಮತ್ತೊಂದು ಕೆಎಸ್‌ಆರ್‌ಟಿಸಿ ಬಸ್, ಆಟೊ ಮತ್ತು ಕಾರೊಂದಕ್ಕೆ ಡಿಕ್ಕಿಯಾಗಿದೆ. ಇದೇ ಸಮಯದಲ್ಲಿ ಸಿಗ್ನಲ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂಚಾರ ವಿಭಾಗದ ಪೊಲೀಸರು, ತಕ್ಷಣ ಸ್ಥಳಕ್ಕೆ ಬಂದು ವಾಹನಗಳನ್ನು ತೆರವುಗೊಳಿಸಿದ್ದರು.

'ಕೆಎಸ್‌ಆರ್‌ಟಿಸಿ ಬಸ್ ಬ್ರೇಕ್ ವಿಫಲವಾಗಿದ್ದರಿಂದ ಈ ಘಟನೆ ನಡೆದಿದೆ' ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಕೌಟುಂಬಿಕ ಕಲಹ: ಉದ್ಯಮಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯೊಂದಿಗೆ ನಡೆದ ಜಗಳದಿಂದ ಬೇಸತ್ತು ಉದ್ಯಮಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಜೆ.ಸಿ.ನಗರದ ನಿವಾಸಿ, ಲಾರಿ ಮಾಲೀಕ ಎಂ.ಜಿ.ಸೋಮಶೇಖರ್(47) ಆತ್ಮಹತ್ಯೆ ಮಾಡಿಕೊಂಡವರು.

ಮೃತರ ತಂದೆ ನೀಡಿರುವ ದೂರು ಆಧರಿಸಿ ಅಸಹಜ ಸಾವಿನ (ಯುಡಿಆರ್) ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಭಾನುವಾರ ರಾತ್ರಿ 11 ಗಂಟೆ ಸುಮಾರಿಗೆ ಕೊಠಡಿಯಲ್ಲಿದ್ದ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದ್ದರು. ಇದನ್ನು ಗಮನಿಸಿದ್ದ ಮನೆಯವರು ಅವರನ್ನು ಸಮೀಪದ ಸಂಜೀವಿನಿ ಆಸ್ಪತ್ರೆಗೆ ದಾಖಲಿಸಿದ್ದರು. ಸೋಮವಾರ ಬೆಳಿಗ್ಗೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನನ್ನ ಮಗ ಹಾಗೂ ಸೊಸೆ ಕೌಟುಂಬಿಕ ಕಾರಣಕ್ಕೆ ಗಲಾಟೆ ಮಾಡಿಕೊಂಡಿದ್ದರು.ಇದರಿಂದ ಮಗ ಬೇಸರಿಸಿಕೊಂಡಿದ್ದ. ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಮೃತರ ತಂದೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

₹11 ಕೋಟಿ ವಂಚನೆ: ಎರಡು ತಂಡ ರಚನೆ

ಅಪರಾಧ ಸುದ್ದಿ

ಬೆಂಗಳೂರು: ಡಿಜಿಟಲ್ ಅರೆಸ್ಟ್ ಮೂಲಕ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರಿಗೆ ₹11.83 ಕೋಟಿ ವಂಚಿಸಿದ್ದ ಪ್ರಕರಣದ ತನಿಖೆ ನಡೆಸಲು ಈಶಾನ್ಯ ವಿಭಾಗದ ಸೆನ್ ಠಾಣೆ ಪೊಲೀಸರು ಎರಡು ವಿಶೇಷ ತಂಡ ರಚಿಸಿದ್ದಾರೆ.

ಸಿಡಿಆರ್ ವಿಶ್ಲೇಷಣೆ ಹಾಗೂ ಆರೋಪಿಗಳ ಪತ್ತೆಗಾಗಿ ಪ್ರತ್ಯೇಕ ತನಿಖಾ ತಂಡ ರಚಿಸಲಾಗಿದೆ. ಸದ್ಯ ಪ್ರಾಥಮಿಕ ಮಾಹಿತಿ ಪ್ರಕಾರ ಈಶಾನ್ಯ ರಾಜ್ಯ ಹಾಗೂ ವಿದೇಶದಲ್ಲಿ ಕುಳಿತು ವಂಚಿಸಿರುವ ಮಾಹಿತಿ ಸಿಕ್ಕಿದೆ. ತನಿಖೆ ಪ್ರಗತಿಯಲ್ಲಿದೆ ಎಂದು ಸೆನ್ ಠಾಣೆ ಪೊಲೀಸರು ತಿಳಿಸಿದರು.

ಒಂದು ತಂಡ ಗುಜರಾತ್‌ಗೆ, ಇನ್ನೊಂದು ತಂಡ ಮಹಾರಾಷ್ಟ್ರಕ್ಕೆ ತೆರಳಿದ್ದು, ಸೈಬರ್ ಖದೀಮರ ಪತ್ತೆ ಕಾರ್ಯಕ್ಕೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಹಣ ಕಳೆದುಕೊಂಡಿರುವ ವಿಜಯ್ ಕುಮಾರ್ ಅವರು ನೀಡಿರುವ ದೂರು ಆಧರಿಸಿ ಈಶಾನ್ಯ ವಿಭಾಗದ ಸಿಇಎನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ವಂಚಕರು ಏಳು ಪ್ರತ್ಯೇಕ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸಿಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ಲಾರಿಗಳ ಮಧ್ಯೆ ಸಿಲುಕಿ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಲಾರಿಗಳ ಮಧ್ಯೆ ಸಿಲುಕಿ ರಾಜಸ್ಥಾನದ ಚಾಲಕರೊಬ್ಬರು ಮೃತಪಟ್ಟಿದ್ದು, ಯಶವಂತಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜಸ್ಥಾನ ಮೂಲದ ಅಜರುದ್ದೀನ್ (24) ಮೃತ ಚಾಲಕ.

ರಾಜಸ್ಥಾನದಿಂದ ಬೆಳ್ಳುಳ್ಳಿ ತುಂಬಿಸಿಕೊಂಡು ಯಶವಂತಪುರ ಎಪಿಎಂಸಿ ಮಾರುಕಟ್ಟೆಗೆ ಬಂದಿದ್ದರು. ಲಾರಿ ಚಾಲಕ ತಾಡಪಾಲ್‌ಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚುತ್ತಿದ್ದರು. ಆ ಸಂದರ್ಭದಲ್ಲಿ ಅದೇ ಸ್ಥಳದಲ್ಲಿ ನಿಂತಿದ್ದ ಇನ್ನೊಂದು ಲಾರಿಯನ್ನು ಚಾಲಕ ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಅಜರುದ್ದೀನ್ ಅವರಿಗೆ ಡಿಕ್ಕಿಯಾಗಿದೆ. ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಯಶವಂತಪುರ ಎಪಿಎಂಸಿ ಯಾರ್ಡ್ 5ನೇ ಮುಖ್ಯರಸ್ತೆಯಲ್ಲಿ ಸೋಮವಾರ ಬೆಳಿಗ್ಗೆ 9 ಗಂಟೆಗೆ ಈ ಘಟನೆ ನಡೆದಿದೆ.

ವಿಷಯ ತಿಳಿದು ಸ್ಥಳಕ್ಕೆ ಬಂದ ಯಶವಂತಪುರ ಸಂಚಾರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಚಾಲಕನ ಮೃತದೇಹವನ್ನು ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದರು.

'ಅಪಘಾತ ನಡೆಸಿದ್ದ ಲಾರಿ ಚಾಲಕ ಕೂಡ ರಾಜಸ್ಥಾನದವರು ಎಂದು ಗೊತ್ತಾಗಿದೆ. ಘಟನೆ ನಡೆದ ತಕ್ಷಣವೇ ಅವರು ಲಾರಿಯನ್ನು ಸ್ಥಳದಲ್ಲೇ ಬಿಟ್ಟು ಪರಾರಿ ಆಗಿದ್ದಾರೆ' ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದರು.

ಲಾಂಛನ ಬಿಡುಗಡೆ...

'ಕರ್ನಾಟಕ ಕ್ರೀಡಾಕೂಟ-2025'ರ ಲಾಂಛನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣದಲ್ಲಿ ಸೋಮವಾರ ಬಿಡುಗಡೆ ಮಾಡಿದರು. ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜು, ಇಂಧನ ಸಚಿವ ಕೆ.ಜೆ. ಜಾರ್ಜ್, ಗೃಹ ಸಚಿವ ಜಿ. ಪರಮೇಶ್ವರ, ಶಾಸಕ ಪಿ. ರವಿಕುಮಾರ್ ಇದ್ದರು

ನಗರದಲ್ಲಿ ಇಂದು

'ಕಥಾಸಂಧಿ' ಕಥೆ ವಾಚನ ಮತ್ತು ಚರ್ಚೆ: ಕಾ.ತ. ಚಿಕ್ಕಣ್ಣ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ ಸಭಾಂಗಣ, ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 11

ವಾರ್ಷಿಕೋತ್ಸವ ದಿನಾಚರಣೆಯ ಉದ್ಘಾಟನೆ: ಎಲ್.ಎ. ರವಿ ಸುಬ್ರಮಣ್ಯ, ಅಧ್ಯಕ್ಷತೆ: ಎ. ಮರಿಯಪ್ಪ, ಅತಿಥಿ: ಶೋಭಾ, ಆಯೋಜನೆ ಮತ್ತು ಸ್ಥಳ: ವಿದ್ಯಾಶಂಕರಿ ಎಜುಕೇಷನ್ ಸೊಸೈಟಿ, ಸ್ಥಳ: ಮಂಜುನಾಥಸ್ವಾಮಿ ದೇವಸ್ಥಾನದ ಆವರಣ, ಸಂಜೆ 5

ಡಬ್ಲ್ಯು.ಎಚ್. ಹನುಮಂತಪ್ಪ ಸ್ಮಾರಕ ದತ್ತಿ: 'ರಾಜಾ ರಾಮ್‌ಮೋಹನ್‌ರಾಯ್ ಅವರ ಚಿಂತನೆಗಳ ಪ್ರಸ್ತುತತೆ' ಉಪನ್ಯಾಸ: ಎಂ.ಎಸ್. ದುರ್ಗಾಪ್ರವೀಣ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ಡಬ್ಲ್ಯು.ಡಿ. ಅಶೋಕ್, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಅಧ್ಯಯನ ಕೇಂದ್ರ ಶೇಷಾದ್ರಿಪುರಂ ಸಂಜೆ ಕಾಲೇಜು, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4

ವೂಡೇ ಪಿ.ಕೃಷ್ಣ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕೂಟ ಮಹಾಜಗತ್ತು ಸಾಲಿಗ್ರಾಮದ ಬೆಂಗಳೂರು ಘಟಕವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ (ಎಡದಿಂದ ಎರಡನೆಯವರಿಂದ) ಕಲಾಕದಂಬ ಆರ್ಟ್ ಸೆಂಟರ್ ಅಧ್ಯಕ್ಷ ರಾಧಾಕೃಷ್ಣ ಉರಾಳ, ಬಿ.ಎಂ.ಎಸ್.ಮಹಿಳಾ ವಿದ್ಯಾಲಯದ ನಿವೃತ್ತ ಉಪ ಪ್ರಾಂಶುಪಾಲೆ ಸುನಂದಾ ಉಪಾಧ್ಯ, ಜಯನಗರದ ಬೆಂಗಳೂರು ಆಸ್ಪತ್ರೆಯ ಡಾ.ಉದಯಕುಮಾರ ಮಯ್ಯ, ಸಾಲಿಗ್ರಾಮದ ಗುರುನರಸಿಂಹ ದೇವಸ್ಥಾನದ ಅರ್ಚಕ ಪಿ.ಜನಾರ್ದನ ಅಡಿಗ, ನಿವೃತ್ತ ಸೇನಾಧಿಕಾರಿ ಕರ್ನಲ್ ಎಂ.ರಮೇಶ ಮಯ್ಯ, ಮಂಗಳೂರು ಕಾಫಿ ಬಾರ್ ಮಾಲೀಕ ಕೆ.ಕೃಷ್ಣ ಉರಾಳ ಅವರಿಗೆ 'ನರಸಿಂಹ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕೂಟ ಮಹಾಜಗತ್ತು ಸಾಲಿಗ್ರಾಮದ ಬೆಂಗಳೂರು ಘಟಕದ ಉಪಾಧ್ಯಕ್ಷ ಶ್ರೀಧರ್ ಕಾರಂತ್ (ಎಡಬದಿ), ಪಬ್ಲಿಕ್ ಟಿವಿ ವ್ಯವಸ್ಥಾಪಕ ನಿರ್ದೇಶಕ ಎಚ್.ಆರ್.ರಂಗನಾಥ ಹಾಗೂ ಘಟಕದ ಅಧ್ಯಕ್ಷ ಪಿ.ಎಂ.ಗಿರಿಧರ ಉಪಾಧ್ಯಾಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನಿಧನ ವಾರ್ತೆ

ಅಸ್ಮತ್ ಉನ್ನಿಸ್ಸಾ

ನೆಲಮಂಗಲ: ಪಟ್ಟಣದ ವಿಶಾಲ್ ಶಾಲೆ ಮುಖ್ಯಶಿಕ್ಷಕಿಯಾಗಿದ್ದ ಅಸ್ಮತ್ ಉನ್ನಿಸ್ಸಾ(65) ಅವರು ಸೋಮವಾರ ಮುಂಜಾನೆ ಹೃದಯಾಘಾತ ದಿಂದ ನಿಧನರಾದರು.

ಮೃತರಿಗೆ ಪತಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾನೆ. ಸೋಮವಾರ ಸಂಜೆ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕ್ಷಮೆ ಯಾಚಿಸುವಂತೆ ವಿವಿಧ ಸಂಘಟನೆಗಳ ಸದಸ್ಯರ ಆಗ್ರಹ

ಅಮಿತ್ ಶಾ ಹೇಳಿಕೆ ಖಂಡಿಸಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಆರ್.ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆಯನ್ನು ಖಂಡಿಸಿ ಕೆಪಿಸಿಸಿಯ ಸಾಮಾಜಿಕ ನ್ಯಾಯ ವಿಭಾಗ, ಇಂಡಿಯನ್ ಕ್ರಿಶ್ಚಿಯನ್ ಯೂನಿಟಿ ಫೋರಂ, ರಾಜ್ಯ ಅಲೆಮಾರಿ ಮತ್ತು ಬುಡಕಟ್ಟು ಮಹಾಸಭಾ ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಸಂಸತ್‌ನಲ್ಲಿ ಅಂಬೇಡ್ಕರ್ ಕುರಿತು ಅಮಿತ್ ಶಾ ನೀಡಿದ್ದ ಹೇಳಿಕೆ ಹಾಗೂ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯ ಸಿ.ಟಿ. ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಕುರಿತು ಆಡಿದ್ದ ಮಾತನ್ನು ಪ್ರತಿಭಟನಕಾರರು ಖಂಡಿಸಿದರು.

'ಭಾರತ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅಂಬೇಡ್ಕರ್ ಅವರು ಎಲ್ಲ ವರ್ಗದ ಜನರಿಗೆ ಘನತೆ ಹಾಗೂ ಸಮಾನತೆಯನ್ನು ಖಾತ್ರಿ ಪಡಿಸಿದ್ದರು. ಅವರ ಕೊಡುಗೆಗಳನ್ನು ದುರ್ಬಲಗೊಳಿಸುವ ಯಾವುದೇ ಹೇಳಿಕೆ ಅವರಿಗೆ ಅಲ್ಲದೇ ಸಂವಿಧಾನಕ್ಕೆ ಮಾಡುವ ಅವಮಾನ ಆಗಿದೆ. ಅಮಿತ್ ಶಾ ಅವರು ಕ್ಷಮೆಯಾಚಿಸಬೇಕು' ಎಂದು ಆಗ್ರಹಿಸಿದರು.

ಕೆಪಿಸಿಸಿ ಸಾಮಾಜಿಕ ನ್ಯಾಯ ವಿಭಾಗದ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಮಾತನಾಡಿ, 'ಎಲ್ಲರಿಗೂ ಮಾದರಿ ಆಗಬೇಕಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಅಂಬೇಡ್ಕರ್ ಅವರ ಬಗ್ಗೆ ಕೀಳಾಗಿ ಮಾತನಾಡಿದ್ದಾರೆ. ಅಂಬೇಡ್ಕರ್ ನೀಡಿದ್ದ ಸಂವಿಧಾನದಿಂದಲೇ ಅಧಿಕಾರ ಅನುಭವಿಸುತ್ತಿದ್ದು, ಈಗ ಕೀಳಾಗಿ ಮಾತನಾಡುತ್ತಿದ್ದಾರೆ' ಎಂದು ಆಕ್ರೋಶ ಹೊರಹಾಕಿದರು.

'ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಮಹಿಳೆಯ ಬಗ್ಗೆ ಕೀಳಾಗಿ ಮಾತನಾಡಿದ್ದು, ಖಂಡನೀಯ. ಅವರ ವಿರುದ್ಧವೂ ಕ್ರಮ ಆಗಬೇಕಿದೆ' ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಯೂನಿಟಿ ಫೋರಂ ಅಧ್ಯಕ್ಷ ಅಂಥೋಣಿ ವಿಕ್ರಮ್, ವಕೀಲ ನಾಗರಾಜ್, ನರಸಿಂಹಮೂರ್ತಿ ಸೇರಿದಂತೆ ವಿವಿಧ ಮುಖಂಡರು ಪಾಲ್ಗೊಂಡಿದ್ದರು.

ಬಿ.ಆರ್.ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆಯನ್ನು ಖಂಡಿಸಿ ಕೆಪಿಸಿಸಿ ಹಾಗೂ ಇಂಡಿಯನ್ ಕ್ರಿಶ್ಚಿಯನ್ ಯೂನಿಟಿ ಫೋರಂ, ರಾಜ್ಯ ಅಲೆಮಾರಿ ಮತ್ತು ಬುಡಕಟ್ಟು ಮಹಾಸಭಾ ಸೇರಿ ವಿವಿಧ ಸಂಘಟನೆಗಳ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಶಾ ವಜಾಕ್ಕೆ ಎಸ್‌ಡಿಪಿಐ ಒತ್ತಾಯ

ಕೆ.ಆರ್.ಪುರ: ಬಿ.ಆರ್.ಅಂಬೇಡ್ಕರ್ ಅವರ ಕುರಿತು ಸಂಸತ್ತಿನಲ್ಲಿ ಅಪಮಾನ ಮಾಡುವಂತೆ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ಕಾರ್ಯಕರ್ತರು ಕೆ.ಆರ್.ಪುರ ಬಿಬಿಎಂಪಿ ಕಚೇರಿಯಿಂದ ತಾಲ್ಲೂಕು ಕಚೇರಿವರೆಗೆ ಕಾಲ್ನಡಿಗೆ ಜಾಥಾ ನಡೆಸಿದರು.

ನಂತರ ತಾಲ್ಲೂಕು ಕಚೇರಿಗೆ ತೆರಳಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

'ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೇವಲ ವ್ಯಕ್ತಿಯಲ್ಲ ಬಹುಜನರ ಶಕ್ತಿಯಾಗಿದ್ದಾರೆ. ಅಂಥ ವ್ಯಕ್ತಿಯನ್ನು ಸಂಸತ್ತಿನಲ್ಲಿ ಅಪಮಾನ ಮಾಡಿರುವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

'ಈ ಘಟನೆಯನ್ನು ಬಿಜೆಪಿ ಖಂಡಿಸಬೇಕು. ಇಲ್ಲದಿದ್ದರೆ ದೇಶಾದ್ಯಂತ ಎಸ್‌ಡಿಪಿಐ ಹೋರಾಟ ಹಮ್ಮಿಕೊಳ್ಳಲಾಗುತ್ತದೆ' ಎಂದು ಎಸ್‌ಡಿಪಿಐ ಪೂರ್ವ ತಾಲ್ಲೂಕು ಅಧ್ಯಕ್ಷ ಜಮೀರ್ ಹೇಳಿದರು.

ಪ್ರತಿಭಟನೆ ವೇಳೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳಾದ ಮಣಿಪಾಲ್ ರಾಜಪ್ಪ, ಮುನಿನಂಜಪ್ಪ, ಆದೂರು ಮಂಜು, ಎಸ್‌ಡಿಪಿಐ ಪದಾಧಿಕಾರಿಗಳಾದ ಎಜಾಜ್, ರಿಯಾಜ್, ನವಾಜ್, ರೋಷನ್, ಸೈದು ಹಾಜರಿದ್ದರು.

ಐಐಎಚ್‌ಆರ್: 'ರೈತ ದಿನಾಚರಣೆ'ಯಲ್ಲಿ ಪ್ರಕಾಶ್ ಕಮ್ಮರಡಿ ಆಶಯ

'ಬೆಳೆಗೆ ರೈತರೇ ಬೆಲೆ ನಿಗದಿ ಮಾಡಲಿ'

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: 'ಬೇರೆ ಬೇರೆ ವಸ್ತುಗಳಿಗೆ ಉತ್ಪಾದಕರೇ ಬೆಲೆ ನಿಗದಿಪಡಿಸುವ ರೀತಿಯಲ್ಲಿ, ರೈತರು ಬೆಳೆದ ಬೆಳೆಗೆ ತಾವೇ ಬೆಲೆ ನಿರ್ಧಾರ ಮಾಡುವಂತಾದರೆ ರೈತ ದಿನಾಚರಣೆಯನ್ನು ಸಂತಸದಿಂದ ಆಚರಿಸಲು ಸಾಧ್ಯ' ಎಂದು ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಅಭಿಪ್ರಾಯಪಟ್ಟರು.

ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ(ಐಐಎಚ್‌ಆರ್) ಸೋಮವಾರ ಆಯೋಜಿಸಿದ್ದ 'ರಾಷ್ಟ್ರೀಯ ರೈತ ದಿನಾಚರಣೆ' ಉದ್ಘಾಟಿಸಿ ಅವರು ಮಾತನಾಡಿದರು.

'ರೈತರು ತಾವು ಬೆಳೆದ ಉತ್ಪನ್ನಗಳನ್ನು ಒಗ್ಗಟ್ಟಿನಿಂದ, ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಲು ಮುಂದಾಗಬೇಕು. ರೈತರು ಈ ದೇಶದ ಬೆನ್ನೆಲುಬು. ಅವರ ಪರಿಶ್ರಮದಿಂದ ದೇಶದ ಆರ್ಥಿಕ ಅಭಿವೃದ್ಧಿ, ಆಹಾರ ಭದ್ರತೆ ಮತ್ತು ಪೋಷಕಾಂಶ ಭದ್ರತೆಯೂ ಸಾಧ್ಯವಾಗಿದೆ' ಎಂದು ಅಭಿಪ್ರಾಯಪಟ್ಟರು.

ಐಐಎಚ್‌ಆರ್‌ನಲ್ಲಿ ನಡೆದ 'ರಾಷ್ಟ್ರೀಯ ರೈತ ದಿನಾಚರಣೆ'ಯಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಾತನಾಡಿದರು.

ಐಐಎಚ್‌ಆರ್ ನಿರ್ದೇಶಕ ತುಷಾರ್ ಕಾಂತಿ ಬೆಹರಾ ಮಾತನಾಡಿದರು. ಸಂಸ್ಥೆ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನಗಳ ಕುರಿತ ಕಾರ್ಯಾಗಾರ ನಡೆಯಿತು.

ಬಳಿಕ, ಐಐಎಚ್‌ಆರ್ ಅಭಿವೃದ್ಧಿ ಪಡಿಸಿರುವ ತಳಿ ಹಾಗೂ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕೃಷಿ ಕ್ಷೇತ್ರದಲ್ಲಿ ಯಶಸ್ವಿಯಾಗಿರುವ ನಾಲ್ವರು ಪ್ರಗತಿಪರ ರೈತರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.



₹1,200 ಕೋಟಿ ವೆಚ್ಚದಲ್ಲಿ ನವೀಕರಣಗೊಳ್ಳಲಿದೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ • ವಿಮಾನ ನಿಲ್ದಾಣ ಮಾದರಿಯಲ್ಲಿ ಟರ್ಮಿನಲ್

ಮರು ವಿನ್ಯಾಸದೊಂದಿಗೆ ವಿಶ್ವ ದರ್ಜೆಗೆ ಕೆಎಸ್‌ಆರ್

• ಬಾಲಕೃಷ್ಣ ಪಿ.ಎಚ್.

ಅಂಕಿ ಅಂಶ

176	ಕೆಎಸ್‌ಆರ್‌ಗೆ ಬಂದು ಹೋಗುವ ರೈಲುಗಳ ಒಟ್ಟು ಸಂಖ್ಯೆ
151	ಅದರಲ್ಲಿ ಪ್ರತಿದಿನ ಕೆಎಸ್‌ಆರ್ ನಿಲ್ದಾಣಕ್ಕೆ ಬರುವ ರೈಲುಗಳು
1.85 ಲಕ್ಷ	ನಿತ್ಯ ಕೆಎಸ್‌ಆರ್ ನಿಲ್ದಾಣದಲ್ಲಿ ಇಳಿಯುವ/ಹತ್ತುವ ಪ್ರಯಾಣಿಕರ ಪ್ರಮಾಣ
160 ಎಕರೆ	ನವೀಕರಣಗೊಂಡಾಗ ಕೆಎಸ್‌ಆರ್ ರೈಲು ನಿಲ್ದಾಣದ ಒಟ್ಟು ವಿಸ್ತೀರ್ಣ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣವನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮಾದರಿಯಲ್ಲಿ ಮರು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲು ನೈರುತ್ಯ ರೈಲ್ವೆ ಮುಂದಾಗಿದೆ. ಒಟ್ಟು ₹1,200 ಕೋಟಿ ವೆಚ್ಚದ ಯೋಜನೆಗೆ ಒಪ್ಪಿಗೆ ಕೋರಿ ಕೇಂದ್ರ ಸಂಪುಟದ ಮುಂದೆ ಪ್ರಸ್ತಾವ ಸಲ್ಲಿಸಲಾಗಿದೆ.

ಕೆಎಸ್‌ಆರ್ ರೈಲ್ವೆ ನಿಲ್ದಾಣ, ಮೆಜೆಸ್ಟಿಕ್ ರೈಲ್ವೆ ನಿಲ್ದಾಣ, ಸಿಟಿ ರೈಲ್ವೆ ನಿಲ್ದಾಣ ಎಂದು ನಾನಾ ಹೆಸರಿನಿಂದ ಕರೆಯಲಾಗುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣವು ನಗರದ ಪ್ರಮುಖ ನಾಲ್ಕು ನಿಲ್ದಾಣಗಳಲ್ಲಿ ಮೊದಲನೇಯದ್ದಾಗಿದೆ.

ಬೈಯಪ್ಪನಹಳ್ಳಿ ಎಸ್‌ಎಂವಿಟಿ ನಿಲ್ದಾಣವು ಈಗಾಗಲೇ ₹314 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿದೆ. ಸಂಪೂರ್ಣ ಹವಾನಿಯಂತ್ರಿತ ಸೌಲಭ್ಯ ಹೊಂದಿರುವ ದೇಶದ ಮೊದಲ ರೈಲು ನಿಲ್ದಾಣ ಎಂಬ ಹಿರಿಮೆಗೆ ಅದು ಪಾತ್ರವಾಗಿದೆ. ₹380 ಕೋಟಿ ವೆಚ್ಚದಲ್ಲಿ ಯಶವಂತಪುರ ರೈಲು ನಿಲ್ದಾಣ ಮತ್ತು ₹480 ಕೋಟಿ ವೆಚ್ಚದಲ್ಲಿ ಕಂಟೋನ್ಮೆಂಟ್ ರೈಲು ನಿಲ್ದಾಣಗಳು ಮೇಲ್ದರ್ಜೆಗೇರುತ್ತಿವೆ. ಕೆಎಸ್‌ಆರ್ ನಿಲ್ದಾಣವನ್ನೂ ಮೇಲ್ದರ್ಜೆಗೆ ಏರಿಸುವ ಪ್ರಕ್ರಿಯೆ ಈಗ ಶುರುವಾಗಿದೆ.

ಕೆಎಸ್‌ಆರ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಿ ರೈಲ್ವೆ ಮಂಡಳಿಗೆ ಸಲ್ಲಿಸಲಾಗಿತ್ತು. ಮಂಡಳಿಯು ಅನುಮೋದನೆ ನೀಡಿದೆ. ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ಸಿಕ್ಕಿದ ಬಳಿಕ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪಿಪಿಪಿ ಮಾದರಿ: ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರವು ನವೀಕರಣ ಕಾಮಗಾರಿ ಕೈಗೊಳ್ಳಲಿದೆ. ಅದಕ್ಕಾಗಿ ₹1,200 ಕೋಟಿ ಅಂದಾಜು ವೆಚ್ಚ ಬೇಕಾಗುತ್ತದೆ ಎಂದು ಡಿಪಿಆರ್‌ನಲ್ಲಿ ತಿಳಿಸಲಾಗಿದೆ.

ಯೋಜನೆ ವಿವರ: ಪೂರ್ವ ಟರ್ಮಿನಲ್ 279 ಮೀಟರ್ ಉದ್ದ 58 ಮೀಟರ್ ಅಗಲ ಹೊಂದಿರಲಿದೆ. ನಿರ್ಮಾಣ ಪ್ರದೇಶ 127,044 ಚದರ ಮೀಟರ್ ಇರಲಿದೆ. ಬೇಸ್‌ಮೆಂಟ್ 2, ಬೇಸ್‌ಮೆಂಟ್ 1, ನೆಲ ಮತ್ತು 9 ಮಹಡಿಗಳು ನಿರ್ಮಾಣಗೊಳ್ಳಲಿವೆ. ಬೇಸ್‌ಮೆಂಟ್‌ನಿಂದ 5ನೇ ಮಹಡಿವರೆಗೆ ರೈಲ್ವೆಯ ಅಧಿಕೃತ ಬಳಕೆಗೆ ಮೀಸಲಾಗಿವೆ. 6ರಿಂದ 9ನೇ ಮಹಡಿಗಳನ್ನು ವಾಣಿಜ್ಯ ಬಳಕೆಗಾಗಿ ಒದಗಿಸಲಾಗುತ್ತದೆ.

ಪೂರ್ವ ಭಾಗದಲ್ಲಿ ಎರಡು ನೆಲಮಹಡಿಗಳು ಪಾರ್ಕಿಂಗ್‌ಗೆ ಬಳಕೆಯಾಗಲಿವೆ. 1,877 ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಇರಲಿದೆ. ಕಟ್ಟಡದ ಮುಂಭಾಗದಲ್ಲಿ 75 ಆಟೊಗಳು, 131 ಟ್ಯಾಕ್ಸಿಗಳಿಗೆ ಪಿಕ್-ಅಪ್ ಮತ್ತು ಡ್ರಾಪ್-ಅಪ್ ಮಾಡುವಷ್ಟು ವಿಶಾಲವಾದ ಸ್ಥಳ ಇರಲಿದೆ. ಹೆಚ್ಚುವರಿಯಾಗಿ ಮುಂಭಾಗದ ಅಂಗಳದ ಮೇಲ್ಮೈ ಪಾರ್ಕಿಂಗ್ ಅನ್ನು 81 ತ್ರಿಚಕ್ರ ವಾಹನಗಳು, 36 ನಾಲ್ಕು ಚಕ್ರ ವಾಹನಗಳು ಮತ್ತು 10 ಬಸ್‌ಗಳಿಗೆ ಮೀಸಲಿಡಲಾಗುತ್ತದೆ.

ಪೂರ್ವ ಟರ್ಮಿನಲ್ ಅನ್ನು ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ನಿಲ್ದಾಣವು ಸಂಪರ್ಕಿಸಲಿದೆ. ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ 10 ಮೀಟರ್ ಅಗಲದ ಟ್ರಾವೆಲೇಟರ್ ಸಂಪರ್ಕ ಇರಲಿದೆ. ಇದಲ್ಲದೆ ಮುಖ್ಯ ನಿಲ್ದಾಣ ಕಟ್ಟಡ ಮತ್ತು ಮೆಟ್ರೊ ನಿಲ್ದಾಣದ ನಡುವೆ 8 ಮೀಟರ್ ಅಗಲದ ಸಂಪರ್ಕ ಕಲ್ಪಿಸಲಾಗುತ್ತದೆ.

ಎರಡನೇ ಪ್ರವೇಶ ಭಾಗದಲ್ಲಿ 384 ಕಾರು ನಿಲ್ಲುವ ಸಾಮರ್ಥ್ಯದೊಂದಿಗೆ ಬಹು ಹಂತದ ಕಾರ್ ಪಾರ್ಕಿಂಗ್ (ಎಂಎಲ್‌ಸಿಪಿ) ಸೌಲಭ್ಯವನ್ನು ಯೋಜಿಸಲಾಗಿದೆ.

ಪಶ್ಚಿಮ ಟರ್ಮಿನಲ್ (ಎಂ.ಜಿ. ಕಾಲೊನಿಯ ಕೊನೆಯಲ್ಲಿ) ಕಡೆಯಿಂದ ಮೂರನೇ ಪ್ರವೇಶ ಇರಲಿದೆ. 53 ಮೀಟರ್ ಉದ್ದ 18 ಮೀಟರ್ ಅಗಲದ ಹೊಸ ಟರ್ಮಿನಲ್ ಅನ್ನು ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ. ಪ್ರಸ್ತಾವಿತ ಎರಡು ನೆಲಮಾಳಿಗೆಯ ಹಂತಗಳಲ್ಲಿ 130 ಕಾರುಗಳ ಪಾರ್ಕಿಂಗ್‌ಗೆ ಲಭ್ಯವಾಗಲಿವೆ.

36 ಮೀ. ಅಗಲ, 181 ಮೀ. ಉದ್ದದ ಏರ್ ಕಾನ್‌ಕೋರ್ಸ್ ಪ್ಲ್ಯಾಟ್‌ಫಾರ್ಮ್ ಮಟ್ಟದಿಂದ 9 ಮೀ. ಎತ್ತರ ಇರಲಿದೆ. 6,516 ಮೀ. ವಿಸ್ತೀರ್ಣದೊಂದಿಗೆ ದಕ್ಷಿಣ ಮತ್ತು ಉತ್ತರ ಭಾಗಗಳನ್ನು ಸಂಪರ್ಕಿಸುವ ಎರಡು ಪಾದಚಾರಿ ಮೇಲ್ಸೇತುವೆಗಳು ಇರಲಿವೆ.

ನವೀಕರಣಗೊಳ್ಳಲಿರುವ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ'ದ ವಿಹಂಗಮ ನೋಟ

ಪ್ರಜಾವಾಣಿ ಚಿತ್ರ: ರಂಜು ಪಿ.

10	ಸದ್ಯ ಇರುವ ಪ್ಲ್ಯಾಟ್‌ಫಾರ್ಮ್
15	ಸದ್ಯ ಇರುವ ಟ್ರ್ಯಾಕ್‌ಗಳು
2	ಹೊಸದಾಗಿ ನಿರ್ಮಾಣಗೊಳ್ಳಲಿರುವ ಟ್ರ್ಯಾಕ್‌ಗಳು

ಎರಡು ಹೆಚ್ಚುವರಿ ಪ್ಲ್ಯಾಟ್‌ಫಾರ್ಮ್

ಕೆಎಸ್‌ಆರ್ ನಿಲ್ದಾಣಗಳಲ್ಲಿ ಹತ್ತು ಪ್ಲ್ಯಾಟ್‌ಫಾರ್ಮ್‌ಗಳಿವೆ. ಹೊಸ ಯೋಜನೆಯಡಿ ಮತ್ತೆರಡು ಪ್ಲ್ಯಾಟ್‌ಫಾರ್ಮ್‌ಗಳು ನಿರ್ಮಾಣಗೊಳ್ಳಲಿವೆ. ಎಂ.ಜಿ. ಕಾಲೊನಿ ಕಡೆಯಿಂದ ಪ್ರವೇಶದೊಂದಿಗೆ ಪ್ರತ್ಯೇಕವಾಗಿ ಪ್ಲ್ಯಾಟ್‌ಫಾರ್ಮ್‌ಗಳು ನಿರ್ಮಾಣವಾಗಲಿದ್ದು, ಅದಕ್ಕಾಗಿ ₹ 222 ಕೋಟಿ ಮಂಜೂರು ಮಾಡಲಾಗಿದೆ. ಶೀಘ್ರದಲ್ಲಿ ಕಾಮಗಾರಿ ಆರಂಭವಾಗಲಿದೆ.

ಜನರ ಬಯಕೆಯಂತೆ ಹೈಟೆಕ್



ವಿ. ಸೋಮಣ್ಣ

‘ರೈಲಿನಲ್ಲಿ ಪ್ರಯಾಣಿಸಲು ಟಿಕೆಟ್ ಸಿಕ್ಕರೆ ಸಾಕು, ನಿಲ್ದಾಣಗಳಲ್ಲಿ ಕೂರಲು ಬೆಂಚ್‌ಗಳಿದ್ದರೆ ಸಾಕು ಎಂಬ ಕಾಲ ಈಗಿಲ್ಲ. ಹೈಟೆಕ್ ಸೌಕರ್ಯಗಳನ್ನು ಜನ ಬಯಸುತ್ತಿದ್ದಾರೆ. ಅದಕ್ಕೆ ಸರಿಯಾಗಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ. ದೇಶದ ಎಲ್ಲ ಪ್ರಮುಖ ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಕರ್ನಾಟಕದಲ್ಲಿಯೇ 62 ನಿಲ್ದಾಣಗಳು ಮೇಲ್ದರ್ಜೆಗೇರುತ್ತಿವೆ. ಕೆಲವೆಲ್ಲ ಉದ್ಘಾಟನೆಗೊಂಡಿವೆ’ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

‘ಕೆಎಸ್‌ಆರ್ ನಿಲ್ದಾಣದ ನವೀಕರಣಗೊಂಡಾಗ ದೇಶದ ಎರಡನೇ ಅತಿದೊಡ್ಡ ನಿಲ್ದಾಣವಾಗಲಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌ಗಳಲ್ಲಿ ಇರುವಂತೆ ಇಲ್ಲಿಯೂ ಪ್ರಯಾಣಿಕರಿಗೆ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ವಿದೇಶಗಳಲ್ಲಿ ರೈಲು ನಿಲ್ದಾಣಗಳು ಹೇಗಿವೆಯೋ ಅದಕ್ಕಿಂತ ಹೈಟೆಕ್ ಆಗಲಿದೆ. ಇದರಲ್ಲಿ 12 ಅಡಿ ಉದ್ದದ ಸುರಂಗ ಅಕ್ವೇರಿಯಂ ಮಾಡುವ ಗುರಿಯೂ ಇದೆ. ನಮ್ಮ ಬೇಡಿಕೆಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರೈಲ್ವೆ ಅಧಿಕಾರಿಗಳು ಸ್ಪಂದಿಸಿದ್ದಾರೆ’ ಎಂದು ಹೇಳಿದರು.

ನವೀಕರಣಗೊಳ್ಳಲಿರುವ ‘ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ’ದಲ್ಲಿ ಸೌರ ವಿದ್ಯುತ್ ಪ್ಯಾನಲ್‌ಗಳನ್ನು ಸ್ವಚ್ಛಗೊಳಿಸುತ್ತಿರುವ ಕಾರ್ಮಿಕರು

ಎಲ್ಲೆಡೆ ದೂಳು • ಕಾಮಗಾರಿಗಳ ವಿಳಂಬದಿಂದ ದುರಸ್ತಿಯಾಗದ ರಸ್ತೆ • ನಾಗರಿಕರ ಆಕ್ರೋಶ

ಜಕ್ಕೂರು ರಸ್ತೆ ಗುಂಡಿಮಯ: ಸವಾರರಿಗೆ ಸಂಕಷ್ಟ

ಯಲಹಂಕ: ಜಕ್ಕೂರು ಗ್ರಾಮದ ಪ್ರಮುಖ ರಸ್ತೆಗಳು ಗುಂಡಿಮಯವಾಗಿದ್ದು, ವಾಹನ ಸಂಚಾರಕ್ಕೆ ತೊಂದರೆ ಜತೆಗೆ ದೂಳು ಆವರಿಸಿ ಸ್ಥಳೀಯರು ಸಂಕಷ್ಟ ಅನುಭವಿಸುತ್ತಿದ್ದಾರೆ.

ಜಕ್ಕೂರು ಕೆರೆ ರಸ್ತೆಯು ಯಲಹಂಕ-ಜಕ್ಕೂರು (ರೈಲ್ವೆ ಅಂಡರ್‌ಪಾಸ್) ಮುಖ್ಯರಸ್ತೆಯು ಯಲಹಂಕ, ಸಂಪಿಗೆಹಳ್ಳಿ, ಅಗ್ರಹಾರ, ಚೊಕ್ಕನಹಳ್ಳಿ, ಹೆಗಡೆನಗರ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುತ್ತದೆ. ರಸ್ತೆಯಲ್ಲಿ ದೊಡ್ಡ ಗುಂಡಿಗಳು ಬಿದ್ದಿದ್ದು, ಆತಂಕದಿಂದ ಸಂಚರಿಸಬೇಕಾಗಿದೆ.

‘ಈ ರಸ್ತೆಯಲ್ಲಿ ಜಲಮಂಡಳಿಯ ಕಾವೇರಿ ನೀರು ಮುಖ್ಯ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದ್ದರೂ, ರಸ್ತೆಯನ್ನು ದುರಸ್ತಿ ಮಾಡಿಲ್ಲ. ಇದರಿಂದ ಗುಂಡಿಗಳಾಗಿದ್ದು, ಆರು ತಿಂಗಳಿಂದ ಸಂಕಷ್ಟ ಎದುರಿಸುತ್ತಿದ್ದೇವೆ’ ಎಂದು ಸ್ಥಳೀಯರು ದೂರಿದರು.

‘ಯಲಹಂಕ-ಜಕ್ಕೂರು ಮುಖ್ಯರಸ್ತೆಯ ರೈಲ್ವೆ ಅಂಡರ್ ಪಾಸ್‌ನಲ್ಲಿ ನೀರು ನಿಲ್ಲುವ ಕಾರಣ ಸಂಪಿಗೆಹಳ್ಳಿ ರಸ್ತೆಯಲ್ಲಿ ಸಾಗಬೇಕಾಗಿದೆ. ಇಲ್ಲಿ ಹೆಚ್ಚಿನ ವಾಹನದಟ್ಟಣೆ ಉಂಟಾಗುತ್ತಿದೆ’ ಎಂದು ಜಕ್ಕೂರು ಕೆರೆ ರಸ್ತೆ ನಿವಾಸಿ ಗೋವಿಂದರಾಜು ದೂರಿದರು. ‘ರೈಲ್ವೆ ಅಂಡರ್ ಪಾಸ್ ಮೂಲಕ ಜಕ್ಕೂರು ಕಡೆಗೆ ಸಂಚರಿಸುವ ಕಡೆ ಬಿಬಿಎಂಪಿ ವತಿಯಿಂದ ಸರ್ವೀಸ್ ರಸ್ತೆ ನಿರ್ಮಿಸಲಾಗುತ್ತಿದೆ. ರಸ್ತೆಯಲ್ಲೇ ಮಣ್ಣು ಸುರಿದಿದ್ದು, ಕಾಮಗಾರಿ ಆಮೆಗತಿಯಲ್ಲಿದೆ’ ಎಂದು ಜಕ್ಕೂರು ನಿವಾಸಿ ಕೃಷ್ಣಪ್ಪ ಹೇಳಿದರು.

ಕ್ರಮ: ‘ಸರ್ವೀಸ್‌ರಸ್ತೆ ನಿರ್ಮಿಸಲಾಗುತ್ತಿದೆ. ಜಲಮಂಡಳಿಯ ಕೊಳವೆಮಾರ್ಗ ಹಾಗೂ ಬೆಸ್ಕಾಂ ಕೇಬಲ್‌ಗಳು ಇದ್ದು, ಪತ್ತೆಹಚ್ಚಿ, ಕಾಮಗಾರಿ ನಡೆಸಬೇಕಾಗಿದ್ದು, ವಿಳಂಬವಾಗುತ್ತಿದೆ. ದೂಳು ನಿಯಂತ್ರಿಸಲು ರಸ್ತೆಗೆ ನೀರು ಹಾಕಿಸಲು ಕ್ರಮವಹಿಸಲಾಗುವುದು’ ಎಂದು ಬಿಬಿಎಂಪಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವರುಣ್‌ಕುಮಾರ್ ತಿಳಿಸಿದರು.

ಜಕ್ಕೂರು ಅಂಡರ್‌ಪಾಸ್ ಸಮೀಪದಲ್ಲಿ ಚರಂಡಿ ನಿರ್ಮಾಣ ಕಾರ್ಯ

ಜಕ್ಕೂರು ಕೆರೆ ರಸ್ತೆಯಲ್ಲಿ ಗುಂಡಿಗಳಲ್ಲಿ ವಾಹನ ಸಂಚಾರ

ಗುಂಡಿಬಿದ್ದ ಮಲ್ಲರಬಾಣವಾಡಿ ರಸ್ತೆ

ನೆಲಮಂಗಲ ನಗರಸಭೆ ವ್ಯಾಪ್ತಿಯ ಜಕ್ಕಸಂದ್ರ ಮೂಲಕ ಮಲ್ಲರಬಾಣವಾಡಿಗೆ ಹೋಗುವ ರಸ್ತೆ ಸಂಪೂರ್ಣ ಹಾಳಾಗಿದೆ

ನೆಲಮಂಗಲ: ನಗರಸಭೆ ವ್ಯಾಪ್ತಿಯ ಜಕ್ಕಸಂದ್ರ, ಮಲ್ಲರಬಾಣವಾಡಿ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಗುಂಡಿಗಳಿಂದ ತುಂಬಿಕೊಂಡಿವೆ.

ಜಕ್ಕಸಂದ್ರ ಮಲ್ಲರಬಾಣವಾಡಿ ರಸ್ತೆ, ಸೊಂಡೆಕೊಪ್ಪ ರಸ್ತೆ, ರಾಷ್ಟ್ರೀಯ ಹೆದ್ದಾರಿ 75 ಹಾಗೂ 4ಕ್ಕೆ ಸಂಪರ್ಕ ಕಲ್ಪಿಸುತ್ತವೆ. ನಿತ್ಯ ನೂರಾರು ಜನ ಸಂಚರಿಸುತ್ತಾರೆ. ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಸಗಟು ಮಾರುಕಟ್ಟೆ ಇದ್ದು, ನಿತ್ಯ ರೈತರು ಹೂವು, ಹಣ್ಣು, ತರಕಾರಿಗಳನ್ನು ಇಲ್ಲಿ ತಂದು ಹರಾಜು ಹಾಕುತ್ತಾರೆ. ಲಕ್ಷಾಂತರ ರೂಪಾಯಿಗಳ ವಹಿವಾಟು ನಡೆಯುತ್ತದೆ. ಸಗಟು ವ್ಯಾಪಾರಕ್ಕೆ ನಿತ್ಯ ಜಕ್ಕಸಂದ್ರ ಮಲ್ಲರ ಬಾಣವಾಡಿಯ ರೈತರು ಸಂಚರಿಸುತ್ತಾರೆ.

‘12 ವರ್ಷಗಳ ಹಿಂದೆ ಇಲ್ಲಿ ಡಾಂಬರು ಹಾಕಲಾಗಿತ್ತು. ಮತ್ತೆ ರಸ್ತೆ ಡಾಂಬರು ಕಂಡಿಲ್ಲ. ನಿತ್ಯ ರೈತರು, ವಿದ್ಯಾರ್ಥಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಾರೆ. ರಸ್ತೆ ಹಾಳಾಗಿರುವ ಕಾರಣ ಬೈಕ್ ಸವಾರರು ಬಿದ್ದು ಗಾಯಗೊಂಡಿರುವ ಘಟನೆಗಳು ನಡೆದಿವೆ. ಬೀದಿ ದೀಪದ ವ್ಯವಸ್ಥೆಯೂ ಇಲ್ಲದಿರುವುದರಿಂದ ರಾತ್ರಿ ವೇಳೆಯ ಸಂಚಾರ ದುಸ್ತರವಾಗಿದೆ’ ಎಂದು ಪುರಸಭೆ ಮಾಜಿ ಸದಸ್ಯ ಕೇಶವಮೂರ್ತಿ ತಿಳಿಸಿದರು.

‘ನಗರಸಭೆಯವರು ಕೂಡಲೇ ಗಮನಹರಿಸಿ ರಸ್ತೆ ಡಾಂಬರೀಕರಣ ಹಾಗೂ ವಿದ್ಯುತ್ ದೀಪದ ವ್ಯವಸ್ಥೆ ಮಾಡಿಕೊಡಬೇಕು. ರೈತರು ಸಾರ್ವಜನಿಕರು ನಿರ್ಭೀತಿಯಿಂದ ಸಂಚರಿಸಲು ಅನುಕೂಲ ಮಾಡಿಕೊಡಬೇಕು’ ಎಂದು ನಾಗರಿಕರು ಆಗ್ರಹಿಸಿದರು.

ಪಿತೂರಿಯೊಂದೇ ಪ್ರಕರಣಕ್ಕೆ ಆಧಾರವಲ್ಲ: ಇ.ಡಿ. ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣ ದಾಖಲಿಸುವಾಗ ‘ಕ್ರಿಮಿನಲ್ ಪಿತೂರಿ’ ಅಂಶವನ್ನು ಮಾತ್ರ ನೆಚ್ಚಿಕೊಳ್ಳಬಾರದು ಎಂದು ಜಾರಿ ನಿರ್ದೇಶನಾಲಯವು ಅಧಿಕಾರಿಗಳಿಗೆ ಸೂಚನೆ ನೀಡಿದೆ.

ನ್ಯಾಯಾಲಯದ ಪರಿಶೀಲನೆ ಸಂದರ್ಭದಲ್ಲಿ ಪ್ರಕರಣವು ಬಿದ್ದು-ಹೋಗಬಾರದು ಎಂದಾದರೆ, ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಸೆಕ್ಷನ್‌ಗಳ ಅಡಿಯಲ್ಲಿಯೂ ಪ್ರಕರಣ ದಾಖಲಿಸಬೇಕು ಎಂದು ಇ.ಡಿ ಸೂಚಿಸಿದೆ.

ಸುಪ್ರೀಂ ಕೋರ್ಟ್ ಸೇರಿದಂತೆ ಹಲವು ನ್ಯಾಯಾಲಯಗಳು ನೀಡಿರುವ ಆದೇಶ, ತೀರ್ಪುಗಳನ್ನು ಆಧರಿಸಿ ಈ ಸೂಚನೆ ನೀಡಲಾಗಿದೆ ಎಂದು ಮೂಲಗಳು ಹೇಳಿವೆ. ಈ ಆದೇಶ, ತೀರ್ಪುಗಳ ಆಧಾರದಲ್ಲಿ ತನಿಖಾಧಿ-ಕಾರಿಗಳು ಪಿಎಂಎಲ್‌ಎ ಕಾಯ್ದೆಯ ಸೆಕ್ಷನ್ 66(2)ಅನ್ನು ಪರಿಣಾಮಕಾರಿ-ಯಾಗಿ ಬಳಕೆ ಮಾಡಿಕೊಳ್ಳಬೇಕು. ಆಗ ಅಧಿಕಾರಿಗಳಿಗೆ ಅಪರಾಧವೊಂದರ ಬಗ್ಗೆ ಪೊಲೀಸ್ ಅಥವಾ ಕಸ್ಟಮ್ಸ್ ಇಲಾಖೆಗೆ ಮಾಹಿತಿ ನೀಡಲು, ಅವರು ಎಫ್‌ಐಆರ್ ದಾಖಲಿಸಲು ಸಾಧ್ಯವಾಗುತ್ತದೆ. ಆ ಎಫ್‌ಐಆರ್ ಆಧರಿಸಿ ಇ.ಡಿ. ಅಧಿಕಾರಿಗಳು ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣ ದಾಖಲಿಸಬಹುದು ಎಂಬ ಸೂಚನೆ ನೀಡಲಾಗಿದೆ ಎಂದು ಗೊತ್ತಾಗಿದೆ.

ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 120–ಬಿ (ಈಗ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 61–2) ಮಾತ್ರವೇ ಹಣದ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಲು ಸಾಕಾಗುವುದಿಲ್ಲ ಎಂದು ನ್ಯಾಯಾಲಯಗಳು ಹೇಳಿವೆ. ಕೆಲವು ಪ್ರಕರಣಗಳಲ್ಲಿ ಇ.ಡಿ ದಾಖಲಿಸಿದ್ದ ಎಫ್‌ಐಆರ್‌ಅನ್ನು ಕೋರ್ಟ್‌ಗಳು ರದ್ದುಪಡಿಸಿವೆ ಎಂದು ಮೂಲಗಳು ವಿವರಿಸಿವೆ.

‘ಆರೋಗ್ಯದ ಕಾಳಜಿ ವಹಿಸಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಮೀಪದ ಕೆ.ವಿ. ಬಡಾವಣೆಯಲ್ಲಿ ಕೆ.ಆರ್.ಪುರ ಬಲಿಜ ವೆಲ್ಫೇರ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ಶಿಬಿರ ಏರ್ಪಡಿಸಲಾಗಿತ್ತು.

ಜಯದೇವ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಎಚ್.ಎಸ್.ನಟರಾಜ್ ಶೆಟ್ಟಿ ಆರೋಗ್ಯ ಶಿಬಿರಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಇತ್ತೀಚೆಗೆ ಯುವಕರಲ್ಲಿ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಅನೇಕ ಜನ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಪಡೆಯದ ಕಾರಣ ಹೃದಯಾಘಾತ ಸಂಭವಿಸಿ ಮೃತಪಡುತ್ತಾರೆ. ಹಾಗಾಗಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು’ ಎಂದರು.

ಶಿಬಿರದಲ್ಲಿ, ರಕ್ತದೊತ್ತಡ, ಕೊಲೆಸ್ಟರಾಲ್ ಪರೀಕ್ಷೆ, ಇಸಿಜಿ, ಮಧುಮೇಹ, ಕ್ಯಾನ್ಸರ್ ಮುಂತಾದ ರೋಗಗಳಿಗೆ ಸಂಬಂಧಿಸಿದ ಪರೀಕ್ಷೆಗಳು ನಡೆದವು. ಒಂದು ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು.

ಸಾಂಟಾ ಕಾಣ್ತಾ?... ಕ್ರಿಸ್‌ಮಸ್ ಪ್ರಯುಕ್ತ ಬೆಂಗಳೂರಿನ ಒರಾಯನ್ ಮಾಲ್ ಆವರಣದಲ್ಲಿ ಕೂರಿಸಲಾಗಿರುವ ಬೃಹತ್ ಸಾಂಟಾ ಕ್ಲಾಸ್ ಬೊಂಬೆ ಎಲ್ಲರ ಆಕರ್ಷಣೆಯ ಕೇಂದ್ರವಾಗಿದ್ದು, ಸೋಮವಾರ ಅಲ್ಲಿ ಮಹಿಳೆಯರು–ಮಕ್ಕಳು ಆಡಿ, ಕುಣಿದು, ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ/ರಂಜು ಪಿ.

ಐಸಿಎಆರ್ ಮಾಜಿ ಸಹಾಯಕ ಮಹಾನಿರ್ದೇಶಕ ಸಿ.ಎಸ್. ಪ್ರಸಾದ್ ಸಲಹೆ

‘ಎಂಎಸ್‌ಪಿ ವ್ಯವಸ್ಥೆಯಲ್ಲಿ ಹಾಲನ್ನು ಸೇರಿಸಲಿ’

ಪ್ರಜಾವಾಣಿ ವಾರ್ತೆ

ಯಲಹಂಕ: ರಾಮಗೊಂಡನಹಳ್ಳಿ ಸಮೀಪದಲ್ಲಿರುವ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ರಾಷ್ಟ್ರೀಯ ಪಶುರೋಗ ಸೋಂಕುಶಾಸ್ತ್ರ ಮತ್ತು ಮಾಹಿತಿ ವಿಜ್ಞಾನ ಸಂಸ್ಥೆಯಲ್ಲಿ ರಾಷ್ಟ್ರೀಯ ರೈತರ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಐಸಿಎಆರ್ (ನವದೆಹಲಿ) ಮಾಜಿ ಸಹಾಯಕ ಮಹಾನಿರ್ದೇಶಕ ಡಾ.ಸಿ.ಎಸ್.ಪ್ರಸಾದ್, ‘ಕನಿಷ್ಠ ಬೆಂಬಲ ಬೆಲೆಯ ವ್ಯವಸ್ಥೆಯಡಿ(ಎಂಎಸ್‌ಪಿ) ಹಾಲನ್ನು ಸೇರಿಸಬೇಕು. ಹಾಲು ಉತ್ಪಾದನೆಯಲ್ಲಿ ದಕ್ಷತೆಯನ್ನು ಹೆಚ್ಚಿಸುವ ದಿಸೆಯಲ್ಲಿ ರೈತರು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಐಸಿಎಆರ್-ನಿವೇದಿ ಸಂಸ್ಥೆಯ ನಿರ್ದೇಶಕ ಡಾ.ಬಿ.ಆರ್.ಗುಲಾಟೆ ಮಾತನಾಡಿ, ‘ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ರೈತರು ಪರಿಸರ ಬದಲಾವಣೆಗೆ ಹೊಂದಿಕೊಂಡು ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಆನೇಕಲ್ ತಾಲ್ಲೂಕಿನ ಗೋಪಸಂದ್ರ ಗ್ರಾಮದ ಪ್ರಗತಿಪರ ರೈತಮಹಿಳೆ ಪುಷ್ಪಾ ನಾಗೇಶ್‌ರೆಡ್ಡಿ ಮಾತನಾಡಿ, ‘ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರೂ ಯಾವುದೇ ಉದ್ಯೋಗಕ್ಕೆ ಸೇರದೆ, ಹಂದಿ ಸಾಕಾಣಿಕೆ ವೃತ್ತಿಯನ್ನು ಆಯ್ಕೆಮಾಡಿಕೊಂಡೆ’ ಎಂದರು. ನಂತರ, ಹನ್ನೆರಡು ವರ್ಷಗಳಿಂದ ಈ ವೃತ್ತಿಯಲ್ಲಿ ಕಂಡ ಏಳು-ಬೀಳುಗಳು ಹಾಗೂ ಯಶಸ್ಸು ಸಾಧಿಸಿದ ಹಾದಿಯ ಕುರಿತು ವಿವರಿಸಿದರು. ಇದೇ ಸಂದರ್ಭದಲ್ಲಿ ಹಂದಿ, ಕುರಿ ಮತ್ತು ಹಸು ಸಾಕಾಣಿಕೆಯಲ್ಲಿ ಅತ್ಯುತ್ತಮ ಸಾಧನೆಮಾಡಿದ ಪ್ರಗತಿಪರ ರೈತರಾದ ಪುಷ್ಪಾ ನಾಗೇಶ್‌ರೆಡ್ಡಿ, ರವೀಂದ್ರ ಹಾಗೂ ವೆಂಕಟರಮಣ ಅವರನ್ನು ಸನ್ಮಾನಿಸ-ಲಾಯಿತು. ಹೈನುಗಾರಿಕೆ ಪದ್ಧತಿಯನ್ನು ಸುಧಾರಿಸುವ ಉದ್ದೇಶದಿಂದ ರೈತರಿಗೆ ಕೊಟ್ಟಿಗೆಯಲ್ಲಿ ಹಾಸುವ ಚಾಪೆಗಳು ಮತ್ತು ಹಾಲಿನ ಕ್ಯಾನ್‌ಗಳನ್ನು ವಿತರಿಸಲಾಯಿತು.

ನಿವೇದಿ ಸಂಸ್ಥೆಯ ಪ್ರಧಾನ ವಿಜ್ಞಾನಿಗಳಾದ ಡಾ.ರಾಜೇಶ್ವರಿ ಶೋಮ್, ಡಾ.ಎಸ್.ಎಸ್.ಪಾಟೀಲ್, ಹಿರಿಯ ವಿಜ್ಞಾನಿಗಳಾದ ಡಾ.ಆರ್. ಶ್ರೀದೇವಿ, ಡಾ.ನಾರಾಯಣನ್, ಡಾ.ಮಂಜುನಾಥ ರೆಡ್ಡಿ. ಜಿ.ಬಿ, ಡಾ.ಸತೀಶ್ ಗೌಡ.ಸಿ.ಎಸ್ ಮತ್ತಿತರರು ಉಪಸ್ಥಿತರಿದ್ದರು.

ಹಂದಿ, ಕುರಿ ಮತ್ತು ಹಸು ಸಾಕಾಣಿಕೆಯಲ್ಲಿ ಅತ್ಯುತ್ತಮ ಸಾಧನೆಮಾಡಿದ ಪ್ರಗತಿಪರ ರೈತರಾದ ಪುಷ್ಪಾ ನಾಗೇಶ್‌ರೆಡ್ಡಿ, ರವೀಂದ್ರ ಹಾಗೂ ವೆಂಕಟರಮಣ ಅವರನ್ನು ಸನ್ಮಾನಿಸಲಾಯಿತು

ಮಲಗಿದ್ದ ಕಾರ್ಮಿಕರ ಮೇಲೆ ಟ್ರಕ್ ಹರಿದು ಮೂವರು ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಪಾದಚಾರಿ ಮಾರ್ಗದಲ್ಲಿ ಮಲಗಿದ್ದ ವಲಸೆ ಕಾರ್ಮಿಕರ ಮೇಲೆ ಭಾನುವಾರ ತಡರಾತ್ರಿ 1ರ ಹೊತ್ತಿಗೆ ಟಿಪ್ಪರ್ ಹರಿದು ಒಂದು ಹಾಗೂ ಎರಡು ವರ್ಷದ ಎರಡು ಶಿಶುಗಳು ಹಾಗೂ ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ. ಆರು ಮಂದಿಗೆ ಗಾಯಗಳಾಗಿದ್ದು, ಇವರ ಪರಿಸ್ಥಿತಿ ಗಂಭಿರವಾಗಿದೆ ಎನ್ನಲಾಗಿದೆ.

ಸೋಯಾಬೀನ್ ಕಟಾವು ಮುಕ್ತಾಯವಾಗಿದ್ದರಿಂದ ಸುಮಾರು 50 ಜನರು ಅಮರಾವತಿಯಿಂದ ಪುಣೆಗೆ ದಿನಗೂಲಿಗಾಗಿ ಎರಡು ದಿನಗಳ ಹಿಂದೆ ಬಂದಿದ್ದರು. ಪುಣೆಯ ವಧೋಲಿ ಪ್ರದೇಶದಲ್ಲಿ ಇವರು ಪಾದಚಾರಿ ಮಾರ್ಗದಲ್ಲಿಯೇ ವಾಸವಿದ್ದರು. ಇಲ್ಲಿ ಎಲ್ಲರೂ ಕಟ್ಟಡ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು.

‘ಟಿಪ್ಪರ್ ಚಾಲಕ ಗಜಾನನ್ ಟೊತ್ರೆ (26) ಮದ್ಯ ಕುಡಿದ ಅಮಲಿನಲ್ಲಿ ಇದ್ದ. ಈತನನ್ನು ಬಂಧಿಸಲಾಗಿದೆ. ಈತನ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಪ್ರತಿಯೊಬ್ಬರಿಗೂ ಯೋಜನೆ ತಲುಪಿಸುತ್ತೇನೆ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಕ್ಷೇತ್ರ ವ್ಯಾಪ್ತಿಯ ಕಟ್ಟ ಕಡೆಯ ವ್ಯಕ್ತಿಗೂ ಸರ್ಕಾರದ ಯೋಜನೆಗಳನ್ನು ಹಾಗೂ ಸೌಲಭ್ಯಗಳನ್ನು ತಲುಪಿಸುವ ಕೆಲಸ ಮಾಡುತ್ತೇನೆ’ ಎಂದು ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ್ ಭರವಸೆ ನೀಡಿದರು

ನೂತನ ಕಚೇರಿ ಪ್ರಾರಂಭೋತ್ಸವ ಮತ್ತು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ಅವರು ಮಾತನಾಡಿದರು.

‘ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಗೆ ಎರಡು ವಿಧಾನಸಭಾ ಕ್ಷೇತ್ರಗಳು ಬರಲಿವೆ. ಒಟ್ಟು 17 ಸದಸ್ಯರಿದ್ದಾರೆ. ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಸವಲತ್ತುಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತೇನೆ’ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್, ಶಾಸಕ ರಾಮೋಜಿಗೌಡ, ಪಾಲಿಕೆ ಮಾಜಿ ಸದಸ್ಯರಾದ ಒ.ಮಂಜುನಾಥ್, ಆಂಜನಪ್ಪ, ತಾ.ಪಂ.ಮಾಜಿ ಅಧ್ಯಕ್ಷರಾದ ಚಾಮರಾಜು ಹಾಜರಿದ್ದರು.



ಬೆಂಗಳೂರು ದಕ್ಷಿಣ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡಿರುವ ಶ್ರೀಧರ್ ಲಕ್ಷ್ಮಣ, ಸದಸ್ಯ ಸಿ.ಎನ್.ಮೂರ್ತಿ ಅವರನ್ನು ಮಾಜಿ ಸಂಸದ ಡಿ.ಕೆ.ಸುರೇಶ್ ಅಭಿನಂದಿಸಿದರು.

ಕ್ಷೇಮ ಕುಶಲ

ನಾಯಿ ಕಚ್ಚಿತೆ? ಹೀಗೆ ಮಾಡಿ...

ಡಾ. ಕಿರಣ್ ವಿ. ಎಸ್.

ಮಾನವನ ನಾಗರಿಕತೆಯ ಪಯಣದಲ್ಲಿ ದಕ್ಕಿದ ಮೊದಲ ಸಾಕುಪ್ರಾಣಿ ನಾಯಿ. ಸಾಂಪ್ರದಾಯಿಕ ಸಾಕುಪ್ರಾಣಿಗಳ ಪೈಕಿ ಬೆಕ್ಕು ಮತ್ತು ನಾಯಿ ಮಾತ್ರ ಮಾಂಸಾಹಾರಿಗಳು. ಮಾನವನ ಸಹವರ್ತಿಯಾಗಿ ನಾಯಿಗಳು ಬದುಕುವುದಕ್ಕೆ ಸುಮಾರು 20,000 ವರ್ಷಗಳಿಗೂ ಮೀರಿದ ಇತಿಹಾಸವಿದೆ ಎನ್ನಲಾಗಿದೆ. ಮನುಷ್ಯರಿಗೆ ನಾಯಿ ಕಡಿಯುವುದಕ್ಕೂ ಇಷ್ಟೇ ಕಾಲಾವಧಿಯ ಇತಿಹಾಸವಿದೆ ಎನ್ನಬಹುದು. ನಾಯಿಗಳು ಮನುಷ್ಯರನ್ನು ಕಡಿಯುವ ಪ್ರಕ್ರಿಯೆಯನ್ನು ಸರಳವಾಗಿ 'ನಾಯಿ ಕಡಿತ' ಎನ್ನಬಹುದು. ಬದಲಾಗುತ್ತಿರುವ ಪ್ರಸ್ತುತ ಸಾಮಾಜಿಕ ವಾತಾವರಣದಲ್ಲಿ ನಾಯಿ ಕಡಿತದ ಪ್ರಸಂಗಗಳು ಪ್ರತಿವರ್ಷವೂ ಏರುತ್ತಿವೆ. ನಾಯಿ ಕಡಿತದ ಚಿಕಿತ್ಸೆಯ ಬಗ್ಗೆ ಮತ್ತು ಕಡಿತವನ್ನು ತಡೆಗಟ್ಟುವ ಬಗ್ಗೆ ಪ್ರತಿಯೊಬ್ಬರೂ ಅರಿಯುವುದು ಮುಖ್ಯ.

ನಾಯಿಗಳು ಪ್ರಪಂಚದ ಬಹುತೇಕ ಎಲ್ಲ ದೇಶಗಳಲ್ಲೂ ಕಂಡುಬರುತ್ತವೆ. ಪ್ರತಿ ವರ್ಷ ಒಂದು ಲಕ್ಷ ಜನರ ಪೈಕಿ 740 ಜನರಿಗೆ ನಾಯಿ ಕಡಿತ ಉಂಟಾಗುತ್ತದೆ. ಇವರಲ್ಲಿ ಮೂರು ಮಂದಿಗೆ ಆಸ್ಪತ್ರೆಯ ಚಿಕಿತ್ಸೆ, ಪ್ರಾಣಾಪಾಯದ ಸಾಧ್ಯತೆ ಇರುತ್ತದೆ. ನಾಯಿ ಕಡಿತಕ್ಕೆ ಹಲವಾರು ಕಾರಣಗಳಿವೆ. ಸಾಮಾನ್ಯವಾಗಿ ಪ್ರಚೋದನೆ ಇಲ್ಲದೆ ನಾಯಿಗಳು ಕಡಿಯುವುದಿಲ್ಲ. ಮೂಲವಾಗಿ ತೋಳಗಳ ಗುಂಪಿಗೆ ಸೇರಿದ ನಾಯಿಗಳು ಸುತ್ತಮುತ್ತಲೂ ತಮ್ಮದೆನ್ನುವ ಒಂದು ಪ್ರದೇಶವನ್ನು ಗುರುತು ಮಾಡಿಕೊಂಡಿರುತ್ತವೆ. ಆ ವ್ಯಾಪ್ತಿಯೊಳಗೆ ಬಂದವರನ್ನು ಕಡಿಯುವ ಸಾಧ್ಯತೆ ಇರುತ್ತದೆ. ನಾಯಿಗಳು ಆಹಾರ ಸೇವಿಸುವಾಗ ಅಡ್ಡಿಪಡಿಸುವವರನ್ನು ಕಡಿಯುವುದು ಅಧಿಕ. ತಮ್ಮನ್ನು ದಿಟ್ಟಿಸಿ ನೋಡುವವರ ಬಗ್ಗೆ ನಾಯಿಗಳಿಗೆ ಆತಂಕ ಉಂಟಾಗಿ, ಆತ್ಮರಕ್ಷಣೆಗೆ ಕಡಿಯುವುದು ಉಂಟು. ತಮ್ಮ ಮೇಲೆ ಆಕ್ರಮಣ ಮಾಡುವವರೆಂಬ ಗುಮಾನಿ ಬಂದಾಗ ನಾಯಿಗಳು ಕಡಿಯಲು ಸಿದ್ಧವಾಗುತ್ತವೆ. ತಮ್ಮ ಮರಿಗಳ ತಂಟೆಗೆ ಬಂದವರ ಮೇಲೆ ನಾಯಿಗಳು ಆಕ್ರಮಣ ನಡೆಸಿ ಕಡಿಯಬಲ್ಲವು. ಇದರ ಹೊರತಾಗಿ, ರೇಬೀಸ್ ಪೀಡಿತ ನಾಯಿಗಳು, ಮಾನಸಿಕ ಸ್ತಿಮಿತ ಇಲ್ಲದವು ಯಾವುದೇ ಪ್ರಚೋದನೆ ಇಲ್ಲದಿದ್ದರೂ ಕಡಿಯಬಲ್ಲವು.

ನಾಯಿಗಳಲ್ಲಿ ಹಲವಾರು ಪ್ರಭೇದಗಳಿವೆ. ಸಾಮಾನ್ಯವಾಗಿ ದೊಡ್ಡ ಗಾತ್ರದ ನಾಯಿಗಳು ಕಡಿಯುವ ಸಾಧ್ಯತೆಗಳು ಹೆಚ್ಚು. ಆದರೆ ಯಾವುದೇ ಪ್ರಭೇದದ ನಾಯಿಯ ಕಡಿತವನ್ನೂ ನಿರ್ಲಕ್ಷ್ಯ ಮಾಡುವಂತಿಲ್ಲ. ಮನೆಯಲ್ಲಿನ ಸಣ್ಣ ಮಕ್ಕಳನ್ನು ಸಾಕು ನಾಯಿಗಳು ಕಡಿದ ಉದಾಹರಣೆಗಳಿವೆ.

ಎಳೆಯ ಮಕ್ಕಳಲ್ಲಿ ನಾಯಿ ಕಡಿತ ಪ್ರಾಣಾಂತಿಕ. ಹೀಗಾಗಿ, ಎಷ್ಟೇ ಪಳಗಿದ, ಸ್ನೇಹಪರ ಸಾಕುನಾಯಿಯಾದರೂ ಎಳೆಯ ಮಕ್ಕಳ ಸಮೀಪಕ್ಕೆ ಬಿಡದಿರುವುದು ಕ್ಷೇಮ.

ನಾಯಿ ಕಡಿದಾಗ ಮೊಟ್ಟಮೊದಲನೆಯದಾಗಿ ಆತಂಕ ಪಡಬಾರದು. ನಾಯಿ ಕಡಿತಕ್ಕೆ ಪ್ರಸ್ತುತ ಬಹಳ ಒಳ್ಳೆಯ ಚಿಕಿತ್ಸೆಗಳಿವೆ. ಹೀಗಾಗಿ, ಧೈರ್ಯವನ್ನು ವಹಿಸಬೇಕು. ಪರಿಚಿತರ ನಾಯಿಯಾದರೆ, ಅದನ್ನು ಹತ್ತು-ಹದಿನೈದು ದಿನಗಳ ಕಾಲ ಸುಪರ್ದಿಯಲ್ಲಿ ಇಡಬೇಕು. ಈ ವೇಳೆಯಲ್ಲಿ ಆ ನಾಯಿ ರೇಬೀಸ್ ಲಕ್ಷಣಗಳನ್ನು ತೋರುವುದೇ ಎಂದು ಗಮನಿಸಬೇಕು. ವೈದ್ಯರಿಗೆ ತೋರಿಸಲು ನಾಯಿ ಕಡಿದ ಜಾಗದ ಫೋಟೋ ಮೊಬೈಲ್ ಫೋನಿನಲ್ಲಿ ತೆಗೆದು ಇಟ್ಟುಕೊಳ್ಳುವುದು ಒಳಿತು. ನಾಯಿ ಕಡಿತದ ಜಾಗವನ್ನು ಆದಷ್ಟು ಬೇಗ ನಲ್ಲಿಯ ಅಥವಾ ಪಾತ್ರೆಯನ್ನು ಬಳಸಿ ಧಾರೆಯಾಗಿ ಹಾಕುವ ನೀರನ್ನು ಬಳಸಿ ಕನಿಷ್ಠ ಐದು ನಿಮಿಷಗಳ ಕಾಲ ಚೆನ್ನಾಗಿ ತೊಳೆಯಬೇಕು. ಹೆಚ್ಚು ಕ್ಷಾರವಿಲ್ಲದ ಸಾಬೂನನ್ನು ಬಳಸಬಹುದು. ನಾಯಿಯ ಜೊಲ್ಲು, ಹಲ್ಲಿನ ತುಣುಕುಗಳನ್ನು ಗಾಯದಿಂದ ನಿವಾರಿಸಿಕೊಳ್ಳಬೇಕು. ಆಸ್ಪತ್ರೆಯಲ್ಲಿ ಸಲೈನ್ ದ್ರಾವಣದಿಂದಲೂ ನಾಯಿ ಕಡಿತದ ಗಾಯವನ್ನು ಶುಚಿ ಮಾಡಬಹುದು. ಅನಂತರ ಗಾಯದ ಪ್ರಮಾಣವನ್ನು ಒಳ್ಳೆಯ ಬೆಳಕಿನಲ್ಲಿ ಪರಿಶೀಲಿಸಬೇಕು. ಕೇವಲ ಚರ್ಮದ ಮಟ್ಟದ್ದೇ; ಮಾಂಸಖಂಡ ಮತ್ತು ಮೂಳೆಯ ಆಳಕ್ಕೆ ಇಳಿದಿದೆಯೇ; ಸುತ್ತಮುತ್ತಲ ಅಂಗಾಂಶಗಳ ಹಾನಿಯಾಗಿದೆಯೇ; ಮುಖ, ಬೆನ್ನು, ಎದೆ ಅಥವಾ ಹೊಟ್ಟೆಯ ಮೇಲೆ ಕಡಿತವಾಗಿದ್ದರೆ, ಒಳಗಿನ ಅಂಗಗಳ ಪರಿಸ್ಥಿತಿ ಏನಾಗಿದೆ; ಕಡಿತದ ಜಾಗದಲ್ಲಿ ಊತ ಬಂದಿದೆಯೇ ಮೊದಲಾದ ಲಕ್ಷಣಗಳನ್ನು ಗಮನಿಸಿ, ನಮೂದಿಸಬೇಕು. ಧನುರ್ವಾಯು (ಟೆಟನಸ್) ಲಸಿಕೆಯನ್ನು ತೆಗೆದುಕೊಳ್ಳುವುದು ಸೂಕ್ತ. ಗಾಯ ಆಳವಾಗಿದ್ದರೆ ಆ್ಯಂಟಿಬಯಾಟಿಕ್ ಔಷಧಗಳ ಅಗತ್ಯ ಬೀಳಬಹುದು. ಗಾಯದ ಮೇಲೆ ಸ್ಪಿರಿಟ್ ಅಥವಾ ಐಯೋಡಿನ್ ದ್ರಾವಣ ಬಳಸಬಹುದು. ನಿರ್ಲಕ್ಷ್ಯ ಮಾಡಿದರೆ ನಾಯಿ ಕಡಿತದ ಕಾರಣದಿಂದ ಹಲವಾರು ಕಾಯಿಲೆಗಳಿಗೆ ತುತ್ತಾಗಬೇಕಾಗುತ್ತದೆ.

> ನಾಯಿ ಕಡಿತದ ಕಾರಣದಿಂದ ಹಲವಾರು ಕಾಯಿಲೆಗಳಿಗೆ ತುತ್ತಾಗಬೇಕಾಗುತ್ತದೆ. ಹಾಗಾಗಿ ನಿರ್ಲಕ್ಷ್ಯ ಮಾಡುವಂತಿಲ್ಲ

ರೇಬೀಸ್ ಪೀಡಿತ ನಾಯಿಯು ಕಾಯಿಲೆಯನ್ನು ಕಡಿತದ ಮೂಲಕ ಹಬ್ಬಿಸುತ್ತದೆ. ರೋಗಲಕ್ಷಣಗಳು ಆರಂಭವಾಗುವ ಮುನ್ನವೇ ತೆಗೆದುಕೊಂಡ ರೇಬೀಸ್ ಲಸಿಕೆಯು ರೋಗ ಬಾರದಂತೆ ತಡೆಯುತ್ತದೆ. ಮೊದಲ ಬಾರಿ ನಾಯಿ ಕಡಿತಕ್ಕೆ ಒಳಗಾದವರು ಆ ದಿನವನ್ನು ಶೂನ್ಯದಿನ ಎಂದು ಪರಿಗಣಿಸಿ ಮೊದಲನೆಯ ಡೋಸ್ ಲಸಿಕೆಯನ್ನು ಚುಚ್ಚಿಸಿಕೊಳ್ಳಬೇಕು. ಅನಂತರದ 3ನೆಯ, 7ನೆಯ ಮತ್ತು 14ನೆಯ ದಿನಗಳಂದು ತೋಳಿನ ಮಾಂಸಖಂಡಗಳಿಗೆ ಚುಚ್ಚುಮದ್ದಿನ ಲಸಿಕೆಯನ್ನು ಪಡೆಯಬೇಕು.

ಪುನಃ 30ನೆಯ ದಿನದಂದು ಮತ್ತೊಂದು ಬಾರಿ ಲಸಿಕೆ ಚುಚ್ಚಿಸಿಕೊಳ್ಳುವ ಆಯ್ಕೆಯೂ ಇದೆ. ಅದರ ಅಗತ್ಯವನ್ನು ವೈದ್ಯರು ನಿರ್ಧರಿಸುತ್ತಾರೆ. ಈ ರೀತಿ ಲಸಿಕೆ ಪಡೆದವರಿಗೆ ಭವಿಷ್ಯದಲ್ಲಿ ಮತ್ತೊಮ್ಮೆ ನಾಯಿ ಕಡಿದರೆ, ಕೇವಲ ಶೂನ್ಯದಿನ ಮತ್ತು 3ನೆಯ ದಿನಗಳ ಲಸಿಕೆ ಸಾಕಾಗುತ್ತದೆ. ಹಿಂದಿನ ಕಾಲದಲ್ಲಿ ಹೊಕ್ಕಳ ಸುತ್ತ ನೀಡುತ್ತಿದ್ದ ಚುಚ್ಚುಮದ್ದುಗಳ ಅಗತ್ಯ ಇಂದಿನ ದಿನಗಳಲ್ಲಿ ಇಲ್ಲ.

ಭಾರತ ದೇಶ ಜಗತ್ತಿನ ರೇಬೀಸ್ ರಾಜಧಾನಿ. 2001ರಲ್ಲಿ ಬೀದಿನಾಯಿಗಳನ್ನು ಕೊಲ್ಲುವುದರ ವಿರುದ್ಧ ಬಂದ ಕಾನೂನಿನ ಕಾರಣದಿಂದ ಬೀದಿನಾಯಿಗಳ ಉಪದ್ರವ ಭಾರತದಲ್ಲಿ ವಿಪರೀತವಾಗಿದೆ. ವಾರ್ಷಿಕ 20,000 ಅಮಾಯಕ ಜನರು ಭಾರತದಲ್ಲಿ ರೇಬೀಸ್ ಕಾಯಿಲೆಗೆ ಬಲಿಯಾಗುತ್ತಾರೆ. ನಾಯಿ ಕಡಿತವನ್ನು ಸುಲಭವಾಗಿ ಪರಿಗಣಿಸಬಾರದು. ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ತೆಗೆದುಕೊಳ್ಳುವುದು ಅತ್ಯಗತ್ಯ.



ಚರ್ಮದ ಕಿರಿಕಿರಿಗೆ 'ಕರ್ಮ' ಎನ್ನದಿರಿ!

ಡಾ. ಬಿ. ಆರ್. ಸುಹಾಸ್

ಮೈಕೊರೆಯುವ ಚುಮುಚುಮು ಚಳಿ ನಿಧಾನವಾಗಿ ಆವರಿಸಿಕೊಳ್ಳುತ್ತಿದೆ. ಸಾಮಾನ್ಯ ನೆಗಡಿ, ಕೆಮ್ಮು, ಜ್ವರಗಳಲ್ಲದೇ ಚರ್ಮದ ಕೆಲವು ಸಮಸ್ಯೆಗಳೂ ಚಳಿಗಾಲದಲ್ಲಿ ಕಾಡುತ್ತವೆ.

ಒಣಚರ್ಮ: ಒಣಚರ್ಮ ಚಳಿಗಾಲದ ಮುಖ್ಯ ಸಮಸ್ಯೆ. ಶೀತಲವಾದ ಒಣಗಾಳಿ ಚರ್ಮವನ್ನು ಒಣಗಿಸುತ್ತದೆ. ಚರ್ಮದಲ್ಲಿ ಬಿರುಕುಗಳಾಗಿ, ಸತ್ತ ಚರ್ಮದ ಪದರಗಳು ಹೆಚ್ಚುತ್ತಾ ತುರಿಸುತ್ತದೆ. ಇದು ಮುಖ್ಯವಾಗಿ ಕೈಕಾಲುಗಳಲ್ಲಿ ಆಗುತ್ತದೆ. ಕೆಲವರಿಗೆ ಸ್ವಭಾವದಿಂದಲೇ ಒಣಚರ್ಮವಿರುತ್ತದೆ, ಹಾಗೂ ಹುಟ್ಟಿನಿಂದಲೇ 'ಇಕ್ಥಿಯೋಸಿಸ್' ಅಥವಾ 'ಮೀನ್ಚರ್ಮ' ಎಂಬ ಮುಂದೋಳು, ಮಂಡಿ, ಹಸ್ತ ಪಾದಗಳು, ಬೆನ್ನು, ಮೊದಲಾದ ಒತ್ತಡ ಬೀಳುವ ದೇಹದ ಭಾಗಗಳಲ್ಲಿ ಆಗುತ್ತವೆ. ಇವು ಅಷ್ಟಾಗಿ ತುರಿಸುವುದಿಲ್ಲವಾದರೂ ಬಿಳಿಯ ಪದರಗಳು ಉದುರುತ್ತಾ ಕಿರಿಕಿರಿ ಉಂಟುಮಾಡುತ್ತವೆ. ತಲೆ ಮತ್ತು ಉಗುರುಗಳಲ್ಲೂ ಸೋರಿಯಾಸಿಸ್ ಕಂಡುಬರುತ್ತದೆ. ಇದು ಒಣಚರ್ಮದಿಂದ ಹೆಚ್ಚುತ್ತದೆ. ಅಂತೆಯೇ ಚಳಿಗಾಲದಲ್ಲಿ ಉಲ್ಬಣಿಸುತ್ತದೆ.

ಪಾದ ಒಡೆಯುವುದು: ವಯಸ್ಸಾದವರಲ್ಲಿ, ಒಣಚರ್ಮ ಇರುವವರಲ್ಲಿ ಪಾದ ಒಡೆಯುವುದು,ಬಿರಿಯುವುದು ಸಾಮಾನ್ಯ. ಅಂತೆಯೇ 'ಎಟೋಪಿಕ್ ಡರ್ಮಟೈಟಿಸ್', 'ಸೋರಿಯಾಸಿಸ್' ಇರುವವರಲ್ಲಿ ಕೂಡ ಪಾದ ಒಡೆಯುತ್ತದೆ. ಕೆಲವು ಸೂಕ್ಷ್ಮ ಚರ್ಮವಿರುವ ಮಕ್ಕಳಲ್ಲಿ ಯುವಾವಸ್ಥೆಗೆ ಬರುವವರೆಗೂ ಆಗಾಗ ಪಾದದ ಮುಂಭಾಗ ಒಡೆಯುವ ಸಮಸ್ಯೆ ಇರುತ್ತದೆ. ಇದನ್ನು 'ಜುವೆನೈಲ್ ಪ್ಲಾಂಟಾರ್ ಡರ್ಮಟೋಸಿಸ್' ಎನ್ನುತ್ತಾರೆ. ಈ ಎಲ್ಲರಲ್ಲೂ ಪಾದ ಒಡೆಯುವಿಕೆ ಚಳಿಗಾಲದಲ್ಲಿ ಉಲ್ಬಣಿಸುತ್ತದೆ.

ತುಟಿ ಬಿರಿಯುವುದು: ಶೀತಲ ಒಣಗಾಳಿಯಿಂದ ತುಟಿಯಲ್ಲಿ ತೇವಾಂಶ ಕಡಿಮೆಯಾಗಿ ಒಣಗಿ ಬಿರಿಯುವುದೂ ಚಳಿಗಾಲದಲ್ಲಿ ಸಾಮಾನ್ಯ. ಇದರಿಂದ ಕಿರಿಕಿರಿ ಉಂಟಾಗುತ್ತದೆ; ಖಾರದ ಪದಾರ್ಥಗಳನ್ನು ತಿನ್ನುವಾಗ ತುಟಿ ಉರಿಯುತ್ತದೆ.

ಶೀತಲ ಅರ್ಟಿಕೇರಿಯ (Cold Urticaria): 'ಅರ್ಟಿಕೇರಿಯ' ಎನ್ನುವುದು ಅಲರ್ಜಿಯಿಂದಾಗುವ ಸಮಸ್ಯೆ. ಅಲರ್ಜಿಯೆಂದರೆ ಒಗ್ಗದಿರುವಿಕೆ. ದೇಹಕ್ಕೆ ಒಗ್ಗದ ಆಹಾರ, ಔಷಧ, ವಾತಾವರಣ, ಇತ್ಯಾದಿಗಳ ಸಂಪರ್ಕಕ್ಕೆ ಬಂದಾಗ, ಕೆಂಪು ಗಂಧೆಗಳು ಮತ್ತು ತುರಿಕೆ ಉಂಟಾಗುತ್ತವೆ. ಈ ಗಂಧೆಗಳು ಹೋಗುತ್ತಾ ಬರುತ್ತಾ ಇರುತ್ತವೆ. ಅರ್ಟಿಕೇರಿಯ ಸೂಕ್ಷ್ಮ ಚರ್ಮವಿರುವ ಜನರಲ್ಲಿ ಉಂಟಾಗುತ್ತದೆ. ಶೀತಲ ಗಾಳಿಯೂ ಅರ್ಟಿಕೇರಿಯ ಆಗಲು ಪ್ರಚೋದಿಸಬಹುದು. ಆಗ ಇದನ್ನು 'ಶೀತಲ ಅರ್ಟಿಕೇರಿಯ' ಎನ್ನುತ್ತಾರೆ.

ಪರಿಹಾರೋಪಾಯಗಳು

ಬಹುತೇಕ ಎಲ್ಲ ಸಮಸ್ಯೆಗಳಲ್ಲೂ ಒಣಚರ್ಮವೇ ಮುಖ್ಯವಾಗಿರುವುದರಿಂದ ಅದನ್ನು ನಿವಾರಿಸಿದರೆ ಈ ಸಮಸ್ಯೆಗಳ ಪರಿಹಾರವನ್ನೂ ಮಾಡಬಹುದು. ಅದಕ್ಕಾಗಿ ಪ್ರತಿದಿನವೂ ತೇವಾಂಶವುಳ್ಳ ತೈಲ ಅಥವಾ ದ್ರಾವಣಗಳನ್ನು ಮೈಪೂರಾ ಇಲ್ಲವೇ ಕೈಕಾಲುಗಳಲ್ಲಾದರೂ ಸವರಿಕೊಳ್ಳಬೇಕು. ಬೆಳಿಗ್ಗೆ ಸ್ನಾನವಾದ ಕೂಡಲೇ ಇನ್ನೂ ತೇವಾಂಶ ಇರುವಾಗಲೇ ಸವರಿಕೊಂಡರೆ ಒಳ್ಳೆಯದು. ಅಂತೆಯೇ ರಾತ್ರಿ ಮಲಗುವಾಗ ಇನ್ನೊಮ್ಮೆ ಸವರುವುದು ಒಳ್ಳೆಯದು. ಚರ್ಮವು ಬಹಳ ಒಣಗಿದ್ದರೆ ಮಧ್ಯೆ ಒಂದೆರಡು ಬಾರಿ ಸವರಿದರೂ ಒಳ್ಳೆಯದು. ಕೊಬ್ಬರಿಎಣ್ಣೆ, ವ್ಯಾಸಲಿನ್, ಲೋಳೆಸರ, ಮೊದಲಾದವುಗಳನ್ನು ಬಳಸಬಹುದು. ಮಾರುಕಟ್ಟೆಯಲ್ಲಿ ಉತ್ಕೃಷ್ಟವಾದ ತೇವಾಂಶ ದ್ರಾವಣಗಳು ದೊರೆಯುತ್ತವೆ. ಇವನ್ನು ಚರ್ಮವೈದ್ಯರ ನಿರ್ದೇಶಾನುಸಾರ ಬಳಸಬಹುದು.

ಇಸುಬು, ಎಟೋಪಿಕ್ ಡರ್ಮಟೈಟಿಸ್, ಮೊದಲಾದ ತೊಂದರೆಗಳಿಗೆ ವೈದ್ಯರ ನಿರ್ದೇಶಾನುಸಾರ ತೇವಾಂಶ ದ್ರಾವಣಗಳ ಜೊತೆಗೆ ಇತರ ಮುಲಾಮುಗಳನ್ನು ಸೇರಿಕೊಳ್ಳಬೇಕು.

ತುರಿಕೆಗೆ ಮಾತ್ರೆಗಳನ್ನು ವೈದ್ಯರ ನಿರ್ದೇಶಾನುಸಾರ ಸೇವಿಸಬೇಕು.

ತುರಿಕೆಯನ್ನು ನಿವಾರಿಸಲು ಕೆರೆದಷ್ಟೂ ತುರಿಕೆ ಇನ್ನೂ ಹೆಚ್ಚುತ್ತದೆ ಹಾಗೂ ಇಸುಬಿನ ಮಚ್ಚೆಗಳೂ ವರ್ಧಿಸುತ್ತವೆ. ಅಲ್ಲದೇ ಕೆರೆತದಿಂದ ಗಾಯಗಳಾಗಿ ಸೋಂಕುಗಳಾಗಬಹುದು. ಹಾಗಾಗಿ ಆದಷ್ಟು ಕೆರೆಯದೇ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಿ ತುರಿಕೆಯನ್ನು ಮರೆಯಲು ಪ್ರಯತ್ನಿಸಬೇಕು.

ಒಡೆದ ತುಟಿಗಳಿಗೆ ವೈದ್ಯರ ನಿರ್ದೇಶಾನುಸಾರ ಗ್ಲಿಸರಿನ್ ಮೊದಲಾದ ದ್ರಾವಣಗಳನ್ನು ಬಳಸಬಹುದು. ಒಡೆದ ಪಾದಗಳಿಗೆ ರಾತ್ರಿ ತೇವಾಂಶದ ದ್ರಾವಣ ಸವರಿದರೆ, ಬೆಳಿಗ್ಗೆ ಉಗುರು ಬೆಚ್ಚಗಿನ ನೀರಿನಲ್ಲಿ ಪಾದಗಳನ್ನು ಸ್ವಲ್ಪ ಹೊತ್ತು ಸೋಕಿಸುವುದು ಹಿತವನ್ನು ಉಂಟುಮಾಡುತ್ತದೆ. ಶೀತಲ ಗಾಳಿ ಹಾಗೂ ಚಳಿಯನ್ನು ನಿವಾರಿಸಲು ಬೆಚ್ಚಗಿನ ವಸ್ತ್ರಗಳನ್ನು ಧರಿಸಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ವೃತ್ತಗಳಿಗೆ ಸಂಬಂಧಿಸಿದ ವಿಸ್ತೀರ್ಣಗಳು

ಅಭ್ಯಾಸ 11.1

[π ಗೆ ಯಾವುದೇ ಬೆಲೆಯನ್ನು ಕೊಡದೆ ಇದ್ದಲ್ಲಿ, π = 22/7 ಎಂದು ಪರಿಗಣಿಸಿ]

4) 10 cm ತ್ರಿಜ್ಯವುಳ್ಳ ವೃತ್ತದಲ್ಲಿನ ಒಂದು ಜ್ಯಾವು ವೃತ್ತಕೇಂದ್ರದಲ್ಲಿ ಲಂಬಕೋನವನ್ನುಂಟು ಮಾಡುತ್ತದೆ. ಜ್ಯಾದಿಂದ ಉಂಟಾದ

1) ಲಘುವೃತ್ತಖಂಡ

2) ಅಧಿಕ ತ್ರಿಜ್ಯಾಂತರ ಖಂಡಗಳ ವಿಸ್ತೀರ್ಣಗಳನ್ನು ಕಂಡುಹಿಡಿಯಿರಿ.

(π = 3.14 ಎಂದು ಬಳಸಿ).

ಪರಿಹಾರ:–



ಇಲ್ಲಿ ವೃತ್ತದಲ್ಲಿ O ವೃತ್ತ ಕೇಂದ್ರವಾಗಿದೆ. AB ವೃತ್ತದ ಜ್ಯಾ ಆಗಿದೆ ∠BOA =90° (........ಹಿಂದಿನ ಸಂಚಿಕೆಯಿಂದ)

ಇಲ್ಲಿ ವೃತ್ತದಲ್ಲಿ ವೃತ್ತ ತ್ರಿಜ್ಯ(r)= 10 cm

(1) ಲಘು ವೃತ್ತಖಂಡದ ವಿಸ್ತೀರ್ಣ= (90/360°)×πr²

= (¼)×(22/7)×10²

ಅಥವಾ ಲಘು ವೃತ್ತಖಂಡದ= 78.5 cm²

ΔAOBವಿಸ್ತೀರ್ಣ= = ½×OB×OA

OB ಮತ್ತು OA ವೃತ್ತ ತ್ರಿಜ್ಯ(r) = 10 cm

ΔAOBವಿಸ್ತೀರ್ಣ = ½×10×10= 50 cm²

ಲಘು ವೃತ್ತಖಂಡದ ವಿಸ್ತೀರ್ಣ=

= ಲಘು ವೃತ್ತಖಂಡದ ವಿಸ್ತೀರ್ಣ – ΔAOBವಿಸ್ತೀರ್ಣ

= 78.5 – 50

= 28.5 cm²

2) ಅಧಿಕ ತ್ರಿಜ್ಯಾಂತರ ಖಂಡಗಳ ವಿಸ್ತೀರ್ಣ=

= ವೃತ್ತದ ವಿಸ್ತೀರ್ಣ–ಲಘು ವೃತ್ತಖಂಡದ ವಿಸ್ತೀರ್ಣ

= (3.14×10²)-78.5

= 235.5 cm²

5) 21 cm ತ್ರಿಜ್ಯವಿರುವ ಒಂದು ವೃತ್ತದಲ್ಲಿ ಒಂದು ಕಂಸವು ವೃತ್ತಕೇಂದ್ರದಲ್ಲಿ 60°ಕೋನವನ್ನುಂಟು ಮಾಡುತ್ತದೆ.

i) ಕಂಸದ ಉದ್ದ ii) ಕಂಸದಿಂದ ಉಂಟಾದ ತ್ರಿಜ್ಯಾಂತರ ಖಂಡ.

iii) ಅನುರೂಪ ಜ್ಯಾದಿಂದ ಉಂಟಾದ ವೃತ್ತಖಂಡದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಪರಿಹಾರ:–



ಇಲ್ಲಿ ವೃತ್ತದಲ್ಲಿ O ವೃತ್ತ ಕೇಂದ್ರವಾಗಿದೆ. OBಮತ್ತು OA ವೃತ್ತದ ತ್ರಿಜ್ಯ ಆಗಿದೆ ∠BOA =60° i.e θ = 60°

ಹಾಗೂ ತ್ರಿಜ್ಯದ ಉದ್ದ= 21 cm

(i) ಕಂಸದ ಉದ್ದ= θ/360°×Circumference(2πr)

AB ಕಂಸದ ಉದ್ದ = (60°/360°)×2×(22/7)×21

= (1/6)×2×(22/7)×21

= 22cm

ii) ಒಂದು ವೃತ್ತದಲ್ಲಿ ಒಂದು ಕಂಸವು ವೃತ್ತಕೇಂದ್ರದಲ್ಲಿ 60°ಕೋನವನ್ನುಂಟು ಮಾಡುತ್ತದೆ.

ಕಂಸದಿಂದ ಉಂಟಾದ ತ್ರಿಜ್ಯಾಂತರ ಖಂಡದ(APB) ವಿಸ್ತೀರ್ಣ=

= (60°/360°)×π r² cm²

= 441/6×22/7 cm²

=231 cm²

(iii) ಅನುರೂಪ ಜ್ಯಾದಿಂದ ಉಂಟಾದ ವೃತ್ತಖಂಡದ ವಿಸ್ತೀರ್ಣ =

= OAPB ತ್ರಿಜ್ಯಾಂತರ ಖಂಡದ ವಿಸ್ತೀರ್ಣ – ಸಮಬಾಹು ತ್ರಿಭುಜದ ΔOAB ವಿಸ್ತೀರ್ಣ

= 231-(√3/4)×(OA)²

= 231-(√3/4)×21²

= [231-(441×√3)/4] cm²

=231-190.7

=40.3 ಚ ಸೆಂ.ಮೀ

6) 15 cm ತ್ರಿಜ್ಯವಿರುವ ಒಂದು ವೃತ್ತದ ಒಂದು ಜ್ಯಾವು ವೃತ್ತಕೇಂದ್ರದಲ್ಲಿ 60.ಕೋನವನ್ನುಂಟು ಮಾಡುತ್ತದೆ. ಜ್ಯಾದಿಂದ ಉಂಟಾದ ಲಘು ವೃತ್ತ ಖಂಡ ಮತ್ತು ಅಧಿಕ ವೃತ್ತಖಂಡ ವಿಸ್ತೀರ್ಣಗಳನ್ನು ಕಂಡುಹಿಡಿಯಿರಿ.

(π = 3.14 ಹಾಗೂ √3 = 1.73 ಎಂದು ಬಳಸಿ).

ಪರಿಹಾರ:–



ಇಲ್ಲಿ ವೃತ್ತದಲ್ಲಿ O ವೃತ್ತ ಕೇಂದ್ರವಾಗಿದೆ, ತ್ರಿಜ್ಯದ ಉದ್ದ= 15cm ವೃತ್ತದ ಜ್ಯಾವು ತ್ರಿಜ್ಯಗಳ ಸಹಾಯದಿಂದ ವೃತ್ತಕೇಂದ್ರದಲ್ಲಿ 60. ಕೋನವನ್ನುಂಟು i.e θ = 60°

ಲಘು ವೃತ್ತ ಖಂಡ OAPB ವಿಸ್ತೀರ್ಣ= (60°/360°)×πr² cm²

= 225/6 πcm²

ΔAOB ಸಮಬಾಹು ತ್ರಿಭುಜ(ಯಾಕೆಂದರೆ ಇದರ 2 ಬಾಹುಗಳು ವೃತ್ತದ ತ್ರಿಜ್ಯಗಳಾಗಿವೆ) ಮತ್ತು ಸಮಬಾಹು ತ್ರಿಭುಜದ ಒಂದು ಮೂಲೆಯು ವೃತ್ತ ಕೇಂದ್ರವಾಗಿದ್ದು ಅದು 60°ಕೋನವಾಗಿದೆ.

ಹೀಗಾಗಿ ΔAOB ವಿಸ್ತೀರ್ಣ= (√3/4) ×a²

= (√3/4) ×15²

∴ = 97.31 cm²

ಈಗ ಲಘು ವೃತ್ತ ಖಂಡದ ವಿಸ್ತೀರ್ಣ=

= OAPB ವಿಸ್ತೀರ್ಣ –ΔAOBವಿಸ್ತೀರ್ಣ

= ((225/6)π – 97.31) cm²

= 20.43 cm²

ಅಧಿಕ ವೃತ್ತಖಂಡ ವಿಸ್ತೀರ್ಣ =

ವೃತ್ತದ ವಿಸ್ತೀರ್ಣ– ಲಘು ವೃತ್ತ ಖಂಡದ ವಿಸ್ತೀರ್ಣ

= (π×15²) – 20.4

= 686.06 cm²

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

Chapter 12 Atom

1) Choose the correct alternative from the clues given at the end of each statement:

(a) The size of the atom in Thomson's model is .... the atomic size in Rutherford's model. (much greater than/no different from/much less than.)

(b) In the ground state of ...., electrons are in stable equilibrium, while in ...., electrons always experience a net force. (Thomson's model/ Rutherford's model.)

(c) A classical atom based on .... is doomed to collapse. (Thomson's model/ Rutherford's model.)

(d) An atom has a nearly continuous mass distribution in .... but has a highly non-uniform mass distribution in .... (Thomson's model/ Rutherford's model.)

(e) The positively charged part of the atom possesses most of the mass in .... (Rutherford's model/both models.)

Ans:

(a) The size of the atom in Thomson's model is **no different from** the atomic size in Rutherford's model.

(b) In the ground state of Thomson's model, electrons are in stable equilibrium, while in **Rutherford's model,** electrons always experience a net force.

(c) A classical atom based on **Rutherford's model** is doomed to collapse.

(d) An atom has a nearly continuous mass distribution in **Thomson's model** but has a highly non-uniform mass distribution in **Rutherford's model.**

(e) The positively charged part of the atom possesses most of the mass in **both models.**

2) Suppose you are given a chance to repeat the alpha-particle scattering experiment using a thin sheet of solid hydrogen in place of the gold foil. (Hydrogen is a solid at temperatures below 14 K.) What results do you expect?

Ans: We know that the mass of the incident alpha particle (6.64×10^{-27}kg) is more than the mass of hydrogen (1.67×10^{-27}Kg). Hence, the target nucleus is lighter, from which we can conclude that the alpha particle would not rebound, implying the fact that solid hydrogen isn't a suitable replacement for gold foil for the alpha particle scattering experiment.

3) What is the shortest wavelength present in the Paschen series of spectral lines?

Ans: We know that Rydberg's formula is written as

$$\frac{hc}{\lambda} = 21.76 \times 10^{-19}\left[\frac{1}{n_1^2} - \frac{1}{n_2^2}\right]$$

Where,

h = Planck's constant = 6.6×10^{-34}

c = Speed of light = 3×10^8 m/s

n_1 and n_2 are integers

So, the shortest wavelength present in the Paschen series of the spectral lines is given for $n_1 = 3$ and $n_2 = \infty$

$$\frac{hc}{\lambda} = 21.76 \times 10^{-19}\left[\frac{1}{3^2} - \frac{1}{\infty^2}\right]$$

$$\lambda = \frac{6.6\times10^{-34}\times3\times10^{8}\times9}{21.76\times10^{-19}}$$

$= 8.189 \times 10^7$ m

= 818.9 nm

4) A difference of 2.3 eV separates two energy levels in an atom. What is the frequency of radiation emitted when the atom makes a transition from the upper level to the lower level?

Ans: It is given that

Separation of two energy levels in an atom,

$E = 2.3 \text{ eV} = 2.3 \times 1.6 \times 10^{-19}$

$= 3.68 \times 10^{-19}$ J

Consider v as the frequency of radiation emitted when the atom transits from the upper level to the lower level.

So, the relation for energy can be written as:

$E = h\nu$

Where,

h = Planck's constant = 6.62×10^{-34} Js

$\nu = E/h$

$$= \frac{3.68\times10^{-19}}{6.62\times10^{-32}}$$

$= 5.55 \times 10^{14}$ Hz

$= 5.6 \times 10^{14}$ Hz

Therefore,

the frequency of radiation is 5.6×10^{14} Hz.

5) The ground state energy of the hydrogen atom is –13.6 eV. What are the kinetic and potential energies of the electron in this state?

Ans: Ground state energy of hydrogen atom,

E = – 13.6 eV

The total energy of the hydrogen atom is -13.6 eV. The kinetic energy is equal to the negative of the total energy.

Kinetic energy = – E = – (– 13.6) = 13.6 eV

Potential energy = negative of two times of kinetic energy.

Potential energy = –2 × (13.6) = –27.2 eV.

6) A hydrogen atom initially in the ground level absorbs a photon, which excites it to the n = 4 level. Determine the wavelength and frequency of the photon.

Ans:

(Contd......)

ಭಾರತೀಯ ಸಿನಿಮಾದ ಹೊಸ ಅಲೆಯ ಹರಿಕಾರ

ನುಡಿ ನಮನ

• ವಿಶಾಖ ಎನ್.

ನೀಲಿ ಬಣ್ಣದ ಕಿಟಕಿಗಳು, ಭಾವಕ್ಕೆ ತಕ್ಕಂತೆ ಚೌಕಟ್ಟು ಹಾಕಿದಂತಹ ಶಾಟ್‌ಗಳು, ಇವತ್ತು ಬ್ಲ್ಯಾಕ್ ಕಾಮಿಡಿ ಎಂದು ಯಾವುದನ್ನು ಕೊಂಡಾಡುತ್ತೇವೋ ಅದರ ಬೇರುಗಳು, ವೇಶ್ಯಾವಾಟಿಕೆಗೆ ಕಾನೂನು ಮಾನ್ಯತೆ ನೀಡಬೇಕೋ ಬೇಡವೋ ಎನ್ನುವ ಚರ್ಚೆಯ ಗೊಡವೆಗೆ ಹೋಗದೆ ಮನುಷ್ಯ ಸೂಕ್ಷ್ಮ ಸಂವೇದನೆಯೊಂದಿಗೆ ಅದನ್ನು ತೆರೆಮೇಲೆ ತಂದಿರುವ ರೀತಿ, ರಾಜಕೀಯ ವಿಡಂಬನೆ...

'ಮಂಡಿ' ಹಿಂದಿ ಸಿನಿಮಾದಲ್ಲಿ ಬಗೆದಷ್ಟೂ ಕಾಣುವ ಇಂತಹ ಸಂಗತಿಗಳೆಲ್ಲ ಶ್ಯಾಮ್ ಬೆನಗಲ್ ಎಂಬ ಪರ್ಯಾಯ ಸಿನಿಮಾ ವೈಯಾಕರಣಿಯ ಕಸುಬುದಾರಿಕೆಗೆ ಕನ್ನಡಿ ಹಿಡಿಯುತ್ತವೆ.

1970 ಹಾಗೂ 1980ರ ದಶಕಗಳಲ್ಲಿ ಇಡೀ ಭಾರತದಾದ್ಯಂತ ಹೊಸ ಅಲೆಯ ಸಿನಿಮಾಗಳು ಸದ್ದು ಮಾಡಿದ್ದವು. ಆ ಅಲೆಯ ಉಬ್ಬರದಲ್ಲಿ ಶ್ಯಾಮ್ ಬೆನಗಲ್ ಅವರದ್ದು ಎದ್ದುಕಾಣುವ ಕಾಣ್ಕೆ. 'ಅಂಕುರ್' ಹಿಂದಿ ಸಿನಿಮಾ ನೋಡಿ.



ಕನ್ನಡದ ಅನಂತನಾಗ್–ಶಬಾನಾ ಆಜ್ಮಿ ಆಗಿನ್ನೂ ತಾಜಾಮುಖಗಳು; ಇಬ್ಬರಿಗೂ ಮೊದಲ ಚಿತ್ರ. ಅವರಿಬ್ಬರ ನಟನೆಯ ಪಲುಕುಗಳಲ್ಲಿ ಶ್ಯಾಮ್ ತಂದಿರುವ ಸಹಜತೆ ನೋಡಿದರೆ ಅವರೆಂಥ ಕುಶಲಮತಿ ಎನ್ನುವುದು ಅರಿವಾಗುತ್ತದೆ.

ಶ್ಯಾಮ್ ಹುಟ್ಟಿದ್ದು ಹೈದರಾಬಾದ್‌ನಲ್ಲಿ. ಅವರ ತಂದೆ, ಕನ್ನಡಿಗರೇ ಆದ ಶ್ರೀಧರ್ ಬಿ. ಬೆನಗಲ್ ಫೋಟೊಗ್ರಾಫರ್ ಆಗಿದ್ದರು. ಬೆನಗಲ್, ಉಡುಪಿ ಜಿಲ್ಲೆಯಲ್ಲಿ ಇದೆ. ತಂದೆ ಉಡುಗೊರೆಯಾಗಿ ಕೊಟ್ಟ ಕ್ಯಾಮೆರಾ ಬಳಸಿ, 12ನೇ ವಯಸ್ಸಿನಲ್ಲಿಯೇ ಶ್ಯಾಮ್ ಒಂದು ಪುಟ್ಟ ಚಿತ್ರ ತಯಾರಿಸಿದ್ದರು. ಆಮೇಲೆ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಅವರು ಅರ್ಥಶಾಸ್ತ್ರ ಓದಿದರಾದರೂ, ಸಿನಿಮಾ ಗೀಳು ಮನಸ್ಸಿಗೆ ಅಂಟಿಕೊಂಡಿತ್ತು. ಅಲ್ಲೇ ಒಂದು ಸಿನಿಮಾ ಕ್ಲಬ್ ಹುಟ್ಟುಹಾಕಿದ್ದರು.

ಕಾಪಿರೈಟರ್ ಆಗಿ ಅವರು ಮುಂಬೈನ ಜಾಹೀರಾತು ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದರು. ಆ ಅನುಭವದ ನಡುವೆಯೇ ಕಿರುಚಿತ್ರಗಳನ್ನು ಮಾಡುತ್ತಾ ಬಂದರು. ಆ ಕಂಪನಿಯ ಕ್ರಿಯೇಟಿವ್ ಹೆಡ್ ಕೂಡ ಆದರು. 1962ರಲ್ಲಿ ಅವರು ಗುಜರಾತಿ ಭಾಷೆಯಲ್ಲಿ 'ಘೇರ್ ಬೈಟಾ ಗಂಗಾ' (ಆವರಿಸಿದ ಗಂಗಾ) ಎಂಬ ಕಿರುಚಿತ್ರ ತಯಾರಿಸಿದರು. ಅದಾಗಿ, ಪೂರ್ಣಪ್ರಮಾಣದ ಚಿತ್ರವೊಂದು ಅವರಿಂದ ಬರಲು ದಶಕವೇ ಬೇಕಾಯಿತು. 1963ರಲ್ಲಿ ಇನ್ನೊಂದು ಜಾಹೀರಾತು ಕಂಪನಿಗೆ ಜಿಗಿದರು. 900ಕ್ಕೂ ಹೆಚ್ಚು ಪ್ರಾಯೋಜಿತ ಸಾಕ್ಷ್ಯಚಿತ್ರಗಳು ಹಾಗೂ ಜಾಹೀರಾತು ಚಿತ್ರಗಳನ್ನು ತಯಾರಿಸಿದ ಅನುಭವ ಸಿನಿಮಾಕ್ಕೆ ಬೇಕಾದ ಗಟ್ಟಿ ಸರಕು ತಲೆಯಲ್ಲಿ ಹೊಳೆಯಲು ಕಾರಣವಾದವು. ಮುಂದೆ 70 ಸಾಕ್ಷ್ಯಚಿತ್ರಗಳನ್ನು ತಯಾರಿಸಲು ಪ್ರೇರಣೆಯನ್ನೂ ಕೊಟ್ಟವು.

1966ರಿಂದ 73ರ ಅವಧಿಯಲ್ಲಿ ಅವರು ಪುಣೆಯ ಫಿಲ್ಮ್ ಆ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿ (ಎಫ್‌ಟಿಐಐ) ಬೋಧಿಸಿದರು. ಆಮೇಲೆ ಎರಡು ಅವಧಿಯಲ್ಲಿ ಅದೇ ಸಂಸ್ಥೆಯ ಅಧ್ಯಕ್ಷರೂ ಆದರು. 'ಎ ಚೈಲ್ಡ್ ಆಫ್ ದಿ ಸ್ಟ್ರೀಟ್ಸ್' 1967ರಲ್ಲಿ ಅವರು ತಯಾರಿಸಿದ ಕಿರುಚಿತ್ರ. ಅದು ಅವರಿಗೆ ಹೆಸರನ್ನು ತಂದುಕೊಟ್ಟಿತು.

ತೆಲಂಗಾಣದಲ್ಲಿ ಬಡವರ ಮೇಲಿನ ಆರ್ಥಿಕ ಹಾಗೂ ಲೈಂಗಿಕ ಶೋಷಣೆಯ ಎಳೆಗಳನ್ನು ಇಟ್ಟುಕೊಂಡು ಅವರು 1973ರಲ್ಲಿ 'ಅಂಕುರ್' ಸಿನಿಮಾ ನಿರ್ದೇಶಿಸಿದರು. ಆ ಚಿತ್ರಕ್ಕೆ 1975ರಲ್ಲಿ ರಾಷ್ಟ್ರ ಪ್ರಶಸ್ತಿ ಒಲಿದುಬಂತು. ಶಬಾನಾ ಅವರಿಗೆ ಶ್ರೇಷ್ಠ ನಟಿ ಪ್ರಶಸ್ತಿಯೂ ಅದೇ ಚಿತ್ರದ ಅಭಿನಯಕ್ಕೆ ಸಂದಿತು.

ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆದ ನಂತರದ ಪ್ರತಿರೋಧದ ವಸ್ತುವುಳ್ಳ 'ನಿಶಾಂತ್' ಅವರ ನಿರ್ದೇಶನದ ಎರಡನೇ ಚಿತ್ರ. ಅದಾದ ಮೇಲೆ 'ಮಂಥನ್', 'ಭೂಮಿಕಾ' ಚಿತ್ರಗಳೂ ಬಂದವು. ರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ) ಹಾಗೂ ಎಫ್‌ಟಿಐಐನಲ್ಲಿ ಕಲಿತವರಿಗೆ ಅವರು ಸಿನಿಮಾದಲ್ಲಿ ಅವಕಾಶ ನೀಡಿದ್ದು ವಿಶೇಷ. ನಾಸಿರುದ್ದೀನ್ ಶಾ, ಓಂ ಪುರಿ, ಸ್ಮಿತಾ ಪಾಟೀಲ್, ಅಮರೀಶ್ ಪುರಿ, ಕುಲಭೂಷಣ್ ಖರಬಂಧ ಎಲ್ಲರೂ ಶ್ಯಾಮ್ ಗರಡಿಯಿಂದ ಹೊಮ್ಮಿದ ಪ್ರತಿಭೆಗಳು.

ಸಹಕಾರ ಸಂಸ್ಥೆಗಳು ಸಿನಿಮಾಗಳಿಗೆ ಬಂಡವಾಳ ತೊಡಗಿಸಿದ್ದರಿಂದ ಅವರ ಭಿನ್ನ ವಸ್ತುಗಳ ಕನಸನ್ನು ನನಸಾಗಿಸಿಕೊಳ್ಳಲು ಸಾಧ್ಯವಾಯಿತು. ಉದಾಹರಣೆಗೆ, 'ಮಂಥನ್' ಚಿತ್ರವನ್ನು ಗುಜರಾತ್ ಹಾಲು ಉತ್ಪಾದಕರ ಸಹಕಾರ ಸಂಘ ನಿರ್ಮಿಸಿತ್ತು.

ಕಿರುತೆರೆಯ ಸಾಧ್ಯತೆಯನ್ನೂ ಶ್ಯಾಮ್ ದುಡಿಸಿಕೊಂಡರು. ಭಾರತೀಯ ರೈಲ್ವೆಗಾಗಿ 'ಯಾತ್ರಾ' ಎಂಬ ಧಾರಾವಾಹಿಯನ್ನು ನಿರ್ದೇಶಿಸಿದರು. ಜವಾಹರಲಾಲ್ ನೆಹರೂ ಅವರ 'ಡಿಸ್ಕವರಿ ಆಫ್ ಇಂಡಿಯಾ' ಕೃತಿಯನ್ನು ಆಧರಿಸಿ ತಯಾರಾದ 'ಭಾರತ್ ಏಕ್ ಖೋಜ್' ಅವರಿಗೆ ದೊಡ್ಡ ಹೆಸರು ತಂದುಕೊಟ್ಟ ಟಿ.ವಿ. ಸರಣಿ.

ನ್ಯಾಷನಲ್ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಎನ್‌ಎಫ್‌ಡಿಸಿ) ನಿರ್ದೇಶಕ ಆಗಿ 1980ರಿಂದ 86ರ ಅವಧಿಯಲ್ಲಿ ಅವರು ಕೆಲಸ ಮಾಡಿದರು. ಪರ್ಯಾಯ ಚಿತ್ರಗಳಿಗೆ ನಿರ್ಮಾಪಕರೇ ದುರ್ಲಭ ಎನ್ನುವ ಸಂದರ್ಭ ಸೃಷ್ಟಿಯಾದ ನಂತರವೂ ಅವರಿಗೆ ಸಿನಿಮಾಗಳನ್ನು ಮಾಡುವ ದಾರಿ ಸಿಗಲು ಅದು ನೆರವಾಯಿತು.

ಶಶಿ ಕಪೂರ್ ತರಹದ ನಟ ಅವರ ಬೆನ್ನಿಗೆ ನಿಂತಿದ್ದರಿಂದ 'ಜುನೂನ್', 'ಕಲಿಯುಗ್' ರೀತಿಯ ಹಿಂದಿ ಸಿನಿಮಾಗಳು ಬಂದವು.

ಮೊದಲಿಗೆ ಸಿದ್ಧಸೂತ್ರಗಳನ್ನು ಬದಿಗಿಟ್ಟು ಸಹಜತೆಗೆ ಒತ್ತು ಕೊಟ್ಟು ಚಿತ್ರಗಳನ್ನು ನಿರ್ದೇಶಿಸಿದ ಅವರು, 1985ರಲ್ಲಿ ಸತ್ಯಜಿತ್ ರೇ ಅವರ ಬದುಕು–ಕಾರ್ಯಗಳನ್ನು ಕುರಿತ ಡಾಕ್ಯು ಫಿಲ್ಮ್ ಕೂಡ ಮಾಡಿದರು. 'ಸರ್ದಾರಿ ಬೇಗಂ', 'ಜುಬೇದಾ' ರೀತಿಯ ಸಿನಿಮಾಗಳನ್ನು ಮಾಡಲು ಇದೇ ನಾಂದಿ.

ಸದಾ ಸಿನಿಮಾ ಕನವರಿಕೆಯಲ್ಲೇ ಇರುತ್ತಿದ್ದ ಅವರು ಡಿಸೆಂಬರ್ 14ರಂದು ತಮ್ಮ ಹುಟ್ಟುಹಬ್ಬದ ದಿನವೂ ಎದುರಲ್ಲಿ ಇಟ್ಟುಕೊಂಡಿರುವ ಎರಡು ಸಿನಿಮಾ ಪ್ರಾಜೆಕ್ಟ್‌ಗಳ ಬಗ್ಗೆ ಮಾತನಾಡಿದ್ದರು. 'ನಾನೇನೂ ಸಾಧನೆ ಮಾಡಿಲ್ಲ' ಎಂದೂ ವಿನಮ್ರವಾಗಿ ಹೇಳಿದ್ದರು. ಆ ಸಂದರ್ಭದಲ್ಲೂ ಅವರಿಂದ ಸಿನಿಮಾ ಪಾಠಗಳನ್ನು ಕಲಿಯುತ್ತಿದ್ದವರ ತಂಡವೇ ಅವರೊಟ್ಟಿಗಿತ್ತು.

ಕೊನೆಗಾಲದವರೆಗೂ ಅವರು ಸಿನಿಮಾ ತಯಾರಿಗೆ ಸಂಬಂಧಿಸಿದ ಕಚೇರಿಯನ್ನು ನಿರ್ವಹಿಸುತ್ತಿದ್ದುದು ಈ ಮಾಧ್ಯಮದ ಮೇಲಿನ ಅವರ ಮಹತ್ವಾಕಾಂಕ್ಷೆಗೆ ಸಾಕ್ಷಿಯಾಗಿದೆ.

'ಮುಜಿಬ್: ದಿ ಮೇಕಿಂಗ್ ಆಫ್ ಎ ನೇಷನ್' (2022) ಅವರ ನಿರ್ದೇಶನದ ಕೊನೆಯ ಚಿತ್ರ. 'ಸಂವಿಧಾನ' ಕುರಿತು ಹತ್ತು ಭಾಗಗಳಲ್ಲಿ ನಿರ್ಮಿಸಿದ್ದ ಮಿನಿ ಸರಣಿಯು ಸಂವಿಧಾನ ರಚನೆಯಾದ ಪರಿಯನ್ನು ಕಟ್ಟಿಕೊಟ್ಟಿದೆ.

ಸದಾ ಮಾನವೀಯ ಸಂಬಂಧದ ತಂತುಗಳ ಹುಡುಕಾಟದಲ್ಲಿ ಇದ್ದ ಅವರ ಸೃಷ್ಟಿಕ್ರಿಯೆಗೆ ಇನ್ನೊಂದು ಉತ್ತಮ ಉದಾಹರಣೆ 'ತ್ರಿಕಾಲ್' ಸಿನಿಮಾ.

ಸದಾ ಸೃಜನಶೀಲ ಮನಸ್ಸನ್ನು ನೇವರಿಸುತ್ತಿದ್ದ ಶ್ಯಾಮ್ ಅವರಿನ್ನು ನೆನಪು. ಅವರ ಸೃಷ್ಟಿಕಾರ್ಯಗಳಂತೂ ಮತ್ತೆ ಮತ್ತೆ ಅನುರಣಿಸುತ್ತಿವೆ.

> **ಹಲವು ಗೌರವಗಳು**
> ಶ್ಯಾಮ್ ಬೆನಗಲ್ ಅವರ ಸಿನಿಮಾಗಳಿಗೆ ಬೇರೆ ಬೇರೆ ವಿಭಾಗಗಳಲ್ಲಿ ಹದಿನೆಂಟು ರಾಷ್ಟ್ರ ಪ್ರಶಸ್ತಿಗಳು ಸಂದಿವೆ. 2005ರಲ್ಲಿ ದಾದಾಸಾಹೇಬ್ ಫಾಲ್ಕೆ ಗೌರವಕ್ಕೆ ಅವರು ಭಾಜನರಾಗಿದ್ದರು. 1976ರಲ್ಲಿಯೇ ಪದ್ಮಶ್ರೀ ಪ್ರಶಸ್ತಿ ಪುರಸ್ಕಾರವೂ ಹುಡುಕಿಕೊಂಡು ಬಂದಿತ್ತು. 1991ರಲ್ಲಿ ಪದ್ಮಭೂಷಣದ ಗರಿ. ನಿರ್ದೇಶಕ ಗುರುದತ್ ಹಾಗೂ ಶ್ಯಾಮ್ ಸಂಬಂಧಿಗಳು. ಇಬ್ಬರೂ ಬೆಳ್ಳಿತೆರೆಯಲ್ಲಿ ತಮ್ಮತನದ ರುಜು ಮಾಡಿದ ಧೀಮಂತರು.

ರೈಲ್ವೆ ಹುದ್ದೆಗೆ ಕನ್ನಡಿಗರ ನಿರಾಸಕ್ತಿ ಸಚಿವ ಸೋಮಣ್ಣ ಬೇಸರ

ಪ್ರಜಾವಾಣಿ ವಾರ್ತೆ

ಮೈಸೂರು: 'ರೈಲ್ವೆ ಇಲಾಖೆಯಲ್ಲಿ ಉದ್ಯೋಗ ಪಡೆಯಲು ಕನ್ನಡಿಗರು ಆಸಕ್ತಿ ತೋರುತ್ತಿಲ್ಲ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಇಲ್ಲಿನ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಸೋಮವಾರ ರೈತ ಸಂಘಟನೆಗಳ ಒಕ್ಕೂಟ ಹಾಗೂ ರೈತ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ರೈತ ದಿನಾಚರಣೆ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ರೈಲ್ವೆ ಇಲಾಖೆಯಲ್ಲಿ 12 ಲಕ್ಷ ನೌಕರರಿದ್ದಾರೆ. ದಕ್ಷಿಣ ಭಾರತದಲ್ಲಿ ಶೇ 99ರಷ್ಟು ಉತ್ತರ ಭಾರತದ ಸಿಬ್ಬಂದಿಯೇ ಇದ್ದಾರೆ. ಕನ್ನಡಿಗರಿಗೂ ಅವಕಾಶ ದೊರಕಿಸಲೆಂದು ಈಚೆಗೆ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ಕೊಡಿಸಿದ್ದೇನೆ. ಆದರೆ, ಹೆಚ್ಚು ಮಂದಿ ಆಸಕ್ತಿ ತೋರುತ್ತಿಲ್ಲ. ನಿಮ್ಮ ಇಲಾಖೆಯದ್ದು ದಿನದ 24 ಗಂಟೆ ಕೆಲಸ, ನಮಗೆ ಬೇಡ ಎನ್ನುವವರೇ ಹೆಚ್ಚು' ಎಂದು ವಿಷಾದಿಸಿದರು.

'ಮೋದಿ ಸರ್ಕಾರದಲ್ಲಿ ರೈಲ್ವೆ ಸಚಿವನಾಗುವ ಅವಕಾಶ ನನಗೆ ಬಯಸದೇ ಬಂದ ಭಾಗ್ಯ. ನನ್ನ ಕಾಲದಲ್ಲಿ ಇಲಾಖೆಗೆ ಒಂದಿಷ್ಟು ಕನ್ನಡಿಗರು ಸೇರಿದರೆ ಅದೇ ಹೆಮ್ಮೆ. ಹೀಗಾಗಿ ರೈತರ ಮಕ್ಕಳು ರೈಲ್ವೆ ಉದ್ಯೋಗ ಪಡೆಯಲು ಆಸಕ್ತಿ ತೋರಬೇಕು' ಎಂದು ಕೋರಿದರು.

ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಸಭೆಯಲ್ಲಿ ಕೈಗೊಳ್ಳಲಾದ 21 ನಿರ್ಣಯಗಳ ಬೇಡಿಕೆಗೆ ಸ್ಪಂದಿಸಿದ ಸಚಿವರು, ಈ ಸಂಬಂಧ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಜೊತೆಗೂಡಿ ಕೃಷಿ ಸಚಿವರ ಬಳಿಗೆ ನಿಯೋಗ ಕರೆದೊಯ್ದು ಚರ್ಚಿಸುವುದಾಗಿ ಭರವಸೆ ನೀಡಿದರು.

ಗ್ರೀನ್‌ಫೀಲ್ಡ್ ಕಾರಿಡಾರ್‌ಗೆ ಕೇಂದ್ರ ಸಮ್ಮತಿ

ತುಮಕೂರು: ಹಾಸನ- ತಿಪಟೂರು- ಹುಳಿಯಾರು– ಹಿರಿಯೂರು ಹೆದ್ದಾರಿಯಲ್ಲಿ ಗ್ರೀನ್‌ಫೀಲ್ಡ್ ಕಾರಿಡಾರ್ ಯೋಜನೆ ಜಾರಿಗೆ ಕೇಂದ್ರ ಸರ್ಕಾರ ಸಮ್ಮತಿ ನೀಡಿದೆ ಎಂದು ಕೇಂದ್ರ ಜಲಶಕ್ತಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಸೋಮವಾರ ಇಲ್ಲಿ ತಿಳಿಸಿದರು.

ಈ ಯೋಜನೆ ಅಡಿ ₹4,500 ಕೋಟಿ ವೆಚ್ಚದಲ್ಲಿ 114 ಕಿ.ಮೀ ರಸ್ತೆ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ವಿ.ಸೋಮಣ್ಣ

ಪುಣೆ- ಬೆಂಗಳೂರು ಮಧ್ಯೆ ₹55 ಸಾವಿರ ಕೋಟಿ ವೆಚ್ಚದಲ್ಲಿ ಹೆದ್ದಾರಿ ನಿರ್ಮಿಸಲಾಗುತ್ತದೆ. ಈ ಯೋಜನೆ ಡಿಪಿಆರ್ ಹಂತದಲ್ಲಿದ್ದು ಆದಷ್ಟು ಬೇಗ ಚಾಲನೆ ನೀಡಲಾಗುವುದು. 700 ಕಿ.ಮೀ ರಸ್ತೆಯ ಪೈಕಿ 500 ಕಿ.ಮೀ ರಾಜ್ಯದಲ್ಲೇ ಹಾದು ಹೋಗುತ್ತದೆ ಎಂದು ತಿಳಿಸಿದರು.

'ಸೀಟ್ ಬ್ಲಾಕಿಂಗ್' ಪ್ರಕರಣ: ವಿವರ ಕೇಳಿದ ಇ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ನಡೆದಿರುವ 'ಸೀಟ್ ಬ್ಲಾಕಿಂಗ್' ಪ್ರಕರಣ ಕುರಿತು ಜಾರಿ ನಿರ್ದೇಶನಾಲಯ ಮಾಹಿತಿ ಕಲೆಹಾಕುತ್ತಿದೆ.

2024–25ನೇ ಸಾಲಿನ ಪ್ರವೇಶದ ವೇಳೆ ಲಭ್ಯವಿದ್ದ ವಿವಿಧ ಕೋರ್ಸ್‌ಗಳ ಸೀಟುಗಳು, ಕಾಲೇಜುಗಳ ವಿವರ, ಹಂಚಿಕೆಯಾದ ಸೀಟುಗಳು, ವಿದ್ಯಾರ್ಥಿಗಳು ಹಾಗೂ ವಹಿವಾಟು ನಡೆಸಿದ ಶುಲ್ಕದ ವಿವರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಕೇಳಿದೆ.

'ಇ.ಡಿ ಅಧಿಕಾರಿಗಳು ಸೀಟ್ ಬ್ಲಾಕಿಂಗ್ ಕುರಿತು ವಿವರಗಳನ್ನು ಕೇಳಿದ್ದರು. ಪ್ರಕರಣದ ಎಫ್‌ಐಆರ್ ಪ್ರತಿ ಸೇರಿದಂತೆ ಕೆಲ ವಿವರಗಳನ್ನೂ ಒದಗಿಸಿದ್ದೇವೆ. ಪ್ರಕರಣದ ತನಿಖೆ ನಡೆಯುತ್ತಿರುವ ಕಾರಣ ಎಲ್ಲ ವಿವರಗಳನ್ನು ಒದಗಿಸಲು ಸಾಧ್ಯವಾಗದು. ಪೊಲೀಸರನ್ನು ಸಂಪರ್ಕಿಸು ವಂತೆ ಹೇಳಿದ್ದೇವೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಮಾಹಿತಿ ನೀಡಿದರು.

ಸೀಟು ಹಂಚಿಕೆಯಾಗಿದ್ದರೂ, ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯದ 2,348 ವಿದ್ಯಾರ್ಥಿಗಳಿಗೆ ಕೆಇಎ ನೋಟಿಸ್ ನೀಡಿತ್ತು. ಅಭ್ಯರ್ಥಿಗಳ ಲಾಗಿನ್, ಪಾಸ್‌ವರ್ಡ್, ಗೋಪ್ಯ ಕೀ ಅನ್ನು ಅನಧಿಕೃತವಾಗಿ ಪಡೆದುಕೊಂಡು ಅವರ ಪರವಾಗಿ ಆಯ್ಕೆ ನಮೂದಿಸಿ ಕೆಲವು ಕಾಲೇಜುಗಳಿಗೆ ಲಾಭ ಮಾಡಿಕೊಡಲಾಗಿದೆ. ಇತರೆ ಅರ್ಹ ಅಭ್ಯರ್ಥಿಗಳು ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಂಚಿಸಲಾಗಿದೆ' ಎಂಬ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿತ್ತು. ಪ್ರಕರಣದ ತನಿಖೆಯನ್ನು ಪೊಲೀಸರು ನಡೆಸುತ್ತಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಿಯು ಪರೀಕ್ಷಾ ಶುಲ್ಕ ಡಿ. 31ರವರೆಗೆ ಅವಕಾಶ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಗೆ ಹಾಜರಾಗಲು ಬಯಸುವ ವಿದ್ಯಾರ್ಥಿಗಳು ವಿಶೇಷ ದಂಡ ಶುಲ್ಕ ಪಾವತಿಸಿ, ಹೆಸರು ನೋಂದಾಯಿಸಿಕೊಳ್ಳಲು ಡಿಸೆಂಬರ್ 31ರವರೆಗೆ ಅವಕಾಶ ನೀಡಲಾಗಿದೆ.

ಮಾರ್ಚ್‌ನಿಂದ ಆರಂಭವಾಗುವ ಪರೀಕ್ಷೆ ತೆಗೆದುಕೊಳ್ಳುವ ಪುನರಾವರ್ತಿತ ಅಭ್ಯರ್ಥಿಗಳು, ಫಲಿತಾಂಶ ಉತ್ತಮಪಡಿಸಿಕೊಳ್ಳಲು ಬಯಸುವವರು ಹಾಗೂ ಖಾಸಗಿ ವಿದ್ಯಾರ್ಥಿಗಳು ಅವಕಾಶ ಪಡೆದುಕೊಳ್ಳಬಹುದು. ಇದು ಅಂತಿಮ ಅವಕಾಶ. ಮತ್ತೆ ವಿಸ್ತರಿಸುವುದಿಲ್ಲ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಹೇಳಿದೆ.

ಹಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಮಂಗಳವಾರ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ತುಂತುರು ಮಳೆಯಾಗುವ ಸಂಭವ ಇದೆ. ಉಳಿದಂತೆ ಒಣಹವೆ ಇರಲಿದೆ ಎಂದು ಹೇಳಿದೆ.

ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವು ಕಡೆಗಳಲ್ಲಿ ದಟ್ಟ ಮಂಜು ಬೀಳುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.



ಪ್ರತ್ಯೇಕ ಘಟನೆ: ವೈದ್ಯರ ನಿರ್ಲಕ್ಷ್ಯವೇ ಕಾರಣ –ಸಂಬಂಧಿಗಳ ಆರೋಪ

ಇಬ್ಬರು ಬಾಣಂತಿಯರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಂತಿಯರ ಸಾವು ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿದ್ದು, ಸೋಮವಾರ ನಗರದಲ್ಲಿ ಎರಡು ಆಸ್ಪತ್ರೆಗಳಲ್ಲಿ ಇಬ್ಬರು ಬಾಣಂತಿಯರು ಮೃತಪಟ್ಟಿದ್ದಾರೆ. ವೈದ್ಯರ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಮೃತ ಬಾಣಂತಿಯರ ಕುಟುಂಬದವರು ಆರೋಪಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಗರ್ಜೆ ಗ್ರಾಮದ ಅನುಷಾ ಬಿ.ಸಿ. (24) ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟವರು. ಅಸ್ಸಾಂನಿಂದ ಬಂದು ಪೀಣ್ಯಾದಲ್ಲಿರುವ ಮಿನತಿ ತಾಲೂಕ್‌ದಾರ್ ಮಂಡಲ್ (27) ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟವರು.

ಅನುಷಾ ಬಿ.ಸಿ.

ಮಿನತಿ

ಅನುಷಾ ಪ್ರಕರಣ: ತರೀಕೆರೆಯ ರಾಜ್ ನರ್ಸಿಂಗ್ ಹೋಂನಲ್ಲಿ ಅನುಷಾ ಅವರಿಗೆ ಎರಡು ತಿಂಗಳ ಹಿಂದೆ ಸಹಜ ಹೆರಿಗೆಯಾಗಿತ್ತು. ಗಂಡು ಮಗುವಿಗೆ ಜನ್ಮ ನೀಡಿದ್ದರು. ಹೆರಿಗೆ ಪೂರ್ವ ಸ್ಕ್ಯಾನಿಂಗ್ ವರದಿಯಲ್ಲಿ ಕಿಬ್ಬೊಟ್ಟೆಯಲ್ಲಿ ಕಲ್ಲಿದೆ ಎಂದು ಕಂಡುಬಂದಿದ್ದರಿಂದ, ಹೆರಿಗೆಯಾಗಿ ಕೆಲವು ದಿನಗಳ ಬಳಿಕ ಶಿವಮೊಗ್ಗದಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಅಲ್ಲಿ ವೈದ್ಯರು ಯಡವಟ್ಟು ಮಾಡಿದ್ದರಿಂದ ಕರುಳಿಗೆ ಹಾನಿಯಾಗಿತ್ತು. ಅದನ್ನು ವೈದ್ಯರು ಮುಚ್ಚಿಟ್ಟಿದ್ದರು. ಆಸ್ಪತ್ರೆಯಿಂದ ಮನೆಗೆ ಹೋದಾಗ ಕೈ, ಕಾಲುಗಳು ಊತ ಬಂದಿದ್ದವು ಎಂದು ಅನುಷಾ ಕುಟುಂಬದವರು ಆರೋಪಿಸಿದರು.

ಮತ್ತೆ ಸ್ಥಳೀಯ ವೈದ್ಯರಿಗೆ ತೋರಿಸಿದಾಗ ಕಾಮಾಲೆ ರೋಗ ಇದೆ ಎಂದು ತಿಳಿಸಿ ಬೆಂಗಳೂರಿಗೆ ಹೋಗುವಂತೆ ಸಲಹೆ ನೀಡಿದ್ದರು. ಅದರಂತೆ ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮತ್ತೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ನಂತರ ಎಚ್ಚರಗೊಳ್ಳಲೇ ಇಲ್ಲ. ಅನುಷಾ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ದೂರಿದರು.

ಸ್ಪಷ್ಟನೆ: ಅನುಷಾ ಅವರು 2019 ರಿಂದ ದೀರ್ಘಕಾಲದ ಪ್ಯಾಂಕ್ರಿಯಾಟೈಟಿಸ್ ಸೇರಿದಂತೆ ಸಂಕೀರ್ಣ ಸಮಸ್ಯೆಯ ವೈದ್ಯಕೀಯ ಇತಿಹಾಸವನ್ನು ಹೊಂದಿದ್ದರು. ಎರಡು ತಿಂಗಳ ಹಿಂದೆ ಹೆರಿಗೆಯಾಗಿತ್ತು. ಆನಂತರ ಶಿವಮೊಗ್ಗದಲ್ಲಿ ಇನ್ನೊಂದು ಆಸ್ಪತ್ರೆಯಲ್ಲಿ ನ.30ರಂದು ಲ್ಯಾಪ್ರೊಸ್ಕೋಪಿಕ್ ಕೊಲೆಸಿಸ್ಟೆಕ್ಟಮಿ ಚಿಕಿತ್ಸೆಗೆ ಒಳಗಾಗಿದ್ದರು. ಬಳಿಕ ಕಿಬ್ಬೊಟ್ಟೆ ಸಮಸ್ಯೆಯಿಂದ ಗಂಭೀರ ಸ್ಥಿತಿಗೆ ತಲುಪಿದ್ದು ನ. 18ರಂದು ಫೋರ್ಟಿಸ್ ಆಸ್ಪತ್ರೆಗೆ ದಾಖಲಾಗಿದ್ದರು ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಪೆರಿಆಪರೇಟಿವ್ ಕಾರ್ಡಿಯೊಮಿಯೊಪತಿ, ಪಿತ್ತರಸ ಸೆಪ್ಸಿಸ್, ಯಕೃತ್ತಿನ ಕಾರ್ಯದ ಸಮಸ್ಯೆ, ಕಿಬ್ಬೊಟ್ಟೆ ಹಿಗ್ಗುವಿಕೆ, ಪೆರಿಟೋನಿಟಿಸ್, ಅಸ್ಸೈಟ್ಸ್ ಮತ್ತು ಪ್ಲೆರಲ್ ಎಫ್ಯೂಷನ್ ಸಹಿತ ವಿವಿಧ ಆರೋಗ್ಯ ಸಮಸ್ಯೆಗಳಿರುವುದು ಪತ್ತೆಯಾಗಿತ್ತು. ಸುಧಾರಿತ ಐಸಿಯು, ವೆಂಟಿಲೇಟರ್ ಬೆಂಬಲದೊಂದಿಗೆ ಶಸ್ತ್ರಚಿಕಿತ್ಸೆ ಮಾಡಿದರೂ ಬಹು ಅಂಗಾಂಗಗಳ ವೈಫಲ್ಯದಿಂದ ಹೃದಯ ಸ್ತಂಭನವಾಗಿದೆ. ಚಿಕಿತ್ಸೆಯಲ್ಲಿ ವೈದ್ಯರಿಂದ ಲೋಪವಾಗಿಲ್ಲ ಎಂದು ಆಸ್ಪತ್ರೆಯ ವೈದ್ಯರು ಸ್ಪಷ್ಟನೆ ನೀಡಿದ್ದಾರೆ.

ಮಿನತಿ ಪ್ರಕರಣ: ಮಿನತಿ ಮಂಡಲ್ ಅವರನ್ನು ಎರಡನೇ ಹೆರಿಗೆಗಾಗಿ ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಭಾನುವಾರ ಮಧ್ಯಾಹ್ನ ಸಹಜ ಹೆರಿಗೆಯಾಗಿತ್ತು. ಅವರಿಗೆ ವಿಪರೀತ ರಕ್ತಸ್ರಾವ ಆರಂಭವಾಗಿತ್ತು. ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಐಸಿಯು ಹಾಸಿಗೆ ಖಾಲಿ ಇಲ್ಲದ ಕಾರಣ ವಾಣಿ ವಿಲಾಸ ಆಸ್ಪತ್ರೆಗೆ ವೈದ್ಯರು ಕಳುಹಿಸಿದ್ದರು. ವಾಣಿ ವಿಲಾಸ ಆಸ್ಪತ್ರೆಯಲ್ಲಿ ಸೋಮವಾರ ಮೃತಪಟ್ಟಿದ್ದಾರೆ. ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡೋಣ ಎಂದು ಮೊದಲು ಹೇಳಿದ್ದ ವೈದ್ಯರು. ಆಮೇಲೆ ತಾಯಿಗೆ ತೊಂದರೆ ಇರುವುದರಿಂದ ಬೇಡ ಅಂದ್ರು. ಸಹಜ ಹೆರಿಗೆ ಆದರೂ ವೈದ್ಯರ ನಿರ್ಲಕ್ಷ್ಯದಿಂದ ಸಾವು ಉಂಟಾಗಿದೆ ಎಂದು ಮಿನತಿ ಗಂಡ, ಲಿಫ್ಟ್ ಅಳವಡಿಕೆ ಕಾರ್ಮಿಕರಾಗಿರುವ ವಿಕ್ರಂ ಸರ್ಕಾರ್ ಆರೋಪಿಸಿದ್ದಾರೆ.

'ಆಮ್ನಿಯೋಟಿಕ್ ಫ್ಲ್ಯೂಯಿಡ್ ಎಂಬಾಲಿಸಮ್ (ರಕ್ತಕ್ಕೆ ನೀರು ಸೇರಿ ಸ್ರಾವ ಉಂಟಾಗುವುದು) ಸಮಸ್ಯೆ ಉಂಟಾಗಿದ್ದರಿಂದ ಕೆ.ಸಿ. ಜನರಲ್ ಆಸ್ಪತ್ರೆಯಿಂದ ವಾಣಿ ವಿಲಾಸ ಆಸ್ಪತ್ರೆಗೆ ಕಳುಹಿಸಿಕೊಡಲಾಗಿತ್ತು. ಮೊದಲೇ ರಕ್ತ ಹೀನತೆಯಿಂದ ಬಳಲುತ್ತಿದ್ದ ಅವರಿಗೆ ಚಿಕಿತ್ಸೆ ನೀಡಿದರೂ ಫಲಕಾರಿಯಾಗಲಿಲ್ಲ. ವೈದ್ಯರಿಂದ ಲೋಪವಾಗಿಲ್ಲ' ಎಂದು ವಾಣಿ ವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ತಿಳಿಸಿದ್ದಾರೆ.

'ಭಾರತದ ಅರಣ್ಯ ಸ್ಥಿತಿಗತಿ- 2023' ವರದಿಗೆ ಆಕ್ಷೇಪ

ಅರಣ್ಯ ಪ್ರದೇಶ ಹೆಚ್ಚಳ 'ಉತ್ಪ್ರೇಕ್ಷಿತ'

ನವದೆಹಲಿ (ಪಿಟಿಐ): ಭಾರತದಲ್ಲಿರುವ ಒಟ್ಟು ಅರಣ್ಯ ಪ್ರದೇಶ ಹಾಗೂ ಹಸಿರು ಹೊದಿಕೆಯ ವಿಸ್ತೀರ್ಣವು 2021ರಿಂದ ಈಚೆಗೆ ಸುಮಾರು 1,445 ಚದರ ಕಿ.ಮೀನಷ್ಟು ಹೆಚ್ಚಾಗಿದೆ ಎಂದು ಇತ್ತೀಚೆಗೆ ಕೇಂದ್ರ ಸರ್ಕಾರವು ವರದಿ ಬಿಡುಗಡೆ ಮಾಡಿತ್ತು. ಈ ವರದಿಯನ್ನು ಪರಿಸರ ಕಾರ್ಯಕರ್ತರು ತೀವ್ರವಾಗಿ ವಿರೋಧಿಸಿದ್ದಾರೆ. ಕೇಂದ್ರ ಸರ್ಕಾರವು 'ಉತ್ಪ್ರೇಕ್ಷಿತ' ಸಂಖ್ಯೆಗಳನ್ನು ನೀಡಿದೆ ಎಂದು ಆರೋಪಿಸಿದ್ದಾರೆ.

'ಭಾರತದ ಅರಣ್ಯ ಸ್ಥಿತಿಗತಿ– 2023' ವರದಿಯನ್ನು ಇತ್ತೀಚೆಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿತ್ತು.

'ಬಿದಿರು ಮೆಳೆಗಳು, ತೆಂಗಿನ ತೋಟ ಮತ್ತು ಇತರ ತೋಟಗಳನ್ನು ಅರಣ್ಯ ಪ್ರದೇಶವೆಂದು ಸೇರಿಸಲಾಗಿದೆ. ವಾಸ್ತವದಲ್ಲಿ 156 ಚದರ ಕಿ.ಮೀನಷ್ಟೇ ಅರಣ್ಯ ಪ್ರದೇಶವು ಹೆಚ್ಚಳವಾಗಿದೆ. ಇದರಲ್ಲಿ ಸುಮಾರು 149 ಚದರ ಕಿ.ಮೀನಷ್ಟು ಪ್ರದೇಶವು ಸರ್ಕಾರವು ಗೊತ್ತು ಮಾಡಿದ ಅಧಿಕೃತ ಅರಣ್ಯ ಪ್ರದೇಶದ (ಆರ್‌ಎಫ್‌ಎ) ಹೊರಗೆ ಹೆಚ್ಚಳವಾಗಿದೆ' ಎಂದಿದ್ದಾರೆ.

'ಉತ್ಪ್ರೇಕ್ಷಿತ ಸಂಖ್ಯೆಗಳಿರುವ ಮತ್ತೊಂದು ಸುಳ್ಳಿನ ವರದಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ' ಎಂದು ಕೇರಳದ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಪ್ರಕೃತಿ ಶ್ರೀವಾಸ್ತವ, ಪರಿಸರ ರಕ್ಷಣೆ ಸಂಶೋಧಕಿ ಕೃತಿಕಾ ಸಂಪತ್ ಹಾಗೂ ವನ್ಯಜೀವಿ ರಾಷ್ಟ್ರೀಯ ಮಂಡಳಿಯ ಮಾಜಿ ಸದಸ್ಯೆ ಪ್ರೇರಣಾ ಸಿಂಗ್ ಬಿಂದ್ರಾ ಅವರು ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಹಸಿರು ಹೊದಿಕೆಯು ಅಧಿಕವಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಇದಕ್ಕೆ ಮುಖ್ಯ ಕಾರಣ, ರಬ್ಬರ್, ನೀಲಗಿರಿ, ಅಕೇಷಿಯಾ, ಮಾವಿನ ತೋಪು, ಅಡಿಕೆ ಮತ್ತು ತೆಂಗಿನ ಮರಗಳು, ಕಾಫಿ ಹಾಗೂ ಟೀ ಪ್ಲ್ಯಾಂಟೇಷನ್‌ಗಳಲ್ಲಿ ನೆರಳಿಗಾಗಿಯೇ ನೆಡುವ ಮರಗಳ ಕಾರಣದಿಂದಲೂ ಹಸಿರು ಹೊದಿಕೆ ಏರಿಕೆಯಾಗಿದೆ' ಎಂದು ತಿಳಿಸಿದ್ದಾರೆ.

ಆಕ್ಷೇಪಗಳೇನು?

- ಅರಣ್ಯ ಪ್ರದೇಶವನ್ನು ಗುರುತಿಸಿದ ನಕ್ಷೆಯನ್ನು ಡಿಜಿಟಲೀಕರಣ ಮಾಡಬೇಕು, ಅಧಿಸೂಚಿತ ಅರಣ್ಯ ಪ್ರದೇಶದ ಜಿಐಎಸ್ ಮ್ಯಾಪಿಂಗ್ ಮಾಡಬೇಕು ಮತ್ತು ಅರಣ್ಯ ಪ್ರದೇಶಗಳನ್ನು ಇತರ ಉದ್ದೇಶಗಳಿಗೆ ನೀಡಿರುವುದನ್ನು ದಾಖಲು ಮಾಡಬೇಕೆಂದು ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ವರದಿಯಲ್ಲಿ ಈ ಅಂಶಗಳೇ ಇಲ್ಲವಾಗಿದೆ. ಇದರಿಂದ ಈ ವರದಿಯ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸುವಂತಾಗಿದೆ
- 2021ರಿಂದ 2023ರ ಮಧ್ಯೆ 1,488 ಚದರ ಕಿ.ಮೀ ವಿಸ್ತೀರ್ಣದ ಸರ್ಕಾರಿ ಪ್ರದೇಶದಲ್ಲಿರುವ ಅಧಿಸೂಚಿತ ಕಾಡುಗಳು ನಾಶವಾಗಿವೆ ಎಂದು ವರದಿಯಲ್ಲಿ ಹೇಳಲಾಗಿದೆ. ಆದರೆ, ಕಾರಣವನ್ನು ಮಾತ್ರ ವಿವರಿಸಿಲ್ಲ
- ಅಣೆಕಟ್ಟು, ರಸ್ತೆ ನಿರ್ಮಾಣ ಹಾಗೂ ರೈಲ್ವೆ ಇಲಾಖೆಗೆ ಅರಣ್ಯ ಪ್ರದೇಶವನ್ನು ನೀಡಿದರೆ ಅದು ಶಾಶ್ವತವಾಗಿ ನಾಶವಾಗುವ ಅರಣ್ಯವಾಗುತ್ತದೆ. ಈ ವರದಿಯಲ್ಲಿ ಇಂಥ ಅರಣ್ಯ ಪ್ರದೇಶವನ್ನು ಕೈಬಿಡದೇ, ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣದೊಂದಿಗೆ ಸೇರಿಸಲಾಗಿದೆ

'ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿಯೇ ಮುಖ್ಯ ಕಾರಣ'

'30,808 ಚದರ ಕಿ.ಮೀನಷ್ಟು ಬಯಲು ಹಾಗೂ ಕುರುಚಲು ಅರಣ್ಯ, 14,073 ಚದರ ಕಿ.ಮೀ ಅರಣ್ಯ ಪ್ರದೇಶ, 1,816 ಚದರ ಕಿ.ಮೀ ದಟ್ಟ ಅರಣ್ಯ ಪ್ರದೇಶವು 'ಅರಣ್ಯೇತರ ಚಟುವಟಿಕೆ'ಗಳಿಗೆ ನೀಡಿದ್ದಕ್ಕಾಗಿ ನಾಶವಾಗಿವೆ' ಎಂದು 'ವಿಧಿ ಸೆಂಟರ್ ಫಾರ್ ಲೀಗಲ್ ಪಾಲಿಸಿ' ಸಂಘಟನೆಯ ದೆಬಾದಿತ್ಯೊ ಸಿನ್ಹಾ ಹೇಳಿದ್ದಾರೆ.

'40 ಕೋಟಿ ಟನ್ ಇಂಗಾಲ ಹೀರಿಕೊಳ್ಳುವ ಸಾಮರ್ಥ್ಯವು ಕಡಿಮೆಯಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಆದರೆ, ಅರಣ್ಯೇತರ ಚಟುವಟಿಕೆಗಾಗಿ ಅರಣ್ಯ ಪ್ರದೇಶ ನೀಡಿದ್ದರಿಂದಾಗಿಯೇ ಇಂಗಾಲ ಹೀರಿಕೊಳ್ಳುವ ಸಾಮರ್ಥ್ಯ ಕಡಿಮೆಯಾಗಿದೆ ಎಂದು ಹೇಳಿಲ್ಲ' ಎಂದು ಆರೋಪಿಸಿದರು.

'ನನಗೆ ಗೊತ್ತಿರುವ ಹಾಗೆ ಈ ಎಲ್ಲ ಪ್ರದೇಶಗಳನ್ನು ಭಾರತದ ಮಹತ್ವಾಕಾಂಶಿ ಯೋಜನೆಗಳಿಗಾಗಿ, ಅಂದರೆ ಗಣಿ, ಹೆದ್ದಾರಿ ನಿರ್ಮಾಣ ಸೇರಿದಂತೆ ಹಲವು ಕಾರಣಗಳಿಗಾಗಿ ನೀಡಿದ್ದಕ್ಕಾಗಿ ನಾಶವಾಗಿವೆ. ಕೇಂದ್ರ ಸರ್ಕಾರವು ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ತಂದಿದ್ದರಿಂದಲೇ ಇದು ಸಾಧ್ಯವಾಗಿದೆ' ಎಂದಿದ್ದಾರೆ.



ನಾಲ್ಕು ವರ್ಷಗಳಲ್ಲಿ ರಕ್ಷಣೆ ಕೋರಿ ಬಂದ ಪ್ರಕರಣಗಳ ಸಂಖ್ಯೆಯೇ ಅಧಿಕ • ಪರಿಹಾರ ಕಲ್ಪಿಸಲು ಆದ್ಯತೆ

ಮಹಿಳಾ ದೌರ್ಜನ್ಯ: 8,569 ಪ್ರಕರಣ ದಾಖಲು

• ಖಲೀಲಅಹ್ಮದ ಶೇಖ

ಬೆಂಗಳೂರು: ಮಹಿಳೆಯರ ರಕ್ಷಣೆಗೆ ಹಲವಾರು ಕಾನೂನು ಮತ್ತು ಕಾಯ್ದೆಗಳಿದ್ದರೂ ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿವೆ. ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ನಿತ್ಯ ಇಂತಹ ನೂರಾರು ದೂರುಗಳು ಬರುತ್ತಿವೆ. ಕಳೆದ ನಾಲ್ಕು ವರ್ಷಗಳಲ್ಲಿ 8,569 ಮಹಿಳಾ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ.

2021 ರಿಂದ 2024ರ ನವೆಂಬರ್ ಅವಧಿಯಲ್ಲಿ ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಲೈಂಗಿಕ ಕಿರುಕುಳ, ಪ್ರೇಮ ಪ್ರಕರಣ, ಜೀವನಾಂಶ, ಪೊಲೀಸ್ ದೌರ್ಜನ್ಯ, ವಿವಾಹ ವಿಚ್ಛೇದನ ಸೇರಿ ಎಂಟು ಸಾವಿರಕ್ಕೂ ಹೆಚ್ಚು ಮಹಿಳಾ ದೌರ್ಜನ್ಯ ಪ್ರಕರಣಗಳು ಬಂದಿವೆ. ಇದರಲ್ಲಿ ರಕ್ಷಣೆ ಕೋರಿ ಬಂದ ಪ್ರಕರಣಗಳ ಸಂಖ್ಯೆಯೇ ಅಧಿಕ.

ಡಾ. ನಾಗಲಕ್ಷ್ಮಿ ಚೌಧರಿ

'ಅತ್ತೆ ಮಾವ, ಮಹಿಳೆಯರನ್ನು ಹಿಂಸಿಸುವುದು, ಪ್ರೇಮ ಪ್ರಕರಣಗಳಲ್ಲಿ ಬೆದರಿಕೆ ಹಾಕುವುದು ಸೇರಿ ನಾಲ್ಕು ವರ್ಷಗಳಲ್ಲಿ ರಕ್ಷಣೆ ಒದಗಿಸುವಂತೆ ಮಹಿಳಾ ಆಯೋಗಕ್ಕೆ 2,494 ಪ್ರಕರಣಗಳು ದಾಖಲಾಗಿವೆ. ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ 1,707 ಹಾಗೂ ವರದಕ್ಷಿಣೆ ಕಿರುಕುಳ ನೀಡಿದ 455 ಪ್ರಕರಣಗಳು ಸೇರಿವೆ. ಸಂತ್ರಸ್ತ ಮಹಿಳೆಯರಿಗೆ ಆಯೋಗದ ಮೂಲಕ ಪೊಲೀಸ್ ಇಲಾಖೆಯ ಸಹಕಾರದ ಮೂಲಕ ರಕ್ಷಣೆ ಒದಗಿಸುವುದರ ಜೊತೆಗೆ ಅವರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುತ್ತಿದೆ' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳನ್ನು ನಿಯಂತ್ರಿಸಲು ಸಂತ್ರಸ್ತ ಮಹಿಳೆಯರಿಗೆ ಕೌನ್ಸೆಲಿಂಗ್ ಮಾಡುತ್ತಿದ್ದೇವೆ. ಕೌಟುಂಬಿಕ ಸಮಸ್ಯೆಗಳಿಗೆ ಕೌನ್ಸೆಲಿಂಗ್ ಸಂದರ್ಭದಲ್ಲಿ ಪರಿಹಾರ ಸಿಗುತ್ತದೆ. ಕೆಲ ಪ್ರಕರಣಗಳಲ್ಲಿ ಗಂಡ ತನ್ನ ಹೆಂಡತಿಯ ಮೇಲೆ ದೈಹಿಕವಾಗಿ ಹಲ್ಲೆ ಮಾಡಿರುತ್ತಾನೆ. ಅಂತಹ ಪ್ರಕರಣಗಳನ್ನು ಇಲಾಖೆಯ ನೆರವಿನೊಂದಿಗೆ, ಆಯಾ ಜಿಲ್ಲೆಯ ಎಸ್‌ಪಿಗಳ ಮೂಲಕ ಸ್ಥಳೀಯ ಪೊಲೀಸರ ನೇತೃತ್ವದಲ್ಲಿ ತನಿಖೆ ನಡೆಸಿ ವರದಿ ಪಡೆದುಕೊಂಡು ಪ್ರಕರಣ ಇತ್ಯರ್ಥಗೊಳಿಸಲಾಗುತ್ತದೆ' ಎಂದು ವಿವರಿಸಿದರು.

'ಅತ್ಯಾಚಾರದಂತಹ ಪ್ರಕರಣಗಳು ನಡೆದಾಗ ಸಂತ್ರಸ್ತೆಯೊಂದಿಗೆ ಯಾವ ರೀತಿ ವರ್ತಿಸಬೇಕು ಎಂಬ ಬಗ್ಗೆ ಕೆಳಹಂತದ ಪೊಲೀಸರಿಗೆ ಅರಿವು ಇರುವುದಿಲ್ಲ. ಆ ಪ್ರಕರಣದ ಸೂಕ್ಷ್ಮತೆ ಮತ್ತು ಅದರ ಕಾಯ್ದೆ-ಕಾನೂನುಗಳ ಬಗ್ಗೆಯೂ ಸರಿಯಾದ ತಿಳಿವಳಿಕೆ ಇರುವುದಿಲ್ಲ. ಸಂತ್ರಸ್ತೆಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಮಾಹಿತಿ ನೀಡಬೇಕು. ಆದರೆ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಈ ವಾತಾವರಣ ಇಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ವರ್ಷ	ಪ್ರಕರಣಗಳ ಸಂಖ್ಯೆ	ಬಾಕಿ
2021-22	2,200	-
2022-23	2,358	-
2023-24	2,179	25
2024-25 (ನವೆಂಬರ್)	1,832	279
ಒಟ್ಟು	8,569	304

'ಪೊಲೀಸರ ದೌರ್ಜನ್ಯ: 198 ಪ್ರಕರಣಗಳು ದಾಖಲು'

'ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಪೊಲೀಸರು ಸಂತ್ರಸ್ತ ಮಹಿಳೆಯರಿಗೆ ಸರಿಯಾಗಿ ಸ್ಪಂದಿಸುವುದಿಲ್ಲ. ನಾಲ್ಕು ವರ್ಷಗಳಲ್ಲಿ ಪೊಲೀಸರ ದೌರ್ಜನ್ಯದ ವಿರುದ್ಧ 198 ಪ್ರಕರಣಗಳು ದಾಖಲಾಗಿದ್ದು, ಇವುಗಳಲ್ಲಿ 177 ಪ್ರಕರಣಗಳು ಇತ್ಯರ್ಥಪಡಿಸಲಾಗಿದೆ. 21 ಪ್ರಕರಣಗಳು ಬಾಕಿ ಇವೆ' ಎಂದು ಡಾ. ನಾಗಲಕ್ಷ್ಮಿ ಚೌಧರಿ ಮಾಹಿತಿ ನೀಡಿದರು.

'ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಮಹಿಳಾಪರ ವಾತಾವರಣ ನಿರ್ಮಿಸಲು ಹಿರಿಯ ಪೊಲೀಸ್ ಅಧಿಕಾರಿಗಳು, ನಿವೃತ್ತ ನ್ಯಾಯಮೂರ್ತಿಗಳು, ಕಾನೂನು ತಜ್ಞರ ಸಮಿತಿ ರಚಿಸಿ, ಅವರು ನೀಡುವ ಸಲಹೆಗಳನ್ನು ಜಾರಿಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು' ಎಂದರು.

ಸುದ್ದಿ 2 ನಿಮಿಷ

ಜ.14ರಿಂದ 'ಪಂಚಮಸಾಲಿ ಪ್ರತಿಜ್ಞಾ ಕ್ರಾಂತಿ ಅಭಿಯಾನ'

ಬೆಳಗಾವಿ: 'ಪಂಚಮಸಾಲಿಗರಿಗೆ 2ಎ ಮೀಸಲಾತಿ ಹೋರಾಟ ಇನ್ನಷ್ಟು ಗಟ್ಟಿಗೊಳಿಸಲು ಹಾಗೂ ರಾಜ್ಯ ಸರ್ಕಾರದ ದೌರ್ಜನ್ಯ ಖಂಡಿಸಿ ರಾಜ್ಯದ ಪ್ರತಿ ಗ್ರಾಮದಲ್ಲಿ 'ಪಂಚಮಸಾಲಿ ಪ್ರತಿಜ್ಞಾ ಕ್ರಾಂತಿ ಅಭಿಯಾನ' ಹಮ್ಮಿಕೊಳ್ಳಲಾಗುವುದು. ಜ.14ರಂದು ಕೂಡಲ ಸಂಗಮದಿಂದ ಆರಂಭಿಸಲಾಗುವುದು' ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ಪ್ರತಿ ಗ್ರಾಮಕ್ಕೂ ಭೇಟಿ ನೀಡಿ ಸಂವಾದ ಮಾಡಿ, ಜಾಗೃತಿ ಮೂಡಿಸಲಾಗುವುದು. ತಾಲ್ಲೂಕು ಕೇಂದ್ರಗಳಲ್ಲೂ ಸಭೆ ನಡೆಸಿ ಸಲಹೆ ಸೂಚನೆಗಳನ್ನು ಕ್ರೋಢೀಕರಿಸಿ ಮುಂದಿನ ಹೋರಾಟ ನಿರ್ಧರಿಸಲಾಗುವುದು' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಲಾಠಿಚಾರ್ಜ್‌ನಲ್ಲಿ ಗಾಯಗೊಂಡವರ ಮನೆಗೆ ಭೇಟಿ ನೀಡಿ 'ಬಸವ ರಕ್ಷಾ' ಪತ್ರ ಕೊಟ್ಟು ಧೈರ್ಯ ತುಂಬುತ್ತಿದ್ದೇನೆ. 'ರಕ್ತ ಚೆಲ್ಲಿದ್ದೀರಿ ಮೀಸಲಾತಿ ಪಡೆಯೋಣ' ಎಂಬ ಘೋಷ ವಾಕ್ಯದೊಂದಿಗೆ ನಮ್ಮ ಹೋರಾಟ ಆರಂಭವಾಗಲಿದೆ. ಮೀಸಲಾತಿ ಕೊಡುವುದು ಅಸಾಂವಿಧಾನಿಕ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ, ಅವರ ಹೇಳಿಕೆಯೇ ಅಸಾಂವಿಧಾನಿಕ' ಎಂದು ಸ್ವಾಮೀಜಿ ಹರಿಹಾಯ್ದರು.

'ಲಾಠಿಚಾರ್ಜ್ ಮಾಡಿದ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಲು ವಿಳಂಬವೇಕೆ?. ಆದರೆ, ಅವರಿಗೆ ₹10 ಸಾವಿರ ಬಹುಮಾನ ನೀಡಿ ಪ್ರಚೋದನೆ ನೀಡುತ್ತಿದ್ದಾರೆ' ಎಂದು ಆರೋಪಿಸಿದರು.

'ಪಂಚಮಸಾಲಿ ವಕೀಲರ ಪರಿಷತ್ ಮೂಲಕ ಲಾಠಿಚಾರ್ಜ್ ಬಗ್ಗೆ ಹೈಕೋರ್ಟ್ ಮೆಟ್ಟಿಲೇರಿದ್ದೇವೆ. ರಾಜ್ಯ ಗೃಹ ಇಲಾಖೆಯನ್ನೇ ಹೈಕೋರ್ಟ್ ಪ್ರತಿವಾದಿ ಮಾಡಿ, ಸ್ವತ್ತೀಕರಣ ಕೇಳಿದೆ' ಎಂದರು.

ಅಕ್ರಮ ಮದ್ಯ ಮಾರಾಟ ಪ್ರಶ್ನಿಸಿದ್ದಕ್ಕೆ ವ್ಯಕ್ತಿ ಕೊಲೆ

ಕೆರೂರ (ಬಾಗಲಕೋಟೆ ಜಿಲ್ಲೆ): ಸಮೀಪದ ರಡ್ಡೇರ ತಿಮ್ಮಾಪುರ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಪ್ರಶ್ನಿಸಿದ್ದಕ್ಕೆ ವೆಂಕಟರಡ್ಡಿ ಫಕೀರಡ್ಡಿ ಶೇಷಪನ್ನವರ (36) ಎಂಬುವವರನ್ನು ಸೋಮವಾರ ಕೊಲೆ ಮಾಡಲಾಗಿದೆ.

ಘಟನೆಗೆ ಸಂಬಂಧಿಸಿ ಎಂಟು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಐವರು ಆರೋಪಿಗಳನ್ನು ಬಂಧಿಸಲಾಗಿದ್ದು ಇನ್ನುಳಿದ ಮೂವರು ಆರೋಪಿಗಳಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

'ಆರೋಪಿಗಳಾದ ಹನಮಂತ ನಿಲಾರ ಹಾಗೂ ಆತನ ಪತ್ನಿ ಸೇರಿಕೊಂಡು ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಿ, ಖಾಲಿ ಬಾಟಲಿ ಮತ್ತು ಸಾರಾಯಿ ಪ್ಯಾಕೆಟ್‌ಗಳನ್ನು ವೆಂಕಟರೆಡ್ಡಿ ಮನೆ ಮುಂದೆ ಹಾಕುತ್ತಿದ್ದರು. ಅದನ್ನು ಆಕ್ಷೇಪಿಸುತ್ತಿದ್ದುದಕ್ಕೆ ದ್ವೇಷ ಸಾಧಿಸಿ ಎಂಟು ಜನರು ಸೇರಿಕೊಂಡು ಆತನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಕೈಗಾರಿಕಾ ವಲಯ: ₹9,823 ಕೋಟಿ ಹೂಡಿಕೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕೈಗಾರಿಕಾ ವಲಯಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಸಲ್ಲಿಸಿದ್ದ ₹9,823 ಕೋಟಿ ಮೊತ್ತದ ಒಂಬತ್ತು ಪ್ರಸ್ತಾವಗಳಿಗೆ ಮುಖ್ಯಮಂತ್ರಿ ಅಧ್ಯಕ್ಷತೆಯ 'ರಾಜ್ಯ ಉನ್ನತ ಮಟ್ಟದ 64ನೇ ಒಪ್ಪಿಗೆ ನೀಡಿಕೆ ಸಭೆ' ಸೋಮವಾರ ಸಮ್ಮತಿ ನೀಡಿತು.

ಸಭೆಯ ನಂತರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಪ್ರಸ್ತಾವಗಳಲ್ಲಿ ಮೂರು ಹೊಸ ವಲಯಗಳು, ವಿಸ್ತರಣಾ ಬಂಡವಾಳ ಹೂಡಿಕೆ ಹಾಗೂ ಆರು ಹೆಚ್ಚುವರಿ ಬಂಡವಾಳ ಹೂಡಿಕೆ ಸೇರಿವೆ. ಕೋಚನಹಳ್ಳಿಯ ಎಲೆಕ್ಟ್ರಾನಿಕ್ಸ್ ಉತ್ಪಾದನಾ ವಲಯದಲ್ಲಿ ₹3,425 ಕೋಟಿ ವೆಚ್ಚದ ಪ್ರಥಮ ಸೆಮಿಕಂಡಕ್ಟರ್ ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ನೀಡಲಾಗಿದೆ' ಎಂದರು.

ಹೊಸ ಕೈಗಾರಿಕಾ ವಲಯಗಳ ಅನುಷ್ಠಾನದಿಂದ 5,605 ಜನರಿಗೆ ಉದ್ಯೋಗ ದೊರೆಯಲಿದೆ. ಡಿ.ಎನ್. ಸಲ್ಯೂಷನ್ಸ್ ಇಂಡಿಯಾ ಸಂಸ್ಥೆಯ ₹998 ಕೋಟಿ ಬಂಡವಾಳ ಹೂಡಿಕೆಯಿಂದ 467 ಉದ್ಯೋಗ, ಸೈಲೆಕ್ಟ್ರಿಕ್ ಸೆಮಿಕಂಡಕ್ಟರ್ ಉತ್ಪಾದನಾ ಸಂಸ್ಥೆಯ ₹3,425.60 ಕೋಟಿ ಹೂಡಿಕೆಯಿಂದ 460 ಉದ್ಯೋಗ ಹಾಗೂ ಸನ್ಸೆರಾ ಎಂಜಿನಿಯರಿಂಗ್ ಲಿಮಿಟೆಡ್ ಸಂಸ್ಥೆಯ ₹2,150 ಕೋಟಿ ಹೂಡಿಕೆಯಿಂದ 3,500 ಉದ್ಯೋಗ ಸೃಷ್ಟಿಯಾಗಲಿವೆ ಎಂದರು.

ಸಕ್ಕರೆ ಕಾರ್ಖಾನೆಗಳು ಉಪ ಉತ್ಪನ್ನಗಳ ಉತ್ಪಾದನೆಯಲ್ಲಿ ರೈತರಿಗೂ ಲಾಭಾಂಶ ನೀಡುವ ಕುರಿತು ಪರಿಶೀಲನೆ ನಡೆಸಬೇಕು. ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಅನುಸರಿಸುತ್ತಿರುವ ನಿಯಮಗಳನ್ನು ಪರಿಶೀಲಿಸಬೇಕು ಎಂದು ಸೂಚಿಸಲಾಗಿದೆ. ಜಮೀನು ಪಡೆಯುವ ಕಂಪನಿಗಳು ನಿಗದಿತ ಅವಧಿಯಲ್ಲಿ ಕೈಗಾರಿಕೆಯನ್ನು ಆರಂಭಿಸದಿದ್ದರೆ ದಂಡ ವಿಧಿಸುವುದೂ ಸೇರಿದಂತೆ ಕ್ರಮ ಕೈಗೊಳ್ಳುವ ಕುರಿತು ಎಚ್ಚರಿಕೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಸಚಿವರಾದ ಎಂ.ಬಿ. ಪಾಟೀಲ, ಎನ್. ಚಲುವರಾಯಸ್ವಾಮಿ, ಪ್ರಿಯಾಂಕ್ ಖರ್ಗೆ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ ಅತೀಕ್ ಉಪಸ್ಥಿತರಿದ್ದರು.

9 ಮಂದಿ ಮಾಲಾಧಾರಿಗಳ ಸ್ಥಿತಿ ಗಂಭೀರ

ಹುಬ್ಬಳ್ಳಿ: ಈಶ್ವರ ದೇವಸ್ಥಾನದ ಅಯ್ಯಪ್ಪ ಸನ್ನಿಧಾನದಲ್ಲಿ ಸಿಲಿಂಡರ್ ಸ್ಫೋಟ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಸಾಯಿನಗರದ ಅಚ್ಚವ್ವನ ಕಾಲೊನಿಯ ಈಶ್ವರ ದೇವಸ್ಥಾನದ ಮಹಡಿಯ ಅಯ್ಯಪ್ಪ ಸನ್ನಿಧಾನದಲ್ಲಿ ಅಡುಗೆ ಅನಿಲದ ಸಿಲಿಂಡರ್ ಸ್ಫೋಟಗೊಂಡು ಒಂಬತ್ತು ಮಂದಿ ಅಯ್ಯಪ್ಪ ಮಾಲಾಧಾರಿಗಳು ಗಂಭೀರವಾಗಿ ಗಾಯಗೊಂಡಿದ್ದಾರೆ.

ಭಾನುವಾರ ತಡರಾತ್ರಿ 1.30ರ ವೇಳೆ ಘಟನೆ ನಡೆದಿದ್ದು, ಮಾಲಾಧಾರಿಗಳನ್ನೆಲ್ಲ ಕೆಎಂಸಿ–ಆರ್‌ಐಗೆ ದಾಖಲಿಸಲಾಗಿದೆ. ತುರ್ತು ಚಿಕಿತ್ಸಾ ಘಟಕದಲ್ಲಿಯೇ ಗಾಯಾಳುಗಳ ಚಿಕಿತ್ಸೆಗೆ ಪ್ರತ್ಯೇಕ ವಾರ್ಡ್ ರಚಿಸಲಾಗಿದ್ದು, ಪ್ಲಾಸ್ಟಿಕ್ ಸರ್ಜರಿ ತಜ್ಞ ಡಾ. ರವೀಂದ್ರ ಯಲಿಗಾರ ನೇತೃತ್ವದ ವೈದ್ಯರ ತಂಡ ಚಿಕಿತ್ಸೆ ನೀಡುತ್ತಿದೆ.

'ಶೇ 25ರಷ್ಟು ಸುಟ್ಟಗಾಯವಾಗಿರುವ ಹನ್ನೊಂದು ವರ್ಷದ ಬಾಲಕ ವಿನಾಯಕ ಬಾರಕೇರ್ ಹೊರತುಪಡಿಸಿ ಉಳಿದ ಎಂಟು ಮಂದಿಗೂ ಶೇ 80ರಷ್ಟು ಸುಟ್ಟಗಾಯಗಳಾಗಿವೆ. ಅವರ ಆರೋಗ್ಯದ ಮೇಲೆ ನಿರಂತರ ನಿಗಾ ಇಟ್ಟಿದ್ದು, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಹೊರ ಜಿಲ್ಲೆಗಳಿಂದಲೂ ತಜ್ಞ ವೈದ್ಯರನ್ನು ಕರೆಸಲು ಚಿಂತನೆ ನಡೆಸಲಾಗಿದೆ' ಎಂದು ಕೆಎಂಸಿ–ಆರ್‌ಐ ನಿರ್ದೇಶಕ ಎಸ್.ಎಫ್. ಕಮ್ಮಾರ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ನಡೆದದ್ದೇನು?: ಅಚ್ಚವ್ವನ ಕಾಲೊನಿಯ ಈಶ್ವರ ದೇವಸ್ಥಾನದ ಮಹಡಿಯ ಚಿಕ್ಕ ಕೊಠಡಿಯಲ್ಲಿ ಅಯ್ಯಪ್ಪನ ಸನ್ನಿಧಾನ ಮಾಡಿಕೊಂಡು 14 ಮಂದಿ ಮಾಲಾಧಾರಿಗಳು ವ್ರತಾಚರಣೆ ಮಾಡುತ್ತಿದ್ದರು. ಭಾನುವಾರ ರಾತ್ರಿ ಪೂಜೆ ಮುಗಿಸಿ, ಒಂಬತ್ತು ಮಂದಿ ಅಲ್ಲಿಯೇ ಮಲಗಿದ್ದರು. ಮಾಲಾಧಾರಿಯೊಬ್ಬರ ಕಾಲು ತಾಗಿ ಅಲ್ಲಿದ್ದ ಸಿಲಿಂಡರ್ ಉರುಳಿದೆ.

ಹುಬ್ಬಳ್ಳಿ ಸಾಯಿನಗರದ ಅಚ್ಚವ್ವನ ಕಾಲೊನಿಯ ಈಶ್ವರ ದೇವಸ್ಥಾನದ ಅಯ್ಯಪ್ಪ ಸನ್ನಿಧಾನದಲ್ಲಿ ಭಾನುವಾರ ತಡರಾತ್ರಿ ಅಡುಗೆ ಅನಿಲದ ಸಿಲಿಂಡರ್ ಸ್ಫೋಟಗೊಂಡು ಸುಟ್ಟು ಕರಕಲಾದ ಅಯ್ಯಪ್ಪಸ್ವಾಮಿ ಫೋಟೊ ಹಾಗೂ ಮಾಲಾಧಾರಿಗಳ ಬಟ್ಟೆ

ರೆಗ್ಯುಲೇಟರ್ ಸಡಿಲಗೊಂಡು ಗ್ಯಾಸ್ ಸೋರಿಕೆಯಾಗಿ ಹಚ್ಚಿದ್ದ ದೀಪಕ್ಕೆ ತಗುಲಿ ತಕ್ಷಣ ಕೊಠಡಿಯಲ್ಲಿ ಬೆಂಕಿ ಹೊತ್ತಿಕೊಂಡು ಸಿಲಿಂಡರ್ ಸ್ಫೋಟವಾಗಿದೆ. ಅದರ ತೀವ್ರತೆಗೆ ಅಲ್ಲಿದ್ದ ಸಾಮಗ್ರಿಗಳೆಲ್ಲ ಚೆಲ್ಲಾಪಿಲ್ಲಿಯಾಗಿದ್ದು, ಅಯ್ಯಪ್ಪ ಸ್ವಾಮಿ ಭಾವಚಿತ್ರ ಹಾಗೂ ಮಾಲಾಧಾರಿಗಳ ಬಟ್ಟೆಗಳೆಲ್ಲ ಸುಟ್ಟುಕರಕಲಾಗಿವೆ. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಗಾಯಾಳುಗಳನ್ನು ಕೆಎಂಸಿ–ಆರ್‌ಐಗೆ ಕರೆತಂದಾಗ ಕರ್ತವ್ಯದಲ್ಲಿದ್ದ ಸಿಎಂಒ ಸರಿಯಾಗಿ ಸ್ಪಂದಿಸಿಲ್ಲ. ಸುಟ್ಟಗಾಯಕ್ಕೆ ಹಚ್ಚುವ ಬರ್ನಾಲ್ ನಮ್ಮ ಬಳಿಯಿಲ್ಲ, ಹೊರಗಡೆಯಿಂದ ತರುವಂತೆ ಸೂಚಿಸಿ ಚೀಟಿ ಬರೆದು-ಕೊಟ್ಟಿದ್ದರು. ಅವರ ನಿರ್ಲಕ್ಷ್ಯ ಅರಿತು ಕೆಲವು ಮಾಲಾಧಾರಿಗಳು, ಔಷಧ ದಾಸ್ತಾನು ಕೊಠಡಿಯ ಕೀಲಿ ಮುರಿದು ಅಲ್ಲಿ ಸಂಗ್ರಹಿಸಿಟ್ಟಿದ್ದ ಬರ್ನಾಲ್ ತಂದು-ಕೊಟ್ಟಿದ್ದಾರೆ' ಎಂದು ಗಾಯಾಳುಗಳ ಸಂಬಂಧಿಕರು ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಜಿಲ್ಲಾಧಿಕಾರಿ ದಿವ್ಯಪ್ರಭು ಎದುರು ಆರೋಪಿಸಿ, ಅಳಲು ತೋಡಿಕೊಂಡಿದ್ದಾರೆ.

ಬಸ್‌ಪಾಸ್‌ಗೆ ಅರ್ಜಿ ಅಂಗವಿಕಲರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಅಂಗವಿಕಲರು ರಿಯಾಯಿತಿ ದರದಲ್ಲಿ ಸಂಚರಿಸಲು ಹೊಸ ಪಾಸ್ ಪಡೆಯಲು ಅಥವಾ ಹಳೆಯ ಪಾಸ್‌ಗಳ ನವೀಕರಣಕ್ಕೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಡಿ.30 ರಿಂದ ಪಾಸ್ ವಿತರಣೆ/ ನವೀಕರಣ ನಡೆಯಲಿದೆ. ಫಲಾನುಭವಿಗಳು ಸೇವಾಸಿಂಧು ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಬೇಕು. 2024ನೇ ಸಾಲಿನಲ್ಲಿ ವಿತರಿಸಿರುವ ಬಸ್‌ಪಾಸ್‌ಗಳು ಫೆ.28 ರವರೆಗೆ ಮಾನ್ಯ-ವಾಗಿರುತ್ತವೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಆರ್‌ಟಿಪಿಎಸ್: ನಾಲ್ಕು ಘಟಕಗಳ ವಿದ್ಯುತ್ ಉತ್ಪಾದನೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಶಕ್ತಿನಗರ (ರಾಯಚೂರು ಜಿಲ್ಲೆ): ತಾಂತ್ರಿಕ ಸಮಸ್ಯೆಯಿಂದಾಗಿ ರಾಯಚೂರು ಶಾಖೋತ್ಪನ್ನ ವಿದ್ಯುತ್ (ಆರ್‌ಟಿಪಿಎಸ್) ಸ್ಥಾವರದ 4 ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಸ್ಥಗಿತ ಮಾಡಲಾಗಿದೆ. ವಾರ್ಷಿಕ ನಿರ್ವಹಣೆಗಾಗಿ 210 ಮೆಗಾವಾಟ್ ಸಾಮರ್ಥ್ಯದ 4ನೇ ಘಟಕ ಮತ್ತು 250 ಮೆಗಾವಾಟ್ ಸಾಮರ್ಥ್ಯದ 8ನೇ ವಿದ್ಯುತ್ ಘಟಕದ ಉತ್ಪಾದನೆ ಬಂದ್ ಮಾಡಲಾಗಿದೆ.

ಬಾಯ್ಲರ್ ಟ್ಯೂಬ್ ಸೋರಿಕೆಯಿಂದಾಗಿ 210 ಮೆಗಾವಾಟ್ ಸಾಮರ್ಥ್ಯದ 2ನೇ ಘಟಕ ಮತ್ತು 6ನೇ ಘಟಕದ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸ-ಲಾಗಿದೆ. ಈಗಾಗಲೇ ಒಂದನೇ ಘಟಕದ ಉತ್ಪಾದನೆ ಕಳೆದ ಎರಡು ವರ್ಷಗಳಿಂದ ಸಂಪೂರ್ಣವಾಗಿ ಬಂದ್ ಮಾಡಲಾಗಿದೆ.

ಇಲ್ಲಿರುವ 8 ವಿದ್ಯುತ್ ಘಟಕಗಳ ಪೈಕಿ 1, 2, 4, 6 ಮತ್ತು 8ನೇ ವಿದ್ಯುತ್ ಘಟಕಗಳ ಉತ್ಪಾದನೆ ಸ್ಥಗಿತಗೊಂ-ಡಿದ್ದರಿಂದ 1,720 ಮೆಗಾವಾಟ್ ಸಾಮರ್ಥ್ಯದ ಪೈಕಿ 550 ಮೆಗಾವಾಟ್ ಮಾತ್ರ ಉತ್ಪಾದನೆ ಆಗುತ್ತಿದೆ.

'ಕಲ್ಲಿದ್ದಲು ವಿಭಾಗದ ಸಂಗ್ರಹದಲ್ಲಿ 4 ಲಕ್ಷ ಟನ್ ಕಲ್ಲಿದ್ದಲು ಸಂಗ್ರಹವಿದೆ. ಬಾಯ್ಲರ್ ಟ್ಯೂಬ್ ಸೋರಿಕೆಯಿಂದಾಗಿ 2ನೇ ಮತ್ತು 6ನೇ ಘಟಕ ಸ್ಥಗಿತವಾಗಿದ್ದು, ದುರಸ್ತಿ ಕಾರ್ಯ ನಡೆಯುತ್ತಿದೆ. ಇನ್ನೆರಡು ದಿನಗಳಲ್ಲಿ ಉತ್ಪಾದನೆ ಆರಂಭವಾಗಲಿದೆ' ಎಂದು ಆರ್‌ಟಿಪಿಎಸ್ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ನಾರಾಯಣ ಗಜಕೋಶ ಹೇಳಿದರು.

ಗೃಹಲಕ್ಷ್ಮಿ ಹಣದಿಂದ ತರಕಾರಿ ಅಂಗಡಿ

ಪ್ರಜಾವಾಣಿ ವಾರ್ತೆ

ಹುಣಸಗಿ (ಯಾದಗಿರಿ ಜಿಲ್ಲೆ): ಜಿಲ್ಲೆಯ ಗೃಹಲಕ್ಷ್ಮಿ ಫಲಾನುಭವಿಯೊಬ್ಬರು ₹ 10 ಸಾವಿರ ವೆಚ್ಚದಲ್ಲಿ ತರಕಾರಿ ತಳ್ಳುಗಾಡಿ ಖರೀದಿಸಿ ಉಳಿದ ಹಣದಲ್ಲಿ ತರಕಾರಿ ತಂದು ವ್ಯಾಪಾರ ಆರಂಭಿಸಿ ಸ್ವಾವಲಂಬಿಯಾಗಿ ಗಮನ ಸೆಳೆದಿದ್ದಾರೆ.

ಹುಣಸಗಿ ತಾಲ್ಲೂಕಿನ ಹೆಬ್ಬಾಳ (ಬಿ) ಗ್ರಾಮದ ಮಕ್ತುಂಬಿ ನಬಿಸಾಬ್ ಅವರಿಗೆ ಇಲ್ಲಿಯವರೆಗೆ 14 ಕಂತಿನ ಗೃಹಲಕ್ಷ್ಮಿ ಹಣ ಜಮಾ ಆಗಿದೆ.

ಮಕ್ತುಂಬಿಯವರದ್ದು ಮೂರು ಮಕ್ಕಳ ಕುಟುಂಬವಾಗಿದ್ದು, ಇಬ್ಬರು ಪುತ್ರರು ಬೇರೆ ಮನೆ ಮಾಡಿಕೊಂಡಿದ್ದಾರೆ. ಪುತ್ರಿಗೆ ಮದುವೆ ಮಾಡಿಕೊಡಲಾಗಿದೆ. ಮಕ್ತುಂಬಿಯವರು ಕೆಲ ವರ್ಷಗಳ ಹಿಂದೆ ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ. ಎರಡೂ ಕಾಲಿಗೂ ರಾಡ್ ಹಾಕಿದ್ದಾರೆ. ಆದರೂ ಮನೆ ನಿರ್ವಹಣೆಗಾಗಿ ಗೃಹಲಕ್ಷ್ಮಿ ಹಣದಿಂದ ತರಕಾರಿ ವ್ಯಾಪಾರ ಆರಂಭಿಸಿರುವುದಾಗಿ ಮಾಹಿತಿ ನೀಡಿದರು.

ಯಾದಗಿರಿ ಜಿಲ್ಲೆ ಹುಣಸಗಿ ತಾಲ್ಲೂಕಿನ ಹೆಬ್ಬಾಳ (ಬಿ) ಗ್ರಾಮದ ಮಕ್ತುಂಬಿ ನಬಿಸಾಬ್ ಅವರು ಗೃಹಲಕ್ಷ್ಮಿ ಹಣದಲ್ಲಿ ಖರೀದಿಸಿದ ತರಕಾರಿ ತಳ್ಳುಗಾಡಿ

'ಸದ್ಯ ಗ್ರಾಮೀಣ ಮಟ್ಟಕ್ಕೆ ತಕ್ಕಂತೆ ತರಕಾರಿ ವ್ಯಾಪಾರ ನಡೆದಿದ್ದು, ದಿನಕ್ಕೆ ₹ 300ರಷ್ಟು ಲಾಭವಾಗುತ್ತಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ನೇತೃತ್ವದ ಸರ್ಕಾರದ ಸಹಾಯ ಜೀವನದಲ್ಲಿ ಎಂದಿಗೂ ಮರೆಯುಂತಿಲ್ಲ' ಎಂದು ಮಕ್ತುಂಬಿ ಹೇಳಿದರು.

'ಹುಣಸಗಿ ಹಾಗೂ ಕಕ್ಕೇರಾ ಸಂತೆಗೆ ತೆರಳಿ ವಾರಕ್ಕೆ ಎರಡು ಬಾರಿ ತರಕಾರಿ ತಂದುಕೊಡುತ್ತೇನೆ' ಎಂದು 55 ವರ್ಷದ ನಬಿಸಾಬ್ ಹೇಳುತ್ತಾರೆ.

'ನಮ್ಮ ತಾಲ್ಲೂಕಿನ ಫಲಾನುಭವಿಯಾದ ಹೆಬ್ಬಾಳ ಗ್ರಾಮದ ಮಕ್ತುಂಬಿ ಅವರ ಈ ಕಾರ್ಯ ಇತರರಿಗೆ ಮಾದರಿಯಾಗಿದೆ' ಎನ್ನುತ್ತಾರೆ ಹುಣಸಗಿ ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಬಸಣ್ಣ ನಾಯಕ.

'ಕಾಂಗ್ರೆಸ್ ಅಧಿವೇಶನದ ಬಳಿಕ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸಾಧ್ಯತೆ'

ಒಂದನೇ ಪುಟದಿಂದ...

'ಸಿ.ಟಿ. ರವಿ ಹೇಳಿರುವ ಪದವನ್ನು ಯಾರೂ ಸೃಷ್ಟಿಸಿ ಹೇಳಲು ಸಾಧ್ಯವಿಲ್ಲ. ಆ ಪದ ಬಳಕೆ ಘೋರ ಅಪರಾಧ,-ಕೆಟ್ಟ ಸಂಸ್ಕೃತಿ. ಪ್ರಚೋದನೆಯಾದರೂ ಈ ಪದ ಬಳಸುತ್ತೀರಾ? ಇದೂ ಸಂಸ್ಕೃತಿಯಾ' ಎಂದು ಪ್ರಶ್ನಿಸಿದರು.

'ಸಿ.ಟಿ.ರವಿಯನ್ನು ರಾತ್ರಿಯಿಡೀ ಪೊಲೀಸರು ಸುತ್ತಿಸಿದ ಕುರಿತು ತನಿಖೆ ನಡೆಯುತ್ತಿದೆ. ಗೃಹ ಸಚಿವರು ಆ ಬಗ್ಗೆ ಮಾತನಾಡುತ್ತಾರೆ. ಆದರೆ, ಯಾವುದೇ ಹೆಣ್ಣುಮಗಳು ಊಹಿಸಿಕೊಂಡು ಈ ರೀತಿಯ ಆರೋಪ ಮಾಡಲು ಸಾಧ್ಯವಿಲ್ಲ' ಎಂದರು.

'ಮೆರಿಟ್ ಆಧಾರದಲ್ಲಿ 2ನೇ ವಿಮಾನ ನಿಲ್ದಾಣ ನಿರ್ಮಾಣ'

ರಾಜಧಾನಿಯಲ್ಲಿ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣದ ಕುರಿತು ಪ್ರತಿಕ್ರಿಯಿಸಿದ ಅವರು, 'ಬೆಂಗಳೂರಿನಲ್ಲಿ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವಿದೆ. 2033-35ಕ್ಕೆ ಎರಡನೇ ವಿಮಾನ ನಿಲ್ದಾಣ ಬೇಕು. ಬೆಂಗಳೂರಿನಿಂದ 50 ಕಿ.ಮೀ. ದೂರದಲ್ಲಿ ಎರಡನೇ ವಿಮಾನ ನಿಲ್ದಾಣ ನಿರ್ಮಾಣವಾದರೆ ಅನುಕೂಲ. ಎಲ್ಲಿ ನಿರ್ಮಿಸಬೇಕು ಎನ್ನುವುದನ್ನು ಮೆರಿಟ್ ಆಧಾರದಲ್ಲಿ ನಿರ್ಧರಿಸುತ್ತೇವೆ. ಮುಖ್ಯಮಂತ್ರಿಯ ಜೊತೆ ಚರ್ಚಿಸಿ, ಕೆಲವೇ ದಿನಗಳಲ್ಲಿ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಮಾಹಿತಿ ನೀಡುತ್ತೇವೆ' ಎಂದರು.

ಸಂಭ್ರಮ
ಕ್ರಿಸ್‌ಮಸ್ ಪ್ರಯುಕ್ತ ಕಲಬುರಗಿಯ ಸೇಂಟ್ ಮೇರಿ ಚರ್ಚ್ ಆವರಣದಲ್ಲಿ ಸೋಮವಾರ ಯುವತಿಯರು ಸಾಂಟಾಕ್ಲಾಸ್ ವೇಷಧಾರಿಯನ್ನು ಸಂಭ್ರಮದಿಂದ ಬರಮಾಡಿಕೊಂಡರು
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಎಡೆಹಳ್ಳಿ: ವ್ಯಾಪಾರ ಆರಂಭಿಸಿದ ಮಹಿಳೆ

• ಕುಮಾರ್ ಅಗಸನಹಳ್ಳಿ

ಹೊಳೆಹೊನ್ನೂರು (ಶಿವಮೊಗ್ಗ ಜಿಲ್ಲೆ): ಸಮೀಪದ ಎಡೆಹಳ್ಳಿ ಗ್ರಾಮದ ಮಹಿಳೆಯೊಬ್ಬರು ರಾಜ್ಯ ಸರ್ಕಾರ 'ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆ ಅಡಿ ಇದುವರೆಗೆ ನೀಡಿದ ಹಣವನ್ನು ಕೂಡಿಟ್ಟು ತಮ್ಮ ಮನೆಯಲ್ಲೇ ಸಣ್ಣ ಅಂಗಡಿ ತೆರೆದು ವ್ಯಾಪಾರ ಆರಂಭಿಸಿದ್ದಾರೆ.

ಗ್ರಾಮದ 62 ವರ್ಷ ವಯಸ್ಸಿನ ಖುರ್ಷಿದಾ ಅಂಗಡಿ ತೆರೆದ ಮಹಿಳೆ. ಗ್ರಾಮದ ಭದ್ರಾ ನಾಲೆ ಬಳಿ ₹ 2 ಲಕ್ಷ ಖರ್ಚು ಮಾಡಿ ಪುಟ್ಟ ಮನೆಯನ್ನು ಕಟ್ಟಿಕೊಂಡು ವಾಸವಿರುವ ಇವರಿಗೆ ಇದ್ದೊಬ್ಬ ಮಗ 16 ವರ್ಷಗಳ ಹಿಂದೆ ಹಾಗೂ ಪತಿ 4 ವರ್ಷಗಳ ಹಿಂದೆ ತೀರಿಕೊಂಡಿದ್ದು, ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇದೀಗ 'ಗೃಹಲಕ್ಷ್ಮಿ' ಯೋಜನೆ ಮೂಲಕ 14 ತಿಂಗಳಿಂದ ಜಮೆಯಾಗಿರುವ ₹ 28,000ದ ನೆರವಿನಿಂದ ಅಂಗಡಿ ತೆರೆದಿದ್ದಾರೆ.

ಖುರ್ಷಿದಾ ಅವರು ಗೃಹಲಕ್ಷ್ಮಿ ಹಣದಲ್ಲಿ ಆರಂಭಿಸಿರುವ ಅಂಗಡಿ

ಈ ಅಂಗಡಿಯಲ್ಲಿ ಬಿಸ್ಕತ್ತು, ಚಾಕೊಲೇಟ್, ಗುಟ್ಕಾ, ಸಿಗರೇಟ್, ಬೀಡಿ, ನೀರಿನ ಬಾಟಲು ಹಾಗೂ ಚಿಕ್ಕಮಕ್ಕಳು ತಿನ್ನುವ ಕುರುಕಲು ತಿಂಡಿ, ಕಾಫಿ, ಟೀ ಮಾರಾಟ ಮಾಡಲು ಪ್ರಾರಂಭಿಸಿದ್ದಾರೆ.

'ಗೃಹಲಕ್ಷ್ಮಿ ಹಣವನ್ನು ಬಿಡಿಸಿಕೊಂಡಿರಲಿಲ್ಲ. ಒಬ್ಬಂಟಿಯಾಗಿರುವ ನನಗೆ ಅಂಗಡಿ ಆರಂಭಿಸಲು ಗ್ರಾಮಸ್ಥರು ನೀಡಿದ ಸಹಕಾರ ಮರೆಯುವಂತಿಲ್ಲ. ಅಂಗಡಿಯನ್ನು ಚೆನ್ನಾಗಿ ನಡೆಸುವ ಮೂಲಕ ಜೀವನ ನಿರ್ವಹಿಸುವ ವಿಶ್ವಾಸ ಇದೆ' ಎಂದು ಖುರ್ಷಿದಾ ಹೇಳುತ್ತಾರೆ.

'ಗೃಹಲಕ್ಷ್ಮಿ ಹಣದ ಸದ್ಬಳಕೆ ಬಗ್ಗೆ ಪ್ರತಿ ಮಹಿಳೆ ಯೋಚಿಸುವ ಮೂಲಕ ಸ್ವಾವಲಂಬಿ ಬದುಕು ರೂಪಿಸಿಕೊಳ್ಳಬೇಕು. ಯೋಜನೆ ಮಹಿಳೆಯರ ಪಾಲಿಗೆ ವರವಾಗಿದ್ದು, ಸರ್ಕಾರಕ್ಕೆ ಧನ್ಯವಾದಗಳು' ಎಂದು ಅವರು ತಿಳಿಸಿದ್ದಾರೆ.

ಮುಡಾ ಸಿಬ್ಬಂದಿ ವಿಚಾರಣೆ ಇಂದು

ಮೈಸೂರು: ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಮುಡಾದ ಕೆಲವು ಸಿಬ್ಬಂದಿಗೆ ಜಾರಿ ನಿರ್ದೇಶನಾಲಯವು (ಇಡಿ) ನೋಟಿಸ್ ನೀಡಿದ್ದು, ಮಂಗಳವಾರ ಬೆಂಗಳೂರಿನ ಕಚೇರಿಯಲ್ಲಿ ವಿಚಾರಣೆ ನಡೆಯಲಿದೆ.

ಎಂಎಂಜಿ ಕನ್‌ಸ್ಟ್ರಕ್ಷನ್ಸ್ ಕಂಪನಿ ಮಾಲೀಕ ಜಯರಾಂ ಅವರಿಗೆ ಸೇರಿದ ಮನೆ ಹಾಗೂ ಕಚೇರಿ ಮೇಲೆ ಇ.ಡಿ. ಅಧಿಕಾರಿಗಳು ಈಚೆಗೆ ದಾಳಿ ನಡೆಸಿದ್ದರು. ಅಗತ್ಯ ದಾಖಲೆಗಳೊಂದಿಗೆ ವಿಚಾರಣೆಗೆ ಬರುವಂತೆ ಇ.ಡಿ. ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

25 ವರ್ಷಗಳ ಹಿಂದೆಯೇ ತಪ್ಪಿಸಿಕೊಂಡಿದ್ದ ಮಹಿಳೆ

ತವರಿನತ್ತ ಹೊರಡಲು ಅಣಿಯಾದ ಸಾಕಮ್ಮ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಹೊಸಪೇಟೆಯ ದಣನಾಯಕನಕೆರೆಯ ಸಾಕಮ್ಮ ಅವರು ಕಾಣೆಯಾಗಿದ್ದು ಎರಡು ವರ್ಷಗಳ ಹಿಂದೆ ಅಲ್ಲ. 25 ವರ್ಷಗಳ ಹಿಂದೆ ಎಂಬುದು ಗೊತ್ತಾಗಿದೆ. ಇದೆಲ್ಲದರ ನಡುವೆಯೇ ಸಾಕಮ್ಮ ಅವರ ಮಕ್ಕಳು, ಸಂಬಂಧಿಗಳು ಬಳ್ಳಾರಿಯಲ್ಲಿ ಪತ್ತೆಯಾಗಿದ್ದು, ಕುಟುಂಬದಲ್ಲಿ ಸಂಭ್ರಮ ಮನೆ ಮಾಡಿದೆ.

ಸಾಕಮ್ಮ ಅವರನ್ನು ಕರೆತರಲು ಎರಡು ದಿನಗಳ ಹಿಂದೆ ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಭಾಂಗ್ರೋಟ್‌ಗೆ ತೆರಳಿದ ಮೂವರು ಅಧಿಕಾರಿಗಳ ತಂಡಕ್ಕೆ ಉತ್ತರ ಭಾರತದಲ್ಲಿ ಸಾಕಮ್ಮ ಪಟ್ಟ ಪಡಿಪಾಟಲು ಗೊತ್ತಾಗಿದೆ.

ಎರಡೂವರೆ ದಶಕದ ಹಿಂದೆ ಹೊಸಪೇಟೆಯಲ್ಲಿ ನಡೆದ ತಮ್ಮ ಸಂಬಂಧಿಗಳ ಮದುವೆಗೆ ಮಕ್ಕಳೊಂದಿಗೆ ದಿಬ್ಬಣದೊಂದಿಗೆ ತೆರಳಿದ್ದ ಸಾಕಮ್ಮ, ಅಲ್ಲಿ ಆಕಸ್ಮಿಕವಾಗಿ ರೈಲೊಂದನ್ನು ಹತ್ತಿ ಚಂಡೀಗಢ ತಲುಪಿದ್ದರು. ಬಳಿಕ ಉತ್ತರ ಭಾರತದ ಎರಡು ಮೂರು ರಾಜ್ಯಗಳಲ್ಲಿ ಚಿಂದಿ ಆಯುತ್ತ ಹೊಟ್ಟೆ ಹೊರೆದಿದ್ದರು. ಅಂತಿಮವಾಗಿ ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ನಿರಾಶ್ರಿತರ ಶಿಬಿರ ಸೇರಿದ್ದರು ಎಂಬುದು ಗೊತ್ತಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸದ್ಯ ಬಳ್ಳಾರಿಯ ಗುಗ್ಗರಹಟ್ಟಿ-ಯಲ್ಲಿ ಅವರ ಮಕ್ಕಳು ಇರುವುದು ಅಧಿಕಾರಿಗಳಿಗೆ ಗೊತ್ತಾಗಿ ಮಗ ವಿರಾಟ, ಲಕ್ಷ್ಮೀ ಅವರನ್ನು ವಿಡಿಯೊ ಕರೆ ಮಾಡಿಸಿ ಸಾಕಮ್ಮ ಅವರೊಂದಿಗೆ ಮಾತನಾಡಿ-ಸಲಾಗಿದೆ. ಆದರೆ, ಅವರನ್ನು ಸಾಕಮ್ಮ ಗುರುತುಹಿಡಿದಿಲ್ಲ ಎನ್ನಲಾಗಿದೆ.

ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಭಾಂಗ್ರೋಟ್‌ನಲ್ಲಿರುವ ನಿರಾಶ್ರಿತರ ಶಿಬಿರದಲ್ಲಿ ಸಾಕಮ್ಮ ಅವರನ್ನು ಭೇಟಿಯಾಗಿರುವ ರಾಜ್ಯದ ಅಧಿಕಾರಿಗಳ ತಂಡ (ಎಡದಿಂದ ಮೂರು ಮಂದಿ). ಚಿತ್ರದಲ್ಲಿ ಮಂಡಿ ಜಿಲ್ಲೆಯ ಸಮಾಜ ಕಲ್ಯಾಣಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕನ್ನಡಿಗ ರವಿನಂದನ್ ಅವರೂ ಇದ್ದಾರೆ

ಮಕ್ಕಳನ್ನು ವಿಚಾರಿಸಿದಾಗ ಮಹಿಳೆ 25 ವರ್ಷಗಳ ಹಿಂದೆಯೇ ಕಾಣೆಯಾಗಿದ್ದದ್ದು ಗೊತ್ತಾಗಿದೆ. ಕಾಣೆಯಾದ ಕೂಡಲೇ ಸಾಕಮ್ಮ ಕುಟುಂಬಸ್ಥರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. 8 ದಿನಗಳ ಬಳಿಕ ಮೃತ ದೇಹವೊಂದು ಸಿಕ್ಕಿರುವುದಾಗಿ ಪೊಲೀಸರು ಸಾಕಮ್ಮ ಕುಟುಂಬಕ್ಕೆ ತಿಳಿಸಿದ್ದರು. ಅದನ್ನು ತಂದು ಶವಸಂಸ್ಕಾರ ನೆರವೇರಿಸಿ, ತಿಥಿಯನ್ನೂ ಮಾಡಲಾಗಿತ್ತು ಎಂದು ಕುಟುಂಬಸ್ಥರು ಅಧಿಕಾರಿಗಳೊಂದಿಗೆ ಹೇಳಿಕೊಂಡಿದ್ದಾರೆ.

ಈ 25 ವರ್ಷಗಳಲ್ಲಿ ಕರ್ನಾಟಕದ ಹಲವರು ಸಾಕಮ್ಮ ಅವರನ್ನು ಮಾತನಾಡಿಸಿ ಅನುಕಂಪ ವ್ಯಕ್ತಪಡಿಸಿ ಹೋಗಿದ್ದಾರೆ. ಊರಿಗೆ ಕರೆದುಕೊಂಡು ಹೋಗುವುದಾಗಿ ಭರವಸೆ ನೀಡಿದ್ದಾರೆ. ಆದರೆ, ಯಾರೂ ಅವರನ್ನು ಕರೆದುಕೊಂಡು ಹೋಗಿರಲಿಲ್ಲ. ಸದ್ಯ ಅಧಿಕಾರಿಗಳ ತಂಡ ಕರ್ನಾಟಕಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳುತ್ತಿದ್ದರೂ ಸಾಕಮ್ಮ ನಂಬುತ್ತಿಲ್ಲ. 'ನನ್ನನ್ನು ಬಿಟ್ಟು ಎಲ್ಲಿಯೂ ಹೋಗಬೇಡಿ. ಈಗಲೇ ಕರೆದುಕೊಂಡು ಹೋಗಿ ಎಂದು ದುಂಬಾಲು ಬಿದ್ದಿದ್ದಾರೆ' ಎಂದು ತಂಡದಲ್ಲಿರುವ ಅಧಿಕಾರಿಗಳು ತಿಳಿಸಿದ್ದಾರೆ.

ಐ.ಟಿಗೂ 'ಕಾವೇರಿ' ಲಾಗಿನ್

ಒಂದನೇ ಪುಟದಿಂದ...

ಮಾಹಿತಿ ಒದಗಿಸುವ ಹೊರೆಯೂ ಇರದು: ತೆರಿಗೆ ವಂಚನೆ ಮತ್ತು ಕಪ್ಪು ಹಣದ ಚಲಾವಣೆ ತಡೆಯುವ ಉದ್ದೇಶದಿಂದ ಉಪ ನೋಂದಣಿ ಕಚೇರಿಗಳಲ್ಲಿ ನಡೆಯುವ ₹30 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಎಲ್ಲ ವಹಿವಾಟುಗಳ ಬಗ್ಗೆಯೂ ನೋಂದಣಿ ಇಲಾಖೆ ಅಧಿಕಾರಿಗಳು ಆದಾಯ ತೆರಿಗೆ ಇಲಾಖೆಗೆ ಕಡ್ಡಾಯವಾಗಿ ಮಾಹಿತಿ ಕೊಡಬೇಕು. ಆದರೆ, ಕೆಲವು ಅಧಿಕಾರಿಗಳು ನಿಯಮಿತವಾಗಿ ಮಾಹಿತಿ ಒದಗಿಸುತ್ತಿಲ್ಲ. ಈ ಕಾರಣದಿಂದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಉಪ ನೋಂದಣಿ ಕಚೇರಿಗೆ ಭೇಟಿ ನೀಡಿ ದಾಖಲೆ ಪರಿಶೀಲಿಸುತ್ತಾರೆ.

ಐ.ಟಿ. ಅಧಿಕಾರಿಗಳಿಗೆ 'ಕಾವೇರಿ' ತಂತ್ರಾಂಶದಲ್ಲಿ ಲಾಗಿನ್ ನೀಡಿದರೆ ಹೆಚ್ಚಿನ ಮೊತ್ತದ ವಹಿವಾಟುಗಳ ಕುರಿತು ಮಾಹಿತಿ ಒದಗಿಸುವ ಹೊರೆ ನೋಂದಣಿ ಅಧಿಕಾರಿಗಳಿಗೆ ಇರುವುದಿಲ್ಲ ಎನ್ನುತ್ತವೆ ಇಲಾಖೆಯ ಮೂಲಗಳು.

ಡ್ರೋನ್ ಪ್ರತಾಪ್‌ಗೆ ಜಾಮೀನು

ಪ್ರಜಾವಾಣಿ ವಾರ್ತೆ

ಮಧುಗಿರಿ (ತುಮಕೂರು): ತಾಲ್ಲೂಕಿನ ಜನಕಲೋಟಿ ಗ್ರಾಮದ ಬಳಿಯ ಕೃಷಿ ಹೊಂಡವೊಂದರಲ್ಲಿ ಸೋಡಿಯಂ ಬಳಸಿ ಸ್ಫೋಟಿಸಿ ಪ್ರಯೋಗ ಮಾಡಿದ್ದ ಡ್ರೋನ್ ಪ್ರತಾಪ್ ಅವರಿಗೆ ಸೋಮವಾರ ನಾಲ್ಕನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಪ್ರತಾಪ್ ಮಂಗಳವಾರ ಜೈಲಿನಿಂದ ಬಿಡುಗಡೆ ಆಗಲಿದ್ದಾರೆ.

ಡ್ರೋನ್ ಪ್ರತಾಪ್

ಜನಕಲೋಟಿ ಗ್ರಾಮದ ರಾಯರ ಬೃಂದಾವನ ಫಾರ್ಮ್ ಕೃಷಿ ಹೊಂಡ ದಲ್ಲಿ ನಡೆಸಿದ್ದ ಸ್ಫೋಟದ ದೃಶ್ಯವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರತಾಪ್ ಹಂಚಿಕೊಂಡಿದ್ದರು.

ವಿಡಿಯೊ ದೃಶ್ಯಗಳನ್ನು ಆಧರಿಸಿ ಮಿಡಿಗೇಶಿ ಠಾಣೆಯ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ಬಳಿಕ ಡ್ರೋನ್ ಪ್ರತಾಪ್ ಅವರನ್ನು ಬಂಧಿಸಿದ್ದರು.

ಡಿ.16 ರಂದು ನ್ಯಾಯಾಲಯ ಹತ್ತು ದಿನ ಪ್ರತಾಪ್‌ಗೆ ನ್ಯಾಯಾಂಗ ಬಂಧನ ವಿಧಿಸಿತ್ತು.

ಗ್ರಾಮ ಆಡಳಿತಾಧಿಕಾರಿಗಳ ತಾತ್ಕಾಲಿಕ ಪಟ್ಟಿ ವಾಪಸ್

ಮತ್ತೊಂದು ಪಟ್ಟಿ ಪ್ರಕಟಿಸಿದ ಜಿಲ್ಲಾಡಳಿತ

ಪ್ರಜಾವಾಣಿ ವಾರ್ತೆ

ತುಮಕೂರು: ಗ್ರಾಮ ಆಡಳಿತಾಧಿ-ಕಾರಿಗಳ 73 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಜಿಲ್ಲಾ ಆಡಳಿತ ಭಾನುವಾರ ರಾತ್ರಿ 11 ಗಂಟೆ ನಂತರ ಮತ್ತೊಂದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದೆ.

ಡಿ.21ರಂದು ಬಿಡುಗಡೆ ಮಾಡಿದ ಪಟ್ಟಿಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಇದರಿಂದ ಎಚ್ಚೆತ್ತುಕೊಂಡ ಜಿಲ್ಲಾ ಆಡಳಿತ ಆಯ್ಕೆ ಪಟ್ಟಿ ಹಿಂಪಡೆದಿತ್ತು. 73 ಹುದ್ದೆಗಳ ನೇಮಕಾತಿಗೆ ಮತ್ತೊಮ್ಮೆ ಆಯ್ಕೆ ಪಟ್ಟಿ ಪ್ರಕಟಿಸಿದೆ.

'ಕೆಇಎ ಬಿಡುಗಡೆ ಮಾಡಿದ ಮೆರಿಟ್ ಪಟ್ಟಿಗೂ ಜಿಲ್ಲಾ ಆಡಳಿತ ಪ್ರಕಟಿಸಿದ ಪಟ್ಟಿಗೂ ತುಂಬಾ ವ್ಯತ್ಯಾಸವಿದೆ. ತಾತ್ಕಾಲಿಕ ಪಟ್ಟಿಯಲ್ಲಿ ಅಭ್ಯರ್ಥಿಗಳ 40ರಿಂದ 70 ಅಂಕಗಳು ಹೆಚ್ಚು–ಕಡಿಮೆಯಾಗಿವೆ. 1:3 ಪ್ರಮಾಣದ ಪಟ್ಟಿ ಸಿದ್ಧಪಡಿಸುವಲ್ಲಿ ಅಕ್ರಮ ನಡೆದಿದ್ದು ಕೂಡಲೇ ಸರಿಪಡಿಸಬೇಕು' ಎಂದು ಅಭ್ಯರ್ಥಿಗಳು ಒತ್ತಾಯಿಸಿದ್ದರು.

'ಜ. 6ರಂದು ನಗರದ ಎಂಪ್ರೆಸ್ ಕಾಲೇಜಿನ ಸಭಾಂಗಣದಲ್ಲಿ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆ ನಡೆಯಲಿದೆ. ಪಟ್ಟಿಯಲ್ಲಿ ಹೆಸರು ಇರುವ ಅಭ್ಯರ್ಥಿಗಳು ಹಾಜರಾಗಬೇಕು' ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಇಂಥ ನೂರು ರವಿಗಳನ್ನು ಎದುರಿಸುವ ಶಕ್ತಿ ನನ್ನಲ್ಲಿದೆ; ಪ್ರಧಾನಿಗೂ ದೂರು– ಲಕ್ಷ್ಮೀ ಹೆಬ್ಬಾಳಕರ

‘ರವಿ ವಿರುದ್ಧ ಕಾನೂನು ಹೋರಾಟ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರ ‘ಆ’ ಮಾತಿನಿಂದ ನನಗೆ ಬಹಳ ನೋವಾಗಿದೆ. ಎರಡು ದಿನ ಮೌನಕ್ಕೆ ಶರಣಾಗಿದ್ದೆ. ಆದರೆ, ರವಿಯನ್ನು ಸುಮ್ಮನೇ ಬಿಡುವುದಿಲ್ಲ. ಕಾನೂನು ಸಮರ ಮುಂದುವರಿಸುತ್ತೇನೆ. ಅವರ ವಿರುದ್ಧ ಪ್ರಧಾನಿ, ರಾಷ್ಟ್ರಪತಿಗೂ ಪತ್ರ ಬರೆಯುತ್ತೇನೆ. ಸಾಧ್ಯವಾದರೆ ಭೇಟಿಯಾಗುತ್ತೇನೆ. ಇಂಥ ನೂರು ರವಿಗಳನ್ನು ಎದುರಿಸುವ ಶಕ್ತಿ ನನ್ನಲ್ಲಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಅವರಿಗೆ ಅಪರಾಧಿ ಭಾವನೆ ಕಾಡುತ್ತಿದೆ. ನಾನು ಸಭಾಪತಿಗೆ ಮತ್ತೆ ದೂರು ಕೊಡುತ್ತೇನೆ. ಪೊಲೀಸ್ ತನಿಖೆ ಬೇಗ ಆಗಬೇಕು. ಎಫ್.ಎಸ್.ಎಲ್ ವರದಿ ಬೇಗ ಬಹಿರಂಗವಾಗಬೇಕು’ ಎಂದು ಆಗ್ರಹಿಸಿದರು.

‘ಕಳೆದ 26 ವರ್ಷಗಳಿಂದ ನಾನು ಸಂಘರ್ಷದಿಂದಲೇ ಮೇಲೆ ಬಂದಿದ್ದೇನೆ. ಘಟನೆ ಬಳಿಕ ಸಿ.ಟಿ.ರವಿ ಹಾರ–ತುರಾಯಿ ಹಾಕಿಸಿಕೊಳ್ಳುತ್ತಿದ್ದಾರೆ. ಇಂಥ ಸಂದರ್ಭದಲ್ಲೂ ಬಿಜೆಪಿಯವರು ರವಿ ಬೆನ್ನಿಗೆ ನಿಂತಿದ್ದು ನಾಚಿಕೆಗೇಡಿನ ಸಂಗತಿ’ ಎಂದು ಹೇಳಿದರು.

‘ಪೊಲೀಸರು ಎನ್‌ಕೌಂಟರ್ ಮಾಡಲು ಮುಂದಾಗಿದ್ದರು ಎಂದು ಬೊಬ್ಬೆ ಹೊಡೆಯುತ್ತಿರುವವರಿಗೆ ನಾಚಿಕೆ ಆಗಬೇಕು. ಪೊಲೀಸರು ಏನು ಮಾಡಬೇಕೋ ಅದನ್ನು ಮಾಡಿದ್ದಾರೆ. ಬಿಜೆಪಿ ನಾಯಕರು ಪ್ರಕರಣದ ದಾರಿ ತಪ್ಪಿಸುತ್ತಿದ್ದಾರೆ’ ಎಂದರು.

ಸಿ.ಟಿ.ರವಿ ತಲೆಗೆ ಗಾಯವಾದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ನಿನಗೆ ಎಷ್ಟು ಹೊಲಿಗೆ ಬಿದ್ದಿದೆ ಅಣ್ಣಯ್ಯ? ಒಂದಾದರೂ ಹೊಲಿಗೆ ಬಿದ್ದಿರಬೇಕಲ್ಲ? ಏನಾಗಿದೆ ಅವರಿಗೆ? ಬರೀ ಪಟ್ಟಿ ಕಟ್ಟಿಕೊಂಡಿದ್ದಾರೆ’ ಎಂದು ಟೀಕಿಸಿದರು.

‘ಬೆಳಗಾವಿ ಚಲೋ’ ಹೋರಾಟದ ಕುರಿತು ಪ್ರತಿಕ್ರಿಯಿಸಿ, ‘ಬೆಳಗಾವಿ ಶಾಂತಿಯ ತೋಟ. ನಾಲಿಗೆಯನ್ನು ಸ್ವಚ್ಛವಾಗಿಟ್ಟುಕೊಂಡು ಇಲ್ಲಿಗೆ ಯಾರು ಬೇಕಾದರೂ ಬರಬಹುದು. ಅಂತಹ ವ್ಯಕ್ತಿಗಳಿಗೆ ಸ್ವಾಗತ’ ಎಂದರು.

ಬಿಜೆಪಿಯವರು ಮಹಾತ್ಮ ಗಾಂಧಿಯನ್ನೂ ಅವಮಾನಿಸಿದ್ದರು. ಈಗ ರಾಹುಲ್ ಗಾಂಧಿ ಅವರನ್ನು ಅವಮಾನಿಸುತ್ತಿದ್ದಾರೆ
ರಣದೀಪ್‌ಸಿಂಗ್ ಸುರ್ಜೇವಾಲಾ
ಎಐಸಿಸಿ ಪ್ರಧಾನ ಕಾರ್ಯದರ್ಶಿ

ಸಚಿವೆ ಲಕ್ಷ್ಮೀ ಹೆಬ್ಬಾಳಕರ ಬಗ್ಗೆ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ‘ಆ’ ಮಾತು ಹೇಳಿದ್ದು ಸತ್ಯ. ನಾನೇ ಅದನ್ನು ಕೇಳಿಸಿಕೊಂಡು ಒಂದು ಕ್ಷಣ ಗಾಬರಿಯಾಗಿದ್ದೆ
ಡಾ.ಯತೀಂದ್ರ ಸಿದ್ದರಾಮಯ್ಯ,
ವಿಧಾನಪರಿಷತ್ ಸದಸ್ಯ

ಕಾನೂನು ಹೋರಾಟ ಮಾಡಿದರೆ, ಸಚಿವರೊಬ್ಬರ ಚಿತಾವಣೆಯಿಂದ ರವಿಗೆ ಮಾನಸಿಕ ಹಿಂಸೆ ಕೊಟ್ಟಿರುವ ಅಧಿಕಾರಿಗಳು ಪ್ರತಿಫಲ ಎದುರಿಸಬೇಕಾಗುತ್ತದೆ
ಎಚ್.ಡಿ. ಕುಮಾರಸ್ವಾಮಿ
ಕೇಂದ್ರ ಸಚಿವ

ರಾಜ್ಯ ಸರ್ಕಾರ ದ್ವೇಷದ ರಾಜಕಾರಣ ಶುರು ಮಾಡಿದೆ. ಸಿದ್ದರಾಮಯ್ಯ ಕಾಲದಲ್ಲೇ ಇದು ಆರಂಭವಾಗಿರುವುದು ನನಗೆ ಬೇಸರ ಮೂಡಿಸುತ್ತಿದೆ
ವಿ. ಸೋಮಣ್ಣ
ರೈಲ್ವೆ ಖಾತೆ ರಾಜ್ಯ ಸಚಿವ

ವಿಡಿಯೊ ತೋರಿಸಿದ ಸಚಿವೆ

ವಿಧಾನ ಪರಿಷತ್ ಕಲಾಪದಲ್ಲಿ ಸಿ.ಟಿ. ರವಿ ಅವರು ಅವಾಚ್ಯ ಪದ ಬಳಸಿ ಆಡಿದ್ದಾರೆ ಎನ್ನಲಾದ ಮಾತುಗಳ ಎರಡು ವಿಡಿಯೊ ತುಣುಕುಗಳನ್ನು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮಾಧ್ಯಮಗಳ ಮುಂದೆ ಪ್ರದರ್ಶಿಸಿದರು.

‘ರಾಹುಲ್ ಗಾಂಧಿ ಒಬ್ಬ ಡ್ರಗ್ ಅಡಿಕ್ಟ್’ ಎಂದು ಹಾಗೂ ‘ಪ್ರಾಸ್ಟಿಟ್ಯೂಟ್’ ಎಂದು ಪದೇಪದೇ ಹೇಳಿದ ಮಾತುಗಳು ಅದರಲ್ಲಿ ಕೇಳಿಸುತ್ತವೆ.

ನಾನಿನ್ನೂ ಬದುಕಿದ್ದೇನೆ: ಶಿವಕುಮಾರ್

‘ನಾನಿನ್ನೂ ಸತ್ತಿಲ್ಲ, ಬದುಕಿದ್ದೇನೆ. ಈ ಡಿ.ಕೆ.ಶಿವಕುಮಾರ್ ಇನ್ನೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷ. ಬಿಜೆಪಿಯವರ ಪ್ರತಿಭಟನೆಗೆ ನಾನು ಹೆದರುವುದಿಲ್ಲ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ ಅವರು, ‘ಸಿ.ಟಿ. ರವಿ ಅವರನ್ನು ಸುತ್ತಾಡಿಸಿದ್ದರ ಬಗ್ಗೆ ಮಾತನಾಡುವ ಬಿಜೆಪಿಯವರು ಸಚಿವೆ ಬಳಸಿದ ಪದದ ಬಗ್ಗೆ ಕೇಳುತ್ತಿಲ್ಲ. ಈ ವಿಚಾರವನ್ನು ಮಾಧ್ಯಮಗಳು ಪ್ರಶ್ನೆ ಮಾಡಬೇಕು. ಗಾಂಧಿ ಭಾರತ ಕಾರ್ಯಕ್ರಮ ಮುಗಿದ ಬಳಿಕ ಬಿಜೆಪಿಯವರ ಬಗ್ಗೆ ಮಾತನಾಡುತ್ತೇನೆ’ ಎಂದರು.

‘ರಾಜ್ಯದಲ್ಲಿ ಏನೇ ನಡೆದರೂ ಡಿ.ಕೆ. ಶಿವಕುಮಾರ್ ಕಾರಣ ಎಂಬ ರೀತಿ ಬಿಂಬಿಸಲಾಗುತ್ತಿದೆ. ನಾವು ಬಲಿಷ್ಠರಾಗುತ್ತಿದ್ದಂತೆ ತಪ್ಪುಗಳು ಹೆಚ್ಚುತ್ತಿವೆ. ಹೆಚ್ಚು ಕೆಲಸ ಮಾಡುವವರಿಂದ ಹೆಚ್ಚು ತಪ್ಪುಗಳು ಆಗುತ್ತವೆ. ಕೆಲಸವನ್ನೇ ಮಾಡದವರಿಂದ ತಪ್ಪುಗಳು ಆಗುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಗಿದ ಅಧ್ಯಾಯ: ಹೊರಟ್ಟಿ

ಪ್ರಜಾವಾಣಿ ವಾರ್ತೆ



ಹೊರಟ್ಟಿ

ಬೆಂಗಳೂರು/ಚಿತ್ರದುರ್ಗ: ವಿಧಾನ ಪರಿಷತ್ ಕಲಾಪ ಮುಂದೂಡಿದ ವೇಳೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ವಿರುದ್ಧ ಸಿ.ಟಿ. ರವಿ ನೀಡಿದ್ದಾರೆ ಎನ್ನಲಾದ ಹೇಳಿಕೆ ಈಗ ಮುಗಿದ ಅಧ್ಯಾಯ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಹೆಬ್ಬಾಳಕರ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಪರಿಷತ್‌ನಲ್ಲಿ ನಡೆದ ಘಟನೆ ಎಂದು ಉಲ್ಲೇಖಿಸಲಾಗಿದೆ. ಹೀಗೆ ಉಲ್ಲೇಖಿಸಿ, ತಪ್ಪು ಮಾಡಿದ್ದಾರೆ. ಸದನದ ಒಳಗೆ ಪೊಲೀಸರು ಬಂದು ಮಹಜರು ಮಾಡಲು ಅವಕಾಶ ಇಲ್ಲ. ಈಗ ಸದನದ ಸಭಾಂಗಣ ಬಾಗಿಲು ಮುಚ್ಚಲಾಗಿದೆ ಎಂದರು.

‘ದೂರನ್ನು ಕೂಲಂಕಷವಾಗಿ ತನಿಖೆ ಮಾಡುತ್ತೇನೆ. ರೂಲಿಂಗ್ ನೀಡಿದ ನಂತರ ಕಲಾಪ ಮುಂದೂಡಲಾಗಿತ್ತು. ಪ್ರಕರಣವನ್ನು ಸಮಿತಿಗೆ ಕೊಡುವ ಅವಶ್ಯಕತೆ ಇಲ್ಲ. ಸಚಿವರು ಲಿಖಿತ ದೂರು ನೀಡಿದರೆ ಮರುಪರಿಶೀಲನೆ ಮಾಡಲಾಗುವುದು. ಆಡಿಯೊ, ವಿಡಿಯೊಗಳಿದ್ದರೆ ವಿಧಿ ವಿಜ್ಞಾನ ತಜ್ಞರಿಗೆ ಕಳುಹಿಸಲಾಗುವುದು’ ಎಂದು ಹೇಳಿದರು.

‘ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ತಮ್ಮ ಬಗ್ಗೆ ಸಿ.ಟಿ.ರವಿ ಅವರು ಆಡಿರುವ ಮಾತುಗಳ ಆಡಿಯೊ ಬಿಡುಗಡೆ ಮಾಡಿರುವ ವಿಚಾರ ನಮಗೆ ಸಂಬಂಧಿಸಿದ್ದಲ್ಲ. ಸದನದಲ್ಲಿ ನಡೆದ ವಿಚಾರಗಳಿಗೆ ಮಾತ್ರ ನಮ್ಮ ಜವಾಬ್ದಾರಿ ಇರುತ್ತದೆ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಚಿತ್ರದುರ್ಗದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು ‘ಘಟನೆ ಸಂಬಂಧ ನಮಗೆ ಯಾವುದೇ ದಾಖಲೆ ಸಿಗಲಿಲ್ಲ. ಸದನ ಮುಂದೂಡಿದ ಬಳಿಕವೇ ಘಟನೆ ನಡೆದಿದೆ. ನಾನು ಇಬ್ಬರನ್ನೂ ಕರೆದು ವಿಚಾರಣೆ ಮಾಡಿದ್ದೇನೆ, ಸಂಧಾನಕ್ಕೆ ಯತ್ನಿಸಿದ್ದೇನೆ, ಆದರೆ ಇಬ್ಬರೂ ಸಂಧಾನಕ್ಕೆ ಒಪ್ಪಿಲ್ಲ. ಇದು ಹೊಡೆದಾಟವಲ್ಲ, ಬಡಿದಾಟವಲ್ಲ. ಇದೊಂದು ಆಕಸ್ಮಿಕ ಘಟನೆಯಾಗಿದ್ದು ಮಾತಿನ ಭರದಲ್ಲಿ ನಡೆದುಹೋಗಿದೆ’ ಎಂದರು.

‘ಪೊಲೀಸರು ಒತ್ತಡದಿಂದ ಕೆಲಸ ಮಾಡಿಲ್ಲ’

ಬೆಂಗಳೂರು: ‘ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆಕ್ಷೇಪಾರ್ಹ ಪದ ಬಳಸಿದ ಪ್ರಕರಣದಲ್ಲಿ ಪೊಲೀಸರು ನಿಯಮಾವಳಿಗಳ ಪ್ರಕಾರ ಕೆಲಸ ಮಾಡಿದ್ದಾರೆ. ಯಾರ ಒತ್ತಡದಿಂದಲೂ ಕೆಲಸ ಮಾಡಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪೊಲೀಸರು ಎಲ್ಲದಕ್ಕೂ ನಮ್ಮನ್ನು ಕೇಳಬೇಕೆಂದಿಲ್ಲ. ಅವರೇ ತೀರ್ಮಾನಿಸುತ್ತಾರೆ. ಅಂತಿಮವಾಗಿ ಸರ್ಕಾರಕ್ಕೆ ವರದಿ ಕೊಡುತ್ತಾರೆ. ಕೆಲವು ಬಾರಿ ಸರ್ಕಾರಕ್ಕೆ ಮುಂಚಿತವಾಗಿ ಹೇಳುತ್ತಾರೆ. ಕೆಲವೊಮ್ಮೆ ನಾವೇ ಸರಿ ಎಂದು ಹೇಳುತ್ತೇವೆ’ ಎಂದರು.

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸೂಚನೆ ಮೇರೆಗೆ ಸಿ.ಟಿ. ರವಿ ಅವರನ್ನು ಪೊಲೀಸರು ಹಲವು ಕಡೆ ಸುತ್ತಾಡಿಸಿದ್ದಾರೆ’ ಎಂಬ ಬಿಜೆಪಿ ನಾಯಕರ ಆರೋಪದ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ‘ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ. ನನ್ನ ಇಲಾಖೆಯಲ್ಲಿ ಹಸ್ತಕ್ಷೇಪ ಆಗುತ್ತಿಲ್ಲ’ ಎಂದರು.

‘ಸಿ.ಟಿ. ರವಿ ಆಕ್ಷೇಪಾರ್ಹ ಪದ ಬಳಸಿರುವ ಕುರಿತು ಮಾಧ್ಯಮಗಳಲ್ಲಿ ಬಂದಿರುವ ವರದಿಗಳ ಆಧಾರದಲ್ಲಿ ಪರಿಶೀಲನೆ ಮಾಡಲಾಗುವುದು. ಸಭಾಪತಿ ನಮಗೆ ಹೇಳಿದರೆ ಎಫ್‌ಎಸ್‌ಎಲ್‌ಗೆ ಕಳುಹಿಸಿ ಪರಿಶೀಲಿಸುತ್ತೇವೆ. ಇದು ಪರಿಷತ್‌ನ ಸದನದ ಒಳಗಡೆ ನಡೆದಿರುವ ಘಟನೆ. ಮಾಧ್ಯಮಗಳು ರೆಕಾರ್ಡ್ ಮಾಡಿದ್ದರಿಂದ ಹೊರಗಡೆ ಬಂದಿದೆ’ ಎಂದರು.

‘ಜಯಮಾಲಾ ಬಗ್ಗೆ ಮಾತನಾಡಿದ್ದು ಎಲ್ಲರಿಗೂ ಗೊತ್ತು’

ಪ್ರಜಾವಾಣಿ ವಾರ್ತೆ

ಸಿ.ಟಿ. ರವಿ

ಚಿಕ್ಕಮಗಳೂರು: ‘ಸುಳ್ಳನ್ನ ಸೋಲಿಸಬಹುದು, ಸತ್ಯವನ್ನ ಸೋಲಿಸಲು ಆಗುವುದಿಲ್ಲ. ಜಯಮಾಲಾ ಸಚಿವರಾದ ಸಂದರ್ಭದಲ್ಲಿ ಈ ಮಹಾ ತಾಯಿ ಹೇಳಿದ ಮಾತು ಏನು ಎಂಬುದನ್ನು ಎಲ್ಲರೂ ಕೇಳಿದ್ದಾರೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

‘ನಾನು ಏನು ಎಂಬುದೂ ಜನರಿಗೆ ಗೊತ್ತು. ಲಕ್ಷ್ಮೀ ಹೆಬ್ಬಾಳಕರ ಅವರು ಏನು ಎಂಬುದೂ ಜನರಿಗೆ ಗೊತ್ತಿದೆ. ನನ್ನ ರಾಜಕೀಯ ಜೀವನ ಕಾಲೇಜು ದಿನಗಳಿಂದ ಹೋರಾಟದ ಮೂಲಕ ಆರಂಭವಾಯಿತು. ಯಾರ ಯಾರ ರಾಜಕೀಯ ಹೇಗೆ ಶುರುವಾಯಿತು ಎಂಬುದನ್ನು ಸ್ಥಳೀಯರನ್ನು ಕೇಳಿ’ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ನನ್ನ ಪತ್ನಿ, ತಾಯಿ, ಅಕ್ಕಂದಿರ ಬಗ್ಗೆ ಮಾತನಾಡಿದ್ದನ್ನೂ ಕೇಳಿದ್ದೀರಿ. ತಮ್ಮ ತಪ್ಪು ಮುಚ್ಚಿಕೊಳ್ಳಲು ಸುಳ್ಳುಗಳ ಸರಮಾಲೆ ಹೆಣೆದಿದ್ದಾರೆ. ಕಣ್ಣೀರಿನಿಂದ ಲಾಭ ಗಿಟ್ಟಿಸಿಕೊಳ್ಳಬಹುದು ಎಂದು ಅವರು ಭಾವಿಸಿರಬಹುದು’ ಎಂದರು.

‘ಅವರ ಆಪ್ತ ಸಹಾಯಕ ಲಂಚ ಕೇಳಿದ್ದರಿಂದ ಒಬ್ಬರ ಸಾವಾಗುತ್ತದೆ. ನನ್ನ ಆಪ್ತ ಸಹಾಯಕರು ಎಂದೂ ಲಂಚ ಕೇಳಿಲ್ಲ, ಯಾರ ಸಾವಿಗೂ ನಾನು ಕಾರಣವಾಗಿಲ್ಲ’ ಎಂದು ಹೇಳಿದರು.

‘ಅವರ ದೃಷ್ಟಿಯಲ್ಲಿ ಬಿಜೆಪಿಯವರು ಎಲ್ಲರೂ ದುಶ್ಯಾಸನರೇ ಆಗಿರುವುದರಿಂದ ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಹೇಗೆ ನ್ಯಾಯ ಕೇಳುತ್ತಾರೆ’ ಎಂದು ಪ್ರಶ್ನಿಸಿದರು.

‘ಕಾಂಗ್ರೆಸಿಗರು ತುರ್ತು ಪರಿಸ್ಥಿತಿ ಮನಸ್ಥಿತಿಯಿಂದ ಹೊರಬರಬೇಕು. ನನಗೆ ಗಾಯ ಆಗಿ, ರಕ್ತ ಸುರಿದಿರುವುದನ್ನು ಜಗತ್ತೇ ನೋಡಿದೆ. ಪಕ್ಕೆ, ಬೆನ್ನಿನಲ್ಲಿ 3-4 ಗುರುತುಗಳು ಇನ್ನೂ ಇವೆ. ಸುವರ್ಣ ಸೌಧದ ಕಾರಿಡಾರ್‌ನಲ್ಲಿ ನನ್ನ ಮೇಲೆ ದಾಳಿಗೆ ಮುಂದಾದರು. ಅವರ ಆಪ್ತ ಸಹಾಯಕನಿಗೆ ಇಷ್ಟು ಸೊಕ್ಕು ಬರಲು ಕಾರಣ ಯಾರು’ ಎಂದು ಕೇಳಿದರು.

ಮನೆ ತನಕ ತಂದಿದ್ದೇಕೆ: ಸಿ.ಟಿ.ರವಿ ಪತ್ನಿ

‘ಸದನದಲ್ಲಿ ನಡೆದಿರುವುದನ್ನು ಲಕ್ಷ್ಮೀ ಹೆಬ್ಬಾಳಕರ ಅವರು ನಮ್ಮ ಮನೆ ತನಕ ತಂದಿರುವುದು ಏಕೆ’ ಎಂದು ಸಿ.ಟಿ.ರವಿ ಪತ್ನಿ ಪಲ್ಲವಿ ಪ್ರಶ್ನಿಸಿದರು.

‘ಸಿ.ಟಿ ರವಿಗೆ ಅವರದೇ ಆದ ಸಂಸ್ಕಾರ ಇದೆ. ರಾಜಕಾರಣಿ ಹೇಗಿರಬೇಕು ಎಂಬುದನ್ನು ಅವರನ್ನು ನೋಡಿ ಕಲಿತಿದ್ದೇನೆ. ಸುಮ್ಮನೆ ತಲೆಗೆ ಪಟ್ಟಿ ಕಟ್ಟಿಕೊಳ್ಳಲು ಯಾರಿಗೂ ತಲೆ ಹಾಳಾಗಿಲ್ಲ. ತಲೆಯಲ್ಲಿ ದೊಡ್ಡದಾಗಿ ತೂತಾಗಿದೆ. ತಲೆ ಕೂದಲಿನ ಮೇಲೆ ಬ್ಯಾಂಡೇಜ್ ಸ್ಟಿಕ್ಕರ್ ನಿಲ್ಲುವುದಿಲ್ಲ ಎಂದು ಪಟ್ಟಿ ಹಾಕಿದ್ದಾರೆ. ಒರಟುತನದ ಮಾತು ಲಕ್ಷ್ಮೀ ಅವರಿಗೆ ಅಭ್ಯಾಸವಾಗಿದೆ’ ಎಂದರು.

ಕಾಂಗ್ರೆಸ್ ಬಿಡುಗಡೆ ಮಾಡಿದ ವಿಡಿಯೊಗೆ ಬೆಲೆ ಇಲ್ಲ: ರವಿಕುಮಾರ್

ಬೆಂಗಳೂರು: ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರ ಕುರಿತು ಕಾಂಗ್ರೆಸ್‌ನವರು ಬಿಡುಗಡೆ ಮಾಡಿದ ವಿಡಿಯೊಗೆ ಯಾವುದೇ ಬೆಲೆ ಇಲ್ಲ ಎಂದು ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ವಿಧಾನಪರಿಷತ್ತಿನಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರು ಈಗಾಗಲೇ ಸ್ಪಷ್ಟನೆ ನೀಡಿ, ಆ ರೀತಿಯ ವಿಡಿಯೊ ದಾಖಲೆ ನಮ್ಮ ಬಳಿ ಇಲ್ಲ ಎಂದಿದ್ದಾರೆ. ಬೈದಿರುವ ಅಥವಾ ಅಂಥ ಮಾತನಾಡಿದ ವಿಡಿಯೊ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇವರು ಬಿಡುಗಡೆ ಮಾಡುವ ವಿಡಿಯೊ ಯಾವುದೇ ಆಧಾರ ಇಲ್ಲ, ಬೆಲೆಯೂ ಇಲ್ಲ’ ಎಂದರು.

‘ಬಸವರಾಜ ಹೊರಟ್ಟಿ ಅವರು ಹೇಳಿದ್ದಕ್ಕೆ ಮಾತ್ರ ಬೆಲೆ ಇದೆ. ಹೈಕೋರ್ಟ್ ಕೂಡಲೇ ಸಿ.ಟಿ.ರವಿ ಅವರನ್ನು ಬಿಡುಗಡೆ ಮಾಡಲು ಹೇಳಿರುವುದರಲ್ಲಿ ನಮಗೆ ಅರ್ಧ ಜಯ ಲಭಿಸಿದೆ’ ಎಂದು ತಿಳಿಸಿದರು.

‘ರವಿ ಅವರನ್ನು ಇಷ್ಟೆಲ್ಲಾ ಓಡಾಡಿಸಿದ್ದು ಯಾಕೆ? ಕಾಡಿನಲ್ಲಿ, ಕಬ್ಬಿನ ಗದ್ದೆಯಲ್ಲಿ ಧಾರವಾಡ, ಗದಗ, ಚಿಕ್ಕೋಡಿ ಜಿಲ್ಲೆ, ಬಾಗಲಕೋಟೆ ಜಿಲ್ಲೆ ಗಡಿ ಭಾಗ, ಈ ರೀತಿ ನಾಲ್ಕೈದು ಜಿಲ್ಲೆಗಳಲ್ಲಿ ಕರೆದುಕೊಂಡು ಹೋಗಿ ರಾತ್ರಿಯೆಲ್ಲ ಊಟ, ನೀರು ನೀಡದೆ, ನಿದ್ರಿಸಲು ಬಿಡದೇ ಅತ್ಯಂತ ವಿಚಿತ್ರ ಹಿಂಸೆ ಕೊಟ್ಟಿದ್ದಾರೆ. ತಲೆಗೆ ಪೆಟ್ಟಾದರೂ ಚಿಕಿತ್ಸೆ ನೀಡಿಲ್ಲ. ಈ ರೀತಿ ಚಿತ್ರ ಹಿಂಸೆ ಕೊಟ್ಟಿದ್ದು ಏಕೆ’ ಎಂದು ಅವರು ಪ್ರಶ್ನಿಸಿದರು.

‘ಸಿ.ಟಿ.ರವಿ ಅವರ ಮೇಲೆ ಹಲ್ಲೆ ಮಾಡಲು ನೂರಾರು ಜನರು ಸುವರ್ಣಸೌಧದ ಒಳಗೆ ಹೇಗೆ ಬಂದರು? ಒಳಗೆ ಬರಲು ಕಾರಣ ಯಾರು? ಯಾರ ಪತ್ರದೊಂದಿಗೆ ಒಳಗೆ ಬಂದಿದ್ದಾರೆ’ ಎಂದು ರವಿಕುಮಾರ್ ಪ್ರಶ್ನಿಸಿದರು.

10 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮೇಲೆ ಹಲ್ಲೆ ಯತ್ನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಪೊಲೀಸರು ಸ್ವಯಂಪ್ರೇರಿತ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಸೋಮವಾರ ದೂರು ದಾಖಲಿಸಿಕೊಂಡಿದ್ದು, ಆರೋಪಿಗಳಾಗಿ ಯಾರ ಹೆಸರನ್ನೂ ಉಲ್ಲೇಖಿಸಿಲ್ಲ. 10 ಅಪರಿಚಿತರಿಂದ ಹಲ್ಲೆಗೆ ಯತ್ನ ನಡೆದಿದೆ ಎಂದು ಬರೆಯಲಾಗಿದೆ.

ತಮ್ಮ ಕೊಲೆಗೆ ಯತ್ನ ನಡೆಸಲಾಗಿದೆ ಎಂದು ಆರೋಪಿಸಿ ಸಿ.ಟಿ. ರವಿ ಅವರು ನೀಡಿದ ದೂರನ್ನು ಪೊಲೀಸರು ಸ್ವೀಕರಿಸಿರಲಿಲ್ಲ. ಇದರಿಂದಾಗಿ ವಿಧಾನ ಪರಿಷತ್ ಸದಸ್ಯರಾದ ಡಿ.ಎಸ್. ಅರುಣ್, ಎಸ್.ವಿ.ಸಂಕನೂರು ಹಾಗೂ, ಕಿಶೋರ್ ಬಿ.ಎಸ್ ಅವರು ಸಚಿವಾಲಯದ ಕಾರ್ಯದರ್ಶಿ ಕಚೇರಿಗೆ ಪತ್ರ ಬರೆದು ದೂರು ನೀಡಿದ್ದರು. ಕಾರ್ಯದರ್ಶಿ ಕಚೇರಿಯಿಂದ ನಗರ ಪೊಲೀಸ್ ಕಮಿಷನರ್ ಕಚೇರಿಗೆ ಪತ್ರ ರವಾನೆಯಾಗಿದೆ. ಅದರ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಸಿ.ಟಿ. ರವಿ ಅವರು ಖಾನಾಪುರ ಠಾಣೆಯಲ್ಲಿ ನೀಡಿದ ಲಿಖಿತ ದೂರಿನ ಪರಿಶೀಲನೆ ನಡೆದಿದೆ. ಸೌಧದಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುವುದು. ಯಾರು ಕೃತ್ಯ ಎಸಗಿದ್ದಾರೆ ಎನ್ನುವುದನ್ನು ಖಚಿತಪಡಿಸಿಕೊಂಡು ಕ್ರಮ ಜರುಗಿಸುತ್ತೇವೆ’ ಎಂದು ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ತಿಳಿಸಿದ್ದಾರೆ.

‘ಸುರಕ್ಷತೆಗಾಗಿ ತಿರುಗಾಡಿಸಿದ್ದೇವೆ’

‘ಸಿ.ಟಿ. ರವಿ ಅವರ ಭದ್ರತೆ ದೃಷ್ಟಿಯಿಂದ ಬೇರೆ ಬೇರೆ ಕಡೆ ಕರೆದುಕೊಂಡು ಹೋಗಬೇಕಾಯಿತು. ಎನ್‌ಕೌಂಟರ್ ಮಾಡಲು ಅಲ್ಲ’ ಎಂದು ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಪ್ರತಿಕ್ರಿಯೆ ನೀಡಿದ್ದಾರೆ.

‘ರವಿ ಅವರನ್ನು ಬಂಧಿಸಿದ ಬಳಿಕ ಅವರನ್ನು ಹಿರೇಬಾಗೇವಾಡಿ ಠಾಣೆಗೆ ಕರೆದುಕೊಂಡು ಹೋಗುತ್ತಿದ್ದೆವು. ಅಲ್ಲಿ ಸಮಸ್ಯೆ ಆಗಬಹುದು ಎಂದು ಮಾಹಿತಿ ಬಂತು. ಆಗ ಖಾನಾಪುರ ಠಾಣೆಗೆ ಕರೆದುಕೊಂಡು ಹೋದೆವು. ಅಲ್ಲಿಯೂ ಜನ ಸೇರಿದರು. ಕೆಲವು ಗೊಂದಲದ ಘಟನೆಗಳೂ ಆದವು. ಅಷ್ಟರಲ್ಲಿ ಬೆಳಗಾವಿ ನಗರದಿಂದ ಹಾಗೂ ಅಕ್ಕಪಕ್ಕದ ಹಳ್ಳಿಗಳಿಂದ ಇನ್ನೂ ಜನ ಬರುತ್ತಿದ್ದಾರೆ ಎಂಬ ಮಾಹಿತಿ ಬಂತು. ಹಾಗಾಗಿ, ಬೇರೆ ಬೇರೆ ಕಡೆ ಕರೆದುಕೊಂಡು ಹೋಗಬೇಕಾಯಿತು’ ಎಂದು ಮಾಧ್ಯಮದವರಿಗೆ ಮಾಹಿತಿ ನೀಡಿದ್ದಾರೆ.

ಸುವರ್ಣಸೌಧ ಶುಚಿಗೆ ಯತ್ನ: ವಶಕ್ಕೆ

ಇಲ್ಲಿನ ಸುವರ್ಣ ವಿಧಾನ ಸೌಧದ ಪಾವಿತ್ರ್ಯ ಹಾಳಾಗಿದೆ ಎಂದು ಆರೋಪಿಸಿ, ಸೋಮವಾರ ಶುದ್ಧೀಕರಣ ಮಾಡಲು ಮುಂದಾಗಿದ್ದ ರೈತ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

‘ಅವಾಚ್ಯ ಪದಗಳ ಬಳಕೆಯಿಂದ ಸುವರ್ಣ ಸೌಧ ಮಲಿನಗೊಂಡಿದೆ. ಅದನ್ನು ಶುಚಿ ಮಾಡುತ್ತೇವೆ’ ಎಂದು ಮುಖಂಡರು ಘೋಷಣೆ ಕೂಗಿದರು.

ಪೊಲೀಸರು ಒಳಗೆ ಬಿಡದಿದ್ದಾಗ ಗೇಟ್ ಮುಂದೆಯೇ ಶುಚಿಗೊಳಿಸಲು ಮುಂದಾದರು. ಆಗ ಪೊಲೀಸರು ಅವರನ್ನು ವಶಕ್ಕೆ ಪಡೆದರು.

ಮುಖ್ಯಮಂತ್ರಿ ಸ್ಪಷ್ಟಪಡಿಸಲಿ: ಜೋಶಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರನ್ನು ಕಾರಿನಲ್ಲಿ ಸುತ್ತಾಡಿಸಿದ್ದು ತಮಗೆ ಗೊತ್ತಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿಕೆ ನೀಡುತ್ತಾರೆ. ಅಂದರೆ, ಗೃಹ ಸಚಿವರನ್ನೇ ಕತ್ತಲಲ್ಲಿ ಇಟ್ಟು ಪೊಲೀಸರು ಹೀಗೆ ಮಾಡಿದ್ದಾರಾ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರಶ್ನಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಸಹ ಪೊಲೀಸರು ತಪ್ಪು ಮಾಡಿದ್ದಾರೆ ಎಂದಿದ್ದಾರೆ. ಹಾಗಾದರೆ ಸರ್ಕಾರದಲ್ಲಿ ಏನು ನಡೆಯುತ್ತಿದೆ? ಇದರ ಹಿಂದಿನ ಸೂತ್ರಧಾರರು ಯಾರು ಎನ್ನುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಬೇಕು’ ಎಂದು ಅವರು ಆಗ್ರಹಿಸಿದರು.

‘ಸಿ.ಟಿ. ರವಿ ಅವರ ಆಕ್ಷೇಪಾರ್ಹ ಹೇಳಿಕೆ ಮುಚ್ಚಿಕೊಳ್ಳಲು ಬಿಜೆಪಿ ಮುಖಂಡರು ಪೊಲೀಸರ ಮೇಲೆ ಆರೋಪ ಮಾಡುತ್ತಿದ್ದಾರೆ’ ಎನ್ನುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಜೋಶಿ, ‘ನಾವು ಯಾವಾಗಲೂ ಮರ್ಯಾದೆಯಿಂದಲೇ ವರ್ತಿಸುತ್ತಿದ್ದೇವೆ. ಅವರ ಹಾಗೆ ನಾವೇನೂ ಮರ್ಯಾದೆ ಬಿಟ್ಟಿಲ್ಲ. ಕಾಂಗ್ರೆಸ್‌ನಲ್ಲಿ ಸಂಸ್ಕೃತಿ, ಸಂಸ್ಕಾರ ಅನ್ನುವುದೇ ಇಲ್ಲ. ಕೆಲ ನಾಯಕರನ್ನು ಹೊರತು ಪಡಿಸಿ ಉಳಿದವರೆಲ್ಲ ಅನಾಗರಿಕರ ಹಾಗೆ ವರ್ತಿಸುತ್ತಾರೆ’ ಎಂದು ಹರಿಹಾಯ್ದರು.

ಕಾನೂನು ಕ್ರಮಕ್ಕೆ ಮಹಾಸಭಾ ಆಗ್ರಹ

ಬೆಂಗಳೂರು: ‘ಬೆಳಗಾವಿಯಲ್ಲಿ ನಡೆದ ಚಳಿಗಾಲ ಅಧಿವೇಶನದ ವಿಧಾನ ಪರಿಷತ್ ಕಲಾಪದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಅವಾಚ್ಯ ಪದ ಬಳಕೆ ಮಾಡಿರುವ ಸಿ.ಟಿ. ರವಿ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ಸರ್ಕಾರವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಒತ್ತಾಯಿಸಿದೆ.

ಘಟನೆಯ ಕುರಿತು ವಿಷಾದ ವ್ಯಕ್ತಪಡಿಸಿರುವ ಮಹಾಸಭಾದ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ, ‘ಸಿ.ಟಿ. ರವಿ ಅವಾಚ್ಯ ಪದ ಬಳಕೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿನ ವರದಿ ನೋಡಿ ತುಂಬಾ ಬೇಸರವಾಯಿತು. ಭಾರತದಲ್ಲಿ ಹೆಣ್ಣು ಮಕ್ಕಳಿಗೆ ವಿಶೇಷ ಸ್ಥಾನಮಾನ ಮತ್ತು ಗೌರವ ನೀಡಲಾಗಿದೆ. ನಾಲಿಗೆಯು ನಾಗರಿಕತೆಯನ್ನು ಹೇಳುತ್ತದೆ. ಜನಪ್ರತಿನಿಧಿಗಳಾದವರು ಸದನದ ಗೌರವ, ಘನತೆ ಕಾಪಾಡಬೇಕು’ ಎಂದಿದ್ದಾರೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಸಾರಿಗೆ ಸದನ ಮುಖ್ಯ ರಸ್ತೆ, ಕಲಬುರಗಿ – 585102. ದೂರವಾಣಿ ಸಂ : 08472–227687
ಸಂಖ್ಯೆ : ಕಕಸಾ/ಕೇಕ/ನೇಮಕ/ನೇ–1/ಕ–387/2124/2024–25 ದಿನಾಂಕ: 21–12–2024
ಪ್ರಕಟಣೆ
ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೇಮಕಾತಿ ಜಾಹೀರಾತು ಸಂಖ್ಯೆ : 01/2022 ಮತ್ತು ಸಂಖ್ಯೆ: 02/2022 ದಿನಾಂಕ : 17–08–2022 ರಡಿ ಪ.ಜಾ./ಪ.ಪಂಗಡಗಳ ವಿವಿಧ ಹಿಂಬಾಕಿ (Backlog) ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ನಿಗಮದ ವೆಬ್ ವಿಳಾಸ https://kkrtcjobs.karnataka.gov.in ದಲ್ಲಿ ದಿನಾಂಕ : 21–12–2024 ರಂದು ಪ್ರಕಟಿಸಲಾಗಿದೆ.
ವಾ.ಸಾ.ಸಂ.ಇ/ಕಲಬುರಗಿ/761/ಕೆ.ಎಸ್.ಎಂ.ಸಿ.&ಎ/2023–24 ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಹುಬ್ಬಳ್ಳಿ–ಧಾರವಾಡ ಬಿ.ಆರ್.ಟಿ.ಎಸ್. ಕಂಪನಿ ನಿಯಮಿತ
ಕಛೇರಿ: ಎರಡನೇ ಮಹಡಿ, ಬಿ–ಬ್ಲಾಕ್ ಬಿಲ್ಡಿಂಗ್, ವಾ.ಕ.ರ.ಸಾ. ಸಂಸ್ಥೆಯ ನೂತನ ಬಸ್ ಟರ್ಮಿನಲ್, ಹೊಸ ಕೋರ್ಟ್ ಹತ್ತಿರ, ಹೊಸೂರು, ಹುಬ್ಬಳ್ಳಿ–580021.
ದೂರವಾಣಿ : 0836–2222007, ಫ್ಯಾಕ್ಸ್: 0836–2322700 ಇ–ಮೇಲ್: hdbrts@gmail.com / hdbrtsinfra@gmail.com
ವೆಬ್‌ಸೈಟ್: www.hdbrts.com CIN: U60200KA2021SGCO63887
ಸಂಖ್ಯೆ: ಹೆಚ್‌ಡಿಬಿಆರ್‌ಟಿಎಸ್/ಟೆಂಡರ್/ಸಿವಿಲ್/2024–25/520 ದಿನಾಂಕ: 24–12–2024
ಟೆಂಡರ್ ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಕಂಪನಿಯಲ್ಲಿ ಬಿಆರ್‌ಟಿಎಸ್ ಯೋಜನೆಯಡಿಯಲ್ಲಿ, ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಸರ್ವಿಸ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಇ.ಎಂ.ಡಿ ಮತ್ತು ಟೆಂಡರ್ ಶುಲ್ಕವಿಲ್ಲದ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು / ಇಂಡೆಂಟ್ ನಂ.	ಲೈಸೆನ್ಸ್ ಫೀ ಪ್ರತಿ ವರ್ಷಕ್ಕೆ / ಟೆಂಡರ್ ಮೊತ್ತ	ಟೆಂಡರ್ ಪ್ರಿ–ಬಿಡ್ ಸಭೆಯ ದಿನಾಂಕ ಮತ್ತು ಸಮಯ	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಇ.ಎಂ.ಡಿ ಮೊತ್ತ
1	ಹುಬ್ಬಳ್ಳಿಯ ಹೊಸೂರು ಕ್ರಾಸ್‌ನಿಂದ ಧಾರವಾಡದ ಜುಬಲೀ ಸರ್ಕಲ್‌ವರೆಗೆ ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಕಾರಿಡಾರ್‌ನಲ್ಲಿ ಬಿಲ್ ಬೋರ್ಡ್ / ಯುನಿಪೋಲ್ / ಬೈಪೋಲ್ / ಗ್ಯಾಂಟ್ರಿಯನ್ನು ದೀಪಾಲಂಕಾರದೊಂದಿಗೆ ದೊಡ್ಡದಾದ ಮಾದರಿಯಲ್ಲಿ ಜಾಹೀರಾತು ಪ್ರದರ್ಶನ ಫಲಕಗಳನ್ನು ನಿರ್ಮಿಸಲು ಮತ್ತು ಕಾರ್ಯಾಚರಣೆಗೆ DBOT ಆಧಾರದ ಮೇಲೆ ಪರವಾನಿಗೆದಾರರ ಆಯ್ಕೆ. (ಪ್ಯಾಕೇಜ್–01) (HDBRTS/2024-25/SE0014)	ರೂ. 1,16,49,120/-	06–01–2025 ರಂದು ಬೆಳಿಗ್ಗೆ 11.00 ಗಂಟೆಗೆ ಕಡ್ಡಾಯವಾಗಿ ಟೆಂಡರ್ ಪ್ರಿ–ಬಿಡ್ ಸಭೆಗೆ ಭಾಗವಹಿಸಲು ಕೋರಿದೆ. ಸ್ಥಳ: ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಕಂ.ಲಿ. ಕಛೇರಿ: ಎರಡನೇ ಮಹಡಿ, ಬಿ–ಬ್ಲಾಕ್ ಬಿಲ್ಡಿಂಗ್, ವಾ.ಕ.ರ.ಸಾ. ಸಂಸ್ಥೆಯ ನೂತನ ಬಸ್ ಟರ್ಮಿನಲ್, ಹೊಸ ಕೋರ್ಟ ಹತ್ತಿರ, ಹೊಸೂರು, ಹುಬ್ಬಳ್ಳಿ	20-01-2025 upto 17:00 Hrs.	21-01-2025 at 17:30 Hrs.	Rs. 12,00,000/- E-Payment (Refer Bid doc.)
2	ಹೊಸೂರು ಕ್ರಾಸ್ ಹುಬ್ಬಳ್ಳಿಯಿಂದ ಜುಬಲೀ ಸರ್ಕಲ್ ಧಾರವಾಡವರೆಗೆ ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಯೋಜನೆಯಡಿಯಲ್ಲಿ ನಿರ್ಮಿಸಲಾದ 08 ಪಾದಾಚಾರಿ ಮೇಲ್ಸೇತುವೆಯಲ್ಲಿ ದೀಪಾಲಂಕಾರದೊಂದಿಗೆ ದೊಡ್ಡದಾದ ಜಾಹೀರಾತು ಪ್ರದರ್ಶನ ಫಲಕಗಳನ್ನು ಅಳವಡಿಸಲು ಮತ್ತು ಕಾರ್ಯಾಚರಣೆಗೆ ಪರವಾನಿಗೆದಾರರ ಆಯ್ಕೆ. (ಪ್ಯಾಕೇಜ್–02) (HDBRTS/2024-25/SE0015)	ರೂ. 56,30,760/-		20-01-2025 upto 17:00 Hrs.	21-01-2025 at 17:30 Hrs.	Rs. 2,82,083/- E-Payment (Refer Bid doc.)
3	ಹೊಸೂರು ಕ್ರಾಸ್ ಹುಬ್ಬಳ್ಳಿಯಿಂದ ಧಾರವಾಡದ ಜುಬಲೀ ಸರ್ಕಲ್ ವರೆಗೆ DBOT ಆಧಾರದ ಮೇಲೆ ಹೆಚ್‌ಡಿಬಿಆರ್‌ಟಿಎಸ್‌ನ 28 ಬಸ್ ನಿಲ್ದಾಣಗಳ ಒಳಗೆ LED / LCD ಮಾನಿಟರ್, ವಾಲ್ ಮೌಂಟೆಡ್ ಡಿಸ್ಪ್ಲೇ ಬೋರ್ಡ್, ಲೈಟಿಂಗ್‌ನೊಂದಿಗೆ ವಾಲ್‌ಮೌಂಟೆಡ್ ಡಿಸ್ಪ್ಲೇ ಬೋರ್ಡ್ ಇತ್ಯಾದಿಗಳೊಂದಿಗೆ ಅಳವಡಿಸಿ ಜಾಹೀರಾತು ಪ್ರದರ್ಶನವನ್ನು ಮಾಡಲು ಪರವಾನಿಗೆದಾರರ ಆಯ್ಕೆ. (ಪ್ಯಾಕೇಜ್–03) (HDBRTS/2024-25/SE0016)	ರೂ. 35,64,287/-		20-01-2025 upto 17:00 Hrs.	21-01-2025 at 17:30 Hrs.	Rs. 1,78,212/- E-Payment (Refer Bid doc.)

ಸಹಿ/– ಪ್ರಧಾನ ವ್ಯವಸ್ಥಾಪಕರು (ಸಿವಿಲ್)
ವಾಸಾಸಂಇ/ಧಾರವಾಡ/779/ಅಡ್ವರ್ಟೋರ್/2024–25 ಹೆಚ್.ಡಿ.ಬಿ.ಆರ್.ಟಿ.ಎಸ್ ಕಂಪನಿ ನಿಯಮಿತ

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಸಕಾಅ–12/ಟೆಂಡರ್–19/2024–25 ದಿನಾಂಕ: 23.12.2024
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ಬೆಂಗಳೂರು ನಗರ, ಉಡುಪಿ, ಚಿಕ್ಕಬಳ್ಳಾಪುರ, ತುಮಕೂರು, ಚಿಕ್ಕಮಗಳೂರು, ಮಂಡ್ಯ, ಹಾಸನ, ಮೈಸೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೊರಾರ್ಜಿ ದೇಸಾಯಿ, ಇಂದಿರಾಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ದುರಸ್ತಿ ಕಾಮಗಾರಿಗಳಿಗೆ (ಟೆಂಡರ್** ಇಂಡೆಂಟ್ ಸಂಖ್ಯೆ: **416, 415, 402, 418, 419, 420, 421, 422, 434, 438, 446, 447, 463, 466, 467, 468, 469, 472, 477, 478, 479, 358/call-2, 383/call-2 & 386/call-2)** ಇ–ಪೋರ್ಟಲ್ ಮುಖಾಂತರ ದಿನಾಂಕ: **23.12.2024 ರಂದು** ಟೆಂಡರ್ ಕರೆಯಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 06.01.2025ರಂದು** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.
ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು–12
DIPR/CP/YC/3937/2024-25 ಕ.ವ.ಶಿ.ಸಂ.ಸಂಘ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, “ಸಂಪರ್ಕ ಸೌಧ”, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: mdkrdcl@gmail.com, cekrdcl@gmail.com ವೆಬ್‌ಸೈಟ್: http://www.krdcl.in
ಸಂಖ್ಯೆ: ಕರಅನಿನಿ/ಐಎಫ್‌ಬಿ/2024–25/18 ದಿನಾಂಕ: 23–12–2024
ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಗುಣಮಟ್ಟ ಕಂ ವೆಚ್ಚ ಆಧಾರಿತ ಆಯ್ಕೆ (**QCBS**) ಆಧಾರದ ಮೇಲೆ ದ್ವಿ ಲಕೋಟೆ ಪದ್ಧತಿಯಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸರ ಅಗತ್ಯತೆಯಂತೆ ಈ ಕೆಳಕಂಡ ಸಂಬಂಧಿತ ಕಾಮಗಾರಿಗಳಲ್ಲಿ ಅನುಭವವಿರುವ ಏಜೆನ್ಸಿಗಳಿಂದ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: “ಬೆಂಗಳೂರು ನಗರದ ರಸ್ತೆ ಸುರಕ್ಷತೆ ಪ್ರಾಧಿಕಾರ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ಸಂಚಾರ ಪೊಲೀಸ್ (ಬಿಟಿಪಿ) ರವರ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣಾ ಘಟಕಕ್ಕೆ (ಪಿಎಂಯು) ಸಮಾಲೋಚನಾ ಸೇವೆಗಳನ್ನು ಒದಗಿಸುವ ಕಾಮಗಾರಿ”. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ):** 2.95 (ಜಿಎಸ್‌ಟಿ ಹೊರತುಪಡಿಸಿ). **ಅರ್ನೆಸ್ಟ್ ಠೇವಣಿ ಹಣ (ಇಎಂಡಿ) (ರೂ. ಲಕ್ಷಗಳಲ್ಲಿ):** 2.96 ಕೆಪಿಪಿ ಪೋರ್ಟಲ್ ಮೂಲಕ. **ಕಾಮಗಾರಿ/ಸೇವೆಗಳು ಪೂರ್ಣಗೊಳ್ಳುವ ಕಾಲಾವಧಿ (ಮಳೆಗಾಲ ಸೇರಿದಂತೆ)** : 48 ತಿಂಗಳು (ಸರಬರಾಜು ಮಾಡಿ, ಅಳವಡಿಸಿ, ಪರೀಕ್ಷಿಸಿ, ಕಾರ್ಯಚಾಲನೆ ಮಾಡಿ, ತರಬೇತಿ ನೀಡುವುದು).
ಆಸಕ್ತ ಅರ್ಜಿದಾರರು ಬಿಡ್ಡಿಂಗ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **www.kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಬಿಡ್‌ಗಳು ಮತ್ತು ಇಎಂಡಿಯನ್ನು (ವಿದ್ಯುನ್ಮಾನವಾಗಿ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬೇಕು.
ವಿವಿಧ ಚಟುವಟಿಕೆಗಳಿಗೆ ಟೆಂಡರ್ ದಿನಾಂಕಗಳು: (ಎ) ಟೆಂಡರ್‌ನ ಆಕ್ಷೇಪಣೆ/ವಿಚಾರಣೆಯನ್ನು ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ: **07.01.2025ರ 17.30 ಗಂಟೆವರೆಗೆ.** ಅರ್ಜಿದಾರರು ಎಲೆಕ್ಟ್ರಾನಿಕ್ ಮೇಲ್ **cekrdcl@gmail.com** ಮುಖಾಂತರ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು. (ಬಿ) ಪೂರ್ವ ಬಿಡ್ ಸಭೆಯ ದಿನಾಂಕ: **08.01.2025ರಂದು 16.30 ಗಂಟೆಗೆ ಜಂಟಿ ಪೊಲೀಸ್ ಆಯುಕ್ತರವರ ಕಚೇರಿ, ಬೆಂಗಳೂರು ನಗರ ಪೊಲೀಸ್, ನಂ. 5, ಸಂಚಾರ ನಿರ್ವಹಣಾ ಕೇಂದ್ರ, 2ನೇ ಮಹಡಿ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001** ಇಲ್ಲಿ ನಿಯೋಜಿಸಲಾಗಿದೆ. (ಸಿ) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **21.01.2025ರ 17.30 ಗಂಟೆವರೆಗೆ.** (ಡಿ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23.01.2025ರಂದು 11.00 ಗಂಟೆಗೆ.**
* ಇನ್ನು ಮುಂದೆ ಟೆಂಡರ್ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/– ಮುಖ್ಯ ಅಭಿಯಂತರರು,
DIPR/CP/YC/3925/2024-25 ಕರಅನಿನಿ ಬೆಂಗಳೂರು

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಆಯುಕ್ತರುರವರ ಕಛೇರಿ, ಕಂದಾಯ ಶಾಖೆ, ಮೈಸೂರು.
ಸಂಖ್ಯೆ: ಮೈನಪಾ/ಕಂ.ಶಾ/ಜಾಹಿರಾತು/ಹೆಚ್‌ಎಪಿಆರ್/279/2014–15 ದಿನಾಂಕ: 20.12.2024
ಸಾರ್ವಜನಿಕ ಪ್ರಕಟಣೆ
ಮೈಸೂರಿನ 245 ಪರಿಶಿಷ್ಟ ಜಾತಿಯ ವೀಳ್ಯದೆಲೆ ಬೆಳೆಗಾರರಿಗೆ ಮೈಸೂರು ಮಹಾನಗರ ಪಾಲಿಕೆಯ ಸೂಯೇಜ್ ಫಾರಂನಲ್ಲಿ ತಲಾ 05 ಗುಂಟೆಯಂತೆ ಜಮೀನು ನೀಡುವ ಕುರಿತು ಸರ್ಕಾರದ ಆದೇಶ ಸಂಖ್ಯೆ ನಅಇ 192 ಎಸಿಎಂ 2016, ಬೆಂಗಳೂರು, ದಿನಾಂಕ 16.01.2018 ಹಾಗೂ ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲ್ ನಿರ್ಣಯ ಸಂಖ್ಯೆ 5) 09, ದಿನಾಂಕ 09.06.2023 ಮತ್ತು ಕೌನ್ಸಿಲ್ ನಿರ್ಣಯ ಸಂಖ್ಯೆ 22) 185, ದಿನಾಂಕ 22.11.2024ರ ರೀತ್ಯಾ ವೀಳ್ಯದೆಲೆ ಬೆಳೆಯುವ ಉದ್ದೇಶಕ್ಕೆ ಮಾತ್ರ ಉಪಯೋಗಿಸುವ ಷರತ್ತಿಗೊಳಪಟ್ಟು ಆಯ್ಕೆಯಾಗಿರುವ ಒಟ್ಟು 85 ಜನ ಫಲಾನುಭವಿಗಳ ಪೈಕಿ 83 ಫಲಾನುಭವಿಗಳಿಗೆ ಜಮೀನು ಹಂಚಿಕೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಆದುದರಿಂದ ಸದರಿ 83 ಜನ ಫಲಾನುಭವಿಗಳನ್ನು ಹೊರತುಪಡಿಸಿ ಉಳಿಕೆ ವೀಳ್ಯದೆಲೆ ಬೆಳೆಗಾರ ಫಲಾನುಭವಿಗಳಿಗೆ ಜಮೀನನ್ನು ಹಂಚಿಕೆ ಮಾಡುವ ಸಲುವಾಗಿ ಮತ್ತೊಮ್ಮೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಫಲಾನುಭವಿ/ವಾರಸುದಾರರು ಈ ಹಿಂದೆ ಅರ್ಜಿ ಮತ್ತು ದಾಖಲಾತಿಗಳನ್ನು ಸಲ್ಲಿಸಿದ್ದರೂ ಸಹಾ ಮತ್ತೊಮ್ಮೆ ಎಲ್ಲರೂ ಅರ್ಜಿ ಮತ್ತು ಅಗತ್ಯ ದಾಖಲಾತಿಗಳನ್ನು ವಲಯ ಆಯುಕ್ತರು, ವಲಯ ಕಛೇರಿ–02, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಈ ಕಛೇರಿಗೆ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 45 ದಿನಗಳೊಳಗೆ ಕಛೇರಿ ಅವಧಿಯಲ್ಲಿ ಸಲ್ಲಿಸಲು ಈ ಮೂಲಕ ಕೋರಿದೆ. ಒಂದು ವೇಳೆ ಅರ್ಜಿ ಮತ್ತು ಅಗತ್ಯ ದಾಖಲಾತಿಗಳನ್ನು ಸಲ್ಲಿಸದೇ ಇದ್ದಲ್ಲಿ ಅಗತ್ಯ ದಾಖಲೆ ಸಲ್ಲಿಸಿದ ಅರ್ಹ ಫಲಾನುಭವಿಗಳನ್ನು ಮಾತ್ರ ಪರಿಗಣಿಸಿ 05 ಗುಂಟೆ ಜಮೀನನ್ನು ಹಂಚಿಕೆ ಮಾಡಲು ಕ್ರಮವಹಿಸಲಾಗುವುದೆಂದು ತಿಳಿಯಪಡಿಸಿದೆ.
ಸಹಿ/– ಆಯುಕ್ತರು
DIPR/MYS/KAVITA/993/2024-25 ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
BANGALORE THE IT CAPITAL OF INDIA
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಮೊದಲ ಮಹಡಿ ಸಂಖ್ಯೆ 59, ಕುಮಾರ ಪಾರ್ಕ್ ಪಶ್ಚಿಮ ವಿಸ್ತರಣೆ, ರೈಲ್ವೆ ಪ್ಯಾರಲಲ್ ರೋಡ್, ಶೇಷಾದ್ರಿಪುರಂ, ಬೆಂಗಳೂರು 560020
ಸಂಖ್ಯೆ: KSEDCL/ITS/GOODS-001/2024-25 ದಿನಾಂಕ: 23.12.2024
ಇ–ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), **1. Empanelment of vendors for supply of ICT Goods- Desktop, Laptop and All-in-one computer, 2. Empanelment of vendors for supply of ICT Goods- Printers, 3. Empanelment of vendors for supply of ICT Goods- Tablets 4. Empanelment of vendors for supply of ICT Goods- Mini PC** ಸಂಸ್ಥೆಗಳನ್ನು ಆಯ್ಕೆ ಮಾಡಲು 15 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080–2222 5645 / 8105844665)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2024-25/ IND0279	Empanelment of vendors for supply of ICT Goods- Desktop, Laptop and All-in-one computer	06.01.2025
2	KEONICS/ 2024-25/ IND0280	Empanelment of vendors for supply of ICT Goods- Printers	06.01.2025
3	KEONICS/ 2024-25/ IND0281	Empanelment of vendors for supply of ICT Goods- Tablets	08.01.2025
4	KEONICS/ 2024-25/ IND0282	Empanelment of vendors for supply of ICT Goods- Mini PC	08.01.2025

DIPR/CP/BCPL/3944/2024-25 ಸಹಿ/– ನಿರ್ದೇಶಕರು (ಹಣಕಾಸು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ತಡವಾಗಿ ಸಿಕ್ಕ ಯಶಸ್ಸು ವ್ಯಕ್ತಿತ್ವವನ್ನು ರೂಪಿಸುತ್ತದೆ.
ತಕ್ಷಣವೇ ಸಿಕ್ಕ ಯಶಸ್ಸು ಅಹಂಕಾರವನ್ನು ಸೃಷ್ಟಿಸುತ್ತದೆ.
-ಸುಧಾ ಮೂರ್ತಿ

ಪರಿಷತ್‌ನಲ್ಲಿ ಸಚಿವೆಯ ನಿಂದನೆ ಆರೋಪ ನಿಷ್ಪಕ್ಷಪಾತ ತನಿಖೆ ತ್ವರಿತವಾಗಿ ಆಗಲಿ

ಕರ್ನಾಟಕದ ರಾಜಕಾರಣಿಗಳು ಸಾರ್ವಜನಿಕ ಜೀವನದಲ್ಲಿ ಸಭ್ಯತೆಯನ್ನು ಕಾಪಾಡಿಕೊಂಡ ಹೆಗ್ಗಳಿಕೆಯನ್ನು ಹೊಂದಿದ್ದರು. ಆದರೆ ಕೆಲವು ವರ್ಷಗಳಿಂದ ರಾಜ್ಯ ರಾಜಕಾರಣವು ಸಭ್ಯತೆಯ ವಿಚಾರದಲ್ಲಿ ಅವನತಿಯ ಹಾದಿ ಹಿಡಿದಿದೆ ಎಂಬುದಕ್ಕೆ ಹಲವು ನಿದರ್ಶನಗಳು ಸಿಗುತ್ತವೆ. ವಿಧಾನ ಪರಿಷತ್ ಸದಸ್ಯ, ಬಿಜೆಪಿ ನಾಯಕ ಸಿ.ಟಿ. ರವಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಉದ್ದೇಶಿಸಿ ಅವಾಚ್ಯ ಮಾತುಗಳನ್ನು ಆಡಿದ್ದಾರೆ ಎಂದು ಪೊಲೀಸರಲ್ಲಿ ದೂರು ದಾಖಲಾಗಿದೆ, ಸಚಿವೆ ಲಕ್ಷ್ಮೀ ಅವರೇ ಖುದ್ದಾಗಿ ದೂರು ನೀಡಿದ್ದಾರೆ. ರವಿ ಅವರು ಇಂತಹ ಮಾತುಗಳನ್ನು ಆಡಿದ್ದರೆ ಅದು ರಾಜ್ಯ ವಿಧಾನ ಪರಿಷತ್ತಿನ ಘನತೆಗೆ ಕುಂದು ತರುವಂಥದ್ದು. ವಿಧಾನ ಪರಿಷತ್ತಿನಲ್ಲಿ ರವಿ ಅವರು, ಕಲಾಪದ ಅವಧಿಯ ನಂತರ ತಮ್ಮನ್ನು ಉದ್ದೇಶಿಸಿ ಬಹಳ ಅವಹೇಳನಕಾರಿಯಾದಂತಹ ಮಾತನ್ನು ಮತ್ತೆ ಮತ್ತೆ ಆಡಿದ್ದಾರೆ ಎಂದು ಲಕ್ಷ್ಮೀ ದೂರಿದ್ದಾರೆ. ಆದರೆ ಈ ಆರೋಪವನ್ನು ರವಿ ನಿರಾಕರಿಸಿದ್ದಾರೆ. ಆಕ್ಷೇಪಾರ್ಹ ಪದಗಳು ಪರಿಷತ್ತಿನ ಕಲಾಪದ ಕಡತಗಳಲ್ಲಿ ದಾಖಲಾಗಿಲ್ಲ ಎಂದು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ. ಆದರೆ, ರವಿ ಅವರು ಕೆಟ್ಟ ಪದವನ್ನು ಬಳಸಿರುವುದಕ್ಕೆ ಆಡಿಯೊ ಮತ್ತು ವಿಡಿಯೊ ಸಾಕ್ಷ್ಯ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಈ ನಡುವೆ, ರವಿ ಅವರ ವಿಚಾರವಾಗಿ ಪೊಲೀಸರು ಒರಟಾಗಿ ನಡೆದುಕೊಂಡ ಬಗೆ ಹಾಗೂ ಅವರನ್ನು ಇಡೀ ರಾತ್ರಿ ವಾಹನದಲ್ಲಿ ಕುಳ್ಳಿರಿಸಿಕೊಂಡು ಅಲೆದಾಡಿಸಿದ ಬಗೆಯು ಪೊಲೀಸರ ಮೇಲೆ ರಾಜಕೀಯ ಒತ್ತಡ ಇತ್ತು ಎಂಬ ಆರೋಪಗಳಿಗೆ ಪುಷ್ಟಿ ನೀಡುವಂತಿದೆ. ಪ್ರಕರಣದಲ್ಲಿ ತ್ವರಿತವಾಗಿ ಮಧ್ಯಪ್ರವೇಶಿಸಿದ ಹೈಕೋರ್ಟ್, ರವಿ ಅವರಿಗೆ ಜಾಮೀನು ಮಂಜೂರು ಮಾಡಿತು. ಹಾಗೆಯೇ, ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಪಾಲಿಸದೇ ಇದ್ದುದಕ್ಕಾಗಿ ಪೊಲೀಸರಿಗೆ ಛೀಮಾರಿ ಹಾಕಿತು. ಪೊಲೀಸರ ನಡೆ ಕುರಿತು ಹಾಗೂ ಪೊಲೀಸರ ವಶದಲ್ಲಿ ಇದ್ದಾಗ ತಮ್ಮ ಮೇಲೆ ಹಲ್ಲೆ ನಡೆದಿದೆ ಎಂದು ರವಿ ಅವರು ಮಾಡಿರುವ ಆರೋಪದ ಬಗ್ಗೆ ತನಿಖೆ ಆಗಬೇಕಿದೆ.

ತಾವು ಬಳಸುವ ಪದಗಳು, ತಮ್ಮ ನಡೆಗಳ ಪರಿಣಾಮ ಏನಾಗಬಹುದು ಎಂಬುದನ್ನು ರಾಜಕಾರಣಿಗಳು ಅರ್ಥ ಮಾಡಿಕೊಳ್ಳಬೇಕು

ವಿಧಾನ ಪರಿಷತ್ತಿನ ಒಳಗೆ ಇಂಥದ್ದೊಂದು ವಿವಾದ ಸೃಷ್ಟಿಯಾಗಿದ್ದು ಬಹಳ ವಿಷಾದಕರ. ವಿಧಾನ ಪರಿಷತ್ತು ಹಿರಿಯರ ಮನೆ. ಅದು ಅನುಭವ, ವಿವೇಕ ಮತ್ತು ಪ್ರಬುದ್ಧ ವ್ಯಕ್ತಿತ್ವದವರ ಮನೆಯಾಗಿರಬೇಕು. ವಿಧಾನ ಪರಿಷತ್ತು ವಿಧಾನಸಭೆಗೆ ಮಾದರಿಯಾಗಿ ನಿಲ್ಲಬೇಕು. ಆದರೆ, ಈಗ ನಡೆದಿರುವ ವಿದ್ಯಮಾನವು ಶಾಸನಸಭೆಗಳ ಸದಸ್ಯರಲ್ಲಿ ಕೆಲವರು ಸಭ್ಯತೆಯ ಶಿಷ್ಟಾಚಾರವನ್ನು ಪಾಲಿಸುತ್ತಿಲ್ಲ ಎಂಬುದನ್ನು ತೋರಿಸುತ್ತಿದೆ. ಇದು ಬಹಳ ಕಳವಳಕಾರಿ. ರವಿ ಅವರು ಸಂಯಮವನ್ನು ಕಳೆದುಕೊಂಡು ಹಲವು ಬಾರಿ ಮಾತನಾಡಿದ್ದಿದೆ. ಹಿರಿಯ ರಾಜಕಾರಣಿಗಳು ಹೊಂದಿರಬೇಕಿರುವ ಸಮತೂಕದ, ಸಂಯಮದ ಸ್ವಭಾವ ತಮ್ಮದಲ್ಲ ಎಂಬುದನ್ನು ಅವರು ಮತ್ತೆ ಮತ್ತೆ ತೋರಿಸಿಕೊಟ್ಟಿದ್ದಾರೆ. ರವಿ ಅವರು ಹಿಂದೊಂದು ಸಂದರ್ಭದಲ್ಲಿ ಬಿಜೆಪಿಯ ಭರವಸೆಯ ನಾಯಕರಾಗಿ ಕಾಣಿಸಿಕೊಂಡಿದ್ದರು. ಆದರೆ ಈಗ ಅವರ ರಾಜಕೀಯ ಜೀವನವು ಇಳಿಜಾರಿನಲ್ಲಿ ಸಾಗುತ್ತಿರುವಂತೆ ಕಾಣುತ್ತಿದೆ. ಇಳಿಜಾರಿನ ಹಾದಿಯಲ್ಲಿ ಇರುವ ಅವರ ರಾಜಕೀಯ ಬಂಡಿಗೆ ಇನ್ನಷ್ಟು ವೇಗ ನೀಡುವ ಕೆಲಸವನ್ನು ಈಗಿನ ಪ್ರಸಂಗವು ಮಾಡುವಂತಿದೆ.

ರವಿ ಅವರು ಲಕ್ಷ್ಮೀ ಅವರನ್ನು ಉದ್ದೇಶಿಸಿ ಕೆಟ್ಟ ಪದವನ್ನು ಬಳಸಿದ್ದಾರೆ ಎಂಬುದು ವಿಧಿವಿಜ್ಞಾನ ಪ್ರಯೋಗಾಲಯದ ವರದಿಯ ಮೂಲಕ ಸಾಬೀತಾದರೆ, ರವಿ ಅವರು ಕಾನೂನಿನ ಅಡಿ ಕಠಿಣ ಕ್ರಮಕ್ಕೆ ಗುರಿಯಾಗಲೇಬೇಕಾಗುತ್ತದೆ. ಹೆಣ್ಣುಮಕ್ಕಳ ವಿಚಾರದಲ್ಲಿ ಯಾರೊಬ್ಬರೂ, ಯಾವುದೇ ಪಕ್ಷದವರೂ ಹಗುರವಾಗಿ ಹಾಗೂ ಅಸಭ್ಯವಾಗಿ ಮಾತನಾಡುವುದು ಸಹ್ಯವಲ್ಲ. ಅಂತಹ ಕೃತ್ಯಗಳಿಗೆ ಕ್ಷಮೆ ಇರಬಾರದು. ರವಿ ಅವರು ಕೆಟ್ಟ ಪದವನ್ನು ಬಳಕೆ ಮಾಡಿರುವುದು ಪರಿಷತ್ತಿನಲ್ಲಿ ಕಲಾಪ ಮುಂದೂಡಿದ ನಂತರ ಎಂದು ಆರೋಪಿಸಲಾಗಿದೆ. ಹೀಗಿದ್ದರೂ ಸದನ ನಡೆಯುವ ಸ್ಥಳದಲ್ಲೇ ಈ ಮಾತು ಆಡಿದ್ದಾರೆ ಎಂದು ಆರೋಪಿಸಿರುವ ಕಾರಣ ಪರಿಷತ್ತಿನ ರಕ್ಷಕನಾಗಿ ಸಭಾಪತಿಯವರು ಈ ಘಟನೆಯ ಬಗ್ಗೆ ನಿಷ್ಪಕ್ಷಪಾತ ತನಿಖೆ ಆಗುವಂತೆ ನೋಡಿಕೊಳ್ಳಬೇಕು. ತನಿಖೆ ತ್ವರಿತವಾಗಿ ಪೂರ್ಣಗೊಂಡು ಜನರಿಗೆ ಸತ್ಯಾಂಶ ಗೊತ್ತಾಗಬೇಕು. ಇಲ್ಲಿ ಇರುವುದು ಪಕ್ಷ ರಾಜಕೀಯಕ್ಕೆ ಸಂಬಂಧಿಸಿದ ಪ್ರಶ್ನೆ ಅಲ್ಲ. ಇದು ಮಹಿಳೆಯ ಘನತೆ ಮತ್ತು ಸದನದ ಪಾವಿತ್ರ್ಯಕ್ಕೆ ಸಂಬಂಧಿಸಿದ ಪ್ರಶ್ನೆ. ತಾವು ಬಳಸುವ ಪದಗಳು, ತಮ್ಮ ನಡೆಗಳ ಪರಿಣಾಮವು ಏನಿರುತ್ತದೆ ಎಂಬುದನ್ನು ರಾಜಕಾರಣಿಗಳು ಅರ್ಥ ಮಾಡಿಕೊಳ್ಳಬೇಕು. ಅವರು ಕ್ಷುಲ್ಲಕ ರಾಜಕೀಯವನ್ನು ಮೀರಿ ನಿಲ್ಲುವ ಕೆಲಸ ಮಾಡಬೇಕು. ರಾಜ್ಯದ ಜನ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡುವ ಕೆಲಸ ಮಾಡಬೇಕು.

ದಿನದ ಟ್ವೀಟ್

ಅರಣ್ಯ ಸಂಪತ್ತಿನ ಲೂಟಿ ನಿಲ್ಲಲಿ

ಕಾಡು ತೆರೆದಿಟ್ಟ ಖಜಾನೆ ಅಂತ ತೇಜಸ್ವಿ ದಶಕಗಳ ಹಿಂದೆಯೇ ಹೇಳಿದ್ದರು. ಈಗ ಆ ಖಜಾನೆಗಳ ಲೂಟಿ ಜೋರಾಗಿಯೇ ನಡೀತಾ ಇದೆ.

(ಅರಣ್ಯ ನಾಶದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ ಎಂಬ ವರದಿಗೆ ಪ್ರತಿಕ್ರಿಯೆ)

ರಾಮಚಂದ್ರ ಎಮ್., ಬರಹಗಾರ

ಕಿಡಿನುಡಿ

ಬಿ.ಎಸ್.ಯಡಿಯೂರಪ್ಪ, ವೀರಪ್ಪ ಮೊಯಿಲಿ, ಬಸವರಾಜ ಬೊಮ್ಮಾಯಿ ಅವರ ಆಡಳಿತಾವಧಿಯಲ್ಲಿ ವಿವಿಧ ಜಾತಿ–ಜನಾಂಗಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ. ಆಗ ಯಾವುದೇ ಆಯೋಗದ ವರದಿ ಪಡೆದಿರಲಿಲ್ಲ. ಆಗ ಅದು ಅಸಾಂವಿಧಾನಿಕ ಎಂದೂ ಪರಿಗಣಿತವಾಗಿರಲಿಲ್ಲ. ಈಗ ಪಂಚಮಸಾಲಿ ಸಮುದಾಯಕ್ಕೆ ಮಾತ್ರ ನಿಯಮಗಳು ಅಡ್ಡಬಂದಿವೆ.

ಬಸವಜಯ ಮೃತ್ಯುಂಜಯ ಸ್ವಾಮೀಜಿ
ಲಿಂಗಾಯತ ಪಂಚಮಸಾಲಿ ಪೀಠ, ಕೂಡಲಸಂಗಮ

25 ವರ್ಷಗಳ ಹಿಂದೆ

ಶುಕ್ರವಾರ, 24-12-1999

● ಲೋಕಸಭೆಯಲ್ಲಿ ಪ್ರತಿಭಟನೆ ಮಧ್ಯೆ ಮಹಿಳಾ ಮಸೂದೆ ಮಂಡನೆ

ನವದೆಹಲಿ, ಡಿ. 23– ವಿವಾದಾತ್ಮಕ ಮಹಿಳಾ ಮೀಸಲಾತಿ ಮಸೂದೆಯನ್ನು ಸಮಾಜವಾದಿ ಪಕ್ಷ, ಆರ್‌ಜೆಡಿ ಮತ್ತು ಇತರ ಪ್ರತಿಪಕ್ಷಗಳ ತೀವ್ರ ಗದ್ದಲ, ಕೂಗಾಟ ಮತ್ತು ಪ್ರತಿಭಟನೆ ನಡುವೆ ಕಾನೂನು ಸಚಿವ ರಾಂ ಜೇಠ್ಮಲಾನಿ ಲೋಕಸಭೆಯಲ್ಲಿ ಇಂದು ಮಂಡಿಸಿದರು.

ಸಂವಿಧಾನದ 85ನೇ ತಿದ್ದುಪಡಿಯ ಈ ಮಸೂದೆ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲು ಅವಕಾಶ ಕಲ್ಪಿಸಲಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿರುವ ಕ್ಷೇತ್ರಗಳಲ್ಲಿಯೇ ಪರಿಶಿಷ್ಟ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಒದಗಿಸಿರುವುದನ್ನು ಬಿಟ್ಟರೆ ಹಿಂದುಳಿದ ಅಥವಾ ಅಲ್ಪ ಸಂಖ್ಯಾತ ವರ್ಗಗಳ ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿ ನೀಡಲಾಗಿಲ್ಲ.

ತೀವ್ರ ವಿರೋಧ: ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆಯರಿಗೆ ಪ್ರತ್ಯೇಕ ಮೀಸಲಾತಿಗೆ ಒತ್ತಾಯಿಸುತ್ತಿರುವ ಸಮಾಜವಾದಿ ಪಕ್ಷ ಮತ್ತು ರಾಷ್ಟ್ರೀಯ ಜನತಾದಳವು ಈ ಮಸೂದೆ ಮಂಡನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದವು.

● ನೀರು ಬಳಕೆದಾರರ ಸಹಕಾರ ಸಂಘ ಸ್ಥಾಪನೆಗೆ ನಿರ್ಧಾರ

ಬೆಂಗಳೂರು, ಡಿ. 23– ನೀರಾವರಿ ಸೌಲಭ್ಯ ಬಳಕೆ ಹಾಗೂ ನಿರ್ವಹಣೆಯ ಸಂಪೂರ್ಣ ಅಧಿಕಾರವನ್ನು ಸ್ಥಳೀಯ ರೈತರಿಗೇ ನೀಡಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಇದಕ್ಕಾಗಿ ರಾಜ್ಯದಾದ್ಯಂತ 2,600 ನೀರು ಬಳಕೆದಾರರ ಸಹಕಾರ ಸಂಘಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 24-12-1974

● 'ಭ್ರಷ್ಟಾಚಾರದ ಗುಮ್ಮ'ನಿಂದ ರಫ್ತು ವ್ಯಾಪಾರಕ್ಕೆ ಹಾನಿ

ನವದೆಹಲಿ, ಡಿ. 23– 'ಭ್ರಷ್ಟಾಚಾರದ ಗುಮ್ಮ'ನನ್ನು ಎಬ್ಬಿಸುತ್ತಿರುವವರನ್ನು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಟೀಕಿಸಿ, ಇದರಿಂದ ಭಾರತದ ರಫ್ತು ವ್ಯಾಪಾರಕ್ಕೆ ಹಾನಿ ತಟ್ಟುವುದೆಂದು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷ ಇಲ್ಲಿ ಏರ್ಪಡಿಸಿದ್ದ ಚಿಲ್ಲರೆ ವರ್ತಕರ ಸಮ್ಮೇಳನವನ್ನು ಪ್ರಧಾನಿ ಉದ್ಘಾಟಿಸಿ, ಭ್ರಷ್ಟಾಚಾರದ ವಿರುದ್ಧ ಕೆಲವರು ನಡೆಸುತ್ತಿರುವ ಚಳವಳಿಯಿಂದ ರಾಷ್ಟ್ರದ ವಿಷಯದಲ್ಲಿ 'ವಿಕೃತ' ಭಾವನೆ ಮೂಡುವಂತೆ ಮಾತ್ರ ಆಗುವುದೆಂದರು.

ಭ್ರಷ್ಟಾಚಾರದ ಹೆಸರಿನಲ್ಲಿ ಚಳವಳಿಗಳನ್ನು ನಡೆಸುತ್ತಿರುವ ರೀತಿಯಿಂದ ಭಾರತೀಯ ಸಮಾಜವು ಕಾಳಸಂತೆ, ಲಾಭಕೋರತನ, ಸರ್ಕಾರಿ ಮತ್ತು ರಾಜಕೀಯ ಭ್ರಷ್ಟಾಚಾರಗಳಂತೆ ಪಿಡುಗುಗಳಿಂದ ತುಂಬಿ ಹೋಗಿದೆಯೆಂದು ವಿದೇಶಗಳಲ್ಲಿ ಭಾವನೆ ಮೂಡುವುದಾಗಿ ಅವರು ಹೇಳಿದರು.

● ವಿಭಜನೆ ಬೇಡ: ಸರ್ಕಾರಕ್ಕೆ ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್ ಒತ್ತಾಯ

ಹುಬ್ಬಳ್ಳಿ, ಡಿ. 23 – ಹುಬ್ಬಳ್ಳಿ– ಧಾರವಾಡ ನಗರ ಕಾರ್ಪೊರೇಷನ್ ವಿಭಜನೆ ಉದ್ದೇಶವನ್ನು ಕೈಬಿಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಇಂದು ಸಂಜೆ ನಡೆದ ಹುಬ್ಬಳ್ಳಿ– ಧಾರವಾಡ ಕಾರ್ಪೊರೇಷನ್ನಿನ ವಿಶೇಷ ತುರ್ತು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

'ಹುಬ್ಬಳ್ಳಿ– ಧಾರವಾಡ ನಗರದ ವಿಭಜನೆ ಉದ್ದೇಶವು ನೈತಿಕವಾಗಿ, ತಾತ್ವಿಕವಾಗಿ ಹಾಗೂ ಕಾಯ್ದೆಬದ್ಧವಾಗಿ ಸರಿಯಾದ ಕ್ರಮವಲ್ಲ ಮತ್ತು ಅದು ಕಾರ್ಯಸಾಧ್ಯವಾದುದೂ ಅಲ್ಲ' ಎಂದು ನಿರ್ಣಯ ತಿಳಿಸಿದೆ.

ಮಕ್ಕಳ ಪ್ರತಿಭಾ ಪ್ರದರ್ಶನಗಳಿರಲಿ, ಪ್ರತಿಭಾ ಫಲಿತಾಂಶಗಳಲ್ಲ

ಅಕಾಲ ವಯಸ್ಕರಾಗಿಸುವ ಮಾಯಾಜಾಲ!

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

'ಆ 'ವ್ಯಕ್ತಿ' ಸರಿ ಇಲ್ಲ ಎಂದು ಆರು ವರ್ಷದ ಮಗುವಿಗೇ ಗೊತ್ತಿದೆ. ಆದರೆ ದೊಡ್ಡವರಾದ ನಮಗೆ ಗೊತ್ತಿಲ್ಲ' ಎಂದು, ತಾವು ಯಾರನ್ನು ಮೂದಲಿಸಬೇಕಾಗಿದೆಯೋ ಅವರನ್ನು ಮೂದಲಿಸಲು ಮಕ್ಕಳನ್ನು ಬಳಸಿಕೊಳ್ಳುವವರನ್ನು ಕಾಣಬಹುದು. ಆದರೆ ಆ ವ್ಯಕ್ತಿಯನ್ನು ಅರ್ಥ ಮಾಡಿಕೊಳ್ಳಬಲ್ಲ ಶಕ್ತಿ ಆರು ವರ್ಷದ ಮಗುವಿಗೆ ಬಂದಿರುತ್ತದೆಯೇ ಎಂದು ಕೇಳುವವರ ಕೊರತೆ ಇದೆ. ಆ ವ್ಯಕ್ತಿ ಕುರಿತು ಮಗು ಹೊಂದಿರುವ ಈ ಅಭಿಪ್ರಾಯವು ವಿಮರ್ಶಾತ್ಮಕವಾದ ಯಾವ ಹೊಳಹನ್ನೂ ನೀಡಲಾರದು ಎಂದು ಹೇಳುವವರು ಬೇಕಾಗಿದ್ದಾರೆ.

ಮಕ್ಕಳನ್ನು ವೈಚಾರಿಕವಾಗಿ ದುರ್ಬಲಕೆ ಮಾಡಿಕೊಳ್ಳುವ ಕ್ರಮಗಳು ಇಷ್ಟಕ್ಕೇ ಸೀಮಿತವಾಗಿಲ್ಲ. ಮಗುವಿನ ತಾಯಿ– ತಂದೆಯ 'ಮನ್ನಣೆಯ ದಾಹ'ವನ್ನು ತಣಿಸುವ ರೂಪದಲ್ಲಿಯೂ ಇರುತ್ತವೆ. ಮನರಂಜನಾ ಮಾಧ್ಯಮಗಳಲ್ಲಿ ಬರುವ ಮಕ್ಕಳ ನೃತ್ಯ ಕಾರ್ಯಕ್ರಮಗಳನ್ನು ವೀಕ್ಷಿಸಿದರೆ, ಅಲ್ಲಿ ಸರ್ಕಸ್ ನಡೆಯುತ್ತಿರುವಂತೆ ಕಾಣಿಸುತ್ತದೆ. ಮೇಲಿನಿಂದ ಹಾರುವುದು, ಹಾರಿ ಬೀಳುವಾಗ ಹಿಡಿದುಕೊಳ್ಳುವಂತಹ ರೀತಿಯ ಪ್ರದರ್ಶನಗಳು 'ನೃತ್ಯ' ಎನ್ನುವ ವ್ಯಾಪ್ತಿಯ ಒಳಗೆ ನಿಲ್ಲಬಲ್ಲವುಗಳಲ್ಲ. ಆಗ ಮಗುವಿನಲ್ಲಿ ಉಂಟಾಗುವ ಕಲಿಕೆ ಎಂತಹದು? ನೃತ್ಯ ಎಂದರೆ ಸರ್ಕಸ್ ಮಾಡುವುದು ಎಂಬ ಕಲಿಕೆಯೇ ನಡೆಯಬೇಕಲ್ಲವೆ? ಅಂದರೆ, ಈ ಬಗೆಯ ಪ್ರದರ್ಶನ ಕಲೆಗಳನ್ನು ಕಲಿಕೆಯ ಹಂತದಲ್ಲೇ ಮಗುವಿಗೆ ತಪ್ಪಾಗಿ ಅರ್ಥ ಮಾಡಿಸುತ್ತೇವೆ. ಇವು ಬಹುಮಟ್ಟಿಗೆ ಪಾಲಕರ ಮನ್ನಣೆಯ ದಾಹಕ್ಕೆ ಸಾಂತ್ವನವನ್ನು ನೀಡುವ ರೂಪದ್ದಾಗಿರುತ್ತವೆ.

ಇದೇ ಮಾದರಿಯ ಇನ್ನೊಂದು ಪ್ರತಿಭಾ ವಿಡಂಬನೆ ಎಂದರೆ, ದಾಖಲೆಗಳನ್ನು ಮಾಡುವುದು ಮತ್ತು ಸ್ಪರ್ಧಾ ವಿಜೇತರಾಗುವುದು. ಗಿನ್ನಿಸ್ ಪುಸ್ತಕ ದಾಖಲೆ, ಲಿಮ್ಕಾ ಪುಸ್ತಕ ದಾಖಲೆಯ ಪದ್ಧತಿ ಮೊದಲಿನಿಂದಲೂ ಇತ್ತು, ಈಗಲೂ ಇದೆ. ಇತ್ತೀಚೆಗೆ ಈ ಮಾದರಿಯ ಅನೇಕ 'ಪುಸ್ತಕ ದಾಖಲೆ'ಗಳು ಬಂದಿವೆ. 'ಮೂರು ವರ್ಷ ವಯಸ್ಸಿನ ಮಗು ಈ ಪುಸ್ತಕ ದಾಖಲೆ ಮಾಡಿದೆ' ಎಂದೆಲ್ಲ ಸುದ್ದಿಗಳು ಕಾಣಿಸಿಕೊಳ್ಳುತ್ತವೆ. ಆಮೇಲೆ ಒಂದೆರಡು ವರ್ಷಗಳಲ್ಲಿ ಆ ಪುಸ್ತಕವೇ ಇರುವುದಿಲ್ಲ! ದಾಖಲೆಯನ್ನು ದಾಖಲು ಮಾಡಿರುವ ಪುಸ್ತಕವೇ ಅಸ್ತಿತ್ವವನ್ನು ಹೊಂದಿಲ್ಲದ ಮೇಲೆ ಆ ದಾಖಲೆಗಿರುವ ಮಹತ್ವ ಏನು? ಮೇಲಾಗಿ ಮೂರು ವರ್ಷ, ಆರು ವರ್ಷ, ಎಂಟು ವರ್ಷದ ಮಕ್ಕಳು ಸ್ಥಾಪಿಸಿದ್ದಾರೆ ಎನ್ನಲಾಗುವ ದಾಖಲೆಯ ಸಾರ್ವತ್ರಿಕ ಉಪಯೋಗ ಏನು? ಇಂತಹ ದಾಖಲೆಗಳಿಗಾಗಿ ಅಥವಾ ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಎಂದು ಎಡೆಬಿಡದೆ ನಡೆಸಲಾಗುವ ಸ್ಪರ್ಧೆಗಳ ಹಿಂದಿರುವ ಶೈಕ್ಷಣಿಕ ಕಲ್ಪನೆ ಏನು? ಇದಕ್ಕೆಲ್ಲ ಮಕ್ಕಳನ್ನು ಸಿದ್ಧಪಡಿಸಲು ಅವರ ಮೇಲೆ ಎಷ್ಟೊಂದು ಭಾವನಾತ್ಮಕ ಒತ್ತಡವನ್ನು ಹೇರಲಾಗುತ್ತದೆ, ಅವು ಮಕ್ಕಳ ಮೇಲೆ ಉಂಟುಮಾಡುವ ಪರಿಣಾಮ ಏನು ಎಂಬುದನ್ನು ಪಾಲಕರು ಯೋಚಿಸಲು ಹೋಗುವುದಿಲ್ಲ.

ತಮ್ಮ ರಾಜಕೀಯ ಸಿದ್ಧಾಂತವನ್ನು ಮಕ್ಕಳ ಮೂಲಕ ಅನುಷ್ಠಾನಕ್ಕೆ ತರುವಲ್ಲಿಂದ ತೊಡಗಿ ತಮ್ಮ ವೈಯಕ್ತಿಕ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಮಕ್ಕಳನ್ನು ಬಳಕೆ ಮಾಡಿಕೊಳ್ಳುವವರೆಗೆ ಎಲ್ಲವೂ ಬಾಲ್ಯವನ್ನು ಕಸಿಯುವ ವ್ಯವಸ್ಥೆಗಳೇ ಆಗಿವೆ. ಆದರೆ ಶೈಕ್ಷಣಿಕ ಮನೋವಿಜ್ಞಾನದ ಆಧಾರದಲ್ಲಿ, ಮಕ್ಕಳ ವಿಕಾಸಕ್ಕೊಂದು ವಿನ್ಯಾಸವಿದೆ. ಲಾರೆನ್ಸ್ ಕೊಹಲ್‌ಬರ್ಗ್‌ನ ನೈತಿಕತೆಯ ವಿಕಾಸದ ಸಿದ್ಧಾಂತ, ಜೀನ್ ಪಿಯಾಜೆಯವರ ಸಾಮಾಜಿಕ ವಿಕಾಸದ ಸಿದ್ಧಾಂತ, ಹೆವ್ವಿಗ್ ಹರ್ಸ್ಟ್ ಅವರ ವಿಕಾಸ ಕಾರ್ಯದ ಪರಿಕಲ್ಪನೆಗಳೆಲ್ಲವೂ ಪ್ರಯೋಗದ ಮೂಲಕ ಕಂಡುಕೊಂಡ ಸತ್ಯಗಳು. ಮಗು ಶೈಶವದಲ್ಲಿ ತಾಯಿಯ ಮೂಲಕ, ನಂತರ ಕುಟುಂಬದ ಮೂಲಕ, ಬಳಿಕ ಶಾಲೆ, ಆಮೇಲೆ ಸಮುದಾಯದಲ್ಲಿ ಒಳಗೊಳ್ಳುತ್ತಾ ತನ್ನ ಸಾಮಾಜೀಕರಣವನ್ನು ಸಾಧಿಸುತ್ತದೆ. ಸಮಗ್ರದೊಳಗೆ ತನಗೆ ಸೂಕ್ತವೆನಿಸಿದ ಆಯ್ಕೆಗಳೊಂದಿಗೆ ಕ್ರಿಯೆ- ಪ್ರತಿಕ್ರಿಯೆ ನಡೆಸುತ್ತಾ ನಿಲುವುಗಳನ್ನು ರೂಪಿಸಿಕೊಳ್ಳುತ್ತದೆ. ತನ್ನ ಅರಿವಿನ ಪರಿಣಾಮವಾಗಿ ಮಗುವಿನ ಚಟುವಟಿಕೆ ನಡೆಯತೊಡಗಿದಾಗ ಅದು ಆ ಮಗುವಿಗೆ 'ವರ'ವಾಗಿ ಬರುತ್ತದೆ. ಬದಲು 'ಅರಿವು' ಇಲ್ಲದೆ ನಡೆಸಿದ ಚಟುವಟಿಕೆಯಿಂದ ಬರುವ ಫಲಿತಾಂಶಗಳು ಮಗುವಿಗೆ 'ಶಾಪ'ವಾಗಿ ಪರಿಣಮಿಸುತ್ತವೆ. 'ದಾಖಲೆ ಮಾಡುವುದು' ಎಂದರೆ ಏನು ಎಂಬ ಅರಿವೇ ಇಲ್ಲದ ವಯಸ್ಸಿನಲ್ಲಿ ಮಗುವಿನ ಬಳಿ ದಾಖಲೆ ಮಾಡಿಸಿದರೆ, ಮಗು ಬೆಳೆಯುತ್ತಾ ಹೋದ ಹಾಗೆ, ಆ ದಾಖಲೆಗೆ ಯಾವ ಮಹತ್ವವೂ ಇಲ್ಲ ಎಂದು ಕಂಡುಕೊಂಡಂತೆಲ್ಲ ತನ್ನನ್ನು ತಾನು ಸ್ವೀಕರಿಸಿಕೊಳ್ಳಲು ಸಾಧ್ಯವಾಗದ ಮನಃಸ್ಥಿತಿ ಗಟ್ಟಿಯಾಗುತ್ತದೆ.

ಎರಡು ದಶಕಗಳಿಂದಲೂ ಟಿ.ವಿ. ವಾಹಿನಿಗಳಲ್ಲಿ ಮಕ್ಕಳನ್ನು ಕುಣಿಸುವ ಕಾರ್ಯಕ್ರಮಗಳು ನಡೆಯುತ್ತಾ ಇವೆ. ಹಾಗೆ ಕುಣಿದು ಪ್ರಥಮ, ದ್ವಿತೀಯ ಎಂದೆಲ್ಲ ಸ್ಥಾನ ಪಡೆದು, ಹಲವು ಕಡೆ ಸನ್ಮಾನವೆಲ್ಲ ಆದ ಮಗು ಈಗ ಎಲ್ಲಿದೆ ಎಂದು ಕೇಳಿದರೆ ಬಹುತೇಕ ನಿರಾಶಾದಾಯಕ ಉತ್ತರವೇ ಬರುವುದು. ಏಕೆಂದರೆ ಆ ಮಗು ಪಡೆದ ಯಶಸ್ಸಿನಲ್ಲಿ ಕೌಶಲ, ದಕ್ಷತೆಗಿಂತ ಹೆಚ್ಚಾಗಿ ಅದು ಅತಿ ಚಿಕ್ಕ ವಯಸ್ಸಿನದ್ದಾಗಿದ್ದುದೇ ಪ್ರಮುಖ ಕಾರಣವಾಗಿಬಿಟ್ಟಿರುತ್ತದೆ. ತನ್ನ ಯಶಸ್ಸನ್ನು ಮಗು ನಿರಂತರವಾಗಿ ಉಳಿಸಿಕೊಳ್ಳಬೇಕಾದರೆ ಕೌಶಲದಲ್ಲಿ ವೃದ್ಧಿ ಆಗಬೇಕು. ಸಂಗೀತ ಕ್ಷೇತ್ರದ ವ್ಯಾಪ್ತಿ ಎಷ್ಟು ಎಂಬ ಅರಿವು ಬರುವ ಮೊದಲೇ 'ಸಂಗೀತ ವಿಶಾರದ' ಪ್ರಶಸ್ತಿಯೆಲ್ಲ ಬಂದು, ತನ್ನ ಬದುಕಿನ ಸಾಧನೆ ಮುಗಿಯಿತು ಎನಿಸಿದರೆ ಮಗು ಮತ್ತೆ ಸಂಗೀತದಲ್ಲಿ ತೊಡಗಿಕೊಳ್ಳುವುದು ಹೇಗೆ?

ಮಕ್ಕಳನ್ನು ಅಕಾಲ ಹಿರಿಯರನ್ನಾಗಿಸುವ ಈ ಬೃಹತ್ ಮಾರುಕಟ್ಟೆ ಆರ್ಥಿಕತೆ ವ್ಯವಸ್ಥೆಯ ಬಗ್ಗೆ ಪಾಲಕರು ಒಂದಷ್ಟು ಯೋಚಿಸಬೇಕು. ತಮ್ಮ ಮಕ್ಕಳು ಶ್ರೇಷ್ಠ ವ್ಯಕ್ತಿಗಳಾಗಬೇಕು ಎಂದು ಪಾಲಕರಿಗೆ ಅನಿಸುವುದು ಸರಿಯಾದ ವಿಚಾರ. ಆದರೆ ಅದು ಮಗುವಾಗಿರುವಾಗಲೇ ಆಗಬೇಕಾದ್ದಲ್ಲ ಎಂಬ ಅರಿವು ಇರಬೇಕು. ಮಗುವಿನದ್ದು ಕಲಿಕೆಯ ವಯಸ್ಸೇ ವಿನಾ ಸಾಧನೆಯ ವಯಸ್ಸಲ್ಲ ಅಥವಾ ತೀರ್ಮಾನ ತೆಗೆದುಕೊಳ್ಳುವ ವಯಸ್ಸಲ್ಲ. ತಮ್ಮ ಮಕ್ಕಳಲ್ಲಿ ಕಲಿಕೆಯನ್ನು ಹೇಗೆ ಸಮೃದ್ಧಗೊಳಿಸಬಹುದು ಎಂಬ ಬಗ್ಗೆ ಪಾಲಕರು ಯೋಚಿಸಬೇಕೆ ವಿನಾ 'ಪ್ರಶಸ್ತಿ', 'ದಾಖಲೆ'ಗಳಂತಹ ಫಲಿತಾಂಶವನ್ನು ಹೇಗೆ ಪಡೆಯುವುದು ಎಂಬ ಬಗ್ಗೆ ಅಲ್ಲ.

ಜಗತ್ತು ಬಹುಬೇಗ ಸನ್ಮಾನ, ಪ್ರಶಸ್ತಿ, ದಾಖಲೆಗಳಿಂದ ಬಂದ ಗುರುತಿಸುವಿಕೆಯನ್ನು ಮರೆತುಬಿಡುತ್ತದೆ. ಕೆಲವು ತಂದೆ– ತಾಯಿಯರಲ್ಲಿ ಹತ್ತು ಲಕ್ಷ ರೂಪಾಯಿ ತೆತ್ತು ಮಗುವನ್ನು ಕೆ.ಜಿ. ತರಗತಿಗೆ ಸೇರಿಸುವುದೇ ಪಾಲಕತ್ವದ ಸಾರ್ಥಕತೆ ಎನಿಸುತ್ತದೆ. ತಾಯಿ– ತಂದೆ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಎಷ್ಟು ಖರ್ಚು ಮಾಡಿದ್ದಾರೆ ಎನ್ನುವುದಕ್ಕಿಂತ ಹೇಗೆ ಖರ್ಚು ಮಾಡಿದ್ದಾರೆ ಎನ್ನುವುದು ಮುಖ್ಯವಾಗುತ್ತದೆ.

ಮಕ್ಕಳ ಭವಿಷ್ಯದ ಸಾಧನೆಗಳು ಅವರಲ್ಲಿ ಕಲಿಕೆಯಾಗಿ ಬೆಳೆದ ಮೌಲ್ಯ ಪ್ರಜ್ಞೆ, ಕೌಶಲ, ಸಾಮರ್ಥ್ಯ, ಕಾರ್ಯ ನಿರ್ವಹಣಾ ದಕ್ಷತೆ, ವರ್ತನೆಯಲ್ಲಿ ಸಮರ್ಪಕತೆ, ಸೂಕ್ತ ಆಲೋಚನಾ ಕ್ರಮದಂತಹವುಗಳಿಂದ ನಿರ್ಧಾರವಾಗುತ್ತವೆಯೇ ವಿನಾ ಯಾಂತ್ರಿಕ ಚಟುವಟಿಕೆಗಳಿಂದಲ್ಲ. ಮಕ್ಕಳಲ್ಲಿ ರಾಜಕೀಯ ಅರಿವನ್ನು ಅವಶ್ಯವಾಗಿ ಬೆಳೆಸಬೇಕು. ಆದರೆ ರಾಜಕೀಯ ತೀರ್ಮಾನಗಳನ್ನಲ್ಲ. ಸಂಗೀತ, ನೃತ್ಯ, ಕಲೆಗಳು, ಕ್ರೀಡೆಯಂತಹ ಎಲ್ಲ ಕಲಿಕೆಗಳೂ ಮಕ್ಕಳಿಗೆ ಸಿಗಬೇಕು. ಆದರೆ ಅವು ಕಲಿಕೆಗಾಗಿಯೇ ವಿನಾ ಪ್ರಶಸ್ತಿ, ದಾಖಲೆಗಳಿಗಾಗಿಯಲ್ಲ.

ಈಗ ನಡೆಯುತ್ತಿರುವ ಚಟುವಟಿಕೆಗಳನ್ನೇ ಕೊಂಚ ಮರು ಹೊಂದಾಣಿಕೆ ಮಾಡಿಕೊಂಡರೆ, ಸೃಜನಶೀಲ ಕಾರ್ಯಕ್ರಮಗಳು ಮಕ್ಕಳ ವಿಕಾಸಕ್ಕೆ ಪೂರಕವಾಗಬಲ್ಲವು. ಟಿ.ವಿ. ವಾಹಿನಿಗಳಲ್ಲಿ ಮಕ್ಕಳು ಕಾಣಿಸಲೇಬೇಕು ಎಂದಾದರೆ, ಅಂತಹ ಚಟುವಟಿಕೆಗಳನ್ನು ಮಕ್ಕಳ ಮೇಳಗಳ ರೀತಿಯಲ್ಲಿ ಮಾಡಬೇಕು, ಸ್ಪರ್ಧೆಗಳಾಗಿ ಅಲ್ಲ. ಮಕ್ಕಳು ತೊಡಗಿಕೊಳ್ಳಲು ವೇದಿಕೆಯನ್ನು ಒದಗಿಸಿಯೂ ಭಾಗವಹಿಸಿದ ಎಲ್ಲರನ್ನೂ ಅಭಿನಂದಿಸಿ ಕಳಿಸುವ ಕ್ರಮವನ್ನು ಜಾರಿಗೊಳಿಸಬಹುದು. ಇದರಿಂದ ಮಾರುಕಟ್ಟೆ ಆರ್ಥಿಕತೆಯ ಅಗತ್ಯವೂ ಈಡೇರುತ್ತದೆ, ಮಕ್ಕಳ ವಿಕಾಸದ ವಿನ್ಯಾಸಗಳಿಗೆ ಅಡೆತಡೆಯೂ ಆಗುವುದಿಲ್ಲ.

ಒಟ್ಟಿನಲ್ಲಿ ಮಕ್ಕಳಲ್ಲಿ ಫಲಿತಾಂಶದ ಒತ್ತಡ ಉಂಟಾಗದ ಹಾಗೆ, ಕಲಿಕೆಯ ಹಂಬಲ ಹೆಚ್ಚುವ ಹಾಗೆ ಕಾರ್ಯಕ್ರಮಗಳನ್ನು ಮಾಡಬಹುದು. ಸ್ಪರ್ಧೆಗಳು ಬೇಕೇ ಬೇಕು ಎನ್ನುವುದಾದರೆ ಶಾಲಾ ಮಟ್ಟದ ಸ್ಪರ್ಧೆಗಳು ಫಲಿತಾಂಶವನ್ನೇ ಪ್ರಧಾನ ಗುರಿಯಾಗಿ ಹೊಂದಿರುವ ಸ್ಪರ್ಧೆಗಳಾಗಿರುವುದಿಲ್ಲ. ಮಕ್ಕಳ ತೊಡಗಿಕೊಳ್ಳುವಿಕೆಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿರುತ್ತವೆ. ಆದ್ದರಿಂದ ಶಾಲಾ ಮಟ್ಟದ ಸ್ಪರ್ಧೆಗಳು ಸಾಕಾಗುತ್ತವೆ.

ವಿಕಾಸದ ಪ್ರಕ್ರಿಯೆಯಲ್ಲಿ ಮಕ್ಕಳನ್ನು ಬಹುಕೋನೀಯವಾಗಿ ಬಂಧಿಸಿ ಅಕಾಲ ವಯಸ್ಕರಾಗಿಸುವ ಮನೋಧರ್ಮವನ್ನು ಕಾನೂನಿನ ಮೂಲಕ ಪರಿಹರಿಸಲು ಬರುವುದಿಲ್ಲ. ಸಾಮಾಜಿಕ ಶಿಕ್ಷಣದ ಮೂಲಕವೇ ಅದು ಆಗಬೇಕಾಗಿದೆ. ಈ ದಿಸೆಯಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳ ಅಗತ್ಯವಿದೆ.

ಚುರುಮುರಿ



ಗೂಸಾ ಸಾಹಿತ್ಯ

● ಲಿಂಗರಾಜು ಡಿ.ಎಸ್.

ಸಾಹಿತ್ಯ ಸಮ್ಮೇಳನ ಮುಕ್ತಾಯವಾದ ನಂತರ ಜನ ಓಕಳಿ ಇಟ್ಟಾಡಿಸಿ ಹಾಕಿದ್ದ ಕಸದ ರಾಶಿ ಕೆದಕ್ತಾ ಧ್ವಂಸಾವಲೋಕನ ಮಾಡ್ತಿತ್ತು ಮಂಡ್ಯದ ನಾಯಿ. ಕಸ ತುಂಬೋಗಿದ್ದರಿಂದ ಸಾಹಿತ್ಯ ಚೆನ್ನಾಗಿ ಬೆಳೀತಾ ಅದೆ ಅಂತ ಖುಷಿಯಾಯ್ತು. ಅಷ್ಟರಲ್ಲಿ ಹೊಸ ನಾಯೊಂದು ಕಸ ಕೆದಕ್ತಿರೋದು ಕಾಣಿಸಿತು.

'ಲೇ ಅಣ್ತಮ್ಮ, ಮೊನ್ನೆ ನಮ್ಮ ಗ್ರಾಮಸಿಂಹ ಗೋಷ್ಠೀಲಿ ರಾಜಕೀಯದೇಲಿ ಬೌ ಬೌ ಸಾಹಿತ್ಯದ ಬಗ್ಗೆ ಬೊಗಳಿದೋನು ನೀನೇ ಅಲ್ಲುವಲಾ? ಇಲ್ಲೇನು ತಡಕ್ತಿದ್ದಯ್?' ಮಂಡ್ಯದ ನಾಯಿ ವಿಚಾರಿಸಿತು.

'ಹ್ಞೂಂ ಕನಣ್ಣೈ ನಾನೀಯೆ. ನಮ್ಮ ಗೋಷ್ಠಿದು ಭಾಷಣದ ಕಾಪಿ ಸಿಕ್ತದಾ ಅಂತ ಹುಡುಕ್ತಿವ್ನಿ' ಮದ್ದೂರು ನಾಯಿ ಖುಷಿಯಿಂದ ಉತ್ತರಿಸಿತು.

'ಸ್ಟೇಜು ಮ್ಯಾಲೆ ಬಿಳಿ ಬಟ್ಟೆ ಇಕ್ಕಿದ್ದ ವೇಷಾಭಿಮಾನಿಗಳೇ ತುಂಬೋಗಿದ್ವಲ್ಲೋ. ಇವರ ಬೊಂಬಡದೇಲಿ ಸಮ್ಮೇಳನಾಧ್ಯಕ್ಷರು 'ಕನ್ನಡಕ್ಕೆ ಏನನ್ನ ಮಾಡ್ರೀ. ಕನ್ನಡದ ಸ್ಕೂಲು ಮುಚ್ಕೋಯ್ತಾವೆ' ಅಂತ ಹಕ್ಕೊತ್ತಾಯದ ಮನವಿ ಮಾಡಿದ್ರೂ ಅದರ ಕಡೆಗೆ ಯಾರೂ ಲುಕ್ಕೊತ್ತಾಯವೂ ಮಾಡ್ನಿಲ್ಲ. ಇನ್ನು ನಮ್ಮದ್ಯಾರು ಕೇಳ್ಯಾರಲಾ'.

'ರಾಜಕೀಯದವು ಮಾಡೋ ಕ್ಯಾಮೆ ಬುಟ್ಟು 'ನೀನ್ಯಾಕೆ ಬೋದುದ್ದು, ನೀನ್ಯಾಕೆ ತಳ್ಳಿದ್ದು' ಅಂತ ಗೂಸಾ ಕೊಟ್ಕಂದು ಗೂಸಾ ಸಾಹಿತ್ಯ ಬೆಳೆಸ್ತಾವ್ರೆ. ವಿಧಾನಸೌಧದ ಹೆಸರನ್ನ ಕದನಸೌಧ, ಸುವರ್ಣ ಕದನಸೌಧ ಅಂತ ಬದ್ಲಾಸಬೇಕು ಅಣ್ತಮ್ಮ' ಮದ್ದೂರು ನಾಯಿ ಸಿಟ್ಟಾಯ್ತು.

'ನೋಡಣ್ಣೆ ನೀನಂದುದ್ದು ದಿಟ. ಹಕ್ಕೊತ್ತಾಯ- ಲುಕ್ಕೊತ್ತಾಯವೆಲ್ಲ ಊರ್ಜಿತಾಗಕುಲ್ಲ. ಇನ್ನು ಮ್ಯಾಲೆ ನಾಯಿ, ಕತ್ತೆ, ಕೋತಿ ಅಂತ ನಮ್ಮ ಹೆಸರನ್ನ ರಾಜಕೀಯದೋರು ಬಳಸಬ್ಯಾಡ್ದು ಅಂತ ಕಿಕ್ಕೊತ್ತಾಯ ಮಾಡಬೇಕು. ಅದಕ್ಕೆ ನಾನು ತಯಾರಾಗಿವ್ನಿ' ಅಂತು ಅಲ್ಲಿದ್ದ ಕತ್ತೆ ಹೇಷಾರವ ಮಾಡ್ತಾ.

'ಅಣ್ಣೈ, ನೀನೇ ಈ ಊರೊಟ್ಟಿನ ಕೆಲಸ ವಹಿಸಿಕ್ಯಬಕು. ಮುಂದೆಂಗೆ?' ಮದ್ದೂರು ನಾಯಿಯ ಪ್ರಶ್ನೆಗೆ ಮಂಡ್ಯದ ನಾಯಿ ಆಕಾಶಕ್ಕೆ ಮುಖ ಎತ್ತಿ ಮುಕ್ಕುರಿದು ವವ್ ವವ್ ಅಂತ ಶುಭಾರಂಭ ಮಾಡಿತು.

ಸಂಗತ

ಔಷಧ ಗುಣಮಟ್ಟ: ಸುಧಾರಣೆಗೆ ಸಕಾಲ

ಡ್ರಗ್ಸ್ ಆ್ಯಂಡ್ ಕಾಸ್ಮೆಟಿಕ್ಸ್ ಕಾಯ್ದೆಯಲ್ಲಿ ತುರ್ತಾಗಿ ಸುಧಾರಣೆ ತರಬೇಕಾಗಿದೆ

● ದಿನೇಶ್ ಗುಂಡೂರಾವ್

ಕಳಪೆ ಗುಣಮಟ್ಟದ ಔಷಧಗಳಿಂದ ದೇಶದಾದ್ಯಂತ ದುರ್ಘಟನೆಗಳು ಸಂಭವಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಅದರಂತೆ, ಬಳ್ಳಾರಿ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಬಾಣಂತಿಯರ ಸರಣಿ ಸಾವಿಗೆ ಪಶ್ಚಿಮ ಬಂಗಾಳದಲ್ಲಿ ತಯಾರಿಸಲಾದ ಕಳಪೆ ಗುಣಮಟ್ಟದ ಔಷಧ ಕಾರಣ ಎಂಬ ಪ್ರಾಥಮಿಕ ವರದಿಯು ಗಾಢ ವಿಷಾದಕ್ಕೆ ಕಾರಣವಾಗಿದೆ.

'ಹರ ಕೊಲ್ಲಲ್ ಪರ ಕಾಯ್ವನೇ' ಎಂಬ ಮಾತಿದೆ. ಆದರೆ ರೋಗರುಜಿನಗಳಿಂದ ನಮ್ಮನ್ನು ಕಾಯಲು ಇರುವ ಔಷಧಗಳಿಂದಲೇ ನಾವು ಸಂಕಷ್ಟಕ್ಕೀಡಾದಾಗ 'ನೀವು ಅದನ್ನು ತಡೆಯುತ್ತಿಲ್ಲವೇಕೆ?' ಎಂಬ ಪ್ರಶ್ನೆ ಕೇಳಿಬರುತ್ತದೆ. ಆದರೆ ಇದಕ್ಕೆ ಉತ್ತರ ಸರಳವಲ್ಲ. ಭಾರತದ ಡ್ರಗ್ಸ್ ಮತ್ತು ಕಾಸ್ಮೆಟಿಕ್ಸ್ ಕಾಯ್ದೆ– 1940ರ ವಿಶಿಷ್ಟ ನಿಯಮಗಳ ಅನುಸಾರ, ಒಂದು ಸಂಸ್ಥೆ ತಯಾರಿಸುವ ಔಷಧಗಳ ಗುಣಮಟ್ಟದ ತಪಾಸಣೆಯನ್ನು ಅದರ ಉತ್ಪಾದನಾ ಘಟಕ ಇರುವ ರಾಜ್ಯದ ಔಷಧ ಪರಿವೀಕ್ಷಕರು ಮಾತ್ರ ನಡೆಸಬೇಕಾಗುತ್ತದೆ. ಆದರೆ ಆ ಸಂಸ್ಥೆಯು ದೇಶದಾದ್ಯಂತ ಯಾವುದೇ ರಾಜ್ಯದಲ್ಲಿ ತನ್ನ ಔಷಧಗಳನ್ನು ಮಾರಾಟ ಮಾಡಬಹುದು. ಹೀಗಾಗಿ, ಹೊರ ರಾಜ್ಯಗಳಿಂದ ಬರುವ ಕಳಪೆ ಗುಣಮಟ್ಟದ ಔಷಧಗಳ ಮಾರಾಟವನ್ನು ತಡೆಯಲು ಕರ್ನಾಟಕದಂತಹ ರಾಜ್ಯಗಳಿಗೆ ಸಾಧ್ಯವಾಗುತ್ತಿಲ್ಲ. ಹಿಂದಿನ ಮೂರು ವರ್ಷಗಳಲ್ಲಿ ನಮ್ಮ ರಾಜ್ಯದ ಔಷಧ ಪ್ರಯೋಗಾಲಯಗಳಲ್ಲಿ ಪರೀಕ್ಷಿಸಿದ ಹೊರರಾಜ್ಯಗಳ 894 ಮಾದರಿಗಳಲ್ಲಿ 601 ಔಷಧದ ಮಾದರಿಗಳು ಪರೀಕ್ಷೆಯಲ್ಲಿ ವಿಫಲವಾಗಿವೆ.

ದಿನೇಶ್ ಗುಂಡೂರಾವ್

ಇಂತಹ ಔಷಧಗಳನ್ನು ತಡೆಯಲು ನಮಗಿರುವ ಏಕೈಕ ನಿಯಂತ್ರಣಾ ಸಾಧನವೆಂದರೆ, ಸಂಬಂಧಿಸಿದ ಫಾರ್ಮಾ ಕಂಪನಿಯನ್ನು ಕಾನೂನು ವಿಚಾರಣೆಗೆ ಒಳಪಡಿಸುವುದು. ಆದರೆ ಕಾನೂನು ಪ್ರಕ್ರಿಯೆಯ ಕಾಲವ್ಯಾಪ್ತಿ ಎಲ್ಲರಿಗೂ ತಿಳಿದಿರುವಂತಹದ್ದೇ. ಫಾರ್ಮಾ ಕಂಪನಿಯ ಮೇಲೆ ಪ್ರಕರಣ ದಾಖಲಿಸಿದರೂ ವಿಚಾರಣೆ ಬಾಕಿಯಿರುವಾಗ, ಆ ಕಂಪನಿಯು ರಾಜ್ಯದೊಳಗೆ ತನ್ನ ಔಷಧಗಳ ತಯಾರಿಕೆ ಮತ್ತು ಮಾರಾಟವನ್ನು ಮುಂದುವರಿಸಬಹುದಾಗಿದೆ.

ಫಾರ್ಮಾ ಕಂಪನಿಗಳ ತವರು ರಾಜ್ಯಗಳಲ್ಲಿರುವ ಡ್ರಗ್ ಇನ್‌ಸ್ಪೆಕ್ಟರ್‌ಗಳು ಮಾತ್ರ ಉತ್ಪಾದನಾ ಪರವಾನಗಿಗಳನ್ನು ರದ್ದು ಮಾಡಬಹುದು ಅಥವಾ ಅಮಾನತುಗೊಳಿಸಬಹುದು. ಪ್ರಸ್ತುತ, ಕರ್ನಾಟಕ ಔಷಧ ನಿಯಂತ್ರಣ ಇಲಾಖೆ ಅಥವಾ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೂ (ಕೆಎಸ್‌ಎಂಎಸ್‌ಸಿಎಲ್) ಹೊರರಾಜ್ಯಗಳ ಔಷಧ ತಯಾರಕರ ಪೂರ್ವಾಪರಗಳನ್ನು ಪರಿಶೀಲಿಸಲು ಯಾವುದೇ ಮಾರ್ಗವಿಲ್ಲ.

ಆದಕಾರಣ, ಕೇಂದ್ರ ಮತ್ತು ರಾಜ್ಯ ಔಷಧ ಪರೀಕ್ಷಾ ಪ್ರಯೋಗಾಲಯಗಳು ತಮ್ಮ ತಮ್ಮ ಪರೀಕ್ಷಾ ಫಲಿತಾಂಶಗಳನ್ನು ಕೇಂದ್ರೀಕೃತ ಡೇಟಾಬೇಸ್‌ನಲ್ಲಿ ಎಲ್ಲರಿಗೂ ಲಭ್ಯವಾಗಿಸಬೇಕು. ಆಗ, ಯಾವುದೇ ರಾಜ್ಯದ ಡ್ರಗ್ ಇನ್‌ಸ್ಪೆಕ್ಟರ್ ಅಥವಾ ಖರೀದಿ ಅಧಿಕಾರಿಗೆ ಫಾರ್ಮಾ ಕಂಪನಿಯ ಯಾವುದೇ ಒಂದು ಔಷಧಿ ದೇಶದಾದ್ಯಂತ ಸರ್ಕಾರಿ ಪ್ರಯೋಗಾಲಯಗಳ ಔಷಧ ಪರೀಕ್ಷೆಯಲ್ಲಿ ಎಷ್ಟು ಬಾರಿ ವಿಫಲವಾಗಿದೆ ಎಂಬುದನ್ನು ತಕ್ಷಣ ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಇದಲ್ಲದೆ, ಎಲ್ಲಾ ರಾಜ್ಯಗಳ ಡ್ರಗ್ ಇನ್‌ಸ್ಪೆಕ್ಟರ್‌ಗಳು ತಮ್ಮ ರಾಜ್ಯಗಳ ಔಷಧ ತಯಾರಕರ ಪರೀಕ್ಷಾ ವರದಿಗಳು ಮತ್ತು ಪರವಾನಗಿ ಮಾಹಿತಿಯನ್ನು ಒಂದು ಕೇಂದ್ರೀಕೃತ ಡೇಟಾಬೇಸ್‌ನಲ್ಲಿ ಒದಗಿಸುವುದು ತುಂಬಾ ಅಗತ್ಯ. ಈ ಮೂಲಕ, ನಮ್ಮ ನಿಗಮದಂತಹ ಖರೀದಿ ಏಜೆನ್ಸಿಗಳು ಔಷಧಗಳನ್ನು ಖರೀದಿಸುವ ಮೊದಲು ಔಷಧ ಕಂಪನಿಗಳ ಪೂರ್ವಾಪರ ಪರಿಶೀಲಿಸಲು ಮತ್ತು ಮಹಾರಾಷ್ಟ್ರದಲ್ಲಿ ಸಂಶಯಾಸ್ಪದ ಪೂರೈಕೆದಾರರು ನಕಲಿ ಆ್ಯಂಟಿಬಯೊಟಿಕ್‌ಗಳನ್ನು ಪೂರೈಸಿದಂತಹ ಸನ್ನಿವೇಶಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ. ತಮ್ಮ ಉತ್ಪಾದನಾ ಘಟಕಗಳನ್ನು ಕೂಲಂಕಷವಾಗಿ ತಪಾಸಣೆಗೆ ಒಳಪಡಿಸುವ ರಾಜ್ಯಗಳ ತಯಾರಕರಿಗೆ ಖರೀದಿ ಅಧಿಕಾರಿಗಳು ಆದ್ಯತೆ ನೀಡಲು ಸಹ ಅವಕಾಶ ದೊರೆಯುತ್ತದೆ.

ಟೆಂಡರ್‌ಗಳಲ್ಲಿ ಭಾಗವಹಿಸುವವರೇನಾದರೂ ಕಪ್ಪುಪಟ್ಟಿಗೆ ಸೇರಿದ್ದರೆ, ಆ ಮಾಹಿತಿಯನ್ನು ಸ್ವತಃ ಅವರು ನೀಡದ ವಿನಾ ಆ ಬಗ್ಗೆ ಪರಾಮರ್ಶಿಸಲು ಸಾಧ್ಯವಿಲ್ಲದಂತಹ ಸ್ಥಿತಿ ಈಗ ಇದೆ. ವಿವಿಧ ಖರೀದಿ ಏಜೆನ್ಸಿಗಳು ಕಪ್ಪುಪಟ್ಟಿಗೆ ಸೇರಿಸಿದ ಔಷಧ ತಯಾರಕರ ಕೇಂದ್ರೀಕೃತ ರಿಜಿಸ್ಟರ್ ಒಂದನ್ನು ಕೇಂದ್ರ ಆರೋಗ್ಯ ಸಚಿವಾಲಯ ರಚಿಸಿದರೆ, ಅಂತಹ ತಯಾರಕರನ್ನು ಮಾರುಕಟ್ಟೆಯಿಂದ ಹೊರಹಾಕಲು ಸಾಧ್ಯವಾಗುತ್ತದೆ.

ಸಾವು ಅಥವಾ ಇತರ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿರುವ ಔಷಧಗಳಿಗೆ ಸಂಬಂಧಿಸಿದಂತೆ ತನಿಖೆ ಎದುರಿಸುತ್ತಿರುವ ತಯಾರಕರು, ತಮ್ಮ ಔಷಧಗಳಲ್ಲಿರುವ ಸಮಸ್ಯೆಯನ್ನು ಸಮರ್ಪಕವಾಗಿ ನಿವಾರಿಸಿರುವುದನ್ನು ಸಾಬೀತು ಮಾಡುವವರೆಗೆ, ಆ ಕಂಪನಿಗಳು ಔಷಧ ಮಾರಾಟ ಮಾಡುವುದನ್ನು ನಿರ್ಬಂಧಿಸಲು ಅನುವಾಗುವಂತೆ ಆಯಾ ರಾಜ್ಯಗಳಿಗೆ ಕಾನೂನು ಬಲ ನೀಡಬೇಕು. ಹಾಗಾದರೆ, ಅದು ಅತ್ಯಗತ್ಯವಾದ ಸುಧಾರಣೆಯೇ ಹೌದು.

ಡ್ರಗ್ಸ್ ಆ್ಯಂಡ್ ಕಾಸ್ಮೆಟಿಕ್ಸ್ ಕಾಯ್ದೆಯು ಕೇಂದ್ರದ ವ್ಯಾಪ್ತಿಗೆ ಬರುವುದರಿಂದ, ಈ ಶಾಸನದಲ್ಲಿ ತುರ್ತಾಗಿ ಸುಧಾರಣೆ ತರುವ ದಿಸೆಯಲ್ಲಿ ಕೇಂದ್ರ ಆರೋಗ್ಯ ಸಚಿವ ಜಗತ್ ಪ್ರಕಾಶ್ ನಡ್ಡಾ ಅವರಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ಜೊತೆಗೆ ಅವರನ್ನು ಸದ್ಯದಲ್ಲೇ ಮುಖತಃ ಭೇಟಿ ಮಾಡಿ, ಆಗಬೇಕಿರುವ ಸುಧಾರಣೆಗಳ ಬಗ್ಗೆ ಗಮನ ಸೆಳೆಯಲು ನಿರ್ಧರಿಸಲಾಗಿದೆ. ದೇಶದಾದ್ಯಂತ ಔಷಧಗಳ ಗುಣಮಟ್ಟ ಸುಧಾರಿಸಲು ಅನುವಾಗುವ ಯಾವುದೇ ಸುಧಾರಣೆಗಳನ್ನು ಬೆಂಬಲಿಸಲು ಕರ್ನಾಟಕ ಸದಾ ಸಿದ್ಧ ಮತ್ತು ಬದ್ಧ.

ಲೇಖಕ: ರಾಜ್ಯದ ಆರೋಗ್ಯ ಸಚಿವ

ವಾಚಕರ ವಾಣಿ

ನಡೆಯಲಿ ಪರಿಸರಸ್ನೇಹಿ ಅಂತ್ಯಸಂಸ್ಕಾರ

ಅಂತ್ಯಸಂಸ್ಕಾರಕ್ಕೆ ಕಟ್ಟಿಗೆಯ ಕೊರತೆ ಉಂಟಾಗಿರುವ ಸುದ್ದಿಯನ್ನು (ಪ್ರ.ವಾ., ಡಿ. 19) ಓದಿದಾಗ, ಇದು ಮಾನವನ ಸ್ವಯಂಕೃತಾಪರಾಧದ ಫಲ ಎಂದು ಹೇಳಲೇಬೇಕಾಗಿದೆ. ಇಂದು ಶವ ಸುಡುವುದಕ್ಕೂ ಕಟ್ಟಿಗೆ ಸಿಗದಿರುವ ಪರಿಸ್ಥಿತಿಯನ್ನು ತಲುಪಿದ್ದೇವೆ. ಕೆಲವು ಸಂದರ್ಭಗಳಲ್ಲಿ ವಿದ್ಯುತ್ ಚಿತಾಗಾರಗಳೂ ಕೈಕೊಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ವಿವಿಧ ಜಾತಿ, ಧರ್ಮಗಳ ಜನ ಕಟ್ಟಿಗೆಯಿಲ್ಲದೆ ಅಂತ್ಯಸಂಸ್ಕಾರ ನಡೆಸುವ ಪರಿಸರಸ್ನೇಹಿ ಸಂಪ್ರದಾಯಕ್ಕೆ ಬದಲಾಗಬಾರದೇಕೆ?

ಶವಗಳನ್ನು ಸುಡದೆ ಭೂಮಿಯೊಳಗೆ ಹೂತರೆ, ಅವು ಮಣ್ಣಿನೊಂದಿಗೆ ಮಣ್ಣಾಗಿ, ಗೊಬ್ಬರವಾಗಿ ಅರಣ್ಯ ನಾಶವೂ ಕಡಿಮೆಯಾಗುತ್ತದೆ. ಶವಗಳ ದಹನದಿಂದ ಪರಿಸರ ಮಲಿನವಾಗುತ್ತದೆ ಎಂಬ ಅರಿವು ಜನರಲ್ಲಿ ಜಾಗೃತಗೊಂಡರೆ ಅಂತ್ಯಸಂಸ್ಕಾರಕ್ಕೆ ಕಟ್ಟಿಗೆಯ ಅವಶ್ಯಕತೆಯೇ ಇರದು.

ನರೇಂದ್ರ ಘೋರ್ಪಡೆ, ಭದ್ರಾವತಿ

ಬಾಳು ಹಣ್ಣು

ಬಾಳೆ ಬೆಳೆದವರ
ಬಾಳು ಹಣ್ಣು,
ಮಧ್ಯವರ್ತಿಗಳ
ಬಾಳು ಹೊನ್ನು,
ಉಂಟೆ ಇದಕೂ
ಮಿಗಿಲಾದ ಫನ್ನು?

(ಬಾಳೆ ಕುಸಿತ: ಕಂಗಾಲಾದ ರೈತ ಪ್ರ.ವಾ., ಡಿ. 19)

ಟಿ.ವಿ.ಮಾಗಳದ
ಗದಗ

ಸ್ತಬ್ಧಚಿತ್ರ ಪ್ರದರ್ಶನ: ಮಿತಿ ಸಲ್ಲದು

ಗಣರಾಜ್ಯೋತ್ಸವದ ಪ್ರಯುಕ್ತ ದೆಹಲಿಯಲ್ಲಿ ಪ್ರತಿವರ್ಷ ನಡೆಯುವ ಪರೇಡಿನಲ್ಲಿ ರಾಜ್ಯಗಳನ್ನು ಪ್ರತಿನಿಧಿಸುವ ಸ್ತಬ್ಧಚಿತ್ರಗಳ ಸಂಖ್ಯೆಗೆ ಮಿತಿ ಇರುವುದರಿಂದ, ಪ್ರದರ್ಶನಕ್ಕೆ ತಮ್ಮ ಸ್ತಬ್ಧಚಿತ್ರ ಆಯ್ಕೆಯಾಗದ ರಾಜ್ಯಗಳಿಗೆ ಅಸಮಾಧಾನ ಆಗುವುದು ಸಹಜ. ಗಣರಾಜ್ಯೋತ್ಸವ ಇಡೀ ದೇಶದ ಎಲ್ಲ ಜನ ಮತ್ತು ಎಲ್ಲ ರಾಜ್ಯಗಳ ಸಂಭ್ರಮದ ಸಮಾರಂಭ. ಹಾಗಾಗಿ, ಪ್ರತಿ ಬಾರಿಯೂ ಪ್ರತಿ ರಾಜ್ಯಕ್ಕೂ ಪ್ರತಿನಿಧಿಸುವ ಹಕ್ಕು ಇರಬೇಕು. ಪರೇಡಿನ ಸಮಯ ಉಳಿಸುವ ಹಾಗೂ ಪೂರ್ವಭಾವಿ ಪರಿಶೀಲನೆಯಂತಹ ಕ್ಲಿಷ್ಟಕರ ಕಾರ್ಯವನ್ನು ತುಸು ಸುಲಭಗೊಳಿಸುವ ಪ್ರಯುಕ್ತ ಇಂತಹ ನಿರ್ಬಂಧ ಜಾರಿಯಾಗಿರಬಹುದು. ಆದರೆ ಅದರ ಪರಿಣಾಮ ವ್ಯತಿರಿಕ್ತವಾಗಿ ಪ್ರಕಟಗೊಳ್ಳುತ್ತಿದೆ. ರಾಜ್ಯಗಳ ಜನರ ನಿರಾಸೆ ಮತ್ತು ಅಸಮಾಧಾನಕ್ಕೆ ಕಾರಣವಾಗುತ್ತಿದೆ. ವರ್ಷಕ್ಕೊಮ್ಮೆ ಜರುಗುವ ಈ ಪ್ರದರ್ಶನವನ್ನು ಎಲ್ಲ ರಾಜ್ಯಗಳೂ ಪ್ರತಿನಿಧಿಸುವುದು ಸಾಮಾಜಿಕ ನ್ಯಾಯ. ಸರ್ಕಾರ ಈ ನಿಬಂಧನೆಯನ್ನು ರದ್ದುಗೊಳಿಸಿ, ಅಂತಹ ಅವಕಾಶ ನೀಡುವುದು ಜಾಣ ನಡೆ.

ಪ್ರಮೋದ ನಾಯ್ಕ, ಬೆಂಗಳೂರು

ಕಾಳು ಒಣಗಿಸಲು ಬೇಕು ವೈಜ್ಞಾನಿಕ ಪರಿಹಾರ

ಉತ್ತರ ಕರ್ನಾಟಕ ಭಾಗದಲ್ಲಿ, ವಾಣಿಜ್ಯ ಬೆಳೆ ಎಂದೇ ಹೆಸರಾಗಿರುವ ಮೆಕ್ಕೆಜೋಳವನ್ನು ಅತಿ ಹೆಚ್ಚು ರೈತರು ಬೆಳೆಯುತ್ತಾರೆ. ಹಾಗೇ ಹೆಸರು, ನವಣೆಯನ್ನು ಬೆಳೆಯುವವರಿದ್ದಾರೆ. ಈ ರೈತರು ಕಟಾವಾಗಿರುವ ತಮ್ಮ ಹೊಲದ ತೆನೆಯನ್ನು ಯಂತ್ರದ ಸಹಾಯದಿಂದ ಕಾಳುಗಳನ್ನಾಗಿ ಬೇರ್ಪಡಿಸುತ್ತಾರೆ. ಬಳಿಕ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿ ಮೇಲೆ ಈ ಹಸಿಯಾದ ಕಾಳುಗಳನ್ನು ಒಣಗಿಸಲು ಮುಂದಾಗುತ್ತಾರೆ. ಅದಕ್ಕಾಗಿ ರೈತರ ಕುಟುಂಬ ಒಂದು ವಾರದ ಮಟ್ಟಿಗೆ ರಸ್ತೆಯಲ್ಲಿಯೇ ಜೀವನ ನಡೆಸುತ್ತದೆ. ಬೆಳೆಯ ರಾಶಿಯನ್ನು ರಸ್ತೆಯ ಪಕ್ಕದಲ್ಲಿ ಹಾಕಿಕೊಂಡು, ಸಣ್ಣ ಪುಟ್ಟ ಮಕ್ಕಳನ್ನು ಕಟ್ಟಿಕೊಂಡು, ಅಡುಗೆ ಮಾಡಿಕೊಂಡು ಜೀವನ ನಡೆಸುತ್ತದೆ. ಇವರಲ್ಲಿ ಕೆಲವು ಮಕ್ಕಳು ಮತ್ತು ಯುವಕರು ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡುವ ವೇಗದ ವಾಹನಗಳಿಗೆ ಸಿಲುಕಿ ಸಾವನ್ನಪ್ಪಿದ ಉದಾಹರಣೆಗಳೂ ಇವೆ. ರೈತರ ಇಂತಹ ಸಂಕಷ್ಟಗಳಿಗೆ ಸೂಕ್ತ ಪರಿಹಾರ ಹುಡುಕಬೇಕು. ವೈಜ್ಞಾನಿಕ ರೀತಿಯಲ್ಲಿ ಅವರಿಗೆ ಸೂಕ್ತ ನೆಲೆಯನ್ನು ಕಲ್ಪಿಸಬೇಕು.

ಸಂಪತ್ ಆಕಳವಾಡಿ, ಕೊಪ್ಪಳ

ಆಹ್ವಾನ ಪತ್ರಿಕೆ ತಲುಪಿಸಲು ತಡವಾದದ್ದೇಕೆ?

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕಾಯಂ ಸದಸ್ಯ. ಮಂಡ್ಯದಲ್ಲಿ ಇದೇ 20ರಿಂದ ಮೂರು ದಿನ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಪರಿಷತ್ತಿನ ವತಿಯಿಂದ ಕಳುಹಿಸಿದ್ದ ಆಹ್ವಾನ ಪತ್ರಿಕೆ ನನಗೆ 21ರಂದು ತಲುಪಿತು. ನನಗೆ ಮಾತ್ರ ಹೀಗೆ ಆಗಿರಲಾರದು. ನಾಡಿನ ಜನರ ಲಕ್ಷಾಂತರ ರೂಪಾಯಿಯನ್ನು ವಿನಿಯೋಗಿಸಿ ಮುದ್ರಿಸಿದ ಆಹ್ವಾನ ಪತ್ರಿಕೆಯನ್ನು ಪರಿಷತ್ತಿನ ಕಾಯಂ ಸದಸ್ಯರಿಗೆ ಸಕಾಲದಲ್ಲಿ ತಲುಪಿಸಬೇಕಿತ್ತು. ಕಾರ್ಯಕ್ರಮ ಅರ್ಧದಷ್ಟು ಮುಗಿದ ಮೇಲೆ ಆಹ್ವಾನ ಪತ್ರಿಕೆ ರವಾನಿಸುವ ಮೂಲಕ ಪರಿಷತ್ತಿನ ವತಿಯಿಂದ ಅವಮಾನಿಸಲಾಗಿದೆ ಹಾಗೂ ಕಾರ್ಯಕ್ರಮದ ಬಗ್ಗೆ ಪಕ್ಷಿನೋಟ ನೀಡುವಲ್ಲಿ ಪರಿಷತ್ತು ವಿಫಲವಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ಸಮ್ಮೇಳನಕ್ಕೆ ಭರದ ಸಿದ್ಧತೆಗಳು ನಡೆದಿವೆ ಎಂದು ಪರಿಷತ್ತಿನ ಕಾರ್ಯಕಾರಿ ಸಮಿತಿಯವರು, ಬಹಳಷ್ಟು ಹಿಂದಿನಿಂದಲೇ ಪತ್ರಿಕೆಗಳಿಗೆ ನಿರಂತರವಾಗಿ ಹೇಳಿಕೆಗಳನ್ನು ನೀಡುತ್ತಿದ್ದರು. ಹಾಗಿದ್ದರೂ ತಡವಾಗಿ ಆಹ್ವಾನ ಪತ್ರಿಕೆ ಕಳಿಸಿದ್ದಕ್ಕೆ ಕಾರಣವೇನು? ಮುಂದಿನ ದಿನಗಳಲ್ಲಿ ಈ ಕೆಟ್ಟ ಸಂಪ್ರದಾಯ ಮುಂದುವರಿಯದಿರಲಿ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ರಾಷ್ಟ್ರಕವಿ ಘೋಷಣೆ: ಚರ್ಚೆ ಅಗತ್ಯ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಐದನೇ ನಿರ್ಣಯವು ರಾಷ್ಟ್ರಕವಿಯನ್ನು ಶೀಘ್ರದಲ್ಲಿ ಘೋಷಿಸಬೇಕು ಎಂದು ಹೇಳಿದೆ. ಘೋಷಣೆ ಮಾಡಲು ಒಂದು ಸಮಿತಿ ರಚನೆಯಾಗಬೇಕು. ಸಮಿತಿಯು ಸರ್ಕಾರದ ಆಣತಿಯಂತೆ ಆಯ್ಕೆ ಮಾಡುತ್ತದೆ. ಅಲ್ಲಿಗೆ ಆಯ್ಕೆಯಲ್ಲೇ ಲೋಪವುಂಟಾಗುತ್ತದೆ. ಒಬ್ಬರನ್ನು ಆಯ್ಕೆ ಮಾಡಿದರೆ ಇನ್ನೊಬ್ಬರಿಗೆ ಅಸಮಾಧಾನ. ಪಕ್ಷಾತೀತವಾಗಿ ಆಯ್ಕೆ ಮಾಡುವ ಮನಃಸ್ಥಿತಿ, ಮುತ್ಸದ್ದಿತನ ಇಂದಿನ ರಾಜಕೀಯ ನೇತಾರರಿಗೆ ಇಲ್ಲವೇ ಇಲ್ಲ. 'ಕರ್ನಾಟಕ ರತ್ನ' ಪ್ರಶಸ್ತಿಗೆ ನಟ ರಾಜ್‌ಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿದ್ದ ಎಸ್. ಬಂಗಾರಪ್ಪ ಅವರು ಆಯ್ಕೆ ಮಾಡಿದಾಗ, ಮೊದಲು ಕುವೆಂಪು ಅವರಿಗೆ ಕೊಡುವಂತೆ ಹೇಳಿ ರಾಜ್‌ಕುಮಾರ್ ಮನೋವೈಶಾಲ್ಯ ಮೆರೆದರು. ಅವರ ಆಣತಿಯಂತೆ ಜಂಟಿಯಾಗಿ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಇಬ್ಬರೂ ಪಡೆದರು. ರಾಜ್‌ಕುಮಾರ್ ಅವರೇ ಪಡೆದಿದ್ದರೆ ಬಂಗಾರಪ್ಪನವರು ತಮ್ಮ ಬೀಗರಿಗೆ ಪ್ರಶಸ್ತಿ ಕೊಟ್ಟಂತೆ ಆಗುತ್ತಿತ್ತು. ಒಟ್ಟಿನಲ್ಲಿ ರಾಷ್ಟ್ರಕವಿ ಎಂಬ ಆಯ್ಕೆಯನ್ನು ಕೈ ಬಿಡುವುದೇ ಒಳಿತು. ಕೊಡುವುದೇ ಆದರೆ ಸಾಧಕ, ಬಾಧಕಗಳ ಬಗ್ಗೆ ಚರ್ಚೆಯಾಗಲಿ.

ಮಲ್ಲಿಕಾರ್ಜುನ, ಸುರಧೇನುಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ ಕೌಶಲ ವರದಿ–2025: ದೇಶವು ಕೌಶಲಯುಕ್ತ ಪ್ರತಿಭೆಗಳ ಗಣಿ

ಉದ್ಯೋಗಯೋಗ್ಯತೆ ಮುಂಚೂಣಿಯಲ್ಲಿ ಕರ್ನಾಟಕ

ಭಾರತದ ಯುವಜನರು ವಿವಿಧ ರೀತಿಯ ಉದ್ಯೋಗ ಯೋಗ್ಯವಾದ ಕೌಶಲ ಗಳಿಕೆಯಲ್ಲಿ ಜಾಗತಿಕ ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ಇದು ದೇಶದ ಉದ್ಯೋಗ ಕ್ಷೇತ್ರದಲ್ಲಿ ಭಾರಿ ಬದಲಾವಣೆಗೆ ಕಾರಣವಾಗಲಿದೆ ಎಂದು ಭಾರತ ಕೌಶಲ ವರದಿ–2025ರಲ್ಲಿ ಪ್ರತಿಪಾದಿಸಲಾಗಿದೆ. ದೇಶದ ಬಹುತೇಕ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿದ್ಯಾರ್ಥಿಗಳ ಕೌಶಲ ಪರೀಕ್ಷೆ ನಡೆಸಲಾಗಿದ್ದು, ಅದರ ವರದಿಯು ರಾಜ್ಯವಾರು ಮತ್ತು ಕ್ಷೇತ್ರವಾರು ಉದ್ಯೋಗಯೋಗ್ಯತೆಯ ಚಿತ್ರಣ ನೀಡುತ್ತಿದೆ. ದೇಶದಲ್ಲಿ ಕರ್ನಾಟಕ ಮತ್ತು ಬೆಂಗಳೂರು ನಗರ ಹಲವು ವಲಯಗಳಲ್ಲಿ ಮುಂಚೂಣಿ ಸ್ಥಾನ ಪಡೆದಿರುವುದು ವಿಶೇಷ

ಸಂಪನ್ಮೂಲ ತಂತ್ರಜ್ಞಾನ ಸಂಸ್ಥೆ 'ವೀಬಾಕ್ಸ್' ರಾಜ್ಯವಾರು ಯುವಜನರ ಉದ್ಯೋಗಯೋಗ್ಯತೆಯನ್ನು ವಿವರಿಸುವ 'ಭಾರತ ಕೌಶಲ ವರದಿ–2025' ಬಿಡುಗಡೆ ಮಾಡಿದೆ. ಅಂತಿಮ ವರ್ಷದ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಪದವೀಧರರ ಉದ್ಯೋಗದ ಅರ್ಹತೆಯನ್ನು ಪರೀಕ್ಷಿಸಲು 'ಜಾಗತಿಕ ಉದ್ಯೋಗಯೋಗ್ಯತೆಯ ಪರೀಕ್ಷೆ' (ಜಿಇಟಿ) ನಡೆಸಲಾಗಿದೆ. ದೇಶದ 28 ರಾಜ್ಯ, 8 ಕೇಂದ್ರಾಡಳಿತ ಪ್ರದೇಶ ಮತ್ತು 15 ವಲಯಗಳ 6.5 ಲಕ್ಷ ಯುವಜನರು ಜಿಇಟಿ ಎದುರಿಸಿದ್ದಾರೆ. ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ), ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ), ಅಸೋಸಿಯೇಷನ್ ಫಾರ್ ಇಂಡಿಯನ್ ಯೂನಿವರ್ಸಿಟೀಸ್ (ಎಐಯು) ಮುಂತಾದ ಸಂಸ್ಥೆಗಳ ಸಹಯೋಗದೊಂದಿಗೆ ಈ ಪರೀಕ್ಷೆ ನಡೆಸಲಾಗಿದೆ. ಪರೀಕ್ಷೆಯಲ್ಲಿ ಶೇ 60ಕ್ಕೂ ಹೆಚ್ಚು ಅಂಕ ಗಳಿಸಿದವರನ್ನು ಪರಿಗಣಿಸಿ, ಉದ್ಯೋಗಯೋಗ್ಯತೆಯ ಪ್ರಮಾಣವನ್ನು ರಾಜ್ಯವಾರು, ವಿಷಯವಾರು ಅಳೆಯಲಾಗಿದೆ.

ಭಾರತದ ಶೇ 65ಕ್ಕೂ ಹೆಚ್ಚು ಉದ್ಯೋಗಿಗಳು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು, ಇದು ಜಾಗತಿಕ ಆರ್ಥಿಕತೆ ಮತ್ತು ಉದ್ಯೋಗ ವಲಯದಲ್ಲಿ ದೇಶದ ಸಾಧ್ಯತೆಗಳನ್ನು ಹೆಚ್ಚಿಸಿದೆ. ತಮ್ಮ ಕೌಶಲ ಮತ್ತು ಹೊಂದಿಕೆಯ ಗುಣದಿಂದ ಜಾಗತಿಕ ಬೆಳವಣಿಗೆಯಲ್ಲಿ ಭಾರತೀಯರು ಮುಂಚೂಣಿಯಲ್ಲಿದ್ದಾರೆ. ಗಲ್ಫ್ ರಾಷ್ಟ್ರಗಳು, ಆಗ್ನೇಯ ಏಷ್ಯಾ, ಆಫ್ರಿಕಾ, ಯೂರೋಪ್ ಮತ್ತು ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳಲ್ಲಿ ಕೌಶಲ ಕೊರತೆ ಇದ್ದು, ಸಮರ್ಥ ಉದ್ಯೋಗಿಗಳ ಅಗತ್ಯವಿದೆ. ಭಾರತದಲ್ಲಿ ಕಾರ್ಮಿಕಬಲವು ಹೆಚ್ಚಿನ ಪ್ರಮಾಣದಲ್ಲಿರುವುದು ಅಷ್ಟೇ ಅಲ್ಲ, ಕೌಶಲಗಳ ಗಳಿಕೆಯಲ್ಲೂ ಉತ್ತಮ ಸಾಧನೆ ಮಾಡಿದೆ. ವರ್ಷದಿಂದ ವರ್ಷಕ್ಕೆ ದೇಶದ ಯುವಜನರ ಕೌಶಲಗಳ ಪ್ರಮಾಣವೂ ಹೆಚ್ಚುತ್ತಿದೆ.

ವರದಿಯ ಪ್ರಕಾರ, ಭಾರತದ ಪದವೀಧರರಲ್ಲಿ ಶೇ 54.81ರಷ್ಟು ಜನರು ಉದ್ಯೋಗಯೋಗ್ಯತೆ ಉಳ್ಳವರಾಗಿದ್ದಾರೆ. ದಶಕದ ಹಿಂದೆ ಈ ಪ್ರಮಾಣವು ಶೇ 33ರಷ್ಟಿತ್ತು. ಬೆಳೆಯುತ್ತಿರುವ ಜಾಗತಿಕ ಆರ್ಥಿಕತೆಯ ವೇಗಕ್ಕೆ ತಕ್ಕಂತೆ ಉದ್ಯೋಗಯೋಗ್ಯತೆಯೂ ಹೆಚ್ಚಾಗಿದೆ. ಅಂದರೆ, ಒಂದು ದಶಕದಲ್ಲಿ ಶೇ 17ರಷ್ಟು ಹೆಚ್ಚಳ. ಜಾಗತಿಕ ಕೌಶಲ ಕೊರತೆಯನ್ನು ಭಾರತದ ಯುವಜನರು ತುಂಬುತ್ತಿದ್ದಾರೆ ಎನ್ನುವುದಕ್ಕೆ ದೇಶಕ್ಕೆ ವಿದೇಶಗಳಿಂದ ಅತಿ ಹೆಚ್ಚು ಹಣ (ಸುಮಾರು ₹9.42 ಲಕ್ಷ ಕೋಟಿ) ಹರಿದುಬರುತ್ತಿರುವುದೇ ನಿದರ್ಶನ. ಮುಂದಿನ ದಿನಗಳಲ್ಲಿ ಇದು ಮತ್ತಷ್ಟು ಹೆಚ್ಚಲಿದ್ದು, ಅದನ್ನು 'ಜಾಗತಿಕ ಪ್ರತಿಭಾ ಚಲನೆ' ಎಂದು ಕರೆಯಲಾಗಿದೆ.

ಭಾರತದಲ್ಲಿ ಮಾಹಿತಿ ತಂತ್ರಜ್ಞಾನ ವಲಯವು ಉದ್ಯೋಗ ಯೋಗ್ಯ ಕ್ಷೇತ್ರಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ. ಅದರಲ್ಲೂ ಕ್ಲೌಡ್ ಕಂಪ್ಯೂಟಿಂಗ್, ಕೃತಕ ಬುದ್ಧಿಮತ್ತೆ (ಎಐ), ಸೈಬರ್ ಭದ್ರತೆ, ಡೇಟಾಸೈನ್ಸ್ ಮುಂತಾದ ಕ್ಷೇತ್ರಗಳ ಬಗ್ಗೆ ವಿಶೇಷ ಗಮನ ನೀಡಲಾಗುತ್ತಿದ್ದು, ಇದು ಮುಂದಿನ ದಿನಗಳಲ್ಲಿ ದೇಶದ ಹೆಚ್ಚು ಮಂದಿಗೆ ಉದ್ಯೋಗಾವಕಾಶಗಳ ಸೃಷ್ಟಿಗೆ ಕಾರಣವಾಗುತ್ತದೆ ಎಂದು ವರದಿ ಅಂದಾಜಿಸಿದೆ.

ಕರ್ನಾಟಕ, ಬೆಂಗಳೂರು ಮುಂದೆ

ಉದ್ಯೋಗ ಪಡೆಯಲು ಬೇಕಾದ ಕೌಶಲ ಹೊಂದಿರುವ ಯುವಜನರು ಹೆಚ್ಚು ಇರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 3ನೇ ಸ್ಥಾನದಲ್ಲಿದೆ. ರಾಜ್ಯದ ಉದ್ಯೋಗಯೋಗ್ಯತೆ ಪ್ರಮಾಣ ಶೇ 74ರಷ್ಟಿದೆ. ಮಹಾರಾಷ್ಟ್ರ (ಶೇ 84) ಮೊದಲ ಸ್ಥಾನದಲ್ಲಿದೆ. ದೆಹಲಿ (ಶೇ 78) 2ನೇ ಸ್ಥಾನದಲ್ಲಿದೆ. ಕೇರಳ (ಶೇ 71) ಮತ್ತು ಉತ್ತರ ಪ್ರದೇಶ (ಶೇ 70) ನಂತರದ ಸ್ಥಾನಗಳಲ್ಲಿವೆ.

ಪದವೀಧರರಲ್ಲಿರುವ ವಿವಿಧ ಕೌಶಲಗಳ ಬಗ್ಗೆಯೂ ವರದಿ ಬೆಳಕು ಚೆಲ್ಲಿದ್ದು, ಕರ್ನಾಟಕ ಅದರಲ್ಲೂ ವಿಶೇಷವಾಗಿ ಬೆಂಗಳೂರು ಹಲವು ವಿಭಾಗಗಳಲ್ಲಿ ಮುಂಚೂಣಿಯಲ್ಲಿದೆ.

ಎರಡನೇ ಭಾಷೆಯಾಗಿ ಇಂಗ್ಲಿಷ್ ಅನ್ನು ಬಳಸುವಲ್ಲಿ ನಿಪುಣರಾಗಿರುವ ಪದವೀಧರರನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಮಹಾರಾಷ್ಟ್ರದಲ್ಲಿ ಶೇ 67.45ರಷ್ಟು ಯುವಜನರು ಇಂಗ್ಲಿಷ್ ಭಾಷೆ ಮೇಲೆ ಪ್ರೌಢಿಮೆ ಹೊಂದಿದ್ದಾರೆ. ಕರ್ನಾಟಕದಲ್ಲಿ ಶೇ 63.5ರಷ್ಟು ಮಂದಿ ಈ ಕೌಶಲ ಹೊಂದಿದ್ದಾರೆ. ಉತ್ತರ ಪ್ರದೇಶ (ಶೇ 60.48), ಕೇರಳ (ಶೇ 59.72) ಮತ್ತು ದೆಹಲಿ (ಶೇ 56.89) ನಂತರದ ಸ್ಥಾನಗಳಲ್ಲಿವೆ.

ಸಂಖ್ಯಾ ಕೌಶಲದಲ್ಲಿ ಉತ್ತರ ಪ್ರದೇಶ (ಶೇ 80.12), ಆಂಧ್ರಪ್ರದೇಶ, ಮಧ್ಯಪ್ರದೇಶ, ಪಂಜಾಬ್, ತೆಲಂಗಾಣ, ಒಡಿಶಾ, ಹರಿಯಾಣ ರಾಜ್ಯಗಳ ನಂತರದ ಸ್ಥಾನದಲ್ಲಿ ಕರ್ನಾಟಕ (ಶೇ 64) ಇದೆ.

ವಿಮರ್ಶಾತ್ಮಕ ಚಿಂತನೆಯಲ್ಲಿ (ಕ್ರಿಟಿಕಲ್ ಥಿಂಕಿಂಗ್) ಉತ್ತರ ಪ್ರದೇಶ (ಶೇ 45) ಮೊದಲ ಸ್ಥಾನದಲ್ಲಿದ್ದರೆ, ರಾಜಸ್ಥಾನ (ಶೇ 43), ಮಧ್ಯಪ್ರದೇಶ (ಶೇ 42) ನಂತರದ ಸ್ಥಾನದಲ್ಲಿ ಕರ್ನಾಟಕ (ಶೇ 40) ಇದೆ. ವಿಮರ್ಶಾತ್ಮಕ ಚಿಂತನೆಯಲ್ಲಿ (ಕ್ರಿಟಿಕಲ್ ಥಿಂಕಿಂಗ್) ಉತ್ತರ ಪ್ರದೇಶ (ಶೇ 45) ಮೊದಲ ಸ್ಥಾನದಲ್ಲಿದ್ದರೆ, ರಾಜಸ್ಥಾನ (ಶೇ 43), ಮಧ್ಯಪ್ರದೇಶ (ಶೇ 42), ಕರ್ನಾಟಕದ (ಶೇ 40) ನಂತರದ ಸ್ಥಾನಗಳಲ್ಲಿವೆ.

ಕಂಪ್ಯೂಟರ್ ಕೌಶಲದಲ್ಲಿ ಉತ್ತರ ಪ್ರದೇಶ (ಶೇ 45.93) ಕೇರಳ (ಶೇ 37.34), ಮಹಾರಾಷ್ಟ್ರ (ಶೇ 30.55), ತೆಲಂಗಾಣ (ಶೇ 29.72), ತಮಿಳುನಾಡು (ಶೇ 29.47) ರಾಜ್ಯಗಳ ನಂತರ ಕರ್ನಾಟಕ (ಶೇ 28.48) ಬರುತ್ತದೆ.

ಬೆಂಗಳೂರು ನಗರವೂ ಹಲವು ವಿಚಾರಗಳಲ್ಲಿ ಮುಂಚೂಣಿಯಲ್ಲಿದೆ. ಉದ್ಯೋಗಯೋಗ್ಯತೆಯುಳ್ಳ ನಗರಗಳ ಪಟ್ಟಿಯಲ್ಲಿ ಪುಣೆ (ಶೇ 78.32) ಮೊದಲ ಸ್ಥಾನದಲ್ಲಿದ್ದರೆ, ಬೆಂಗಳೂರು (76.48) ಎರಡನೇ ಸ್ಥಾನದಲ್ಲಿದೆ. ಇಂಗ್ಲಿಷ್ ಭಾಷಾ ಜ್ಞಾನ, ಸಂಖ್ಯಾ ಕೌಶಲ, ವಿಮರ್ಶಾತ್ಮಕ ಚಿಂತನೆ ಮತ್ತು ಕಂಪ್ಯೂಟರ್ ಕೌಶಲದಲ್ಲಿ ಬೆಂಗಳೂರು ಅಗ್ರಸ್ಥಾನ ಪಡೆದಿದೆ.

ಗಮನಾರ್ಹ ವಿಚಾರ ಎಂದರೆ, ಬಿಇ/ಬಿಟೆಕ್, ಎಂಬಿಎ, ಎಂಸಿಎ, ಐಟಿಐ, ಬಿಸಿಎ ಪದವೀಧರರ ಸಂಖ್ಯೆಯಲ್ಲಿ ಅಗ್ರ 5 ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಸ್ಥಾನ ಪಡೆದಿಲ್ಲ. ಎಂಎಸ್‌ಸಿ ಪದವೀಧರರ ಪಟ್ಟಿಯಲ್ಲಿ ಐದನೇ ಸ್ಥಾನ, ಬಿ.ಕಾಂ ಪದವೀಧರರ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು, ಬಿಎಸ್‌ಸಿ ಪದವೀಧರರ ಪಟ್ಟಿಯಲ್ಲಿ ಮೂರನೇ ಸ್ಥಾನವನ್ನು, ಬಿಬಿಎ ಪದವೀಧರರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಕರ್ನಾಟಕ ಪಡೆದಿದೆ.

ಭಾರತ ಕೌಶಲ ವರದಿ–2025ರಲ್ಲಿ ಹಲವು ವಿಚಾರಗಳಲ್ಲಿ ಕೇರಳ, ಆಂಧ್ರಪ್ರದೇಶ ರಾಜ್ಯಗಳು ಉತ್ತಮ ಸಾಧನೆ ಮಾಡಿವೆ. ವಿದ್ಯಾರ್ಥಿಗಳು ಹೆಚ್ಚುವರಿ ಕೌಶಲ ಗಳಿಕೆ ಕಾರ್ಯಕ್ರಮ (ಎಎಸ್‌ಎಪಿ) ಮುಂಚೂಣಿಯಲ್ಲಿರುವುದು ಕೇರಳ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ಕಾರಣವಾಗಿದೆ. ಆಂಧ್ರದಲ್ಲಿ, ದೇಶದಲ್ಲೇ ಮೊದಲ ಬಾರಿಗೆ ಕೌಶಲ ಗಣತಿ ನಡೆಸಲಾಗುತ್ತಿದ್ದು, ಅಲ್ಲಿನ ವಿದ್ಯಾರ್ಥಿಗಳ ಸಾಮರ್ಥ್ಯ ವೃದ್ಧಿಯಲ್ಲಿ ಅದರದ್ದು ಮುಖ್ಯ ಪಾತ್ರವಾಗಿದೆ ಎಂದು ವರದಿ ಹೇಳಿದೆ.

ಆಧಾರ: ಭಾರತ ಕೌಶಲ ವರದಿ–2025



ದೇಶದಲ್ಲಿ ಹೆಚ್ಚು ಪ್ರಗತಿ ಕಾಣಲಿರುವ ಕ್ಷೇತ್ರಗಳು

- ಮಾಹಿತಿ ತಂತ್ರಜ್ಞಾನ: ಕೃತಕ ಬುದ್ಧಿಮತ್ತೆ, ಮಷೀನ್ ಲರ್ನಿಂಗ್ (ಎಂಎಲ್), ಕ್ಲೌಡ್ ಕಂಪ್ಯೂಟಿಂಗ್ ಮತ್ತು ಸೈಬರ್ ಭದ್ರತೆ
- ಆರೋಗ್ಯಸೇವೆ ಮತ್ತು ಫಾರ್ಮಾಸ್ಯೂಟಿಕಲ್: ಜೈವಿಕ ತಂತ್ರಜ್ಞಾನ
- ನವೀಕರಿಸಬಹುದಾದ ಇಂಧನ: ಸೌರಶಕ್ತಿಗೆ ಸಂಬಂಧಿಸಿದ ಪರಿಣತಿ ಮತ್ತು ಪರಿಸರ ನಿರ್ವಹಣೆ
- ಇ-ಕಾಮರ್ಸ್ ಮತ್ತು ಡಿಜಿಟಲ್ ಅರ್ಥವ್ಯವಸ್ಥೆ: ಡಿಜಿಟಲ್ ಮಾರುಕಟ್ಟೆ ವಿಸ್ತರಣೆ ಮತ್ತು ದತ್ತಾಂಶ ಆಧಾರಿತ ಕಾರ್ಯಾಚರಣೆ
- ಉತ್ಪಾದನೆ ಮತ್ತು ಮೂಲಸೌಕರ್ಯ: ರೊಬೊಟಿಕ್ ಮತ್ತು ಸ್ವಯಂಚಾಲಿತ ತಂತ್ರಜ್ಞಾನ
- ಹಣಕಾಸು ತಂತ್ರಜ್ಞಾನ ಮತ್ತು ಶಿಕ್ಷಣ ತಂತ್ರಜ್ಞಾನ: ಡಿಜಿಟಲ್ ಕರೆನ್ಸಿ ವ್ಯವಹಾರದ ದತ್ತಾಂಶ ವಿವರಗಳನ್ನೊಳಗೊಂಡ ಬ್ಲಾಕ್‌ಗಳು (ಬ್ಲಾಕ್‌ಚೈನ್), ಸೈಬರ್ ಭದ್ರತೆ ಮತ್ತು ಡಿಜಿಟಲ್ ಕಲಿಕೆಗೆ ಸಂಬಂಧಿಸಿದ ವಿನೂತನ ಕಲ್ಪನೆಗಳು

ಸಿನಿ ಬಿಟ್ಸ್

'ಕನ್ನಡ ಚಿತ್ರರಂಗ ಒಗ್ಗಟ್ಟಾಗಿರಲಿ'

ಸುದೀಪ್

ನಟ ಸುದೀಪ್ ಅಭಿನಯದ 46ನೇ ಸಿನಿಮಾ, ವಿಜಯ್ ಕಾರ್ತಿಕೇಯ ನಿರ್ದೇಶನದ 'ಮ್ಯಾಕ್ಸ್' ಡಿ.25ಕ್ಕೆ ಬಿಡುಗಡೆಯಾಗುತ್ತಿದೆ. ಚಿತ್ರದ ಪ್ರಿರಿಲೀಸ್ ಕಾರ್ಯಕ್ರಮ ಇತ್ತೀಚೆಗೆ ಚಿತ್ರದುರ್ಗದಲ್ಲಿ ನಡೆಯಿತು.

ನಟರಾದ ಧನಂಜಯ, ಡಾರ್ಲಿಂಗ್ ಕೃಷ್ಣ, ವಿನಯ್ ರಾಜ್‌ಕುಮಾರ್, ಯುವ ರಾಜ್‌ಕುಮಾರ್, ನವೀನ್ ಶಂಕರ್, ನಿರೂಪ್ ಭಂಡಾರಿ, ಕಾರ್ತಿಕ್ ಮಹೇಶ್ ಸೇರಿದಂತೆ ಹಲವು ನಟರು, ನಿರ್ದೇಶಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಸುದೀಪ್, 'ಎರಡೂವರೆ ವರ್ಷ ಕಾಯಿಸಿದ್ದಕ್ಕೆ ಕ್ಷಮಿಸಿಬಿಡಿ. ಅಭಿಮಾನಿಗಳು ಟ್ರೋಲ್ ಮಾಡಿದ್ದನ್ನು ಓದಿಲ್ಲ ಎಂದುಕೊಳ್ಳಬೇಡಿ, ಚೆನ್ನಾಗಿಯೇ ಅವುಗಳನ್ನು ಓದಿಕೊಂಡಿದ್ದೇನೆ. ಬೇಕೆಂದೇ ನಿಮ್ಮನ್ನು ಕಾಯಿಸಿಲ್ಲ, ಕೆಲವು ಬಾರಿ ಹೀಗೆ ಆಗಿಹೋಗುತ್ತದೆ. ಮುಂದೆ ಖಂಡಿತವಾಗಿಯೂ ಹೆಚ್ಚು ಸಿನಿಮಾಗಳನ್ನು ಮಾಡುತ್ತೇನೆ. ಡಿ.25ಕ್ಕೆ 'ಮ್ಯಾಕ್ಸ್' ಬರಲಿದೆ. ಈ ಸಿನಿಮಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೊಸಬರು ನಟಿಸಿದ್ದಾರೆ, ತಂತ್ರಜ್ಞರು ಕಾರ್ಯನಿರ್ವಹಿಸಿದ್ದಾರೆ. ಅವರಿಗೆ ಇದೊಂದು ಒಳ್ಳೆಯ ವೇದಿಕೆಯಾಗಲಿದೆ. ಕನ್ನಡ ಚಿತ್ರರಂಗವನ್ನು, ಕನ್ನಡ ಜನತೆಯನ್ನು ಇದೇ ರೀತಿ ಒಗ್ಗಟ್ಟಾಗಿ ನೋಡಲು ಆಸೆಪಡುವವನು ನಾನು. ಈ ಒಗ್ಗಟ್ಟು ಹೀಗೇ ಇರಲಿ. ಕನ್ನಡ ಚಿತ್ರರಂಗ ಬೆಳೆಯಬೇಕು ಎನ್ನುವ ಆಸೆಯೂ ನನ್ನದು. ಬೇರೆ ರಾಜ್ಯದ ಹೊಸ ಚಿತ್ರಗಳಿಗೆ ಎಷ್ಟು ಬೆಂಬಲ ನೀಡುತ್ತೀರೋ, ನಮ್ಮ ಕನ್ನಡ ಚಿತ್ರಗಳ ಹೊಸ ಪ್ರತಿಭೆಗಳಿಗೂ ಅಷ್ಟೇ ಬೆಂಬಲ ನೀಡಿ. ಇಲ್ಲವಾದಲ್ಲಿ ನಾಳೆ ಕನ್ನಡ ಚಿತ್ರಗಳು ಇರುವುದಿಲ್ಲ, ಚಿತ್ರಮಂದಿರಗಳು ಉಳಿಯುವುದಿಲ್ಲ' ಎಂದರು.

'ಮ್ಯಾಕ್ಸ್' ಸಿನಿಮಾದಲ್ಲಿ ಸುದೀಪ್ ಜೊತೆಗೆ 'ಪುಷ್ಪ' ಖ್ಯಾತಿಯ ಸುನೀಲ್, ವರಲಕ್ಷ್ಮೀ ಶರತ್ ಕುಮಾರ್, ಸಂಯುಕ್ತ ಹೊರನಾಡು, ಶರತ್ ಲೋಹಿತಾಶ್ವ, ಪ್ರಮೋದ್ ಶೆಟ್ಟಿ ಮುಂತಾದವರು ನಟಿಸಿದ್ದಾರೆ. ❖

'ನೋಡಿದವರು ಏನಂತಾರೆ' ಟೀಸರ್ ರಿಲೀಸ್

ನವೀನ್ ಶಂಕರ್ ನಟನೆಯ, ಕುಲದೀಪ್ ಕಾರಿಯಪ್ಪ ನಿರ್ದೇಶನದ 'ನೋಡಿದವರು ಏನಂತಾರೆ' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. ಜ.31ರಂದು ಈ ಸಿನಿಮಾ ರಿಲೀಸ್ ಆಗಲಿದೆ.

'ಕ್ಷೇತ್ರಪತಿ', 'ಗುರುದೇವ ಹೊಯ್ಸಳ' ಸಿನಿಮಾದ ಬಳಿಕ ಪ್ರಶಾಂತ್ ನೀಲ್ ನಿರ್ದೇಶನದ 'ಸಲಾರ್' ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಗುರುತಿಸಿಕೊಂಡಿರುವ ನವೀನ್ ಶಂಕರ್ ಕೈಯಲ್ಲಿ ಹಲವು ಪ್ರಾಜೆಕ್ಟ್‌ಗಳಿವೆ. ಶಿವರಾಜ್‌ಕುಮಾರ್ ನಟನೆಯ 131ನೇ ಸಿನಿಮಾದಲ್ಲೂ ನವೀನ್ ಬಣ್ಣಹಚ್ಚಿದ್ದಾರೆ. 'ನೋಡಿದವರು ಏನಂತಾರೆ' ಸಿನಿಮಾದಲ್ಲಿ 'ಸಿದ್ಧಾರ್ಥ್ ದೇವಯ್ಯ' ಎಂಬ ಪಾತ್ರದ ಮುಖಾಂತರ ನವೀನ್ ಪ್ರೇಕ್ಷಕರೆದುರಿಗೆ ಬರಲಿದ್ದಾರೆ. ಭಿನ್ನವಾದ ಭಾವನಾತ್ಮಕ ಕಥೆಯೊಂದನ್ನು ಕುಲದೀಪ್ ತೆರೆ ಮೇಲೆ ತರುತ್ತಿದ್ದಾರೆ ಎನ್ನುವುದನ್ನು ಟೀಸರ್ ಅನಾವರಣಗೊಳಿಸಿದೆ. ಹಿಂದಿನ ಸಿನಿಮಾಗಳಿಗಿಂತಲೂ ವಿಭಿನ್ನ ಪಾತ್ರದಲ್ಲಿ ನವೀನ್ ಇಲ್ಲಿದ್ದಾರೆ. ಈ ಚಿತ್ರವನ್ನು ನಾಗೇಶ್ ಗೋಪಾಲ್ ನಿರ್ಮಾಣ ಮಾಡಿದ್ದಾರೆ. ಅಪೂರ್ವ ಭಾರದ್ವಾಜ್ ನಾಯಕಿಯಾಗಿ ನಟಿಸಿದ್ದಾರೆ. ❖

ನವೀನ್ ಶಂಕರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ದೆಹಲಿ ಮಾಜಿ ಮುಖ್ಯಮಂತ್ರಿ, ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. 'ಅಂಬೇಡ್ಕರ್ ಅವರು ಸಂವಿಧಾನ ರಚನೆ ಮಾಡುವಾಗ ಮದ್ಯ ಕುಡಿದಿದ್ದರು ಎನ್ನುವುದಾಗಿ ಅರವಿಂದ ಕೇಜ್ರಿವಾಲ್ ಅವರು ಹೇಳಿದ್ದಾರೆ' ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಕೇಜ್ರಿವಾಲ್ ಅವರನ್ನು ಬಂಧಿಸಬೇಕು ಎಂತಲೂ ಕೆಲವರು ಒತ್ತಾಯಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ಮೇಲೆ 'ಪಾಲಿಟಿಕ್ಸ್ ಪೇ ಚರ್ಚಾ' ಎನ್ನುವ ಎಕ್ಸ್ ಖಾತೆಯ ವಾಟರ್ ಮಾರ್ಕ್ ಇದೆ. ಈ ಖಾತೆಯು ಈ ಹಿಂದೆಯೂ ಹಲವು ಬಾರಿ ತಪ್ಪು ಮಾಹಿತಿ ಹಂಚಿಕೊಂಡಿತ್ತು. ವಿಡಿಯೊಗೆ ಎಕ್ಸ್ ವೇದಿಕೆಯಲ್ಲಿ ಬಂದ ಪ್ರತಿಕ್ರಿಯೆಗಳನ್ನು ಆಧರಿಸಿ ಅದು ಡಿಸೆಂಬರ್ 2012ರಲ್ಲಿ ಯುಟ್ಯೂಬ್‌ಗೆ ಅಪ್‌ಲೋಡ್ ಆಗಿದೆ ಎನ್ನುವುದು ತಿಳಿಯಿತು. 2012ರ ನವೆಂಬರ್ 25ರಂದು ಕೇಜ್ರಿವಾಲ್ ಮಾಡಿದ್ದ ಭಾಷಣವನ್ನು ಅದು ಒಳಗೊಂಡಿದೆ. ಎಎಪಿಯ ಸಂವಿಧಾನದ ಬಗ್ಗೆ ಮಾತನಾಡಿದ್ದ ಕೇಜ್ರಿವಾಲ್, ಅದು ಕಾಂಗ್ರೆಸ್ ಮತ್ತು ಬಿಜೆಪಿ ಸಂವಿಧಾನಗಳಿಗಿಂತ ಉತ್ತಮವಾಗಿದೆ ಎಂದಿದ್ದರು. ಕಾಂಗ್ರೆಸ್ ಸದಸ್ಯತ್ವ ಪಡೆಯಲು ಮದ್ಯ ಕುಡಿತ ತ್ಯಜಿಸಬೇಕು ಎಂದು ನಿಯಮ ಮಾಡಿರುವುದನ್ನು ಅವರು ವ್ಯಂಗ್ಯ ಮಾಡಿದ್ದರು. ಈ ಸಂದರ್ಭದಲ್ಲಿ ಅವರು ಅಂಬೇಡ್ಕರ್ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ. ವಿಡಿಯೊ ಅನ್ನು ತಿರುಚಿರುವ ಕೆಲವರು, ಅದರ ಮೂಲಕ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಕೂಡಲಸಂಗನ ಪ್ರಸಾದ ಈ ಕಾಯ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

94

ಈ ದೇಶದ ಋಷಿಗಳು 'ಇಂದ್ರಿಯ, ಆತ್ಮ ಮತ್ತು ಮನಸ್ಸು ಎಲ್ಲವೂ ಸ್ವಚ್ಛವಾಗಿರಬೇಕು' ಎಂದು ಹೇಳಿದ್ದಾರೆ. ಇದು ಆರೋಗ್ಯ. ದೈಹಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಚೆನ್ನಾಗಿ ಇದ್ದವರು ಆರೋಗ್ಯವಂತರು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳುತ್ತದೆ.

ಕೂಡಲಸಂಗನ ಪ್ರಸಾದದಿಂದ ಬಂದ ಕಾಯ ಇದನ್ನು ಕೆಡಿಸಬಾರದು. ಶರಣರು ಈ ದೇಹವನ್ನು ದೇವಾಲಯ ಅಂತ ಕರೆದರು. ಕಾಲು ಕಂಬ, ಶಿರ ಹೊನ್ನ ಕಳಸ ಎಂದರು. ದೇಹವಿಲ್ಲದಿರೆ ಪ್ರಾಣಕ್ಕೆ ಆಶ್ರಯ ಉಂಟೆ? ಆತ್ಮ ಇರಬೇಕಾದರೂ ದೇಹ ಇರಬೇಕಲ್ಲ. ದೇಹ ಕೆಟ್ಟಿತು ಎಂದರೆ ಎಲ್ಲವೂ ಕೆಟ್ಟು ಹೋಗತ್ತೈತಿ. ನಿನ್ನ ದೇಹವೇ ನಿನ್ನ ಶಾಶ್ವತ ವಿಳಾಸ.

ಅಧಿಕಾರ ಬಂದಿರಬಹುದು, ಹೋಗಿರಬಹುದು, ಪ್ರಶಸ್ತಿ ಬಂದಿರಬಹುದು ಹೋಗಿರಬಹುದು, ಬಂಧುಗಳು ಬಂದಿರಬಹುದು ಹೋಗಿರಬಹುದು. ಆದರೆ, ಹುಟ್ಟಿನಿಂದ ಸಾವಿನವರೆಗೆ ನಮ್ಮ ಜೊತೆಗೆ ಇರುವುದು ನಮ್ಮ ದೇಹ ಮಾತ್ರ. ಈ ಜಗತ್ತನ್ನು ನೋಡಿದ್ದು ಕೇಳಿದ್ದು ಮುಟ್ಟಿದ್ದು ಅನುಭವಿಸಿದ್ದು ಎಲ್ಲವೂ ಈ ದೇಹದಿಂದ. ಶರಣರು 'ಭೂತ ಭೂತವ ಕೂಡಿ ಅದ್ಭುತವಾಗಿತ್ತು' ಎಂದರು. ಈ ದೇಹ ಪಂಚಭೂತಗಳಿಂದ ನಿರ್ಮಾಣವಾಗಿದೆ. ಪಂಚಭೂತಗಳಿಂದ ನಿರ್ಮಾಣವಾದ ದೇಹದಲ್ಲಿ ಜೀವ ಉಂಟಲ್ಲ ಅದು ಅದ್ಭುತ ಎಂದು ಕರೆದರು.

ಜಗತ್ತಿನಲ್ಲಿ ಏಳು ಅದ್ಭುತಗಳಿವೆ ಎನ್ನುತ್ತಾರೆ. ಜೊತೆಗೆ ವಿಜ್ಞಾನದ ಆವಿಷ್ಕಾರಗಳ ಅದ್ಭುತಗಳಿವೆ. ಇವೇ ಅದ್ಭುತ ಅಂದರ ಇವುಗಳನ್ನು ಕಂಡು ಹಿಡಿದ ಮನುಷ್ಯನ ಮನಸ್ಸು ಎಷ್ಟು ಅದ್ಭುತ ನೋಡಿ! ದೇಹದಲ್ಲಿ ಕೋಟಿ ಕೋಟಿ ಜೀವಕೋಶಗಳಿವೆ. ನರಗಳಿವೆ. ಅಂಗಗಳಿವೆ. ಮಿದುಳು, ಹೃದಯ ಎಲ್ಲಾ ಇವೆ. ನಾವು ತಿಂದ ಆಹಾರವನ್ನು ಎಲ್ಲ ಕೋಶಗಳಿಗೂ ಸಮಾನ ಹಂಚಿಕೆ ಈದೇಹ ಮಾಡುತ್ತೈತಿ.

ರಮಣ ಮಹರ್ಷಿಗಳು ಪತ್ರಾವಳಿ ಮಾಡುತ್ತಿದ್ದರು. ಒಬ್ಬ ಯುವಕ ಆತ್ಮಹತ್ಯೆ ಮಾಡಿಕೊಳ್ಳಬೇಕು ಅಂತಿದ್ದ. ಅವ ರಮಣರ ಬಳಿಗೆ ಬಂದ. ಅವರಿಗೆ ನಮಸ್ಕಾರ ಮಾಡಿ, 'ಈ ಜೀವನ ಸಾಕಾಗೈತಿ. ಅದಕ್ಕೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಅಂತ ಇದ್ದೇನೆ' ಎಂದ. ರಮಣರು ಅವನಿಗೆ ಕುಳಿತುಕೊ ಎಂದರು. ನಂತರ ಸುಮಾರು ಎರಡು ತಾಸು ಅವರು ಪತ್ರಾವಳಿ ಮಾಡಿ ಮಾಡಿ ರಾಶಿ ಹಾಕಿದ್ದರು. ಆ ರಾಶಿಯನ್ನು ಹುಡುಗನಿಗೆ ತೋರಿಸಿ ಇದನ್ನು ಒಯ್ದು ತಿಪ್ಪೆಯಲ್ಲಿ ಹಾಕಿ ಬಾ ಎಂದರು. ಅದಕ್ಕೆ ಯುವಕ, 'ನೀವು ದೊಡ್ಡವರು, ಬಹಳ ತಿಳಿದವರು, ಮೇಧಾವಿಗಳು ಅಂತಾರೆ. ನೀವು ಎರಡು ಗಂಟೆಯಿಂದ ಕಷ್ಟಪಟ್ಟು ಪತ್ರಾವಳಿ ಮಾಡಿದ್ದು ನೋಡಿದ್ದೇನೆ. ಇದನ್ನು ಯಾರಿಗಾದರೂ ಕೊಟ್ಟರೆ ಊಟಕ್ಕೆ ಬಳಸುತ್ತಾರೆ. ನಾನು ಇದನ್ನು ತಿಪ್ಪೆಗೆ ಹಾಕಿದರೆ ನಿಮ್ಮ ಶ್ರಮ ವ್ಯರ್ಥ ಆಗೋದಿಲ್ಲೇನು' ಎಂದು ಪ್ರಶ್ನಿಸಿದ. 'ಎರಡು ತಾಸು ಕಷ್ಟ ಪಟ್ಟು ಮಾಡಿದ ಪತ್ರಾವಳಿ ತಿಪ್ಪೆಗೆ ಹಾಕಿದರೆ ನನ್ನ ಶ್ರಮ ವ್ಯರ್ಥ ಆಗತ್ತೈತಿ ಅಂತ ನಿನಗೆ ಗೊತ್ತಾಗತ್ತೈತಿ. ಆದರೆ ನಿನ್ನ ತಯಾರು ಮಾಡಲು ದೇವರು ಎಷ್ಟು ಕಷ್ಟ ಪಟ್ಟಿದ್ದಾನೆ. ನೀನು ಆತ್ಮಹತ್ಯೆ ಮಾಡಿಕೊಂಡರೆ ದೇವರ ಶ್ರಮ ಎಷ್ಟು ವ್ಯರ್ಥವಾಗತ್ತೈತಿ ಅಂತ ನಿನಗೆ ಗೊತ್ತಾಗುದಿಲ್ಲ' ಎಂದು ರಮಣರು ಹೇಳಿದರು. 'ಕೆಡಿಸ ಬೇಡ. ಜೀವನವನ್ನು ಉಪಯೋಗ ಮಾಡೋದು ಗೊತ್ತಿರಬೇಕು' ಎಂದರು. ಈ ದೇಹ, ಈ ಬದುಕನ್ನು ಹೇಗೆ ಬಳಸಬೇಕು ಅನ್ನೋದು ಮನುಷ್ಯನಿಗೆ ಗೊತ್ತಿರಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಡಿಸೆಂಬರ್ 24, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ನವಮಿ ಗಂ. 19-53 ನಕ್ಷತ್ರ: ಹಸ್ತ ಗಂ, 12-17 ಯೋಗ: ಶೋಭನಾ ಗಂ. 20-54 ಕರಣ: ಗರ ಗಂ. 19-53, ಧನು ಮಾಸದ 08 ನೇ ದಿನ, ಮಳೆನಕ್ಷತ್ರ: ಮೂಲ 3.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-54 ಸೂರ್ಯಾಸ್ತ : 06-07
ಮುಸ್ಲಿಂ ದಿನಾಂಕ: 21 ಜುಮಾದುಸ್ಸಾನಿ
ದಿನ ವಿಶೇಷ: ಕ್ರಿಸ್‌ಮಸ್ ಹಿಂದಿನ ದಿನ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 10, 8

ಮೇಷ: ಹೃದಯ ಶ್ರೀಮಂತಿಕೆಯಿಂದ ಕೈಗೊಂಡ ಕಾರ್ಯಗಳನ್ನು ನಿರಾತಂಕವಾಗಿ ನೆರವೇರಿಸುವಿರಿ. ಮಾನಸಿಕ ಸ್ಥಿತಿಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಕಷ್ಟವಾಗಲಿದೆ. ಹಿರಿಯರ ಮಾತಿನಂತೆ ನಡೆಯಿರಿ.

ವೃಷಭ: ಪದವೀಧರರಿಗೆ ಉನ್ನತ ಶಿಕ್ಷಣಕ್ಕಾಗಿ ಉತ್ತಮ ಸ್ಥಳ ಲಭಿಸಲಿದೆ. ಅಧ್ಯಯನಕ್ಕೆ ಗಣ್ಯರ ಪ್ರೋತ್ಸಾಹ ದೊರೆಯಲಿದೆ. ಹೋಟೆಲ್ ಉದ್ಯಮಿಗಳಿಗೆ ವ್ಯಾಪಾರದಲ್ಲಿ ಅನುಕೂಲ. ಜಯ ನಿಮ್ಮದಾಗಲಿದೆ.

ಮಿಥುನ: ಹಣಕಾಸಿನ ವ್ಯಾಮೋಹ, ಬಯಕೆ ಹೆಚ್ಚಾಗುವ ಪರಿಣಾಮ ಪಶ್ಚಾತಾಪಕ್ಕೆ ಕಾರಣವಾಗದಂತೆ ನೋಡಿಕೊಳ್ಳಿ. ಆಸ್ತಿ ಖರೀದಿ ಮಾಡುವ ಬಗ್ಗೆ ಯೋಚನೆ ಮಾಡಬಹುದು. ಬೇಕಾದ ಆರ್ಥಿಕ ನೆರವು ಸಿಗಲಿದೆ.

ಕರ್ಕಾಟಕ: ಬೇಕರಿ ಮಾರಾಟಗಾರರಿಗೆ ಸಿಹಿ ಪದಾರ್ಥಗಳ ಮಾರಾಟದಿಂದ ಅಧಿಕ ಲಾಭ. ಮಗಳ ಮದುವೆಯ ನಿಶ್ಚಯ ಸಂತೋಷವನ್ನು ಉಂಟು ಮಾಡುತ್ತದೆ. ಕೆಲಸಗಾರರ ಸಮಸ್ಯೆಗಳಿಗೆ ಉತ್ತರ ಸಿಗುವುದು ಕಷ್ಟವೆನಿಸಲಿದೆ.

ಸಿಂಹ: ಆಸ್ತಿ ಮಾರಾಟಗಳ ವಹಿವಾಟುಗಳಲ್ಲಿ ಎಣಿಕೆಗೂ ಮೀರಿದ ಲಾಭ ಕಾಣುವಿರಿ. ಇನ್ನೊಬ್ಬರಿಗೆ ಗೌರವವನ್ನು ಕೊಟ್ಟು ನಂತರ ಗೌರವವನ್ನು ಅಪೇಕ್ಷಿಸಬಹುದು. ವಿರೋಧಿಗಳ ಉಪಟಳದ ನಡುವೆ ಬದುಕಲು ಕಷ್ಟವಾಗಲಿದೆ.

ಕನ್ಯಾ: ತಾಯಿಯ ಸಲಹೆಯಿಂದಾಗಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲಗಳು ನಿವಾರಣೆಯಾಗುತ್ತವೆ. ಮನಸ್ಸಿನ ನಾಗಾಲೋಟಕ್ಕೆ ತಕ್ಷಣ ಕಡಿವಾಣ ಹಾಕುವುದು ಉತ್ತಮ. ತುರ್ತು ಪರಿಸ್ಥಿತಿಗಳು ಎದುರಾಗಬಹುದು.

ತುಲಾ: ಮಾಧ್ಯಮ ಮಿತ್ರರಿಂದ ತಪ್ಪು ಮಾಹಿತಿ ರವಾನೆಯಾಗಬಹುದು, ಜಾಗ್ರತವಹಿಸಿ. ಹೊಟ್ಟೆಗೆ ಸಂಬಂಧಿಸಿದಂತೆ ಸಣ್ಣಪುಟ್ಟ ಅನಾರೋಗ್ಯ ಉಂಟಾಗಬಹುದು. ಔಷಧಿ ಮಾರಾಟಗಾರರು ವೃತ್ತಿಯಲ್ಲಿ ಜಾಗ್ರತೆವಹಿಸಿ.

ವೃಶ್ಚಿಕ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ ಅಪರಿಚಿತ ವ್ಯಕ್ತಿಯಿಂದ ಅವಕಾಶ ಸಿಗಲಿದೆ. ನಿಮ್ಮ ಸಂಗಡಿಗರು ಮಾಡಿದ ತಪ್ಪಿನಿಂದ ನಿರ್ಧಾರ ಕೈಗೊಳ್ಳಬೇಕಾಗುವುದು.

ಧನು: ಐ.ಟಿ. ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ. ವರಮಾನ ಹೆಚ್ಚಳದ ಸಂಭವವು ಇರುವುದು. ಸಾಧ್ಯವಾದರೆ ಆಪ್ತರ ಕಷ್ಟಗಳ ಕಡೆಗೆ ಗಮನಹರಿಸಿ.

ಮಕರ: ಅನಿರೀಕ್ಷಿತವಾಗಿ ಶತ್ರುಗಳ ಬಣ್ಣ ಬಯಲಾಗುವುದು ಸಂತೋಷಕ್ಕೆ ಕಾರಣವಾಗುತ್ತದೆ. ಹವ್ಯಾಸಿ ಛಾಯಾಗ್ರಾಹಕರಿಗೆ ಉತ್ತಮ ಅವಕಾಶಗಳು ಸಿಗುವುದು. ಕೆಲಸದಲ್ಲಿ ಇದ್ದಂತಹ ಸಮಸ್ಯೆ ಬಗೆಹರಿಯುವುದು.

ಕುಂಭ: ಎದುರಾಗಿರುವ ಕೌಟುಂಬಿಕ ಸಂದಿಗ್ಧ ಪರಿಸ್ಥಿತಿಯನ್ನು ಮಾರ್ಗದರ್ಶಕರ ಸಲಹೆ ಪಡೆದು ಎದುರಿಸಿ. ಮಕ್ಕಳ ಒಡನಾಟದಿಂದ ಹೆಚ್ಚಿನ ಸಂತೃಪ್ತಿ ದೊರೆಯಲಿದೆ.

ಮೀನ: ತಾಯಿಯ ಆರೋಗ್ಯ ಸುಧಾರಿಸಲು ಔಷಧದ ಜೊತೆಯಲ್ಲಿ ಧಾರ್ಮಿಕ ಮಾರ್ಗವನ್ನು ಅನುಸರಿಸಿ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಅಧ್ಯಯನ ಅಗತ್ಯ. ಬರಹಗಾರರಿಗೆ ವಿಪುಲ ಅವಕಾಶ ಸಿಗುವುದು.

ಪದಬಂಧ 5901

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಸ ಒಸರುವ ಜಿಹ್ವೆ (3)
3.ತತ್ತರಿಸುತ್ತಾ ಪ್ರಶ್ನೆಗೆ ನೀಡಿದ ಜವಾಬು (3)
5.ಅಭಾವ ಕಾಲದಲ್ಲಿ ಅಕ್ಕನ ಗಂಡ ಬಂದಿಹನಲ್ಲಾ? (2)
6.ಸರಾಸರಿಯಾಗಿ ಹೇಳಿರುವುದು ತಪ್ಪಲ್ಲ! (2)
8.ಕೂಸು ಎದ್ದಿದ್ದು ಬೆಳಗಿನ ಜಾವ! (3)
9.ತಕ ತಕ ಕುಣಿಯಲು ಈ ಅತೀ ಆತುರ (3)
11.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
12.ಬದಲಾವಣೆ ಹೊಂದಿದವನು (3)
13.ಮಲಗುವಾಗ ಬಂದಿರುವ ಅಡಿಯಾಳು (3)
15.ಪಾದದ ಬಳಿಯಿರುವ ಮರದ ಮೆಟ್ಟು (3)
17.ನಿಯಮ ಹೇಳಿರುವ ನರಕಾಧಿಪತಿ (2)
19.ನಿಹಾರಿಕೆ ನೋಡಿದ್ದಕ್ಕೇ ಈ ಕೇಡು! (2)
20.ತಿಕ್ಕಲನಿರಿಕೊಂಡಿರುವ ಹಣೆಬೊಟ್ಟು (3)
21.ಮಾಲು ತರುವಾಗ ತಲೆಗೆ ಸುತ್ತಿಕೊಂಡಿರುವ ಬಟ್ಟೆ (3)

ಮೇಲಿಂದ ಕೆಳಕ್ಕೆ
1.ವರನಿಗೆ ಕೇಳಿಸಿದ ಧ್ವನಿ (2)
2.ನಯವಾಗಿ ಹೊಳೆಯುವ ಅಕ್ಷಿ (3)
3.ಕುಸುಕ್ಕನೆ ಜಾರಿದ ಜಾಗದಲ್ಲಿನ ಮರಳು (3)
4.ಅವಸರದಲ್ಲಿ ಚಲ್ಲಿದ ದ್ರವ (2)
5.ಭಾರ ಹೊತ್ತಿರುವ ನಮ್ಮ ದೇಶ (3)
7.ಪೇರಿ ಕೀಳುವ ಮೊದಲು ಮಾಡಿದ ದುರಸ್ತಿ (3)
10.ತಕ್ಕಡಿ ಹಿಡಿದಿದ್ದಕ್ಕೇ ಈ ತುರಿಕೆ! (3)
11.ಗುಣಿಸುವ ಸಂಖ್ಯೆ ಉಲ್ಟಾ ಆಗಿದೆ (3)
12.ವಿಷದಿಂದ ಕೂಡಿರುವ ಸಂಗತಿ (3)
14.ಯಮನ ಸೂತ್ರವೇ ಉಲ್ಟಾ ಆಗಿದೆಯಲ್ಲಾ? (3)
15.ಪಾಕದಲ್ಲಿರುವ ದೋಷ ಗೊತ್ತಾಯಿತೇ? (3)
16.ಮೊಸರು ಮಾರುವಾಗ ಸಿಡಿದಿರುವ ರಾಡಿ (3)
18.ಶ್ರೀಮತಿಯ ಬುದ್ಧಿ (2)
19.ಹಾಲಾಹಲದಲ್ಲಿ ಬೆರೆತಿರುವ ಕ್ಷೀರ (2)



5900ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮೈಸೂರು 2.ದಳಪತಿ
4.ಗದಗ 7.ಸಭಿಕ
8.ಗಣಪತಿ 9.ಜನ
10.ಕಾಕ 11.ವರ್ತಮಾನ
13.ರಜನಿ 14.ನಸರಿ
16.ಮತದಾರ 17.ಕಲ್ಯಾಣ

ಮೇಲಿಂದ ಕೆಳಕ್ಕೆ:
1.ಮೈಲಿಗಲ್ಲು 2.ದಡ
3.ಪಟ್ಟಾಭಿಷೇಕ
5.ಗಗನ 6.ಅಪವರ್ತನ
9.ಜನಜನಿತ 10.ಕಾನನ
12.ಹರಿವಾಣ 15.ಮುರ

ಸುಡೊಕು 6286

	2	8		6	7	4		
3		4					7	2
	7			4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6285 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,587
ಇಂದಿನ ಅಂತ್ಯ	23,753
▲	165
ದಿನದ ಗರಿಷ್ಠ	23,869

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹595
12 ಕ್ಕೆ	₹80
ಮೈಸೂರು	
100ಕ್ಕೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹400-633
ದ್ವಿತಳಿ (ಬಿ.ವಿ)	₹330-742

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹22700
ಎಸಿ	₹11745
ಆರ್‌ಪಿ	₹20000
ಆರ್‌ಸಿ	₹10600

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1460 (1465)
ಸೋಯಾ (ರಿಫೈನ್ಡ್)	₹1230 (1225)
ಸೂರ್ಯಕಾಂತಿ (ರಿಫೈನ್ಡ್)	₹1340 (1345)
ಪಾಮೋಲಿನ್	₹1330 (1345)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹186
ಆರ್‌ಎಸ್‌ಎಸ್-5	₹181
ಗುಡ್ ಲಾಟ್	₹175

(ಪ್ರತಿ ಕೆ.ಜಿಗೆ)

ವಿನಿಮಯ ದರ

$ ಡಾಲರ್	85.11
£ ಪೌಂಡ್	107.08
€ ಯುರೊ	88.66
¥ ಯೆನ್ (100ಕ್ಕೆ)	54

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಕಾರ್ಕಳ	
ಹೊಸತು	25000-34500
ಹಳತು	30000-45000
ಕುಮಟ	
ಚಾಲಿ	33089-37029
ಚಿಪ್ಪು	20189-26509
ಕೋಕ	6090-21589
ಫ್ಯಾಕ್ಟರಿ	3019-20929
ಹಳೆಚಾಲಿ	37089-38799
ಹೊಸಚಾಲಿ	25569-29309
ಪುತ್ತೂರು	
ಕೋಕ	20500-28500
ಹೊಸತು	25000-34500
ಹಳತು	36000-48500
ಸಾಗರ	
ಬಿಳಿಗೋಟು	10199-25899
ಚಾಲಿ	21299-34209
ಕೋಕ	8299-25899
ಕೆಂಪುಗೋಟು	16599-30209
ರಾಶಿ	30899-50319
ಸಿಪ್ಪೆಗೋಟು	8011-17210
ಶಿವಮೊಗ್ಗ	
ಬೆಟ್ಟೆ	45009-57209
ಗೊರಬಲು	18129-33609
ಹೊಸತು	27611-50199
ರಾಶಿ	27009-50500
ಸರಕು	56009-94652
ಯಲ್ಲಾಪುರ	
ಅಪಿ	66629-66629
ಬಿಳಿಗೋಟು	12899-27349
ಚಾಲಿ	29137-37799
ಕೋಕ	5609-17299
ಕೆಂಪುಗೋಟು	13012-26299
ರಾಶಿ	38900-57629
ತಟ್ಟಿಬೆಟ್ಟೆ	28210-38689

ಬೆಳ್ಳಿ ಧಾರಣೆ ಕೆ.ಜಿಗೆ ₹1,850 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9ರಷ್ಟು ಪರಿಶುದ್ಧತೆ) ₹570 ಏರಿಕೆಯಾಗಿದ್ದು, ₹78,700 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹78,300 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹1,850 ಹೆಚ್ಚಳವಾಗಿ, ₹90 ಸಾವಿರ ಆಗಿದೆ.

ಮದುವೆ ಋತುವಿನ ಅಂಗವಾಗಿ ಮಾರಾಟಗಾರರು ಮತ್ತು ಆಭರಣ ತಯಾರಕರಿಂದ ಖರೀದಿ ಪ್ರಮಾಣ ಹೆಚ್ಚಳವಾಗಿದೆ. ಇದರಿಂದ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಹವಾಮಾನ ವೈಪರೀತ್ಯ: ಉತ್ಪಾದನೆ ಇಳಿಕೆ ಸಾಧ್ಯತೆ

ಕಬ್ಬು ಇಳುವರಿ ಕುಂಠಿತ?

ಮುಂಬೈ (ರಾಯಿಟರ್ಸ್): ಕಳೆದ ವರ್ಷ ಕಾಡಿದ ಬರಗಾಲ ಹಾಗೂ ಈ ಬಾರಿ ಸುರಿದ ವಿಪರೀತ ಮಳೆಯಿಂದಾಗಿ ದೇಶದಲ್ಲಿ ಕಬ್ಬಿನ ಇಳುವರಿ ಕುಂಠಿತವಾಗಲಿದೆ. ಇದರಿಂದ ದೇಶದ ವಾರ್ಷಿಕ ಬಳಕೆ ಪ್ರಮಾಣಕ್ಕಿಂತಲೂ ಸಕ್ಕರೆ ಉತ್ಪಾದನೆ ಕಡಿಮೆಯಾಗಲಿದ್ದು, ಎಂಟು ವರ್ಷದ ಕನಿಷ್ಠ ಮಟ್ಟಕ್ಕೆ ತಲುಪುವ ಸಾಧ್ಯತೆಯಿದೆ ಎಂದು ರೈತರು ಹಾಗೂ ಕಾರ್ಖಾನೆಗಳ ಮಾಲೀಕರು ಹೇಳಿದ್ದಾರೆ.

ಭಾರತವು ಸಕ್ಕರೆ ಉತ್ಪಾದನೆಯಲ್ಲಿ ವಿಶ್ವದಲ್ಲೇ ಎರಡನೇ ಅತಿದೊಡ್ಡ ರಾಷ್ಟ್ರವಾಗಿದೆ. ಉತ್ಪಾದನೆ ಇಳಿಕೆಯಾದರೆ 2024–25ನೇ ಮಾರುಕಟ್ಟೆ ಋತುವಿನಲ್ಲಿ (ಅಕ್ಟೋಬರ್–ಸೆಪ್ಟೆಂಬರ್) ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರವು ಅನುಮತಿ ನೀಡುವ ಸಾಧ್ಯತೆ ತೀರಾ ಕಡಿಮೆ ಎಂದು ಹೇಳಲಾಗಿದೆ.

ಇಡೀ ದೇಶದಲ್ಲಿ ಉತ್ಪಾದನೆ ಯಾಗುವ ಒಟ್ಟು ಸಕ್ಕರೆ ಪೈಕಿ ಶೇ 80ರಷ್ಟು ಉತ್ಪಾದನೆಯು ಮಹಾರಾಷ್ಟ್ರ, ಕರ್ನಾಟಕ ಹಾಗೂ ಉತ್ತರ ಪ್ರದೇಶದಲ್ಲಿ ಆಗುತ್ತದೆ. ಆದರೆ, ಈ ರಾಜ್ಯಗಳಲ್ಲಿ ಕಬ್ಬಿನ ಇಳುವರಿ ಕಡಿಮೆಯಾಗಿದೆ. ಇದರಿಂದ ಈ ರಾಜ್ಯಗಳ ಸಕ್ಕರೆ ಕಾರ್ಖಾನೆ ಸಂಘಟನೆಗಳು ಪ್ರಸಕ್ತ ಮಾರುಕಟ್ಟೆ ಋತುವಿಗೆ ಉತ್ಪಾದನೆಯನ್ನು ಪರಿಷ್ಕರಿಸುವ ಸಾಧ್ಯತೆಯಿದೆ.

ಕಳೆದ ಮಾರುಕಟ್ಟೆ ವರ್ಷದಲ್ಲಿ 32 ದಶಲಕ್ಷ ಟನ್‌ನಷ್ಟು ಉತ್ಪಾದನೆ ಕಡಿಮೆಯಾಗಿತ್ತು. ಈ ಬಾರಿ 27 ದಶಲಕ್ಷ ಟನ್ ಕುಸಿತವಾಗುವ ಸಾಧ್ಯತೆಯಿದೆ. ಇದರಿಂದ ರಾಷ್ಟ್ರೀಯ ಬಳಕೆಯಲ್ಲಿ 29 ದಶಲಕ್ಷ ಟನ್ ಕೊರತೆಯಾಗಬಹುದು ಎಂದು ಹೇಳಲಾಗಿದೆ.

‘ಈ ಬಾರಿಯ ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ಕಬ್ಬು ಬೆಳೆ ತೊಂದರೆಗೆ ಸಿಲುಕಿತು. ಮುಂಗಾರು ಅವಧಿಯಲ್ಲಿ ಅಧಿಕ ಮಳೆ ಸುರಿದಿದ್ದರಿಂದ ಕಬ್ಬಿನ ಬೆಳವಣಿಗೆ ಕುಂಠಿತಗೊಂಡಿತು’ ಎಂದು ವೆಸ್ಟ್ ಇಂಡಿಯನ್ ಶುಗರ್ ಮಿಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಬಿ. ತೋಂಬಾರೆ ಹೇಳಿದ್ದಾರೆ.

ಈ ಹವಾಮಾನ ವೈಪರೀತ್ಯದಿಂದ ಪ್ರತಿ ಹೆಕ್ಟೇರ್‌ಗೆ 10ರಿಂದ 15 ಟನ್ ಇಳುವರಿ ಕಡಿಮೆಯಾಗಲಿದೆ ಎಂದು ಹೇಳಿದ್ದಾರೆ.

> **ಸಾಮಾನ್ಯವಾಗಿ ಪ್ರತಿ ಹೆಕ್ಟೇರ್‌ಗೆ 120ರಿಂದ 130 ಟನ್ ಕಬ್ಬಿನ ಇಳುವರಿ ಬರುತ್ತದೆ. ಈ ಬಾರಿ 80 ಟನ್‌ಗೆ ಇಳಿದಿದೆ**
> **ಶ್ರೀಕಾಂತ್ ಇಂಗ್ಲೆ**
> ಕಬ್ಬು ಬೆಳೆಗಾರ, ಸೊಲ್ಲಾಪುರ, ಮಹಾರಾಷ್ಟ್ರ

ಉತ್ತರ ಪ್ರದೇಶದಲ್ಲಿ ಮಳೆ ಕೊರತೆಯು ಕಬ್ಬು ಇಳುವರಿ ಮೇಲೆ ಪರಿಣಾಮ ಬೀರಿಲ್ಲ. ಆದರೆ, ಕೆಂಪು ಕೊಳೆ ರೋಗದಿಂದ ಬೆಳೆ ನಷ್ಟವಾಗಿದೆ. ಇದು ಇಳುವರಿ ಕುಂಠಿತಕ್ಕೆ ಕಾರಣವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಕ್ಕರೆ ಕಾರ್ಖಾನೆಗಳಲ್ಲಿ ಕಳೆದ ಮಾರುಕಟ್ಟೆ ವರ್ಷದಲ್ಲಿ ಉತ್ಪಾದನೆಯಾದ 80 ಲಕ್ಷ ಟನ್ ಸಕ್ಕರೆ ದಾಸ್ತಾನಿದೆ. ಈ ಪೈಕಿ 20 ಲಕ್ಷ ಟನ್ ರಫ್ತಿಗೆ ಅನುಮತಿ ನೀಡಬೇಕು ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘವು (ಐಎಸ್‌ಎಂಎ) ಕೇಂದ್ರದ ಮುಂದೆ ಬೇಡಿಕೆ ಮಂಡಿಸಿದೆ.

ಸುದ್ದಿ 2 ನಿಮಿಷ

2.36 ಕೋಟಿ ಬಾಟಲ್ ನ್ಯಾನೊ ಯೂರಿಯಾಗೆ ಬೇಡಿಕೆ

ನವದೆಹಲಿ (ಪಿಟಿಐ): 2024–25ನೇ ಸಾಲಿನ ಹಿಂಗಾರು ಅವಧಿಯಲ್ಲಿ ದ್ರವರೂಪದ ನ್ಯಾನೊ ಯೂರಿಯಾ ಬೇಡಿಕೆಯು 2.36 ಕೋಟಿ ಬಾಟಲ್‌ಗೆ ತಲುಪಿದೆ (ಪ್ರತಿ ಬಾಟಲ್ 500 ಎಂಎಲ್) ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಉತ್ತರಪ್ರದೇಶದಲ್ಲಿ ಅತಿಹೆಚ್ಚು ಬೇಡಿಕೆ ಕಂಡುಬಂದಿದೆ. ಈ ರಾಜ್ಯದ ಒಟ್ಟು ಬೇಡಿಕೆಯು 43.38 ಲಕ್ಷ ಬಾಟಲ್ ಆಗಿದೆ. ಆ ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ (34.7 ಲಕ್ಷ ಬಾಟಲ್) ಹಾಗೂ ಪಂಜಾಬ್ (20.82 ಲಕ್ಷ ಬಾಟಲ್) ಇವೆ. ಹರಿಯಾಣ ಮತ್ತು ಕರ್ನಾಟಕದಲ್ಲಿ ತಲಾ 17.35 ಲಕ್ಷ ಬಾಟಲ್, ರಾಜಸ್ಥಾನ 15.01 ಲಕ್ಷ ಬಾಟಲ್ ಮತ್ತು ಮಧ್ಯಪ್ರದೇಶದಲ್ಲಿ 12.54 ಲಕ್ಷ ಬಾಟಲ್‌ಗಳಿಗೆ ಬೇಡಿಕೆಯಿದೆ ಎಂದು ಹೇಳಿದೆ.

ಆದರೆ ಗುಜರಾತ್, ಸಿಕ್ಕಿಂ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ, ಮೇಘಾಲಯ, ಛತ್ತೀಸಗಢ, ದಮನ್ ಮತ್ತು ದಿಯು, ದಾದ್ರ ಮತ್ತು ನಗರ್ ಹವೇಲಿ, ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ನ್ಯಾನೊ ಯೂರಿಯಾಕ್ಕೆ ಬೇಡಿಕೆ ಕಂಡುಬಂದಿಲ್ಲ.

ಪ್ರಸ್ತುತ ದೇಶದಲ್ಲಿ ನ್ಯಾನೊ ಯೂರಿಯಾ ತಯಾರಿಕೆಯ ಆರು ಘಟಕಗಳಿದ್ದು, ವಾರ್ಷಿಕ 27.22 ಕೋಟಿ ಬಾಟಲಿಯಷ್ಟು ಯೂರಿಯಾ ತಯಾರಿಸಲಾಗುತ್ತದೆ.

ಹಿಂಗಾರು ಅವಧಿಯು ಅಕ್ಟೋಬರ್‌ನಿಂದ ಆರಂಭವಾಗಿದ್ದು, ಏಪ್ರಿಲ್ ನಂತರ ಕೊಯ್ಲು ಶುರುವಾಗಲಿದೆ. ಈ ಅವಧಿಯಲ್ಲಿ ಪ್ರಮುಖವಾಗಿ ಗೋಧಿ, ಬಾರ್ಲಿ, ಕಡಲೆ ಮತ್ತು ಸಾಸಿವೆ ಬೆಳೆಯಲಾಗುತ್ತದೆ.

ಚೇತರಿಕೆ ಕಂಡ ಷೇರುಪೇಟೆ

ಮುಂಬೈ (ಪಿಟಿಐ): ಸತತ ಐದು ದಿನಗಳಿಂದ ಕುಸಿತ ಕಂಡಿದ್ದ ದೇಶದ ಷೇರುಪೇಟೆಯು ಸೋಮವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿದೆ.

ಐಟಿಸಿ, ಎಚ್‌ಡಿಎಫ್‌ಸಿ ಬ್ಯಾಂಕ್ ಹಾಗೂ ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿ ಹೆಚ್ಚಳವು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 498 ಅಂಶ ಏರಿಕೆ ಕಂಡು, 78,540 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 165 ಅಂಶ ಏರಿಕೆ ಕಂಡು, 23,753 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಐಟಿಸಿ, ಟೆಕ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರಿಸ್, ಇಂಡಸ್ ಇಂಡ್ ಬ್ಯಾಂಕ್, ಟೈಟನ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಐಸಿಐಸಿಐ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಜೊಮಾಟೊ, ಮಾರುತಿ, ಎಚ್‌ಸಿಎಲ್ ಟೆಕ್, ಬಜಾಜ್ ಫಿನ್‌ಸರ್ವ್, ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಸೋಲ್, ಟೋಕಿಯೊ, ಹಾಂಗ್‌ಕಾಂಗ್ ಮಾರುಕಟ್ಟೆಗಳು ಏರಿಕೆ ಕಂಡಿದ್ದರೆ, ಶಾಂಘೈ ಮಾರುಕಟ್ಟೆ ಇಳಿದಿದೆ.

ಬೈಜುಸ್ ಲೆಕ್ಕ ಪರಿಶೋಧಕರ ನಿರ್ಲಕ್ಷ್ಯ: ತನಿಖೆ ಆರಂಭ

ನವದೆಹಲಿ (ಪಿಟಿಐ): ‘ಬೈಜುಸ್ ಕಂಪನಿಯ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿರುವ ಲೋಪ ಕುರಿತಂತೆ ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆಯ (ಐಸಿಎಐ) ಶಿಸ್ತು ಸಮಿತಿಯಿಂದ ತನಿಖೆ ನಡೆಯುತ್ತಿದೆ’ ಎಂದು ಸಂಸ್ಥೆಯ ಅಧ್ಯಕ್ಷ ರಂಜೀತ್ ಕುಮಾರ್ ಅಗರ್ವಾಲ್ ತಿಳಿಸಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಂಸ್ಥೆಯು ಶಿಸ್ತುಪಾಲನೆಗೆ ಸಂಬಂಧಿಸಿದಂತೆ ವಿವಿಧ ಹಂತದ ಕಾರ್ಯವಿಧಾನವನ್ನು ಹೊಂದಿದೆ’ ಎಂದರು.

ಲೆಕ್ಕ ಪರಿಶೋಧನೆಯಲ್ಲಿ ಕಂಡುಬರುವ ಲೋಪದ ವಿಷಯವನ್ನು ಮುಕ್ತಾಯಗೊಳಿಸುವ ಅಥವಾ ತನಿಖೆ ನಡೆಸಲು ಶಿಸ್ತು ಸಮಿತಿಗೆ ಒಪ್ಪಿಸುವ ಅಧಿಕಾರವನ್ನು ಸಂಸ್ಥೆಯ ಶಿಸ್ತು ನಿರ್ದೇಶನಾಲಯ ಹೊಂದಿದೆ. ಹಾಗಾಗಿ, ಬೈಜುಸ್ ಪ್ರಕರಣವನ್ನು ಶಿಸ್ತು ಸಮಿತಿಗೆ ಒಪ್ಪಿಸಿದೆ ಎಂದು ತಿಳಿಸಿದರು.

ಮೇಲ್ನೋಟಕ್ಕೆ ಕಂಡುಬಂದಿರುವ ಲೋಪದ ಬಗ್ಗೆ ಅವರು ಹೆಚ್ಚಿನ ಮಾಹಿತಿಯನ್ನು ಹಂಚಿಕೊಳ್ಳಲಿಲ್ಲ.

ಬೈಜುಸ್ ಬಹಿರಂಗಪಡಿಸಿದ್ದ ಹಣಕಾಸಿನ ಮಾಹಿತಿಗಳಲ್ಲಿ ಆ ಕಂಪನಿಯ ಲೆಕ್ಕ ಪರಿಶೋಧಕರು ನಿರ್ಲಕ್ಷ್ಯ ಎಸಗಿರುವುದು ಕಂಡುಬಂದಿತ್ತು. ಈ ಬಗ್ಗೆ ಪರಿಶೀಲನೆ ನಡೆಸುವಂತೆ ಹಣಕಾಸು ವರದಿ ಪರಿಶೀಲನಾ ಮಂಡಳಿಯು (ಎಫ್‌ಆರ್‌ಆರ್‌ಬಿ) ಐಸಿಎಐನ ಶಿಸ್ತು ನಿರ್ದೇಶನಾಲಯಕ್ಕೆ ಸೂಚಿಸಿತ್ತು.

8 ಉತ್ಕೃಷ್ಟತಾ ಕೇಂದ್ರ ಸ್ಥಾಪನೆ: ಐಸಿಎಐ

ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆಯು (ಐಸಿಎಐ) ಮುಂದಿನ ಮೂರು ವರ್ಷಗಳಲ್ಲಿ ಹೊಸದಾಗಿ ಎಂಟು ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ’ ಎಂದು ಸಂಸ್ಥೆಯ ಅಧ್ಯಕ್ಷ ರಂಜೀತ್ ಕುಮಾರ್ ಅಗರ್ವಾಲ್ ತಿಳಿಸಿದ್ದಾರೆ.

ಈ ಕೇಂದ್ರಗಳ ಸ್ಥಾಪನೆ ಮೂಲಕ ಜಾಗತಿಕ ಮಟ್ಟದಲ್ಲಿ ಭಾರತವನ್ನು ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕ ಪರಿಶೋಧನೆಯ ಹಬ್ ಆಗಿ ರೂಪಿಸಲಾಗುವುದು. ಹಣಕಾಸು ಹಾಗೂ ತೆರಿಗೆ ಸಾಕ್ಷರತೆ ಬಗ್ಗೆ ಅರಿವು ಮೂಡಿಸಲು ಈ ಕೇಂದ್ರಗಳು ನೆರವಾಗಲಿವೆ ಎಂದು ಹೇಳಿದ್ದಾರೆ.

ಈಗಾಗಲೇ, ಹೈದರಾಬಾದ್ ಮತ್ತು ಜೈಪುರದಲ್ಲಿ ಉತ್ಕೃಷ್ಟತಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಜನವರಿ ವೇಳೆಗೆ ಕೋಲ್ಕತ್ತದಲ್ಲಿ ಮತ್ತೊಂದು ಕೇಂದ್ರ ಕಾರ್ಯಾರಂಭ ಮಾಡಲಿದೆ ಎಂದು ಹೇಳಿದ್ದಾರೆ.

ಅಂತರರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರದ (ಐಎಫ್‌ಎಸ್‌ಸಿ) ಪರಿಕಲ್ಪನೆಗೆ ಉತ್ತೇಜನ ನೀಡಲು ಸಂಸ್ಥೆಯು ಕಾರ್ಯತತ್ಪರವಾಗಿದೆ. ಜನವರಿಯಲ್ಲಿ ಜಾಗತಿಕ ಲೆಕ್ಕ ಪರಿಶೋಧಕರ ಸಮ್ಮೇಳನವನ್ನು (ಡಬ್ಲ್ಯುಒಎಫ್‌ಎ) ಸಂಘಟಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಹೋಂಡಾ–ನಿಸ್ಸಾನ್ ವಿಲೀನಕ್ಕೆ ಒಪ್ಪಿಗೆ

ಟೋಕಿಯೊ (ಎಪಿ): ಜಪಾನ್‌ನ ಕಾರು ತಯಾರಿಕಾ ಕಂಪನಿಗಳಾದ ಹೋಂಡಾ ಮತ್ತು ನಿಸ್ಸಾನ್ ವಿಲೀನಗೊಳ್ಳುವುದಾಗಿ ಘೋಷಿಸಿವೆ.

ಈ ಕುರಿತ ತಿಳಿವಳಿಕೆ ಪತ್ರಕ್ಕೆ ಸೋಮವಾರ ಸಹಿ ಹಾಕಿವೆ. ನಿಸ್ಸಾನ್‌ನ ಮಿತ್ಸುಬಿಷಿ ಮೋಟರ್ಸ್ ಸಹ ಇದರಲ್ಲಿ ಪಾಲ್ಗೊಳ್ಳಲು ಒಪ್ಪಿಗೆ ನೀಡಿದೆ. ಈ ವಿಲೀನದಿಂದ ಜಗತ್ತಿನ ಮೂರನೇ ಅತಿದೊಡ್ಡ ವಾಹನ ತಯಾರಿಕಾ ಕಂಪನಿಯಾಗಿ ಹೊರಹೊಮ್ಮಲಿದೆ. ಜಪಾನ್‌ನಲ್ಲಿ ವಿದ್ಯುತ್‌ಚಾಲಿತ ಕಾರುಗಳ ತಯಾರಿಕಾ ಕಂಪನಿಗಳಿಂದ ಈ ಕಂಪನಿಗಳು ತೀವ್ರ ಸ್ಪರ್ಧೆ ಎದುರಿಸುತ್ತಿವೆ. ತಯಾರಿಕಾ ವೆಚ್ಚ ಹಾಗೂ ನಷ್ಟ ಸರಿದೂಗಿಸಲು ಈ ನಿರ್ಧಾರ ಕೈಗೊಂಡಿವೆ ಎಂದು ಹೇಳಲಾಗಿದೆ. 2026ರೊಳಗೆ ವಿಲೀನ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಈ ಮೂರು ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯ ₹4.25 ಲಕ್ಷ ಕೋಟಿಗೆ ತಲುಪಲಿದೆ. 2023ರಲ್ಲಿ ಟೊಯೊಟ ಕಂಪನಿಯು 1.15 ಕೋಟಿ ವಾಹನಗಳನ್ನು ತಯಾರಿಸಿತ್ತು. ಇದೇ ಅವಧಿಯಲ್ಲಿ ಹೋಂಡಾ 40 ಲಕ್ಷ, ನಿಸ್ಸಾನ್ 34 ಲಕ್ಷ ಮತ್ತು ಮಿತ್ಸುಬಿಷಿ 10 ಲಕ್ಷಕ್ಕೂ ಹೆಚ್ಚು ವಾಹನಗಳನ್ನು ತಯಾರಿಸಿತ್ತು.

ಹಾಸನ ಜಿಲ್ಲೆ ಸಕಲೇಶಪುರದಲ್ಲಿ ಸೋಮವಾರ ಆಯೋಜಿಸಿದ್ದ ಕಾಫಿ ಬೆಳೆಗಾರರ ಸಮಾವೇಶದಲ್ಲಿ ಭಾಗವಹಿಸಿದ್ದ ಕೇಂದ್ರ ಸಚಿವರಾದ ಪೀಯೂಷ್ ಗೋಯಲ್ ಮತ್ತು ಎಚ್‌.ಡಿ. ಕುಮಾರಸ್ವಾಮಿ ಕಾಫಿ ಸವಿದರು. ಕಾಫಿ ಬೆಳೆಗಾರರ ಒಕ್ಕೂಟದ ಪದಾಧಿಕಾರಿಗಳು, ಶಾಸಕರು ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಕಾಫಿ ಕೌಶಲಾಭಿವೃದ್ಧಿಗೆ ನೆರವು

ಪ್ರಜಾವಾಣಿ ವಾರ್ತೆ

ಸಕಲೇಶಪುರ (ಹಾಸನ ಜಿಲ್ಲೆ): ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನ ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆಯಲ್ಲಿ (ಸಿಸಿಆರ್‌ಐ) ಕಾಫಿ ಕೌಶಲಾಭಿವೃದ್ಧಿ ಕೇಂದ್ರ ಆರಂಭಿಸಲು ನಿರ್ಧರಿಸಲಾಗಿದೆ. ಇದಕ್ಕೆ ಅಗತ್ಯ ಅನುದಾನ ಒದಗಿಸಲು ಕೇಂದ್ರ ಬದ್ಧವಾಗಿದೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದರು.

ಕಾಫಿ ಬೆಳೆಗಾರರ ಒಕ್ಕೂಟದಿಂದ ಪಟ್ಟಣದಲ್ಲಿ ಸೋಮವಾರ ಆಯೋಜಿಸಿದ್ದ ಕಾಫಿ ಬೆಳೆಗಾರರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಕಾಫಿ ಉದ್ಯಮದ ಬೆಳವಣಿಗೆಗೆ ಮುಂದೆ ಬರುವ ನವೋದ್ಯಮಗಳಿಗೆ ಅಗತ್ಯ ಸೌಕರ್ಯ ನೀಡಲು ನಿರ್ಧರಿಸಲಾಗಿದೆ. ಇದರಿಂದ ಕಾಫಿ ಸಂಸ್ಕರಣೆ, ಬ್ರ್ಯಾಂಡ್, ಮಾರಾಟಕ್ಕೆ ಹೆಚ್ಚು ಸಹಕಾರಿ ಆಗಲಿದೆ’ ಎಂದರು.

‘2011ರಲ್ಲಿ ಸ್ಥಗಿತಗೊಂಡಿದ್ದ ಸಮಗ್ರ ಕಾಫಿ ಅಭಿವೃದ್ಧಿ ಯೋಜನೆಯನ್ನು ಮರು ಜಾರಿಗೊಳಿಸಲಾಗಿದೆ. ಈ ಮೂಲಕ ಕಾಫಿ ಗುಣಮಟ್ಟದ ವೃದ್ಧಿ, ಯಾಂತ್ರೀಕರಣಕ್ಕೆ ಒತ್ತು ನೀಡಲಾಗುವುದು. ಕಾಫಿ ಬೆಳೆಗಾರರಿಗೆ ಸಹಾಯಧನ ನೀಡಲು ₹100 ಕೋಟಿ ಹೆಚ್ಚುವರಿ ಅನುದಾನ ನೀಡುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಜೊತೆಗೆ ಚರ್ಚಿಸಲಾಗುವುದು’ ಎಂದರು.

ಅಮೆರಿಕ: ಎಐ ನೀತಿ ಸಲಹೆಗಾರರಾಗಿ ಶ್ರೀರಾಮ್ ನೇಮಕ

ಸ್ಯಾನ್ ಫ್ರಾನ್ಸಿಸ್ಕೊ (ಪಿಟಿಐ): ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಭಾರತ ಮೂಲದ ಅಮೆರಿಕ ಉದ್ಯಮಿ, ಲೇಖಕ ಶ್ರೀರಾಮ್ ಕೃಷ್ಣನ್ ಅವರನ್ನು ಶ್ವೇತಭವನದ ಕೃತಕ ಬುದ್ಧಿಮತ್ತೆ ಕುರಿತ ನೀತಿಗಳ ಹಿರಿಯ ಸಲಹೆಗಾರರಾಗಿ ಭಾನುವಾರ ನೇಮಕ ಮಾಡಿದ್ದಾರೆ.

ಶ್ರೀರಾಮ್ ಕೃಷ್ಣನ್

ಕೃಷ್ಣನ್ ಅವರು ಇದಕ್ಕೂ ಮುನ್ನ ಮೈಕ್ರೊಸಾಫ್ಟ್, ಟ್ವಿಟ್ಟರ್, ಯಾಹೂ, ಫೇಸ್‌ಬುಕ್, ಸ್ನ್ಯಾಪ್ ಸಂಸ್ಥೆಗಳಲ್ಲಿ ಉತ್ಪಾದನಾ ತಂಡದ ನೇತೃತ್ವ ವಹಿಸಿದ್ದರು.

ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲಿ ಅಮೆರಿಕದ ಪಾರಮ್ಯ ಮುಂದುವರಿಸುವುದರತ್ತ ಗಮನಹರಿಸಿ ಶ್ರೀರಾಮ್ ಅವರು ಕಾರ್ಯನಿರ್ವಹಿಸಲಿದ್ದಾರೆ. ಸರ್ಕಾರದ ಎಐ ನೀತಿ ನಿರೂಪಣೆಗೆ ಸಹಾಯ ಮತ್ತು ಸಹಕಾರ ನೀಡಲಿದ್ದಾರೆ ಎಂದು ಟ್ರಂಪ್ ಹೇಳಿದರು.

ಕೃಷ್ಣನ್ ಅವರ ನೇಮಕವನ್ನು ಭಾರತ ಮೂಲಕ ಅಮೆರಿಕನ್ನರು ಸ್ವಾಗತಿಸಿದ್ದಾರೆ.

ಹೃದಯ ಸ್ತಂಭನ: ಎಪಿಗಾಮಿಯಾ ಸಂಸ್ಥಾಪಕ ರೋಹನ್ ನಿಧನ

ನವದೆಹಲಿ (ಪಿಟಿಐ): ಗ್ರೀಕ್ ಯೋಗರ್ಟ್ ಬ್ರ್ಯಾಂಡ್ ಆದ ಎಪಿಗಾಮಿಯಾ ಸಂಸ್ಥಾಪಕ ರೋಹನ್ ಮೀರ್ ಚಂದಾನಿ (42) ಅವರು, ಹೃದಯ ಸ್ತಂಭನದಿಂದ ನಿಧನರಾಗಿದ್ದಾರೆ ಎಂದು ಡ್ರಮ್ಸ್ ಫುಡ್ ಇಂಟರ್‌ನ್ಯಾಷನಲ್ ಕಂಪನಿ ತಿಳಿಸಿದೆ.

ಡ್ರಮ್ಸ್ ಫುಡ್ ಇಂಟರ್‌ನ್ಯಾಷನಲ್ ಕಂಪನಿಯ ಸಹ ಸಂಸ್ಥಾಪಕ ಕೂಡ ಆಗಿದ್ದ ರೋಹನ್ ಅವರಿಗೆ ಶನಿವಾರ ಹೃದಯ ಸ್ತಂಭನವಾಗಿತ್ತು. ಹೃದಯದ ಬಡಿತ ಸ್ತಬ್ಧವಾಗಿ ರಕ್ತದ ಚಲನೆ ಸಂಪೂರ್ಣ ನಿಂತು ಹೋಗಿದ್ದರಿಂದ ಅವರು ನಿಧನರಾಗಿದ್ದಾರೆ ಎಂದು ಹೇಳಿದೆ.

‘ರೋಹನ್ ಅವರ ನಿಧನದಿಂದ ಎಪಿಗಾಮಿಯಾ ಕುಟುಂಬಕ್ಕೆ ದೊಡ್ಡ ನಷ್ಟವಾಗಿದೆ. ಅವರು ನಮ್ಮೆಲ್ಲರ ಮಾರ್ಗದರ್ಶಕ, ಸ್ನೇಹಿತ ಹಾಗೂ ನಾಯಕನಾಗಿದ್ದರು. ಅವರ ಕನಸನ್ನು ಮುಂದುವರಿಸಿಕೊಂಡು ಹೋಗುವ ಗುರಿ ಹೊಂದಿದ್ದೇವೆ’ ಎಂದು ಎಪಿಗಾಮಿಯಾ ಸಿಒಒ ಮತ್ತು ಸಂಸ್ಥಾಪಕ ಸದಸ್ಯ ಅಂಕುರ್ ಗೋಯಲ್ ಹಾಗೂ ನಿರ್ದೇಶಕ ಉದಯ್ ಠಾಕ್ಕರ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎಪಿಗಾಮಿಯಾ ಬ್ರ್ಯಾಂಡ್‌ನಡಿ ಸುವಾಸನೆ ಭರಿತ ರುಚಿಕರ ಹಾಗೂ ಆರೋಗ್ಯಕರ ಯೋಗರ್ಟ್‌ಗಳು, ಸಸ್ಯಾಧಾರಿತ ಪದಾರ್ಥಗಳು, ಪಾನೀಯಗಳು ಮತ್ತು ತಿನಿಸುಗಳನ್ನು ತಯಾರಿಸಲಾಗುತ್ತದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ಮರಿಯಪ್ಪ
4-3-1932 ರಿಂದ 24-12-2011
ನಿಮ್ಮ ಆದರ್ಶಗಳು ನಮಗೆ ದಾರಿದೀಪ
ನಿಮ್ಮ ಆಶೀರ್ವಾದ ಎಂದೆಂದೂ ನಮಗಿರಲಿ
ನಿಮ್ಮ ಆತ್ಮಕ್ಕೆ ಶಾಂತಿ ಕೋರುವ
ಪತ್ನಿ:- ವಿಶಾಲಾಕ್ಷಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಬಂಧುವರ್ಗದವರು
Ph: 9845898268

2ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಗೌರಮ್ಮನವರು
ನಿಧನ : 25-12-2022
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳು ಕಳೆದರೂ, ನಿಮ್ಮ ನೆನಪು ಚಿರಸ್ಮರಣೀಯವಾಗಿದೆ.
ಇಂತಿ ದುಃಖತಪ್ತರು:
ಶ್ರೀ ಎಂ.ಮುನಿರತ್ನಪ್ಪ ಮತ್ತು ಕುಟುಂಬವರ್ಗ, ಮಲ್ಲತ್ತಹಳ್ಳಿ

ವೈಕುಂಠ ಸಮಾರಾಧನೆ

ಶ್ರೀ ಎಚ್. ಅಪ್ಪಯ್ಯಣ್ಣರವರು
24.12.2024 ರಂದು ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಹಾಡೋನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು ಇಲ್ಲಿ ವೈಕುಂಠ ಸಮಾರಾಧನೆ ನಡೆಯಲಿದೆ. ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಲು ಮನವಿ.
ಇಂತಿ ದುಃಖತಪ್ತರು:
ಮಕ್ಕಳು, ಅಳಿಯಂದಿರು,ಕುಟುಂಬದವರು, ಬಂಧುಗಳು, ಹಿತೈಷಿಗಳು ಮತ್ತು ಗ್ರಾಮಸ್ಥರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

WORK FROM Home with Bank franchise. Mobile: 9901078762, 9019976891

ಭವಿಷ್ಯ
Astrology
★||ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್||★ ಕೇರಳ_ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ_ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು'ನಿಜ_ನಂಬಿ'ಕರೆಮಾಡಿ. ಪಂಡಿತ್. ಅಮರ್‌ನಾಥ್‌ಭಟ್. 9972407122

ಭಾರತದ ಪ್ರಖ್ಯಾತ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ. ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಭಾರತಕ್ಕೆ ರಾಜತಾಂತ್ರಿಕ ಪತ್ರ ಬರೆದ ಬಾಂಗ್ಲಾದೇಶ

‘ಶೇಖ್ ಹಸೀನಾರನ್ನು ಢಾಕಾಕ್ಕೆ ಕಳಿಸಿ’

ಢಾಕಾ (ಪಿಟಿಐ): ಭಾರತದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಮರಳಿ ಢಾಕಾಕ್ಕೆ ಕಳುಹಿಸಿಕೊಡಬೇಕು ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಸೋಮವಾರ ಭಾರತಕ್ಕೆ ರಾಜತಾಂತ್ರಿಕ ಮನವಿ ಸಲ್ಲಿಸಿದೆ.

ಶೇಖ್ ಹಸೀನಾ

ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡ ಬಳಿಕ ಬಾಂಗ್ಲಾದೇಶದ ಸರ್ಕಾರ ಪತನಗೊಂಡು, 16 ವರ್ಷಗಳಿಂದ ಪ್ರಧಾನಿಯಾಗಿದ್ದ ಶೇಖ್ ಹಸೀನಾ (77) ಅವರು ಆಗಸ್ಟ್ 5ರಂದು ಭಾರತಕ್ಕೆ ಪಲಾಯನಗೈದಿದ್ದರು.

‘ನರಮೇಧ ಹಾಗೂ ಮಾನವೀಯತೆ ಮೇಲೆ ಎಸಗಿದ ಅಪರಾಧ’ದ ಕಾರಣ ಶೇಖ್ ಹಸೀನಾ, ಸಂಪುಟ ಸಚಿವರು, ಸಲಹೆಗಾರರು, ಸೇನಾಧಿಕಾರಿಗಳ ವಿರುದ್ಧ ಬಾಂಗ್ಲಾದೇಶದ ಅಂತರ ರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ (ಐಸಿಟಿ) ಬಂಧನ ವಾರಂಟ್ ಹೊರಡಿಸಿತ್ತು.

‘ಭಾರತ ಸರ್ಕಾರಕ್ಕೆ ನಾವು ಅಧಿಕೃತ ರಾಜತಾಂತ್ರಿಕ ಸಂದೇಶವನ್ನು ಕಳುಹಿಸಿದ್ದು, ನ್ಯಾಯಾಂಗ ಪ್ರಕ್ರಿಯೆಗೆ ಒಳಪಡಿಸಲಿಕ್ಕಾಗಿ ಶೇಖ್ ಹಸೀನಾ ಅವರನ್ನು ವಾಪಸ್ ಕಳುಹಿಸಬೇಕು ಎಂದು ಕೇಳಿದ್ದೇವೆ’ ಎಂದು ವಿದೇಶಾಂಗ ಇಲಾಖೆಯ ಸಲಹೆಗಾರ ತೌಹೀದ್ ಹೊಸೈನ್ ತಿಳಿಸಿದರು.

‘ಪದಚ್ಯುತಗೊಂಡ ಬಾಂಗ್ಲಾದೇಶದ ಪ್ರಧಾನಿಯನ್ನು ವಾಪಸ್ ಕರೆಸುವ ಸಂಬಂಧ ವಿದೇಶಾಂಗ ಇಲಾಖೆಗೆ ಪತ್ರ ಬರೆದಿದ್ದೇವೆ’ ಎಂದು ಗೃಹ ಸಚಿವಾಲಯದ ಸಲಹೆಗಾರ ಜಹಾಂಗೀರ್ ಆಲಂ ತಿಳಿಸಿದ್ದರು.

ಭಾರತ ಹಾಗೂ ಬಾಂಗ್ಲಾದೇಶದ ನಡುವೆ ಈಗಾಗಲೇ ‘ಹಸ್ತಾಂತರ ಒಪ್ಪಂದ’ವಿದ್ದು, ಅದರ ಅನ್ವಯವೇ ಹಸೀನಾ ಅವರನ್ನು ಮರಳಿ ದೇಶಕ್ಕೆ ಕರೆಸಿ ಕೊಳ್ಳಲಾಗುವುದು ಎಂದು ಆಲಂ ಸ್ಪಷ್ಟಪಡಿಸಿದ್ದರು.

ಗಾಜಾ: ಸೇನಾ ಯೋಧ ಮೃತ

ಜೆರುಸಲೇಂ, ಜೆನಿನ್ (ಎಪಿ): ಪ್ಯಾಲೆಸ್ಟೀನ್ ಬಂಡುಕೋರರ ಜೊತೆ ಭದ್ರತಾ ಪಡೆಗಳು ನಡೆಸಿದ ಗುಂಡಿನ ಚಕಮಕಿಯಲ್ಲಿ ಪ್ಯಾಲೆಸ್ಟೀನ್ ಸೇನೆಯ ಯೋಧರೊಬ್ಬರು ಮೃತಪಟ್ಟಿದ್ದಾರೆ. ಎರಡು ಕಡೆಗಳಲ್ಲಿ ಭಾರಿ ಪ್ರಮಾಣದಲ್ಲಿ ಗುಂಡಿನ ದಾಳಿ, ಬಾಂಬ್ ಸ್ಫೋಟ ನಡೆದವು. ಈ ವೇಳೆ ಸೇನೆಯ ಯೋಧರೊಬ್ಬರು ಮೃತಪಟ್ಟರು ಎಂದು ಪ್ಯಾಲೆಸ್ಟೀನ್ ಸೇನೆಯ ವಕ್ತಾರ ಬ್ರಿಗೇಡಿಯರ್ ಜನರಲ್ ಅನ್ವರ್ ರಜಾಬ್ ತಿಳಿಸಿದರು. ಚಕಮಕಿ ನಡೆದ ಜಾಗದಲ್ಲಿ ಇಸ್ರೇಲ್ ಸೇನೆಯು ಅಸ್ತಿತ್ವ ಹೊಂದಿಲ್ಲ.

ಲೆಬನಾನ್–ಹಂಗಾಮಿ ಪ್ರಧಾನಿ ಭೇಟಿ: (ಬೈರೂತ್)– ಇಸ್ರೇಲ್ ಹಾಗೂ ಹಿಜ್ಬುಲ್ಲಾ ಬಂಡುಕೋರರ ನಡುವೆ ಕದನ ವಿರಾಮ ಕೊನೆಗೊಂಡ ಒಂದು ತಿಂಗಳ ನಂತರ, ಲೆಬನಾನ್‌ನ ಹಂಗಾಮಿ ಪ್ರಧಾನಿ ನಜೀಬ್ ಮಿಕಾತಿ ಅವರು ಸೇನಾ ನೆಲೆಗಳಿಗೆ ಸೋಮವಾರ ಪ್ರವಾಸ ಆರಂಭಿಸಿದ್ದಾರೆ.

ದಕ್ಷಿಣ ಭಾಗದ ಸೇನಾ ನೆಲೆಗೆ ಮೊದಲ ಬಾರಿಗೆ ಭೇಟಿ ನೀಡಿದ ಅವರು, ಸದ್ಯದ ಸ್ಥಿತಿಗತಿಗಳನ್ನು ಪರಿಶೀಲಿಸಿದರು. ಅಮೆರಿಕದ ಮಧ್ಯಸ್ಥಿಕೆಯಲ್ಲಿ ಹಿಜ್ಬುಲ್ಲಾ–ಇಸ್ರೇಲ್ ನಡುವೆ ಕದನ ವಿರಾಮ ಏರ್ಪಟ್ಟಿದ್ದು, ತಿಂಗಳಾಂತ್ಯದಲ್ಲಿ ಎರಡೂ ದೇಶಗಳು ಸೇನೆಯನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಿವೆ. ಇತ್ತೀಚಿನ ದಿನಗಳಲ್ಲಿ ಲೆಬನಾನ್ ಪ್ರಮುಖ ಸ್ಥಳಗಳ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದ್ದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ನಜೀಬ್ ಅವರು ಈ ಪ್ರವಾಸ ಕೈಗೊಂಡಿದ್ದಾರೆ.

ಲೆಬನಾನ್‌ನ ಸೇನಾ ಮುಖ್ಯಸ್ಥ ಜೋಸೆಫ್ ಔನ್ ಜೊತೆಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಮುಂದಿನ ದಿನಗಳಲ್ಲಿ ನಮಗೆ ಬಹಳಷ್ಟು ಸವಾಲುಗಳಿವೆ. ನಮ್ಮ ನೆಲದ ಮೇಲೆ ಬಲವಂತವಾಗಿ ಆಕ್ರಮಣ ಮಾಡಿರುವ ಶತ್ರುಗಳನ್ನು (ಇಸ್ರೇಲ್) ಪೂರ್ಣವಾಗಿ ಹಿಂತಿರುಗುವಂತೆ ಮಾಡುವುದು ನಮ್ಮ ಮುಂದಿನ ಆದ್ಯತೆಯಾಗಿದೆ’ ಎಂದು ತಿಳಿಸಿದರು.

‘ಪನಾಮ ನಿಯಂತ್ರಣ ಮರಳಿ ಪಡೆಯಲು ಯತ್ನ’

ಫೀನಿಕ್ಸ್ (ಎಪಿ): ಹೊಸ ಆಡಳಿತದಲ್ಲಿ ಪನಾಮ ಕಾಲುವೆಯ ಮೇಲಿನ ನಿಯಂತ್ರಣವನ್ನು ಮರಳಿ ಪಡೆಯಲು ಪ್ರಯತ್ನಿಸಲಾಗುವುದು ಎಂದು ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ತಿಳಿಸಿದರು.

ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳನ್ನು ಸಂಪರ್ಕಿಸುವ ಪ್ರಮುಖ ಸಾರಿಗೆ ಮಾರ್ಗವಾದ ಈ ಕಾಲುವೆಯನ್ನು ಮಧ್ಯ ಅಮೆರಿಕದ ಮಿತ್ರರಿಗೆ ‘ಮೂರ್ಖತನ’ದಿಂದ ಬಿಟ್ಟುಕೊಡಲಾಗಿದೆ. ಇದರಿಂದಾಗಿ ಇಲ್ಲಿ ಸಾಗುವ ಹಡಗುಗಳು ‘ಅಸಮಂಜಸವಾದ’ ಶುಲ್ಕ ಪಾವತಿಸುವಂತಾಗಿದೆ ಎಂದರು.

ಅರಿಜೋನಾದಲ್ಲಿ ನಡೆದ ‘ಅಮೆರಿಕಾ ಫೆಸ್ಟ್’ನಲ್ಲಿ ಮಾತನಾಡಿದ ಟ್ರಂಪ್, ‘ನನ್ನ ಕನಸಿನ ಸಚಿವ ಸಂಪುಟವು ದೇಶದ ಆರ್ಥಿಕತೆಯನ್ನು ಉತ್ತುಂಗಕ್ಕೆ ಕೊಂಡೊಯ್ಯಲಿದೆ’ ಎಂದು ಹೇಳಿದರು.

‘ಅಮೆರಿಕದ ಸುವರ್ಣ ಯುಗ ಆರಂಭವಾಗಲಿದೆ. ನುಸುಳುಕೋರರು, ಅಕ್ರಮ ವಲಸಿಗರಿಗೆ ಗಡಿಗಳನ್ನು ಮುಚ್ಚಲಾಗುವುದು. ಗಾಜಾ ಹಾಗೂ ಉಕ್ರೇನ್‌ನಲ್ಲಿ ನಡೆದಿರುವ ಯುದ್ಧಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುತ್ತೇವೆ’ ಎಂದು ಟ್ರಂಪ್ ಪುನರುಚ್ಚರಿಸಿದರು.

ಇಮ್ರಾನ್ ಬಿಡುಗಡೆ: ಮಾತುಕತೆಗೆ ಸರ್ಕಾರ–ಪಿಟಿಐ ಪಕ್ಷ ಒಪ್ಪಿಗೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಸರ್ಕಾರ ಮತ್ತು ವಿರೋಧ ಪಕ್ಷ ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಮಧ್ಯೆ ಸೋಮವಾರ ನಡೆದ ಚೊಚ್ಚಲ ಸಭೆಯಲ್ಲಿ, ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಬಿಡುಗಡೆ ಸೇರಿದಂತೆ ಹಲವು ವಿವಾದಿತ ವಿಷಯಗಳ ಬಗ್ಗೆ ಮಾತುಕತೆ ನಡೆಸಲು ಪರಸ್ಪರ ಒಪ್ಪಿಗೆ ಸೂಚಿಸಲಾಯಿತು.

ಸಭೆಯಲ್ಲಿ ಸರ್ಕಾರದ ಪರವಾಗಿ ಸ್ಪೀಕರ್ ಅಯಾಜ್ ಸಿದ್ದಿಕಿ, ಉಪ ಪ್ರಧಾನಿ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವ ಐಶಾಕ್ ದರ್, ಪ್ರಧಾನ ಮಂತ್ರಿಗಳ ರಾಜಕೀಯ ಸಹಾಯಕ ರಾಣಾ ಸನಾವುಲ್ಲಾ, ಸೆನೆಟರ್ ಇರ್ಫಾನ್ ಸಿದ್ದಿಕಿ, ಮಾಜಿ ಪ್ರಧಾನಿ ರಾಜಾ ಪರ್ವೇಜ್ ಅಶ್ರಫ್, ಮಾಜಿ ಸಚಿವ ನವೀದ್ ಅಮರ್ ಮತ್ತಿತರರು ಭಾಗಿಯಾಗಿದ್ದರು.

ಪಿಟಿಐ ಪರವಾಗಿ ಮಾಜಿ ಸ್ಪೀಕರ್ ಅಸಾದ್ ಕಾಸಿರ್, ಸಹೀಬಜಾದ್ ಹಮೀದ್ ರಾಜಾ ಮತ್ತು ಸೆನೆಟರ್ ರಾಜ ನಾಸಿರ್ ಅಬ್ಬಾಸ್ ಪಾಲ್ಗೊಂಡಿದ್ದರು.

ಮುಂದಿನ ಮಾತುಕತೆಯು ಜನವರಿ 2ರಂದು ನಡೆಯಲಿದೆ. ಆ ದಿನ ಪಿಟಿಐ ತಂಡ ತನ್ನ ಬೇಡಿಕೆಗಳ ಪಟ್ಟಿಯನ್ನು ಸಭೆಯ ಮುಂದಿಡಲಿದೆ.

‘ಅನುತ್ತೀರ್ಣರಹಿತ ನೀತಿ’ ರದ್ದು: ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯಗಳಿಗೆ ಅನ್ವಯ

5, 8ನೇ ತರಗತಿ: ಅನುತ್ತೀರ್ಣಕ್ಕೆ ಅವಕಾಶ

ನವದೆಹಲಿ (ಪಿಟಿಐ): ಐದು ಮತ್ತು ಎಂಟನೇ ತರಗತಿಯಲ್ಲಿ ಕಲಿಯುವ ಮಕ್ಕಳನ್ನು ಅನುತ್ತೀರ್ಣಗೊಳಿಸಲು ಅವಕಾಶ ಇಲ್ಲದ ‘ಅನುತ್ತೀರ್ಣರಹಿತ ನೀತಿ’ಯನ್ನು (ನೋ- ಡಿಟೆನ್ಷನ್ ಪಾಲಿಸಿ) ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ವಾರ್ಷಿಕ ಪರೀಕ್ಷೆಯಲ್ಲಿ ಪಾಸಾಗದ 5 ಮತ್ತು 8ನೇ ತರಗತಿಗಳ ಮಕ್ಕಳನ್ನು ಇನ್ನು ಮುಂದೆ ಅನುತ್ತೀರ್ಣಗೊಳಿಸಬಹುದು.

ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ ಮತ್ತು ಸೈನಿಕ ಶಾಲೆಗಳು ಒಳಗೊಂಡಂತೆ ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ 3 ಸಾವಿರಕ್ಕೂ ಹೆಚ್ಚು ಶಾಲೆಗಳಿಗೆ ಈ ನೀತಿ ಅನ್ವಯವಾಗಲಿದೆ.

ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು (ಆರ್‌ಟಿಇ) ಕಾಯ್ದೆ 2019ಕ್ಕೆ ತಿದ್ದುಪಡಿ ತಂದಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ ಒಟ್ಟು 18 ಕಡೆ ಈಗಾಗಲೇ ಈ ತಿದ್ದುಪಡಿ ಜಾರಿಯಾಗಿದ್ದು, ‘ಅನುತ್ತೀರ್ಣರಹಿತ ನೀತಿ’ ರದ್ದುಗೊಂಡಿದೆ.

‘ಶೈಕ್ಷಣಿಕ ವರ್ಷದ ಕೊನೆಯಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾಗದ ವಿದ್ಯಾರ್ಥಿಗಳಿಗೆ ಫಲಿತಾಂಶ ಹೊರಬಿದ್ದ ಎರಡು ತಿಂಗಳ ಒಳಗಾಗಿ ಮರು ಪರೀಕ್ಷೆಗೆ ಅವಕಾಶ ನೀಡಬೇಕು. ಮರು ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಯು ಪಾಸಾಗಲು ಮತ್ತೊಮ್ಮೆ ವಿಫಲವಾದರೆ, ಅದೇ ತರಗತಿಯಲ್ಲಿ (5 ಅಥವಾ 8) ಇನ್ನೊಂದು ವರ್ಷ ಕಲಿಕೆ ಮುಂದುವರಿಸಬೇಕಾಗುತ್ತದೆ’ ಎಂದು ಸರ್ಕಾರದ ಸುತ್ತೋಲೆ ತಿಳಿಸಿದೆ.

‘ಅನುತ್ತೀರ್ಣರಾಗುವ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಹೆಚ್ಚಿಸಲು ಶಿಕ್ಷಕರು ವಿಶೇಷ ಗಮನ ವಹಿಸಬೇಕು. ಅವರ ಕಲಿಕಾ ಹಿನ್ನಡೆಯ ಬಗ್ಗೆ ಪೋಷಕರಿಗೂ ಮನದಟ್ಟು ಮಾಡಬೇಕು. ಕಾಲ ಕಾಲಕ್ಕೆ ಕಲಿಕಾ ಸಾಮರ್ಥ್ಯದ ಮೌಲ್ಯಮಾಪನ ನಡೆಸಿ, ಅದಕ್ಕೆ ತಕ್ಕಂತೆ ತರಬೇತಿ ನೀಡಬೇಕು’ ಎಂದು ಹೇಳಿದೆ.

ಆದರೆ, ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಯಾವುದೇ ವಿದ್ಯಾರ್ಥಿಯನ್ನು ಶಾಲೆಯಿಂದ ಹೊರಹಾಕುವಂತಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

‘5 ಮತ್ತು 8ನೇ ತರಗತಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಪಟ್ಟಿಯನ್ನು ನಿರ್ವಹಿಸುವುದು ಶಾಲಾ ಮುಖ್ಯಸ್ಥರ ಜವಾಬ್ದಾರಿಯಾಗಿದೆ. ಅಂತಹ ಮಕ್ಕಳ ತರಬೇತಿಗಾಗಿ ಮಾಡುವ ವಿಶೇಷ ಕಲಿಕಾ ವ್ಯವಸ್ಥೆಯ ಮೇಲೆ ಮುಖ್ಯಸ್ಥರು ನಿಗಾ ಇಡಬೇಕು’ ಎಂದು ಸುತ್ತೋಲೆ ತಿಳಿಸಿದೆ.

ಯಾವ ರಾಜ್ಯಗಳಲ್ಲಿ ಜಾರಿ?

ಶಿಕ್ಷಣವು ರಾಜ್ಯ ಪಟ್ಟಿಯಲ್ಲಿ ಬರುವುದರಿಂದ ಈ ತಿದ್ದುಪಡಿಯ ಜಾರಿಗೆ ರಾಜ್ಯ ಸರ್ಕಾರಗಳ ಸಮ್ಮತಿ ಅಗತ್ಯ. ಅಸ್ಸಾಂ, ಬಿಹಾರ, ಗುಜರಾತ್, ಹಿಮಾಚಲ ಪ್ರದೇಶ, ಜಾರ್ಖಂಡ್, ಮಧ್ಯಪ್ರದೇಶ, ಮೇಘಾಲಯ, ನಾಗಾಲ್ಯಾಂಡ್, ಪಂಜಾಬ್, ರಾಜಸ್ಥಾನ, ಸಿಕ್ಕಿಂ, ತಮಿಳುನಾಡು, ತ್ರಿಪುರಾ, ಉತ್ತರಾಖಂಡ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ದಾದ್ರಾ ಮತ್ತು ನಗರ ಹವೇಲಿ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಈ ನೀತಿ ಈಗಾಗಲೇ ಜಾರಿಗೆ ಬಂದಿದೆ.

‘ಹರಿಯಾಣ ಮತ್ತು ಪುದುಚೇರಿ ಇದುವರೆಗೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ಇತರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ‘ಅನುತ್ತೀರ್ಣರಹಿತ ನೀತಿ’ ಮುಂದುವರಿಸಲು ನಿರ್ಧರಿಸಿವೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪೂಜಾ ಖೇಡ್ಕರ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಪೂಜಾ ಖೇಡ್ಕರ್

ನವದೆಹಲಿ (ಪಿಟಿಐ): ನಾಗರಿಕ ಸೇವಾ ಪರೀಕ್ಷೆಯಲ್ಲಿ ಒಬಿಸಿ ಮತ್ತು ಅಂಗವಿಕಲ ಕೋಟಾ ಸೌಲಭ್ಯವನ್ನು ಅಕ್ರಮವಾಗಿ ಪಡೆದುಕೊಂಡ ಹಾಗೂ ವಂಚನೆ ಎಸಗಿರುವ ಆರೋಪಕ್ಕೆ ಗುರಿಯಾಗಿರುವ ಮಾಜಿ ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲು ದೆಹಲಿ ಹೈಕೋರ್ಟ್ ಸೋಮವಾರ ನಿರಾಕರಿಸಿದೆ.

‘ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಲಾಗಿದೆ. ಬಂಧಿಸದಂತೆ ನೀಡಿದ್ದ ಮಧ್ಯಂತರ ರಕ್ಷಣೆಯನ್ನು ತೆರವುಗೊಳಿಸಲಾಗಿದೆ’ ಎಂದು ನ್ಯಾಯಮೂರ್ತಿ ಚಂದ್ರಾ ಧರಿ ಸಿಂಗ್ ಅವರು ಹೇಳಿದ್ದಾರೆ. ಖೇಡ್ಕರ್ ವಿರುದ್ಧದ ಆರೋಪಗಳಲ್ಲಿ ಹುರುಳಿದೆ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ, ಪಿತೂರಿಯನ್ನು ಬಯಲುಗೊಳಿಸಲು ತನಿಖೆಯ ಅಗತ್ಯ ಇದೆ ಎಂದು ನ್ಯಾಯಮೂರ್ತಿ ಸಿಂಗ್ ಹೇಳಿದ್ದಾರೆ.

ಸಾಂವಿಧಾನಿಕ ಸಂಸ್ಥೆ ಹಾಗೂ ಸಮಾಜದ ವಿರುದ್ಧ ಎಸಗಿದ ವಂಚನೆಗೆ ಒಂದು ನಿದರ್ಶನ ಇದು ಎಂದು ಕೂಡ ನ್ಯಾಯಮೂರ್ತಿ ಹೇಳಿದ್ದಾರೆ. ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2022ರ ನಾಗರಿಕ ಸೇವಾ ಪರೀಕ್ಷೆಯಲ್ಲಿ ಮೀಸಲಾತಿಯ ಸೌಲಭ್ಯ ಪಡೆದುಕೊಳ್ಳಲು ಮಾಹಿತಿಯನ್ನು ತಪ್ಪಾಗಿ ನೀಡಿದ ಆರೋಪ ಖೇಡ್ಕರ್ ವಿರುದ್ಧ ಇದೆ. ತಮ್ಮ ವಿರುದ್ಧದ ಆರೋಪಗಳನ್ನು ಖೇಡ್ಕರ್ ಅಲ್ಲಗಳೆದಿದ್ದಾರೆ.

ಉತ್ತರ ಪ್ರದೇಶ, ಪಂಜಾಬ್ ಪೊಲೀಸರ ಕಾರ್ಯಾಚರಣೆ

3 ಶಂಕಿತ ಉಗ್ರರ ಹತ್ಯೆ

ಪಿಲಿಭಿತ್/ ಚಂಡೀಗಢ (ಪಿಟಿಐ): ಗುರುದಾಸಪುರದಲ್ಲಿ ನಡೆದ ಗ್ರೆನೇಡ್ ದಾಳಿಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಮೂವರು ಶಂಕಿತ ಖಾಲಿಸ್ತಾನಿ ಉಗ್ರರು ಪಿಲಿಭಿತ್‌ನಲ್ಲಿ ಪೊಲೀಸರೊಂದಿಗಿನ ಎನ್‌ಕೌಂಟರ್‌ನಲ್ಲಿ ಬಲಿಯಾಗಿದ್ದಾರೆ.

ಪಿಲಿಭಿತ್‌ನ ಪೂರನ್‌ಪುರ ಪ್ರದೇಶದಲ್ಲಿ ಸೋಮವಾರ ಮುಂಜಾನೆ ಉತ್ತರ ಪ್ರದೇಶ ಮತ್ತು ಪಂಜಾಬ್ ಪೊಲೀಸರ ಜಂಟಿ ತಂಡ ಹಾಗೂ ‘ಖಾಲಿಸ್ತಾನಿ ಜಿಂದಾಬಾದ್ ಫೋರ್ಸ್’ (ಕೆಝಡ್‌ಎಫ್) ಸಂಘಟನೆಗೆ ಸೇರಿದ ಉಗ್ರರ ಮಧ್ಯೆ ಗುಂಡಿನ ಚಕಮಕಿ ನಡೆದಿದೆ.

ಹತ್ಯೆಯಾದ ಶಂಕಿತ ಉಗ್ರರನ್ನು ವರಿಂದರ್ ಸಿಂಗ್ ಅಲಿಯಾಸ್ ರವಿ (23), ಗುರ್ವಿಂದರ್ ಸಿಂಗ್ (25) ಮತ್ತು ಜಶನ್‌ಪ್ರೀತ್ ಸಿಂಗ್ ಅಲಿಯಾಸ್ ಪ್ರತಾಪ್ ಸಿಂಗ್ (18) ಎಂದು ಗುರುತಿಸಿರುವುದಾಗಿ ಪಂಜಾಬ್ ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ.

‘ಈ ಕಾರ್ಯಾಚರಣೆಯು ಪಾಕಿಸ್ತಾನಿ ಪ್ರಾಯೋಜಿತ ಕೆಝಡ್‌ಎಫ್ ವಿರುದ್ಧದ ಹೋರಾಟದಲ್ಲಿ ದೊರೆತ ಬಲುದೊಡ್ಡ ಯಶಸ್ಸು’ ಎಂದು ಅವರು ಹೇಳಿದ್ದಾರೆ.

ಎನ್‌ಕೌಂಟರ್‌ನಲ್ಲಿ ಬಲಿಯಾದ ಮೂವರೂ ಪಂಜಾಬ್‌ನ ಗುರುದಾಸಪುರ ಜಿಲ್ಲೆಯ ಕಲಾನೌರ್ ಪ್ರದೇಶದ ನಿವಾಸಿಗಳು. ಕಲಾನೌರ್‌ನ ಬಕ್ಷೀವಾಲಾ ಪೊಲೀಸ್ ಠಾಣೆಯ ಮೇಲೆ ಗ್ರೆನೇಡ್ ದಾಳಿ ನಡೆಸಿದ ಆರೋಪ ಇವರ ಮೇಲಿದೆ. ಈಚೆಗೆ ನಡೆದ ಗ್ರೆನೇಡ್ ದಾಳಿ ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ.

‘ಗುಂಡಿನ ಚಕಮಕಿಯಲ್ಲಿ ತೀವ್ರವಾಗಿ ಗಾಯಗೊಂಡ ಮೂವರನ್ನು ಪೂರನ್‌ಪುರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು’ ಎಂದು ಉತ್ತರ ಪ್ರದೇಶದ ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಅಮಿತಾಭ್ ಯಶ್ ತಿಳಿಸಿದ್ದಾರೆ. ತಲಾ ಎರಡು ಎಕೆ–47 ರೈಫಲ್ ಮತ್ತು ಪಿಸ್ತೂಲ್ ಹಾಗೂ ಇತರ ಶಸ್ತ್ರಾಸ್ತ್ರಗಳನ್ನು ಅವರಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ‘ಕೆಝಡ್‌ಎಫ್ ಸಂಘಟನೆಯ ಇಡೀ ಜಾಲವನ್ನು ಭೇದಿಸಲು ಮತ್ತು ಹತ್ಯೆಯಾದ ಉಗ್ರರ ಜತೆ ಸಂಪರ್ಕ ಹೊಂದಿರುವವರ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ’ ಎಂದು ಹೇಳಿದ್ದಾರೆ.

ಖಾಲಿಸ್ತಾನಿ ಉಗ್ರನ ಸಹಚರನ ಬಂಧನ

ನವದೆಹಲಿ (ಪಿಟಿಐ): ಖಾಲಿಸ್ತಾನಿ ಉಗ್ರ ಲಖ್ಬೀರ್ ಸಿಂಗ್ ಅಲಿಯಾಸ್ ಲಂಡಾನ ಸಹಚರ ಜತೀಂದರ್ ಸಿಂಗ್ ಅಲಿಯಾಸ್ ಜ್ಯೋತಿ ಎಂಬಾತನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸೋಮವಾರ ಮುಂಬೈನಲ್ಲಿ ಬಂಧಿಸಿದೆ. ಪಂಜಾಬ್‌ನಲ್ಲಿ ಭಯೋತ್ಪಾದಕ ದಾಳಿಯ ಸಂಚು ರೂಪಿಸಿದ ಪ್ರಕರಣದ ಆರೋಪಿಗಳಲ್ಲಿ ಒಬ್ಬನಾಗಿರುವ ಜತೀಂದರ್ ಕಳೆದ ಕೆಲ ಸಮಯಗಳಿಂದ ತಲೆಮರೆಸಿಕೊಂಡಿದ್ದ. ಗ್ಯಾಂಗ್‌ಸ್ಟರ್ ಬಚಿತ್ತರ್ ಸಿಂಗ್ ಜತೆಗೂ ಈತನಿಗೆ ನಂಟು ಇದೆ.

ಗುಂಡಿಕ್ಕಿ ಮೂವರ ಹತ್ಯೆ

ಚಂಡೀಗಢ (ಪಿಟಿಐ): ಹರಿಯಾಣದ ಹೋಟೆಲ್ ವೊಂದರ ಪಾರ್ಕಿಂಗ್ ಸ್ಥಳದಲ್ಲಿ ಅಪರಿಚಿತ ವ್ಯಕ್ತಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ಮಹಿಳೆ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ.

‘ಭಾನುವಾರ ರಾತ್ರಿ ಈ ಘಟನೆ ನಡೆದಿದ್ದು, ಮೃತಪಟ್ಟವರನ್ನು ದೆಹಲಿಯ ವಿಕ್ಕಿ ಮತ್ತು ವಿಪಿನ್ ಹಾಗೂ ಹಿಸಾರ್‌ನ ನಿಯಾ ಎಂದು ಗುರುತಿಸಲಾಗಿದೆ’ ಎಂದು ಪೊಲೀಸರು ಸೋಮವಾರ ಹೇಳಿದ್ದಾರೆ.

‘ಹುಟ್ಟುಹಬ್ಬದ ಸಂಭ್ರಮಾಚರಣೆಗೆಂದು ಹೋಟೆಲ್‌ಗೆ ಆಗಮಿಸಿದ್ದ ಮೂವರ ಮೇಲೆ ದಾಳಿ ನಡೆದಿದೆ. ಅವರಲ್ಲಿ ವಿಕ್ಕಿ(30) ಎಂಬವರು ಕೆಲ ಪ್ರಕರಣಗಳಲ್ಲಿ ಆರೋಪಿಯಾಗಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

ಪತ್ನಿಯಿಂದ ಕ್ರೌರ್ಯ ಪತಿಗೆ ವಿಚ್ಛೇದನ

ಕೋಲ್ಕತ್ತ (ಪಿಟಿಐ): ಕ್ರೌರ್ಯದ ಆಧಾರದಲ್ಲಿ ವಿಚ್ಛೇದನ ಪಡೆಯಲು ಪತಿಗೆ ಕಲ್ಕತ್ತ ಹೈಕೋರ್ಟ್ ಅನುಮತಿ ನೀಡಿದೆ. ಪತ್ನಿಯ ಸ್ನೇಹಿತೆ ಮತ್ತು ಕುಟುಂಬದ ಸದಸ್ಯರನ್ನು ಪತಿಯ ಮೇಲೆ ‘ಹೇರಿದ್ದುದು’, ವೈವಾಹಿಕ ದೌರ್ಜನ್ಯದ ಸುಳ್ಳು ಪ್ರಕರಣವನ್ನು ಪತ್ನಿಯು ದಾಖಲಿಸಿದ್ದುದು ಕ್ರೌರ್ಯ ಎಂದು ಹೈಕೋರ್ಟ್ ಹೇಳಿದೆ.

ಪತಿಯ ಪರವಾಗಿ ವಿಚ್ಛೇದನದ ಆದೇಶ ನೀಡಲು ನಿರಾಕರಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ನ್ಯಾಯಮೂರ್ತಿಗಳಾದ ಸವ್ಯಸಾಚಿ ಭಟ್ಟಾಚಾರ್ಯ ಮತ್ತು ಉದಯ್ ಕುಮಾರ್ ಇರುವ ವಿಭಾಗೀಯ ಪೀಠವು ಅನೂರ್ಜಿತಗೊಳಿಸಿದೆ.

ಪತಿಯು ತಾನು ಪತ್ನಿಯಿಂದ ಮಾನಸಿಕ ಕ್ರೌರ್ಯ ಎದುರಿಸಿದ್ದುದನ್ನು ಸಾಬೀತು ಮಾಡಿದ್ದಾನೆ ಎಂದು ವಿಭಾಗೀಯ ಪೀಠವು ಹೇಳಿದೆ. ಪತ್ನಿಯ ಸ್ನೇಹಿತೆ ಹಾಗೂ ಆಕೆಯ ಕುಟುಂಬದ ಸದಸ್ಯರು, ಪತಿಯ ಆಕ್ಷೇಪದ ಹೊರತಾಗಿಯೂ, ಆತನಿಗೆ ತೊಂದರೆ ಆಗುತ್ತಿದ್ದರೂ ಆತನ ಮನೆಯಲ್ಲಿ ದೀರ್ಘಾವಧಿಗೆ ಇರುತ್ತಿದ್ದರು ಎಂಬುದು ದಾಖಲೆಗಳಿಂದ ಸಾಬೀತಾಗಿದೆ ಎಂದು ಪೀಠವು ಹೇಳಿದೆ.

‘ಸ್ನೇಹಿತೆ ಮತ್ತು ಕುಟುಂಬದ ಸದಸ್ಯರನ್ನು ಪತ್ನಿಯು ತನ್ನ ಪತಿಯ ಮೇಲೆ ದೀರ್ಘ ಅವಧಿಗೆ ಹೇರಿದ್ದುದನ್ನು, ಕೆಲವು ಸಂದರ್ಭಗಳಲ್ಲಿ ಪತ್ನಿ ಅಲ್ಲಿ ಇಲ್ಲದಿದ್ದಾಗಲೂ ಅವರು ಅಲ್ಲಿ ಇರುತ್ತಿದ್ದುದನ್ನು ಕ್ರೌರ್ಯವೆಂದು ಖಂಡಿತವಾಗಿಯೂ ಪರಿಗಣಿಸಬಹುದು. ಏಕೆಂದರೆ ಆ ಸ್ಥಿತಿಯು ಪತಿಗೆ ಜೀವನವನ್ನು ಅಸಹನೀಯಗೊಳಿಸಿರಬಹುದು. ಇದು ಕ್ರೌರ್ಯದ ವಿಸ್ತೃತ ವ್ಯಾಪ್ತಿಯಲ್ಲಿ ಬರುತ್ತದೆ’ ಎಂದು ಪೀಠವು ಹೇಳಿದೆ.

ಇವರಿಬ್ಬರು 2005ರ ಡಿಸೆಂಬರ್ 15ರಂದು ಮದುವೆ ಆಗಿದ್ದರು. ಪತಿಯು 2008ರ ಸೆಪ್ಟೆಂಬರ್‌ನಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದರು. ಅದೇ ವರ್ಷ ಪತ್ನಿಯು, ತನ್ನ ಪತಿ ಹಾಗೂ ಆತನ ಕುಟುಂಬದ ಸದಸ್ಯರ ವಿರುದ್ಧ ದೂರೊಂದನ್ನು ನಬದ್ವೀಪ್ ಪೊಲೀಸ್ ಠಾಣೆಗೆ ನೋಂದಾಯಿತ ಅಂಚೆ ಮೂಲಕ ರವಾನಿಸಿದ್ದರು. ಈ ದೂರು ಆಧರಿಸಿ ಭಾರತೀಯ ದಂಡಸಂಹಿತೆಯ ಸೆಕ್ಷನ್ 498(ಎ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಪತ್ನಿ ದಾಖಲಿಸಿದ್ದ ಪ್ರಕರಣದಲ್ಲಿ ಇವರನ್ನು ದೋಷಮುಕ್ತಗೊಳಿಸಿ ಕ್ರಿಮಿನಲ್ ನ್ಯಾಯಾಲಯವು ನೀಡಿದ್ದ ಆದೇಶವನ್ನು ಪತಿಯ ಪರ ವಕೀಲರು ಹೈಕೋರ್ಟ್ ಪೀಠಕ್ಕೆ ಸಲ್ಲಿಸಿದ್ದರು. ದೂರು ನೀಡಿದ ಸಂದರ್ಭ ಹಾಗೂ ದೋಷಮುಕ್ತಗೊಳಿಸಿ ಕೋರ್ಟ್ ನೀಡಿದ ಆದೇಶವು ಈ ದೂರು ಸುಳ್ಳಾಗಿತ್ತು ಎಂಬುದನ್ನು ತೋರಿಸುತ್ತವೆ ಎಂದು ವಕೀಲರು ವಾದಿಸಿದ್ದರು.

ಮುಖ್ಯಾಂಶಗಳು

- ಪತಿ, ಆತನ ಕುಟುಂಬದವರ ವಿರುದ್ಧ ಸುಳ್ಳು ಪ್ರಕರಣ
- ಪತ್ನಿ ಕ್ರೌರ್ಯ ಎಸಗಿರುವುದು ಸಾಬೀತು: ಹೈಕೋರ್ಟ್

ಕ್ರಿಸ್‌ಮಸ್

‘ಕ್ಯಾಥಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ’ ಕ್ರಿಸ್‌ಮಸ್ ಅಂಗವಾಗಿ ನವದೆಹಲಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡರು. ಜರ್ಮನಿಯಲ್ಲಿ ಈಚೆಗೆ ಕ್ರಿಸ್‌ಮಸ್ ಮಾರುಕಟ್ಟೆ ಮೇಲೆ ಕಾರು ನುಗ್ಗಿಸಿದ ಘಟನೆ ಮತ್ತು ಶ್ರೀಲಂಕಾದಲ್ಲಿ 2019ರಲ್ಲಿ ನಡೆದ ಈಸ್ಟರ್ ಬಾಂಬ್ ಸ್ಫೋಟ ಘಟನೆ ಉಲ್ಲೇಖಿಸಿದ ಮೋದಿ, ಇಂತಹ ಸವಾಲುಗಳ ವಿರುದ್ಧ ಒಗ್ಗಟ್ಟಿನ ಹೋರಾಟ ಮುಖ್ಯ ಎಂದರು –ಪಿಟಿಐ ಚಿತ್ರ

ರಾಮಸುಬ್ರಮಣಿಯನ್ ಎನ್‌ಎಚ್‌ಆರ್‌ಸಿ ಅಧ್ಯಕ್ಷ

ನವದೆಹಲಿ (ಪಿಟಿಐ): ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯ ಮೂರ್ತಿ ವಿ. ರಾಮ ಸುಬ್ರಮಣಿಯನ್ ಅವರನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ನೂತನ ಅಧ್ಯಕ್ಷರನ್ನಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ನೇಮಿಸಿದ್ದಾರೆ. ಜತೆಗೆ ಇಬ್ಬರು ಸದಸ್ಯರ ನೇಮಕವೂ ಆಗಿದೆ ಎಂದು ಆಯೋಗ ಸೋಮವಾರ ತಿಳಿಸಿದೆ.

ಆಯೋಗದ ಅಧ್ಯಕ್ಷ ಸ್ಥಾನದಲ್ಲಿದ್ದ ಅರುಣ್ ಕುಮಾರ್ ಮಿಶ್ರಾ ಅವರ ಅಧಿಕಾರಾವಧಿ ಜೂನ್ 1ಕ್ಕೆ ಕೊನೆಗೊಂಡಿತ್ತು.

‘ನಿವೃತ್ತ ನ್ಯಾಯಮೂರ್ತಿ ವಿ. ರಾಮಸುಬ್ರಮಣಿಯನ್ ಅವರನ್ನು ಎನ್‌ಎಚ್‌ಆರ್‌ಸಿ ಅಧ್ಯಕ್ಷರನ್ನಾಗಿ ಹಾಗೂ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷ ಪ್ರಿಯಾಂಕ್ ಕಾನೂಂಗೊ ಮತ್ತು ಮಾಜಿ ನ್ಯಾಯಮೂರ್ತಿ ವಿದ್ಯುತ್ ರಂಜನ್ ಸಾರಂಗಿ ಅವರನ್ನು ಸದಸ್ಯರನ್ನಾಗಿ ರಾಷ್ಟ್ರಪತಿಯವರು ನೇಮಕ ಮಾಡಿದ್ದಾರೆ’ ಎಂದು ಎನ್‌ಎಚ್‌ಆರ್‌ಸಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಆಯೋಗದ ನೂತನ ಅಧ್ಯಕ್ಷರ ಆಯ್ಕೆ ಸಂಬಂಧ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಉನ್ನತ ಮಟ್ಟದ ಸಮಿತಿ ಡಿಸೆಂಬರ್ 18ರಂದು ಸಭೆ ಸೇರಿ ಚರ್ಚಿಸಿತ್ತು. ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರು ಸಭೆಯಲ್ಲಿ ಭಾಗವಹಿಸಿದ್ದರು.

ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅಥವಾ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿಯನ್ನು ಎನ್‌ಎಚ್‌ಆರ್‌ಸಿ ಅಧ್ಯಕ್ಷರನ್ನಾಗಿ ನೇಮಿಸಬಹುದು. ಆಯ್ಕೆ ಸಮಿತಿ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿ ಈ ನೇಮಕ ಮಾಡುತ್ತಾರೆ. ಈ ಹಿಂದೆ ಸಿಜೆಐಗಳಾದ ಎಚ್.ಎಲ್.ದತ್ತು ಮತ್ತು ಕೆ.ಜಿ.ಬಾಲಕೃಷ್ಣನ್ ಅವರು ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಸಂಕ್ಷಿಪ್ತ ಸುದ್ದಿ

ಒಳಮೀಸಲಾತಿ ಏಕಸದಸ್ಯ ಆಯೋಗ ರಚನೆ

ಅಮರಾವತಿ (ಪಿಟಿಐ): ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕುರಿತ ಅಧ್ಯಯನಕ್ಕಾಗಿ ಆಂಧ್ರಪ್ರದೇಶ ಸರ್ಕಾರವು ನಿವೃತ್ತ ಐಎಎಸ್ ಅಧಿಕಾರಿ ರಾಜೀವ್ ರಂಜನ್ ಮಿಶ್ರಾ ನೇತೃತ್ವದ ಏಕಸದಸ್ಯ ಆಯೋಗವನ್ನು ಸೋಮವಾರ ರಚಿಸಿದೆ.

ಒಳ ಮೀಸಲಾತಿ ಕುರಿತಾಗಿ ಸುಪ್ರೀಂ ಕೋರ್ಟ್ ಆಗಸ್ಟ್ 1ರಂದು ನೀಡಿರುವ ಆದೇಶಕ್ಕೆ ಅನುಗುಣವಾಗಿ ಆಯೋಗವನ್ನು ರಚಿಸಲಾಗಿದೆ. ಅವಿಭಜಿತ ಜಿಲ್ಲೆಗಳಾದ ಏಲೂರು, ಕೃಷ್ಣಾ ಮತ್ತು ಗುಂಟೂರಿಗೆ ಡಿ.27ರಿಂದ 3ರವರೆಗೆ ಭೇಟಿ ನೀಡಲಿರುವ ಆಯೋಗವು ಒಳಮೀಸಲಾತಿ ಕುರಿತು ಸಭೆಗಳನ್ನು ನಡೆಸಲಿದೆ ಮತ್ತು ಮನವಿ ಅಥವಾ ಆಕ್ಷೇಪಣೆ ಗಳನ್ನು ಸ್ವೀಕರಿಸಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಜಿಎಸ್‌ಟಿ ಪ್ರಿಯಾಂಕಾ ಕಿಡಿ

ನವದೆಹಲಿ (ಪಿಟಿಐ): ಪರೀಕ್ಷಾ ನೋಂದಣಿ ಅರ್ಜಿಗೆ ಶೇ 18ರಷ್ಟು ಜಿಎಸ್‌ಟಿ ವಿಧಿಸಿರುವುದಕ್ಕೆ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ತಮ್ಮ ಮಕ್ಕಳು ಪರೀಕ್ಷೆ ಬರೆಯಲಿ ಎಂದು ಪೋಷಕರು ಪೈಸೆ ಪೈಸೆ ಕೂಡಿರುತ್ತಾರೆ. ಆದರೆ, ಸರ್ಕಾರವು ಪೋಷಕರು ಕೂಡಿಡುವ ಈ ಹಣವನ್ನು ತನ್ನ ಆದಾಯದ ಮೂಲವನ್ನಾಗಿಸಿಕೊಂಡಿದೆ’ ಎಂದು ಪ್ರಿಯಾಂಕಾ ದೂರಿದ್ದಾರೆ. ಸುಲ್ತಾನ್‌ಪುರದ ‘ಕಲ್ಯಾಣ್ ಸಿಂಗ್ ಸೂಪರ್ ಸ್ಪೆಷಾಲಿಟಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್’ನ ಪರೀಕ್ಷಾ ನೋಂದಣಿ ಅರ್ಜಿಯನ್ನು ತಮ್ಮ ಪೋಸ್ಟ್‌ನೊಂದಿಗೆ ಹಂಚಿಕೊಂಡಿದ್ದಾರೆ.

‘ಒಂದು ದೇಶ, ಒಂದು ಚುನಾವಣೆ’ 8ಕ್ಕೆ ಮೊದಲ ಸಭೆ

ನವದೆಹಲಿ (ಪಿಟಿಐ): ಒಂದು ರಾಷ್ಟ್ರ– ಒಂದು ಚುನಾವಣೆಗೆ ಸಂಬಂಧಿಸಿದಂತೆ 39 ಮಂದಿ ಸದಸ್ಯರನ್ನು ಒಳಗೊಂಡ ಸಂಸದೀಯ ಸಮಿತಿ ಮೊದಲ ಸಭೆಯು ಜ.8ರಂದು ನಡೆಯಲಿದೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆಯನ್ನು ಮಂಡಿಸುವ ಉದ್ದೇಶ ಹೊಂದಿದ್ದ ಮಸೂದೆ ಕುರಿತಾದ ಜಂಟಿ ಸಮಿತಿ ಸಭೆಯು ಬಿಜೆಪಿಯ ಸದಸ್ಯ ಪಿ.ಪಿ. ಚೌಧರಿ ನೇತೃತ್ವದಲ್ಲಿ ನಡೆಯಲಿದೆ.

ಸಂವಿಧಾನ (129ನೇ ತಿದ್ದುಪಡಿ) ಮಸೂದೆ–2024 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳ ಮಸೂದೆ–2024 ಅನ್ನು ಕಳೆದ ವಾರ ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಚಳಿಗಾಲದ ಅಧಿವೇಶನದ ಕೊನೆಯ ದಿನ ಜಂಟಿ ಸದನ ಸಮಿತಿಗೆ ಒಪ್ಪಿಸಲಾಗಿತ್ತು.

ಉತ್ತರ ಪ್ರದೇಶ: 31 ವರ್ಷ ಬಳಿಕ ತೆರೆದ ಶಿವ ದೇಗುಲ

ಮುಜಫ್ಫರ್‌ನಗರ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದಲ್ಲಿ ಮುಸ್ಲಿಂ ಪ್ರಾಬಲ್ಯವಿರುವ ಲೂಧಾವಾಲದಲ್ಲಿನ ಶಿವನ ದೇಗುಲವನ್ನು ಸುಮಾರು 31 ವರ್ಷಗಳ ಬಳಿಕ ಸೋಮವಾರ ತೆರೆಯಲಾಗಿದೆ.

ಈ ಶಿವ ದೇಗುಲವನ್ನು 1971ರಲ್ಲಿ ನಿರ್ಮಿಸಲಾಗಿತ್ತು. 1992ರಲ್ಲಿ ನಡೆದ ಅಯೋಧ್ಯೆ ಗಲಭೆಯ ವೇಳೆ ಸ್ಥಳೀಯ ಹಿಂದೂಗಳು ದೇಗುಲದ ಮೂರ್ತಿ ಮತ್ತು ಶಿವಲಿಂಗವನ್ನು ತೆಗೆದುಕೊಂಡು ವಲಸೆ ಹೋಗಿದ್ದರು. ಆ ಬಳಿಕ ದೇಗುಲ ಮುಚ್ಚಿತ್ತು. ‘ವಿಘ್ನಗಳಿಲ್ಲದೇ ಎಲ್ಲ ಕಾರ್ಯಕ್ರಮಗಳು ನಡೆದವು. ಸ್ವಾಮಿ ಯಶ್ವೀರ್ ಮಹಾರಾಜರ ನೇತೃತ್ವದಲ್ಲಿ ಹಿಂದೂಗಳು ಶಾಂತಿಯುತವಾಗಿ ಈ ಪ್ರದೇಶಕ್ಕೆ ಮರಳಿದರು’ ಎಂದು ನಗರ ಮ್ಯಾಜಿಸ್ಟ್ರೇಟ್ ವಿಕಾಸ್ ಕಶ್ಯಪ್ ಅವರು ತಿಳಿಸಿದ್ದಾರೆ. ದೇಗುಲಕ್ಕೆ ಆಗಮಿಸಿದ ಹಿಂದೂಗಳ ಮೆರವಣಿಗೆ ಮೇಲೆ ಮುಸ್ಲಿಮರು ಹೂಮಳೆ ಸುರಿಸಿ ಸ್ವಾಗತಿಸಿದರು.

ಅಂಬೇಡ್ಕರ್ ಪ್ರತಿಮೆಗೆ ಹಾನಿ ಎಫ್‌ಐಆರ್

ಅಹಮದಾಬಾದ್ (ಪಿಟಿಐ): ನಗರದಲ್ಲಿ ಸೋಮವಾರ ಬೆಳಿಗ್ಗೆ ಕೆಲವು ಅಪರಿಚಿತ ವ್ಯಕ್ತಿಗಳು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆಗೆ ಹಾನಿ ಮಾಡಿದ್ದಾರೆ.

ಸಿಸಿಟಿವಿ ದೃಶ್ಯಾವಳಿ ಆಧರಿಸಿ ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಆರೋಪಿಗಳನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಅಹಮದಾಬಾದ್ ನಗರದ ಖೊಖ್ರಾ ಪ್ರದೇಶದಲ್ಲಿರುವ ಕೆ.ಕೆ. ಶಾಸ್ತ್ರಿ ಕಾಲೇಜು ಮುಂಭಾಗದಲ್ಲಿದ್ದ ಅಂಬೇಡ್ಕರ್ ಪ್ರತಿಮೆಯ ಮೂಗು, ಕನ್ನಡಕವನ್ನು ಹಾನಿಗೊಳಿಸಲಾಗಿದೆ’ ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಎನ್.ಕೆ. ರಬಾರಿ ತಿಳಿಸಿದ್ದಾರೆ.

ರಾಷ್ಟ್ರೀಯ ಬ್ಯಾಡ್ಮಿಂಟನ್: ಫೈನಲ್‌ಗೆ ಮಿಥುನ್

ಸತೀಶ್‌ಕುಮಾರ್‌ಗೆ ರಘು ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎಂ. ರಘು ಅವರು 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಸತೀಶ್ ಕುಮಾರ್ ಕೆ. ಅವರಿಗೆ ಆಘಾತ ನೀಡಿ ಫೈನಲ್ ಪ್ರವೇಶಿಸಿದರು. ರಾಜ್ಯದ ಮತ್ತೊಬ್ಬ ಆಟಗಾರ ಮಿಥುನ್ ಮಂಜುನಾಥ್ ಅವರೂ ಫೈನಲ್ ತಲುಪಿದ್ದು ಪ್ರಶಸ್ತಿ ಆತಿಥೇಯ ರಾಜ್ಯದ ಪಾಲಾಗಲಿದೆ.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಸಭಾಂಗಣದಲ್ಲಿ ಸೋಮವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ಶ್ರೇಯಾಂಕರಹಿತ ಆಟಗಾರ ರಘು 21-17, 21-17ರಲ್ಲಿ ಗುವಾಹಟಿಮಾಸ್ಟರ್ ವಿಜೇತ ಸತೀಶ್ (ತಮಿಳುನಾಡು) ಅವರನ್ನು ಹಿಮ್ಮೆಟ್ಟಿಸಿದರು. ಮಾಜಿ ಚಾಂಪಿಯನ್ ಮಿಥುನ್ 21-15, 21-13ರಿಂದ ರೋನಕ್ ಚೌಹಾನ್ (ಛತ್ತೀಸಗಢ) ಅವರನ್ನು ಸೋಲಿಸಿದರು.

ಮಹಿಳೆಯರ ಸಿಂಗಲ್ಸ್‌ನಫೈನಲ್‌ನಲ್ಲಿ 13ನೇ ಶ್ರೇಯಾಂಕದ ದೇವಿಕಾ ಸಿಹಾಗ್ (ಹರಿಯಾಣ) ಅವರು 12ನೇ ಶ್ರೇಯಾಂಕಿತೆ ಶ್ರೀಯಾನ್ಶಿ ವಲಿಶೆಟ್ಟಿ (ತೆಲಂಗಾಣ) ವಿರುದ್ಧ ಸೆಣಸಲಿದ್ದಾರೆ. ದೇವಿಕಾ 21-13, 21-10ರಿಂದಆದ-ರ್ಶಿಶ್ರೀ ಎನ್.ಬಿ (ತಮಿಳುನಾಡು) ವಿರುದ್ಧ ಗೆಲುವು ಸಾಧಿಸಿದರೆ, ಶ್ರೀಯಾನ್ಶಿ 25-23, 21-13ರಿಂದ ತಸ್ನಿಂ ಮಿರ್ (ಗುಜರಾತ್) ಅವರನ್ನು ಮಣಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಶ್ರುತಿ ಮಿಶ್ರಾ ಮತ್ತು ಪ್ರಿಯಾ ದೇವಿ ಕೊಂಜೆಂಗ್‌ಬಾಮ್ ಜೋಡಿಯು ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಆರತಿ ಸಾರಾ ಸುನಿಲ್ (ಕೇರಳ) ಮತ್ತು ವರ್ಷಿಣಿ ವಿ.ಎಸ್ (ತಮಿಳುನಾಡು) ಅವರನ್ನು ಎದುರಿಸಲಿದೆ.

ಆಯುಷ್ ಅಗರವಾಲ್ ಅವರೊಂದಿಗೆ ಮಿಶ್ರ ಡಬಲ್ಸ್‌ನಲ್ಲೂ ಫೈನಲ್ ತಲುಪಿರುವ ಶ್ರುತಿ ಡಬಲ್ ಪ್ರಶಸ್ತಿಯ ಹೊಸ್ತಿಲಲ್ಲಿದ್ದಾರೆ. ಆಯುಷ್– ಶ್ರುತಿ ಜೋಡಿಯು 21-16, 21-19ರಿಂದ ಶಿವಂ ಶರ್ಮಾ ಮತ್ತು ಪೂರ್ವಿಶಾಎಸ್ ರಾಮ್ ಅವರನ್ನು ಸೋಲಿಸಿತುಫೈನಲ್‌ನಲ್ಲಿ ರೋಹನ್ ಕಪೂರ್ ಮತ್ತು ರುತ್ವಿಕಾ ಶಿವಾನಿ ಅವರನ್ನು ಎದುರಿಸಲಿದೆ.

ಪುರುಷರ ಡಬಲ್ಸ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದನವೀನ್ಪಿ.ಮತ್ತು ಲೋಕೇಶ್ ವಿ. ಜೋಡಿ ಯುಅರ್ಶ್ ಮೊಹಮ್ಮದ್ ಮತ್ತು ಸಂಸ್ಕರ್ಸಾರಸ್ವತ್ ಅವರೊಂದಿಗೆ ಮುಖಾಮುಖಿಯಾಗಲಿದೆ.

ಮಿಥುನ್ ಆಟದ ವೈಖರಿ ಪ್ರಜಾವಾಣಿ ಚಿತ್ರ/ಕೃಷ್ಣ ಕುಮಾರ್ ಪಿ.ಎಸ್.

ಕೆನಡಾದಲ್ಲಿ ಐಎಂ ಆದ ಆರನ್

ಬೆಂಗಳೂರು: ಮಂಗಳೂರಿನ ಚೆಸ್ ಪ್ರತಿಭೆ ಆರನ್ ರೀವ್ಸ್ ಮೆಂಡಿಸ್ ಅವರು ಕೆನಡಾದ ಅತಿ ಕಿರಿಯ ಇಂಟರ್‌ನ್ಯಾಷನಲ್ ಮಾಸ್ಟರ್ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಕೆನಡಾವನ್ನು ಪ್ರತಿನಿಧಿಸುತ್ತಿರುವ 12 ವರ್ಷ ವಯಸ್ಸಿನ ಆರನ್ ಅವರು ಸೋಮವಾರ ‘ನಾರ್ತ್ ಅಮೆರಿಕನ್ ಯೂತ್ ಚೆಸ್ ಚಾಂಪಿಯನ್‌ಷಿಪ್’ನಲ್ಲಿ ಪ್ರಶಸ್ತಿ ಗೆಲ್ಲುವ ಮೂಲಕ ಈ ಸಾಧನೆಗೆ ಪಾತ್ರರಾದರು.

ಮಂಗಳೂರಿನಲ್ಲಿ ಡೆರೆಕ್ ಚೆಸ್ ಸ್ಕೂಲ್‌ನಲ್ಲಿ ಡೆರೆಕ್ ಪಿಂಟೊ ಮತ್ತು ಪ್ರಸನ್ನ ರಾವ್ ಅವರಿಂದ ಚೆಸ್ ಕಲಿತಿದ್ದ ಆರನ್ ಅವರು ನಾಲ್ಕು ವರ್ಷಗಳಿಂದ ಶಿವಮೊಗ್ಗದ ಗ್ರ್ಯಾಂಡ್‌ಮಾಸ್ಟರ್ ಜಿ.ಎ.ಸ್ಟಾನಿ ಅವರಿಂದ ತರಬೇತಿ ಪಡೆದಿದ್ದರು. ಪ್ರಸ್ತುತ ಗ್ರ್ಯಾಂಡ್ ಮಾಸ್ಟರ್ ಗಳಾದ ಸ್ವಯಾಂಶು ಮಿಶ್ರಾ ಮತ್ತು ಅರ್ಜುನ್ ಕಲ್ಯಾಣ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

ಅವರು ಒಟ್ಟಾರೆ ವಿಶ್ವದ 11ನೇ ಅತಿ ಕಿರಿಯ ಐಎಂ ಎನಿಸಿದ್ದಾರೆ.

ಅಲ್ಲು ಬಂಧನ ಪ್ರಕರಣ: ರಾಜಕೀಯವಾಗಿ ಬಳಸಿಕೊಳ್ಳಲು ಹವಣಿಕೆ

ಟಾಲಿವುಡ್ ಸೆಳೆಯಲು ಬಿಜೆಪಿ ಯತ್ನ

ಪ್ರಜಾವಾಣಿ ವಾರ್ತೆ

ಅಲ್ಲು ಅರ್ಜುನ್

ಹೈದರಾಬಾದ್: ತೆಲಂಗಾಣ ರಾಜಕೀಯ ದಲ್ಲಿ ಗಟ್ಟಿಯಾಗಿ ಬೇರೂರಲು ಯತ್ನಿಸು ತ್ತಿರುವ ಬಿಜೆಪಿಯು ‘ಪುಷ್ಪ–2’ ಚಿತ್ರದ ನಟ ಅಲ್ಲು ಅರ್ಜುನ್ ಅವರ ಬಂಧನ ಪ್ರಕರಣ ಬಳಿಕ ರಾಜ್ಯದಲ್ಲಿ ಉಂಟಾಗಿರುವ ರಾಜಕೀಯ ಗದ್ದಲದ ಲಾಭ ಪಡೆಯಲು ಯತ್ನಿಸು ತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಚಿತ್ರ ತಾರೆಯರ ವರ್ಚಸ್ಸಿನ ಅನುಕೂಲ ಪಡೆಯುವುದಕ್ಕಾಗಿ ‘ಟಾಲಿವುಡ್’ ಪರವಾಗಿ ಮಾತನಾಡುತ್ತಿದೆ.

‘ಪುಷ್ಪ’ ಸಿನಿಮಾ ಮೂಲಕ ದೇಶದಾದ್ಯಂತ ಖ್ಯಾತಿ ಗಳಿಸಿರುವ ಅಲ್ಲು ಅರ್ಜುನ್ ಅವರನ್ನು ಸೆಳೆಯಲು ಬಿಜೆಪಿಯು ಹವಣಿಸುತ್ತಿದೆ. ಪುಷ್ಪ–2 ಸಿನಿಮಾವು ಹಿಂದಿ ಭಾಷಿಕ ಪ್ರದೇಶಗಳಲ್ಲಿ ಅದರಲ್ಲೂ ಬಿಹಾರದಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಕಂಡಿದೆ. ಪುಷ್ಪ–1 ಯಶಸ್ಸಿನ ನಂತರ ಪುಷ್ಪ–2 ಸಿನಿಮಾದ ಪ್ರಿ-ರಿಲೀಸ್ ಕಾರ್ಯಕ್ರಮವನ್ನೂ ಬಿಹಾರ ರಾಜಧಾನಿ ಪಟ್ನಾದಲ್ಲಿ ಆಯೋಜಿಸಲಾಗಿತ್ತು.

ಚಿತ್ರ ತಾರೆಯರ ವರ್ಚಸ್ಸಿನಿಂದ ಲಭಿಸುವ ರಾಜಕೀಯ ಲಾಭ ಎಷ್ಟು ಎಂಬುದು ಆಂಧ್ರ ಪ್ರದೇಶದಲ್ಲಿ ಬಿಜೆಪಿಗೆ ಈಗಾಗಲೇ ಅರಿವಿಗೆ ಬಂದಿದೆ. 2024ರ ಚುನಾವಣೆಯಲ್ಲಿ ಖ್ಯಾತ ನಟ ಪವನ್ ಕಲ್ಯಾಣ್ ನೇತೃತ್ವದ ಜನಸೇನಾ ಮತ್ತು ಟಿಡಿಪಿ ಜೊತೆ ಮೈತ್ರಿ ಸಾಧಿಸಿತ್ತು. ಸದ್ಯ ಜನಸೇನಾ ಪಕ್ಷವು ಟಿಡಿಪಿ ನೇತೃತ್ವದ ಎನ್‌ಡಿಎ ಸರ್ಕಾರದ ಭಾಗವಾಗಿದೆ.

ಇತ್ತೀಚೆಗೆ ನಡೆದ ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ, ಪವನ್ ಕಲ್ಯಾಣ್ ಅವರು ಬಿಜೆಪಿ ನೇತೃತ್ವದ ‘ಮಹಾಯುತಿ’ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದರು ಮತ್ತು ಜನರಿಂದ ಅಭೂತಪೂರ್ವ ಸ್ವಾಗತವನ್ನೂ ಪಡೆದಿದ್ದರು. ಹಲವು ನಟರು ರಾಜಕೀಯ ಪಕ್ಷಗಳ ಜೊತೆ ಸೇರಲು ಹಿಂದೇಟು ಹಾಕುತ್ತಿದ್ದರೆ, ಬಿಜೆಪಿ ಮಾತ್ರ ಚುನಾವಣೆ ಸಂದರ್ಭದಲ್ಲಿ ಚಿತ್ರ ತಾರೆಯರ ವರ್ಚಸ್ಸಿನ ಸದ್ಬಳಕೆಯ ಲೆಕ್ಕಾಚಾರದಲ್ಲಿರುತ್ತದೆ.

ಕಳೆದ ವರ್ಷದ ವಿಧಾನಸಭೆ ಚುನಾವಣೆ ಮತ್ತು ಈ ವರ್ಷ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಗಮನಾರ್ಹ ಏಳಿಗೆ ಕಂಡಿರುವ ಪಕ್ಷವು ತೆಲಂಗಾಣದಲ್ಲಿ ತನ್ನ ರಾಜಕೀಯ ವ್ಯಾಪ್ತಿ ವಿಸ್ತರಣೆಗೆ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ.

ತೆಲುಗು ನಟ ಅಕ್ಕಿನೇನಿ ನಾಗಾರ್ಜುನ ಅವರ ಮಾಲೀಕತ್ವದ ಎನ್-ಕನ್ವೆನ್ಷನ್ ಸೆಂಟರ್ ಅನ್ನು ಕೆರೆ ಒತ್ತುವರಿ ಜಾಗದಲ್ಲಿ ನಿರ್ಮಿಸಲಾಗಿದೆ ಎಂಬ ಆರೋಪದ ಮೇಲೆ ರೇವಂತ್ ರೆಡ್ಡಿ ನೇತೃತ್ವದ ಸರ್ಕಾರ ನೆಲಸಮಗೊಳಿಸಿದ ನಂತರ ಟಾಲಿವುಡ್ ಜತೆಗೆ ಸಂಘರ್ಷ ಆರಂಭವಾಗಿತ್ತು. ಕಾಂಗ್ರೆಸ್ ಸಚಿವೆ ಕೊಂಡಾ ಸುರೇಖಾ ಅವರು ನಾಗಾರ್ಜುನ ಕುಟುಂಬದ ವಿರುದ್ಧ ಹೇಳಿಕೆ ನೀಡಿದ ನಂತರ ಅದು ಮತ್ತಷ್ಟು ಬಿಗಡಾಯಿಸಿದೆ.

ಈ ಮಧ್ಯೆ ಕಾಂಗ್ರೆಸ್ ಸರ್ಕಾರವು ಸಿನಿಮಾ ಕ್ಷೇತ್ರವನ್ನು ಗುರಿಯಾಗಿಸಿದೆ ಎಂದು ಬಂಡಿ ಸಂಜಯ್ ಆರೋಪಿಸಿದ್ದಾರೆ. ‘ಕಾಲ್ತುಳಿತದಲ್ಲಿ ಮಹಿಳೆ ಮೃತಪಟ್ಟಿರುವುದನ್ನು ಪ್ರತಿಯೊಬ್ಬರೂ ಖಂಡಿಸುತ್ತಾರೆ ಮತ್ತು ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಆಶಿಸುತ್ತಾರೆ. ಆದರೆ ಎಐಎಂಐಎಂ ಸದಸ್ಯರೊಬ್ಬರು ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ನೀಡುವ ಮೂಲಕ ಮತ್ತೊಂದು ಸಮಸ್ಯೆ ಸೃಷ್ಟಿಸಿರುವುದು ನಾಚಿಕೆಗೇಡು. ಕಾಂಗ್ರೆಸ್ ಸರ್ಕಾರವು ಎಐಎಂಐಎಂ ಜತೆ ಸೇರಿ ಸಿನಿಮಾ ಕ್ಷೇತ್ರವನ್ನು ಮುಗಿಸಲು ಪಿತೂರಿ ನಡೆಸುತ್ತಿದೆ’ ಎಂದು ಹೇಳಿದ್ದಾರೆ.

6 ಮಂದಿಗೆ ಜಾಮೀನು

ಅಲ್ಲು ಅರ್ಜುನ್ ಅವರ ನಿವಾಸದ ಮೇಲೆ ದಾಳಿ ನಡೆಸಿದ ಪ್ರಕರಣದಲ್ಲಿ ಬಂಧಿಸಿದ್ದ ಆರು ಮಂದಿಗೆ ಸ್ಥಳೀಯ ನ್ಯಾಯಾಲಯ ಸೋಮವಾರ ಜಾಮೀನು ಮಂಜೂರು ಮಾಡಿದೆ. ಈ ಆರು ಮಂದಿ ತಾವು ಉಸ್ಮಾನಿಯಾ ವಿಶ್ವವಿದ್ಯಾಲಯದ ಜಂಟಿ ಕ್ರಿಯಾ ಸಮಿತಿಯ ಸದಸ್ಯರು ಎಂದು ಹೇಳಿಕೊಂಡಿದ್ದರು. ಅಲ್ಲು ಅವರ ಮನೆಯ ಮೇಲೆ ಟೊಮೆಟೊ ಎಸೆದು, ಹೂಕುಂಡಗಳನ್ನು ಧ್ವಂಸ ಮಾಡಿದ್ದರು.

ಜ.17ರಿಂದ 23ರವರೆಗೆ ‘ಕರ್ನಾಟಕ ಕ್ರೀಡಾಕೂಟ’

ಬೆಂಗಳೂರು: ‘ಕರ್ನಾಟಕ ಕ್ರೀಡಾಕೂಟ-2025’ ಅನ್ನು ವ್ಯವಸ್ಥಿತವಾಗಿ ಆಯೋಜಿಸಲು ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಮಂಗಳೂರು ಮತ್ತು ಉಡುಪಿ ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಕ್ರೀಡಾಕೂಟದ ಸಂಘಟನಾ ಸಮಿತಿಯ ಸಭೆ ಮುಖ್ಯಮಂತ್ರಿಯ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ನಡೆಯಿತು. ಇದೇ ಸಂದರ್ಭದಲ್ಲಿ ಕ್ರೀಡಾಕೂಟದ ಲಾಂಛನವನ್ನು ಮುಖ್ಯಮಂತ್ರಿ ಬಿಡುಗಡೆ ಮಾಡಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾಡಳಿತದ ಸಹಯೋಗದಲ್ಲಿ ಜ. 17ರಿಂದ 23ರವರೆಗೆ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ಕ್ರೀಡಾಕೂಟ ನಡೆಯಲಿದೆ. ಜ. 17ರಂದು ಮಂಗಳೂರಿನಲ್ಲಿ ಮುಖ್ಯಮಂತ್ರಿ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದಾರೆ. ಸಮಾರೋಪ ಸಮಾರಂಭ ಉಡುಪಿ ಜಿಲ್ಲೆಯಲ್ಲಿ ನಡೆಯಲಿದ್ದು, ಗೃಹ ಸಚಿವರು ಭಾಗಿಯಾಗಲಿದ್ದಾರೆ. ಸುಮಾರು 25 ವಿವಿಧ ಕ್ರೀಡೆ–ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಮಂಗಳೂರಿನಲ್ಲಿ 12 ಹಾಗೂ ಉಡುಪಿ–ಮಣಿಪಾಲದಲ್ಲಿ 11 ಕ್ರೀಡೆ–ಸ್ಪರ್ಧೆಗಳು ನಡೆಯಲಿವೆ. ಶೂಟಿಂಗ್ ಮತ್ತು ಜಿಮ್ನಾಸ್ಟಿಕ್ಸ್ ಸ್ಪರ್ಧೆಗಳು ಬೆಂಗಳೂರಿನಲ್ಲಿ ನಡೆಯಲಿವೆ.

‘3,750 ಕ್ರೀಡಾಪಟುಗಳು, 750 ತಾಂತ್ರಿಕ ಅಧಿಕಾರಿಗಳು ಮತ್ತು ಸಂಘಟಕರು ಸೇರಿದಂತೆ ಅಂದಾಜು 4,500 ಜನರು ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಊಟ-ತಿಂಡಿ, ವಸತಿ, ಸಾರಿಗೆ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು’ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

ಚೌಬೆ ವಿರುದ್ಧ ದೂರು

ತಿರುವನಂತಪುರಂ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅಧ್ಯಕ್ಷ ಕಲ್ಯಾಣ್ ಚೌಬೆ ಅವರು ಅನೈತಿಕ ವ್ಯವಹಾರಗಳ ಮೂಲಕ ಮಂಡಳಿಗೆ ಆರ್ಥಿಕ ನಷ್ಟ ಉಂಟುಮಾಡಿದ್ದಾರೆಂದು ಆರೋಪಿಸಿ ಫೆಡರೇಷನ್‌ನ ಮಾಜಿ ಕಾರ್ಯದರ್ಶಿ ಶಾಜಿ ಪ್ರಭಾಕರನ್ ಅವರು ಎಐಎಫ್‌ಎಫ್ ಎಥಿಕಲ್ ಕಮಿಟಿ, ಏಷ್ಯನ್ ಫುಟ್‌ಬಾಲ್ ಒಕ್ಕೂಟ ಮತ್ತು ಫಿಫಾಕ್ಕೆ ದೂರು ನೀಡಿದ್ದಾರೆ.

ಚೌಬೆ ಅವರು ಸ್ವಜನಪಕ್ಷಪಾತ ಮತ್ತು ಫಿಫಾ ಹೆಸರನ್ನು ಅದರ ಅನುಮತಿ ಪಡೆಯದೇ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಭಾನುವಾರ ಸಲ್ಲಿಸಿರುವ ದೂರಿನಲ್ಲಿ ಶಾಜಿ ಆರೋಪಿಸಿದ್ದಾರೆ.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ, ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಮತ್ತು ಪೊಸಿಡೆಕ್ಸ್ ಟೆಕ್ನಾಲಜೀಸ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕ ವೆಂಕಟದತ್ತ ಸಾಯಿ ಅವರ ಮದುವೆ ಭಾನುವಾರ ಉದಯಪುರದಲ್ಲಿ ನಡೆಯಿತು –ಎಕ್ಸ್ ಚಿತ್ರ

ಕಬಡ್ಡಿ: ಸೆಮಿಗೆ ದಬಾಂಗ್ ಡೆಲ್ಲಿ

ಪುಣೆ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ದಬಾಂಗ್ ಡೆಲ್ಲಿ ಕೆ.ಸಿ. 41–35 ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸೋಲಿಸಿ ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯಲ್ಲಿ ಎರಡನೇ ಸೆಮಿಫೈನಲ್ ಸ್ಥಾನವನ್ನು ಖಚಿತಪಡಿಸಿಕೊಂಡಿತು.

ಸೀಸನ್ ಎಂಟರ ಚಾಂಪಿಯನ್ ಆಗಿದ್ದ ಡೆಲ್ಲಿ ತನ್ನ ಅಜೇಯ ಓಟವನ್ನು 15 ಪಂದ್ಯಗಳಿಗೇರಿಸಿತು. ಇದು ಪ್ರೊ ಕಬಡ್ಡಿ ಲೀಗ್‌ನಲ್ಲೇ ದಾಖಲೆಯಾಗಿದೆ. ತಂಡ 22 ಪಂದ್ಯಗಳಿಂದ 81 ಪಾಯಿಂಟ್ ಗಳಿಸಿ ಲೀಗ್ ವ್ಯವಹಾರ ಮುಗಿಸಿತು. ಹರಿಯಾಣ ಸ್ಟೀಲರ್ಸ್ ಈ ಮೊದಲೇ 84 ಅಂಕಗಳೊಡನೆ ಮೊದಲ ಸ್ಥಾನ ಖಚಿತಪಡಿಸಿಕೊಂಡಿತ್ತು.

ಆಶು ಮಲಿಕ್ 14 ಅಂಕಗಳೊಂದಿಗೆ ಮತ್ತೊಮ್ಮೆ ಮಿಂಚಿದರು. ಇದು ಅವರಿಗೆ ಋತುವಿನ 18ನೇ ಸೂಪರ್ ಟೆನ್.

ಪುಣೇರಿ ಪಲ್ಟನ್ ದಿನದ ಎರಡನೇ ಪಂದ್ಯದಲ್ಲಿ 42–32 ರಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು.

ಶಿಷ್ಟಾಚಾರದ ಪಾಲನೆ: ಎಂಸಿಜಿ ಕ್ಯುರೇಟರ್ • ಅಭ್ಯಾಸದಿಂದ ದೂರ ಉಳಿದ ರೋಹಿತ್ ಪಡೆ

ತಾಲೀಮು ಪಿಚ್: ಭಾರತ ತಂಡ ಅತೃಪ್ತಿ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ಎದುರಿನ ನಾಲ್ಕನೇ ಟೆಸ್ಟ್‌ಗೆ ಸಿದ್ಧತೆ ನಡೆಸಲು ತಮಗೆ ಇಲ್ಲಿ ಒದಗಿಸಿರುವ ಪಿಚ್ ಬಗ್ಗೆ ಭಾರತ ತಂಡ ಅತೃಪ್ತಿ ವ್ಯಕ್ತಪಡಿಸಿದೆ. ಇಲ್ಲಿನ ಪಿಚ್‌ನಲ್ಲಿ ಅಸಮಾನ ಬೌನ್ಸ್‌ನಿಂದಾಗಿ ರೋಹಿತ್ ಶರ್ಮಾ ಅವರ ಎಡ ಮೊಣಕಾಲಿಗೆ ಚೆಂಡುಬಡಿದಿತ್ತು.

ಆದರೆ ಎಂಸಿಜಿ ಕ್ಯುರೇಟರ್ ಮ್ಯಾಟ್ ಪೇಜ್ ಅವರು ತಾಲೀಮಿಗೆ ನೀಡಲಾಗಿದ್ದ ಪಿಚ್ ಗುಣಮಟ್ಟ ಸಮರ್ಥಿಸಿಕೊಂಡಿದ್ದು, 'ಶಿಷ್ಟಾಚಾರ ಅನುಸರಿಸಲಾಗಿದೆ' ಎಂದು ಹೇಳಿದ್ದಾರೆ. ಬಾಕ್ಸಿಂಗ್ ಡೇ (ಡಿಸೆಂಬರ್ 26) ದಿನ ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ (ಎಂಜಿಸಿ) ಪಂದ್ಯ ಆರಂಭವಾಗಲಿವದೆ.

ನೆರವು ಸಿಬ್ಬಂದಿ ತಂಡದಲ್ಲಿದ್ದ ಥ್ರೋಡೌನ್ ಪರಿಣತ ದಯಾನಂದ ಗಾಂಧಿ ಭಾನುವಾರ ಅಭ್ಯಾಸದ ವೇಳೆ ಎಸೆದ ಚೆಂಡನ್ನು ಆಡುವಾಗ ಅದು ರೋಹಿತ್ ಮೊಣಕಾಲಿಗೆ ಬಡಿದು ಆ ಭಾಗ ಸ್ವಲ್ಪ ಊದಿಕೊಂಡಿತ್ತು. ವೇಗಿ ಆಕಾಶ್ ದೀಪ್ ಕೈಗೂ ಗಾಯವಾಗಿತ್ತು. ರೋಹಿತ್ ಅವರ ಕಾಲಿಗೆ ಐಸ್‌ಪ್ಯಾಕ್ ಇಟ್ಟು ನೋವು ಚಿಕಿತ್ಸೆ ನೀಡಲಾಯಿತು.

ತಂಡ ಸೋಮವಾರ ಅಭ್ಯಾಸದಿಂದ ದೂರವುಳಿಯಿತು.

ಪಿಚ್‌ನ ಅಸಮಾನ ಪುಟಿತವೇ ಗಾಯಗೊಳ್ಳಲು ಕಾರಣ ಎಂದು ತಂಡದ ಚಿಂತಕರ ಚಾವಡಿ ಅಭಿಪ್ರಾಯಕ್ಕೆ ಬಂದಿದೆ. ಭಾರತ ಎರಡು ತಿಂಗಳ ಮೊದಲೇ ತಾಲೀಮಿನ ವೇಳಾಪಟ್ಟಿ ಸಿದ್ಧಪಡಿಸಿ ಕಳುಹಿಸಿತ್ತು. ಆದರೆ ಎಂಸಿಜಿ ಕ್ಯುರೇಟರ್ ಅವರು ಪ್ರಮಾಣಿತ ಕಾರ್ಯಾಚರಣೆ ವಿಧಾನಕ್ಕೆ ಬದ್ಧರಾಗಿ ಕೇವಲ ಮೂರು ದಿನ ಮೊದಲು ನೂತನ ಪ್ರಾಕ್ಟೀಸ್ ಪಿಚ್ ಒದಗಿಸಲು ನಿರ್ಧರಿಸಿದರು.

'ಪಂದ್ಯಕ್ಕೆ ಮೂರು ದಿನ ಮೊದಲು ಪಿಚ್ ಸಿದ್ಧಪಡಿಸುವುದು ಸಂಪ್ರದಾಯ. ಪ್ರವಾಸಿ ತಂಡ ಅದಕ್ಕೆ ಮೊದಲೇ ಬಂದರೆ, ಅವರು ಈಗಾಗಲೇ ಇರುವ ಪಿಚ್‌ನಲ್ಲಿ ಆಡಬೇಕಾಗುತ್ತದೆ' ಎಂದು ಪೇಜ್ ಅವರು ಮಾಧ್ಯಮದವರಿಗೆ ತಿಳಿಸಿದ್ದಾರೆ.

'ತಾಜಾ ಪಿಚ್‌ಗಳನ್ನು ಸಿದ್ಧಪಡಿಸಲಾಗಿದ್ದು ಸೋಮವಾರದಿಂದ ಬಳಸಲು ಅವಕಾಶವಿದೆ. ಇದು ಟೆಸ್ಟ್ ಪಂದ್ಯಕ್ಕೆಂದು ಸಿದ್ದಪಡಿಸಿರುವ ಪಿಚ್‌ಗಳ ರೀತಿಯಲ್ಲಿದೆ' ಎಂದು ಸಮರ್ಥಿಸಿಕೊಂಡರು.

ನೆಟ್ ಅಭ್ಯಾಸದಲ್ಲಿ ಆಸ್ಟ್ರೇಲಿಯಾ ತಂಡದ ಬ್ಯಾಟರ್ ಮಿಚೆಲ್ ಮಾರ್ಷ್ ಕಾಣಿಸಿಕೊಂಡಿದ್ದು ಹೀಗೆ –ಎಎಫ್‌ಪಿ ಚಿತ್ರ

ನಿವೃತ್ತ ಅಶ್ವಿನ್ ಜಾಗಕ್ಕೆ ಕೋಟ್ಯಾನ್

ಮೆಲ್ಬರ್ನ್ (ಪಿಟಿಐ): ಇತ್ತೀಚೆಗೆ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರ ಸ್ಥಾನದಲ್ಲಿ ಮುಂಬೈ ಆಫ್ ಸ್ಪಿನ್ನರ್ ತನುಷ್ ಕೋಟ್ಯಾನ್ ಅವರು ಭಾರತ ತಂಡವನ್ನು ಸೇರಿಕೊಳ್ಳಲಿದ್ದಾರೆ.

ತನುಷ್ ಕೋಟ್ಯಾನ್

26 ವರ್ಷ ಪ್ರಾಯದ ತನುಷ್ ಅವರು ಇತ್ತೀಚೆಗೆ ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿದ್ದ ಭಾರತ ಎ ತಂಡದಲ್ಲಿದ್ದರು. ವಾಷಿಂಗ್ಟನ್ ಸುಂದರ್ ಅವರಿಗೆ ಬ್ಯಾಕಪ್ ಆಗಿ ತನುಷ್ ತಂಡವನ್ನು ಸೇರಿಕೊಳ್ಳಲಿದ್ದಾರೆ.

'ಮುಂಜಾಗ್ರತಾ ಕ್ರಮವಾಗಿ ಕೋಟ್ಯಾನ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಲಾಗಿದೆ. ವಾಷಿ (ವಾಷಿಂಗ್ಟನ್ ಸುಂದರ್) ಅಥವಾ ಜಡ್ಡು (ರವೀಂದ್ರ ಜಡೇಜ) ಗಾಯಾಳಾದಲ್ಲಿ ಮಾತ್ರ ಅವರು ಅವಕಾಶ ಪಡೆಯಲಿದ್ದಾರೆ' ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ತನುಷ್ ಕೋಟ್ಯಾನ್ ಅವರು ಮಂಗಳವಾರ ಬೆಳಿಗ್ಗೆ ಮುಂಬೈನಿಂದ ಪ್ರಯಾಣ ಬೆಳೆಸುವ ನಿರೀಕ್ಷೆಯಿದೆ. ಸೋಮವಾರ ಹೈದರಾಬಾದ್ ವಿರುದ್ಧ ನಡೆದ ಪಂದ್ಯದಲ್ಲಿ ಅವರು ಎರಡು ವಿಕೆಟ್‌ಗಳ ಜೊತೆ ಅಜೇಯ 39 ರನ್ ಬಾರಿಸಿದ್ದರು.

33 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅವರು 101 ವಿಕೆಟ್ ಮತ್ತು 1525 ರನ್ ಗಳಿಸಿದ್ದಾರೆ. ಎರಡು ಶತಕಗಳು ಇದರಲ್ಲಿ ಸೇರಿವೆ.

'ವೇಗದ ಬೌಲರ್‌ಗಳಿಗೆ ನೆರವು'

ಮೆಲ್ಬರ್ನ್ ಕ್ರಿಕೆಟ್ ಗ್ರೌಂಡ್‌ನ (ಎಂಸಿಜಿ) ಪಿಚ್ ಪರ್ತ್‌ನ ರೀತಿ ಬೌನ್ಸ್ ಆಗಲಿ, ಬ್ರಿಸ್ಬೇನ್ ಗ್ಯಾಬಾದ ರೀತಿ ಸೀಮ್ ಮೂವ್‌ಮೆಂಟ್ ಆಗಲಿ ಹೊಂದಿಲ್ಲ. ಆದರೆ ಈ ಪಿಚ್ ಕೂಡ ವೇಗದ ಬೌಲರ್ ಸ್ನೇಹಿಯಾಗಿದೆ ಎಂದು ಕ್ಯುರೇಟರ್ ಮ್ಯಾಟ್ ಪೇಜ್ ತಿಳಿಸಿದ್ದಾರೆ.

ಪಿಚ್‌ನಲ್ಲಿ 6 ಮಿಲಿಮೀಟರ್‌ನಷ್ಟು ಹುಲ್ಲು ಉಳಿಸಲಾಗಿದೆ. ಪಿಚ್ ಸ್ಪಿನ್ನರ್‌ಗಳಿಗೆ ನೆರವಾಗುವ ರೀತಿ ಬಿರುಕು ಬಿಡುವುದಿಲ್ಲ ಎಂದು ಪೇಜ್ ಹೇಳಿದ್ದಾರೆ.

'ಏಳು ವರ್ಷಗಳ ಹಿಂದೆ ಪಿಚ್ ಸ್ವಲ್ಪ ಸಪಾಟಾಗಿತ್ತು. 2017ರಲ್ಲಿ ಪಿಚ್‌ಅನ್ನು ಬೌಲರ್‌ಸ್ನೇಹಿ ಆಗಿಸಲು ನಿರ್ಧರಿಸಿದೆವು. ಪಂದ್ಯ ಕುತೂಹಲಕರವಾಗಿಸಲು ನಾವು ಬಯಸಿದೆವು. ಹೀಗಾಗಿ ಸ್ವಲ್ಪ ಹೆಚ್ಚು ಹುಲ್ಲು ಇರುವಂತೆ ನೋಡಿಕೊಂಡಿದ್ದೇವೆ. ಬೌಲರ್‌ಗಳಿಗೂ ಇದರಿಂದ ಅನುಕೂಲವಾಗುತ್ತದೆ' ಎಂದರು.

ಪೇಜ್

ಹೊಸಚೆಂಡು ಹೊಳಪು ಕಳೆದುಕೊಳ್ಳತೊಡಗಿದ ಬಳಿಕ ಬ್ಯಾಟರ್‌ಗಳಿಗೂ ನೆರವು ಸಿಗಬಹುದು ಎಂದು ವಿವರಿಸಿದರು.

ಬೌಲರ್‌ಗಳಿಗೆ ಮೇಲುಗೈ ಸಾಧಿಸಲು ಅವಕಾಶವಿದೆ. ಆದರೆ ಚೆನ್ನಾಗಿ ಆಡಿದರೆ ಬ್ಯಾಟರ್‌ಗಳೂ ಮಿಂಚಬಹುದು' ಎಂದರು.

ಜಸ್‌ಪ್ರೀತ್ ಬೂಮ್ರಾ ಅವರಿಗೆ ಅನುಕೂಲ ಆಗಬಹುದೇ ಎಂಬ ಪ್ರಶ್ನೆಗೆ 'ಎಲ್ಲ ವೇಗದ ಬೌಲರ್‌ಗಳಿಗೂ ಅಷ್ಟೇ ನೆರವು ಸಿಗಲಿದೆ. ಪರ್ತ್ ಅಥವಾ ಬ್ರಿಸ್ಬೇನ್‌ನಷ್ಟು ವೇಗ ಸಿಗಲಿಕ್ಕಿಲ್ಲ. ಆದರೆ ವೇಗ ಇರುವಂತೆ ನೋಡಿಕೊಂಡಿದ್ದೇವೆ' ಎಂದರು. ಆಸ್ಟ್ರೇಲಿಯಾದ ಪ್ರತಿ ಪಿಚ್ ಕೂಡ ಭಿನ್ನಗುಣಗಳನ್ನು ಹೊಂದಿದೆ. ಇದು ಕೂಡ ಭಿನ್ನ ಸ್ವರೂಪ ಹೊಂದಿದೆ' ಎಂದರು.

ಉಳಿದೆರಡು ಟೆಸ್ಟ್‌ಗೂ ಶಮಿ ಅಲಭ್ಯ

ನವದೆಹಲಿ (ಪಿಟಿಐ): ಭಾರತದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಪೂರ್ಣಪ್ರಮಾಣದಲ್ಲಿ ಫಿಟ್ನೆಸ್ ಪಡೆಯದ ಕಾರಣ ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯ ಕೊನೆಯ ಎರಡು ಪಂದ್ಯಗಳಿಗೂ ಅಲಭ್ಯರಾಗಿದ್ದಾರೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸೋಮವಾರ ತಿಳಿಸಿದೆ.

ಕಳೆದ ವರ್ಷದ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್‌ನಲ್ಲಿ ಶಮಿ ಅವರು ಕೊನೆಯ ಬಾರಿ ಭಾರತ ತಂಡಕ್ಕೆ ಆಡಿದ್ದರು. ಪಾದದ ಶಸ್ತ್ರಚಿಕಿತ್ಸೆ ನಂತರ ಚೇತರಿಸಿದ ಅವರು ಕಳೆದ ತಿಂಗಳು ರಣಜಿ ಟ್ರೋಫಿ ಪಂದ್ಯದಲ್ಲಿ ಮಧ್ಯಪ್ರದೇಶ ವಿರುದ್ಧ ಬಂಗಾಳ ತಂಡದಲ್ಲಿ ಆಡುವ ಮೂಲಕ ಪುನರಾಗಮನ ಮಾಡಿದ್ದರು. ರಣಜಿ ಪಂದ್ಯದಲ್ಲಿ ಅವರು 43 ಓವರ್ ಬೌಲಿಂಗ್ ಮಾಡಿದ್ದರು.

ಮೊಹಮದ್ ಶಮಿ

ಈ ಮಧ್ಯೆ ಅವರನ್ನು ಭಾರತ ತಂಡಕ್ಕೆ ಸೇರ್ಪಡೆ ಮಾಡಬೇಕೆಂಬ ಒತ್ತಡ ಹೆಚ್ಚಿತ್ತು.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯಲ್ಲಿ ಅವರು ಎಲ್ಲ 9 ಪಂದ್ಯಗಳಲ್ಲಿ ಆಡಿದ್ದರು. ವಿಜಯ್ ಹಜಾರೆ ಟ್ರೋಫಿಯಲ್ಲೂ 34 ವರ್ಷ ವಯಸ್ಸಿನ ಈ ಬೌಲರ್ ತಂಡದಲ್ಲಿ ಸ್ಥಾನ ಪಡೆದಿದ್ದರು. ಆದರೆ ಶನಿವಾರ ದೆಹಲಿ ವಿರುದ್ಧ ಮೊದಲ ಪಂದ್ಯ ಆಡಿರಲಿಲ್ಲ.

ಅವರ ಫಿಟ್ನೆಸ್ ಊಹಾಪೋಹಗಳಿಗೆ ಕಾರಣವಾಗಿತ್ತು. ಬ್ರಿಸ್ಬೇನ್ (3ನೇ) ಟೆಸ್ಟ್ ನಂತರ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಎನ್‌ಸಿಎದ ಫಿಜಿಯೊಗೆ ಕರೆಮಾಡಿ ಶಮಿ ಫಿಟ್ನೆಸ್ ವಿಷಯದಲ್ಲಿ ಸ್ಪಷ್ಟತೆ ನೀಡುವಂತೆ ಕೇಳಿದ್ದರು.

ಸೈಯದ್ ಮುಷ್ತಾಕ್ ಟ್ರೋಫಿ ಪಂದ್ಯಗಳನ್ನು ಆಡಿದ ನಂತರ ಅವರ ಪಾದಗಳಲ್ಲಿ ಊತ ಕಾಣಿಸುತಿತ್ತು. ಸೋಮವಾರ ಬಿಸಿಸಿಐ ಅಂತಿಮ ನಿರ್ಧಾರಕ್ಕೆ ಬಂದಿದ್ದು ಅವರನ್ನು ಹಾಲಿ ಸರಣಿಯಲ್ಲಿ ಆಡಿಸದಿರಲು ನಿರ್ಧರಿಸಿದೆ.

'ಶಮಿ ಅವರ ಈಗಿನ ಸ್ಥಿತಿಯ ಬಗ್ಗೆ ಮೌಲ್ಯಮಾಪನದ ಆಧಾರದಲ್ಲಿ ಅವರಿಗೆ ಬೌಲಿಂಗ್ ಭಾರ ಹೊರಲು ಇನ್ನೂ ಹೆಚ್ಚಿನ ಸಮಯ ತಗಲಬಹುದು ಎಂದು ಬಿಸಿಸಿಐನ ವೈದ್ಯಕೀಯ ತಂಡ ನಿರ್ಧಾರಕ್ಕೆ ಬಂದಿದೆ. ಇದರ ಆಧಾರದಲ್ಲಿ ಅವರು ಬಿಜಿಟಿ ಸರಣಿಯ ಉಳಿದ ಎರಡು ಪಂದ್ಯಗಳಿಗೆ ಫಿಟ್ ಆಗಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಶಮಿ 64 ಟೆಸ್ಟ್ ಪಂದ್ಯಗಳಲ್ಲಿ 229 ವಿಕೆಟ್‌ಗಳನ್ನು ಪಡೆದಿದ್ದಾರೆ. 101 ಏಕದಿನ ಪಂದ್ಯಗಳಲ್ಲಿ 195 ವಿಕೆಟ್ ಮತ್ತು 23 ಟಿ20 ಪಂದ್ಯಗಳಲ್ಲಿ 24 ವಿಕೆಟ್ ಗಳಿಸಿದ್ದಾರೆ.

ವಿಜಯ್ ಹಜಾರೆ: ವಿದ್ಯಾಧರಗೆ ನಾಲ್ಕು ವಿಕೆಟ್

ಸ್ಮರಣ್ ಶತಕ: ಕರ್ನಾಟಕಕ್ಕೆ ಗೆಲುವು

ಅಹಮದಾಬಾದ್ (ಪಿಟಿಐ): ಸ್ಮರಣ್ ಆರ್. (ಔಟಾಗದೇ 100; 87ಎ) ಅವರ ಭರ್ಜರಿ ಶತಕ ಮತ್ತು ವಿದ್ಯಾಧರ ಪಾಟೀಲ (27ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 3 ವಿಕೆಟ್‌ಗಳಿಂದ ಪುದುಚೇರಿ ತಂಡವನ್ನು ಮಣಿಸಿತು.

'ಸಿ' ಗುಂಪಿನ ಪಂದ್ಯದಲ್ಲಿ ಮಯಂಕ್ ಅಗರವಾಲ್ ಪಡೆಗೆ ಇದು ಎರಡನೇ ಗೆಲುವು. ಮೊದಲ ಪಂದ್ಯದಲ್ಲಿ ಬಲಿಷ್ಠ ಮುಂಬೈ ತಂಡಕ್ಕೆ ಆಘಾತ ನೀಡಿತ್ತು. ಕರ್ನಾಟಕ (+0.919) ಎಂಟು ಅಂಕಗಳೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ. ಅಷ್ಟೇ ಅಂಕ ಪಡೆದಿರುವ ಪಂಜಾಬ್ (+4.256) ಅಗ್ರಸ್ಥಾನದಲ್ಲಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ಪುದುಚೇರಿ ತಂಡಕ್ಕೆ ವಿದ್ಯಾಧರ ಆರಂ ಭದಲ್ಲೇ ಪೆಟ್ಟು ನೀಡಿದರು. ಹೀಗಾಗಿ, 31 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್ ಕಳೆದುಕೊಂಡು, ಅಲ್ಪ ಮೊತ್ತಕ್ಕೆ ಕುಸಿ ಯುವ ಆತಂಕದಲ್ಲಿತ್ತು.

ಈ ಹಂತದಲ್ಲಿ ನಾಯಕ ಅರುಣ್ ಕಾರ್ತಿಕ್ (71;106ಎ) ಮತ್ತು ಅಮನ್ ಹಕೀಮ್ ಖಾನ್ (45;65ಎ) ಅವರು ಆರನೇ ವಿಕೆಟ್‌ಗೆ 86 ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡಿದರು. ಕೊನೆಯಲ್ಲಿ ಸಾಗರ್ ಉದೇಶಿ (21) ಕೊಂಚ ಹೋರಾಟ ತೋರಿದರು. ಹೀಗಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗೆ 211 ರನ್ ಗಳಿಸಿತು. ಕರ್ನಾಟಕದ ಶ್ರೇಯಸ್ ಗೋಪಾಲ್ ಎರಡು ವಿಕೆಟ್ ಪಡೆದರು.

ಸ್ಮರಣ್ ಆರ್.

ಸುಲಭ ಗುರಿಯನ್ನು ಬೆನ್ನತ್ತಿದ ಕರ್ನಾಟಕ ತಂಡದ ಆರಂಭವೂ ಉತ್ತಮವಾಗಿರಲಿಲ್ಲ. 42 ರನ್ ಗಳಿಸುವಷ್ಟರಲ್ಲಿ ನಿಕಿನ್ ಜೋಸ್ (10) ಮತ್ತು ಮಯಂಕ್ (18) ಅವರನ್ನು ಕಳೆದುಕೊಂಡಿತು.

ನಂತರ ಬಂದ ಕೆ.ವಿ. ಅನೀಶ್ (15) ಹೆಚ್ಚು ಹೊತ್ತು ನಿಲ್ಲಲಿಲ್ಲ. ಹಿಂದಿನ ಪಂದ್ಯದಲ್ಲಿ ಅಜೇಯ ಶತಕಗಳಿಸಿ ಅಬ್ಬರಿಸಿದ್ದ ವಿಕೆಟ್ ಕೀಪರ್ ಕೆ.ಎಲ್. ಶ್ರೀಜಿತ್ (1) ನಿರಾಸೆ ಮೂಡಿಸಿದರು.

ಈ ಹಂತದಲ್ಲಿ ಸ್ಮರಣ್ ಜವಾಬ್ದಾರಿಯುತ ಆಟ ಪ್ರದರ್ಶಿಸಿದರು. ಅವರಿಗೆ ಶ್ರೇಯಸ್ ಗೋಪಾಲ್ (40;59ಎ) ಸಾಥ್ ನೀಡಿದರು. ಅವರಿಬ್ಬರು ಐದನೇ ವಿಕೆಟ್ ಜೊತೆಯಾಟದಲ್ಲಿ 113 ರನ್ ಸೇರಿಸಿ ತಂಡವನ್ನು ಜಯದತ್ತ ಕೊಂಡೊಯ್ದರು. ಕೊನೆಯಲ್ಲಿ 12 ರನ್ ಅಂತರದಲ್ಲಿ ಮತ್ತೆ ಮೂರು ವಿಕೆಟ್‌ಗಳು ಪತನಗೊಂಡು ಮತ್ತೆ ಆತಂಕ ಸೃಷ್ಟಿಯಾಯಿತು.

ಆದರೆ, ಮತ್ತೊಂದೆಡೆ ಸ್ಮರಣ್ ಗಟ್ಟಿಯಾಗಿ ನಿಂತು ತಂಡವನ್ನು ದಡ ಸೇರಿಸುವುದರೊಂದಿಗೆ ಅಜೇಯ ಶತಕ ಪೂರೈಸಿದರು. ಅವರ ಇನಿಂಗ್ಸ್ 10 ಬೌಂಡರಿ ಮತ್ತು ಮೂರು ಸಿಕ್ಸರ್ ಒಳಗೊಂಡಿತ್ತು. ಕರ್ನಾಟಕ 40.5 ಓವರ್‌ಗಳಲ್ಲಿ 7 ವಿಕೆಟ್‌ಗೆ 214 ರನ್ ಗಳಿಸಿತು. ಪುದುಚೇರಿಯ ವಿಜಯ್ ರಾಜಾರಾಮ್ ಮತ್ತು ಅಮನ್ ಹಕೀಮ್ ಖಾನ್ ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಪುದುಚೇರಿ: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 211 (ಅರುಣ್ ಕಾರ್ತಿಕ್ 71, ಅಮನ್ ಹಕೀಂ ಖಾನ್ 45, ಸಾಗರ್ ಉದೇಶಿ 21; ವಿದ್ಯಾಧರ ಪಾಟೀಲ 27ಕ್ಕೆ 4, ಶ್ರೇಯಸ್ ಗೋಪಾಲ್ 44ಕ್ಕೆ 2). ಕರ್ನಾಟಕ: 40.5 ಓವರ್‌ಗಳಲ್ಲಿ 7ವಿಕೆಟ್‌ಗೆ 214 (ಸ್ಮರಣ್ ಆರ್. ಔಟಾಗದೇ 100, ಶ್ರೇಯಸ್ ಗೋಪಾಲ್ 40; ವಿಜಯ್ 40ಕ್ಕೆ 3, ಅಮನ್ ಹಕೀಂ ಖಾನ್ 49ಕ್ಕೆ 2). **ಫಲಿತಾಂಶ: ಕರ್ನಾಟಕಕ್ಕೆ 3 ವಿಕೆಟ್ ಜಯ.**

ಏಕದಿನ ತಂಡಕ್ಕೆ ಮರಳಿದ ರೂಟ್

ಲಂಡನ್ (ಪಿಟಿಐ): ಅನುಭವಿ ಬ್ಯಾಟರ್ ಜೋ ರೂಟ್ ಅವರು ಮುಂದಿನ ತಿಂಗಳ ಕೊನೆಯಲ್ಲಿ ಏಕದಿನ ಸರಣಿಗೆ ಭಾರತ ಪ್ರವಾಸ ಮಾಡಲಿರುವ ಮತ್ತು ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಲಿರುವ ಇಂಗ್ಲೆಂಡ್ ತಂಡಕ್ಕೆ ಮರಳಿದ್ದಾರೆ.

ಇಂಗ್ಲೆಂಡ್ ತಂಡ ಜನವರಿ–ಫೆಬ್ರುವರಿ ತಿಂಗಳಲ್ಲಿ ಭಾರತ ಪ್ರವಾಸ ಕೈಗೊಳ್ಳಲಿದ್ದು ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ.ಕಳೆದ ವರ್ಷದ ನವೆಂಬರ್‌ನಲ್ಲಿ ಭಾರತದಲ್ಲಿ ನಡೆದ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಅವರು ಕೊನೆಯ ಬಾರಿ ಏಕದಿನ ತಂಡದಲ್ಲಿ ಆಡಿದ್ದರು. ಎಡಗಾಲಿನ ಸ್ನಾಯುರಜ್ಜುನೋವಿನಿಂದ ಬಳಲುತ್ತಿರುವ ಆಲ್‌ರೌಂಡರ್ ಮತ್ತು ಟೆಸ್ಟ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರನ್ನು ಆಯ್ಕೆಗೆ ಪರಿಗಣಿಸಿಲ್ಲ.ಜೋಸ್ ಬಟ್ಲರ್ ತಂಡದ ನಾಯಕತ್ವ ವಹಿಸಿದ್ದಾರೆ. ಏಕದಿನ ಸರಣಿಗೆ ಮೊದಲು ನಡೆಯುವ ಟಿ20 ಸರಣಿಗೂ ಅವರು ನೇತೃತ್ವ ವಹಿಸಲಿದ್ದಾರೆ.

ಜೋ ರೂಟ್

ಟಿ20 ಪಂದ್ಯಗಳ ವೇಳಾಪಟ್ಟಿ

ದಿನಾಂಕ	ಸ್ಥಳ
ಜ.22	ಕೋಲ್ಕತ್ತ
ಜ.25	ಚೆನ್ನೈ
ಜ.28	ರಾಜಕೋಟ್
ಜ31	ಪುಣೆ
ಫೆ2	ಮುಂಬೈ

ಏಕದಿನ ವೇಳಾಪಟ್ಟಿ

ದಿನಾಂಕ	ಸ್ಥಳ
ಫೆ6	ನಾಗ್ಪುರ
ಫೆ9	ಕಟಕ್
ಫೆ12	ಅಹ್ಮದಾಬಾದ್

ಭಾರತಕ್ಕೆ ಸರಣಿ ಗೆಲುವಿನ ಗುರಿ

ವಡೋದರಾ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ಸಾರಥ್ಯದ ಭಾರತ ಮಹಿಳಾ ಕ್ರಿಕೆಟ್ ತಂಡವು ಮಂಗಳವಾರ ಇಲ್ಲಿ ನಡೆಯುವ ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಏಕದಿನ ಪಂದ್ಯವನ್ನು ಗೆದ್ದು, ಸರಣಿಯನ್ನು ವಶಪಡಿಸಿಕೊಳ್ಳುವ ಛಲದಲ್ಲಿದೆ.

ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯವನ್ನು ಭಾರತದ ವನಿತೆಯರು ಸಾಂಘಿಕ ಪ್ರದರ್ಶನ ನೀಡಿ ಭಾನುವಾರ 211 ರನ್‌ಗಳಿಂದ ಸುಲಭವಾಗಿ ಜಯಿಸಿದ್ದರು. ಇನ್ನೊಂದೆಡೆ ಪ್ರವಾಸಿ ತಂಡವು ಸರಣಿಯನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿದೆ.

ಸ್ಮೃತಿ ಮಂದಾನ

ಮುಂದಿನ ವರ್ಷ ಭಾರತದ ಆತಿಥ್ಯದಲ್ಲಿ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿ ನಡೆಯಲಿದೆ. ಹೀಗಾಗಿ ಹರ್ಮನ್‌ಪ್ರೀತ್ ಬಳಗಕ್ಕೆ ಮುಂದೆ ನಡೆಯುವ ಪ್ರತಿಯೊಂದು ಪಂದ್ಯವು ಮಹತ್ವದ್ದಾಗಿದೆ.

ಕಳೆದ ಪಂದ್ಯದಲ್ಲಿ 91 ರನ್ ಗಳಿಸಿರುವ ಸ್ಮೃತಿ ಮಂದಾನ ಉತ್ತಮ ಲಯದಲ್ಲಿದ್ದಾರೆ. ಮಹಿಳಾ ಅಂತರರಾಷ್ಟ್ರೀಯ ಕ್ರಿಕೆಟ್‌ನ ಕ್ಯಾಲೆಂಡರ್ ವರ್ಷದಲ್ಲಿ ಅತಿ ಹೆಚ್ಚು ಸ್ಕೋರ್ (1602 ರನ್) ಗಳಿಸಿದ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30, ನೇರ ಪ್ರಸಾರ: ಸ್ಪೋರ್ಟ್ಸ್ 18 ಮತ್ತು ಜಿಯೊ ಸಿನಿಮಾ ಆ್ಯಪ್

ಹದಗೆಟ್ಟ ಆರೋಗ್ಯ: ವಿನೋದ್ ಕಾಂಬ್ಳಿ ಆಸ್ಪತ್ರೆಗೆ

ಮುಂಬೈ (ಪಿಟಿಐ): ಆರೋಗ್ಯ ಹದಗೆಟ್ಟ ಕಾರಣ ಮಾಜಿ ಕ್ರಿಕೆಟ್ ತಾರೆ ವಿನೋದ್ ಕಾಂಬ್ಳಿ ಅವರನ್ನು ಠಾಣಾ ಜಿಲ್ಲೆಯ ಭಿವಂಡಿಯ ಆಸ್ಪತ್ರೆಗೆ ದಾಖಲಿಸಲಾಗಿದೆ.



ವಿನೋದ್ ಕಾಂಬ್ಳಿ

ಅಭಿಮಾನಿಯೊಬ್ಬರುಕಾಂಬ್ಳಿ ಅವರನ್ನು ಚಿಕಿತ್ಸೆಗಾಗಿ ಶನಿವಾರ ತಮ್ಮದೇ ಒಡೆತನದ ಆಸ್ಪತ್ರೆಗೆ ದಾಖಲಿಸಿದ್ದಾರೆ. 52 ವರ್ಷ ವಯಸ್ಸಿನ ಮಾಜಿ ಕ್ರಿಕೆಟಿಗನ ಆರೋಗ್ಯ ಸ್ಥಿರವಾಗಿದೆ. ಆಸ್ಪತ್ರೆಗೆ ದಾಖಲಿಸಲು ಕಾರಣವಾದ ಕಾಯಿಲೆ ಸ್ವರೂಪದ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ಕಾಂಬ್ಳಿ ಅವರು 1993–2000 ಅವಧಿಯಲ್ಲಿ 17 ಟೆಸ್ಟ್, 104 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ಶಿವಾಜಿ ಪಾರ್ಕ್‌ನಲ್ಲಿ ಇತ್ತೀಚೆಗೆ ಹಿರಿಯ ಕೋಚ್ ರಮಾಕಾಂತ ಅಚರೇಕರ್ ಅವರ ಸ್ಮಾರಕದ ಉದ್ಘಾಟನೆ ಸಮಾರಂಭದಲ್ಲಿ ಕಾಂಬ್ಳಿ ಅವರನ್ನು ಸಚಿನ್ ತೆಂಡೂಲ್ಕರ್ ಭೇಟಿ ಮಾಡಿದ್ದ ದೃಶ್ಯದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿತ್ತು. ಕಾಂಬ್ಳಿ, ಸಚಿನ್ ಇಬ್ಬರೂ ಅಚರೇಕರ್ ಗರಡಿಯಲ್ಲಿ ಪಳಗಿದವರು.

ಖೇಲ್‌ರತ್ನ ಪ್ರಶಸ್ತಿ: ಶಿಫಾರಸು ಪಟ್ಟಿಯಲ್ಲಿಲ್ಲ ಮನು ಹೆಸರು!

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಶೂಟರ್ ಮನು ಭಾಕರ್ ಅವರನ್ನು ಈ ವರ್ಷದ ಅತ್ಯುನ್ನತ ಕ್ರೀಡಾ ಗೌರವ 'ಧ್ಯಾನ್ ಚಂದ್ ಖೇಲ್ ರತ್ನ' ಪ್ರಶಸ್ತಿಗೆ ಕಡೆಗಣಿಸಲಾಗಿದೆ ಎಂದು ವರದಿಯಾಗಿದೆ.

ಆದರೆ, ಈ ಕುರಿತು ಪ್ರತಿಕ್ರಿಯಿಸಿರುವ ಕ್ರೀಡಾ ಸಚಿವಾಲಯದ ಉನ್ನತ ಮೂಲವೊಂದು, ಪ್ರಶಸ್ತಿಗೆ ಹೆಸರುಗಳನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ. ಅಲ್ಲದೆ, ಪ್ರಶಸ್ತಿಗೆ ಮನು ಅರ್ಜಿ ಸಲ್ಲಿಸಿಲ್ಲ ಎಂದು ಹೇಳಿದೆ.

ಆಗಸ್ಟ್‌ನಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ 22 ವರ್ಷ ವಯಸ್ಸಿನ ಭಾಕರ್ ಅವರು 10 ಮೀಟರ್ ಏರ್ ಪಿಸ್ತೂಲ್ ವೈಯಕ್ತಿಕ ಮತ್ತು 10 ಮೀ ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಗಳಲ್ಲಿ ಕಂಚಿನ ಪದಕ ಗೆದ್ದಿದ್ದರು. ಈ ಮೂಲಕ ಒಲಿಂಪಿಕ್ಸ್‌ನ ಒಂದೇ ಆವೃತ್ತಿಯಲ್ಲಿ ಎರಡು ಪದಕಗಳನ್ನು ಗೆದ್ದ ಸ್ವತಂತ್ರ ಭಾರತದ ಮೊದಲ ಅಥ್ಲೀಟ್ ಎಂಬ ದಾಖಲೆಗೆ ಪಾತ್ರರಾಗಿದ್ದರು.

'ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಅವರು ಶಿಫಾರಸುಗಳನ್ನು ಒಂದು ಅಥವಾ ಎರಡು ದಿನಗಳಲ್ಲಿ ಪರಿಶೀಲಿಸಿ ನಿರ್ಧರಿಸುತ್ತಾರೆ. ಮನು ಭಾಕರ್ ಅವರ ಹೆಸರು ಅಂತಿಮ ಪಟ್ಟಿಯಲ್ಲಿರುವ ಸಾಧ್ಯತೆಯಿದೆ' ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಅರ್ಜಿ ಸಲ್ಲಿಸಿಲ್ಲ ಎಂಬ ಕ್ರೀಡಾ ಸಚಿವಾಲಯದ ಹೇಳಿಕೆಯನ್ನು ಅಲ್ಲಗಳೆದಿರುವ ಮನು ತಂದೆ ರಾಮ್ ಕಿಶನ್ ಭಾಕರ್, 'ನಾವು ಕ್ರಮಬದ್ಧವಾಗಿ ಅರ್ಜಿ ಹಾಕಿದ್ದೇವೆ. ಕಳೆದ 2-3 ವರ್ಷಗಳಿಂದ ನಿರಂತರವಾಗಿ ಖೇಲ್ ರತ್ನ, ಪದ್ಮಶ್ರೀ, ಪದ್ಮಭೂಷಣ ಸೇರಿದಂತೆ ಎಲ್ಲಾ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಲಾಗಿದೆ. ಅದಕ್ಕೆ ಸಂಬಂಧಿಸಿದ ಪುರಾವೆ ನಮ್ಮ ಬಳಿ ಇದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಕೊಕ್ಕೊ ವಿಶ್ವಕಪ್‌ಗೆ 41 ತಂಡಗಳು

ನವದೆಹಲಿ (ಪಿಟಿಐ): ಮುಂದಿನ ತಿಂಗಳ ಇಲ್ಲಿನ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ನಡೆಯಲಿರುವ ಕೊಕ್ಕೊ ವಿಶ್ವಕಪ್‌ನ ಪುರುಷರ ವಿಭಾಗದಲ್ಲಿ 21 ತಂಡಗಳು ಮತ್ತು ಮಹಿಳೆಯರ ವಿಭಾಗದಲ್ಲಿ 20 ತಂಡಗಳು ಭಾಗವಹಿಸಲಿವೆ.

ಜನವರಿ 23 ರಿಂದ 19ರವರೆಗೆ ನಡೆಯಲಿರುವ ಈ ಮೊದಲ ವಿಶ್ವಕಪ್‌ನ ಆತಿಥ್ಯವನ್ನು ಭಾರತ ವಹಿಸುತ್ತಿದೆ. ಈ ಮೊದಲು ಉಭಯ ವಿಭಾಗಗಳಲ್ಲಿ ತಲಾ 16 ತಂಡಗಳು ಭಾಗವಹಿಸುವುದಾಗಿ ತಿಳಿಸಲಾಗಿತ್ತು. ಆದರೆ ಒಳ್ಳೆಯ ಪ್ರತಿಕ್ರಿಯೆ ಕಂಡುಬಂದ ಕಾರಣ ತಂಡಗಳ ಸಂಖ್ಯೆ ಹೆಚ್ಚಿಸಲು ಆಯೋಜಕರು ತೀರ್ಮಾನಿಸಿದ್ದಾರೆ.ಏಷ್ಯಾ, ಆಫ್ರಿಕಾ, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಯುರೋಪ್ ಖಂಡಗಳ ರಾಷ್ಟ್ರಗಳು ಬಹುನಿರೀಕ್ಷಿತ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುತ್ತಿವೆ.13ರಂದು ಉದ್ಘಾಟನಾ ಸಮಾರಂಭದ ನಂತರ ಮೊದಲ ಪಂದ್ಯ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ನಡೆಯಲಿದೆ.ಲೀಗ್ ಪಂದ್ಯಗಳು ಜನವರಿ 16ರವರೆಗೆ ನಡೆಯಲಿವೆ. ಕ್ವಾರ್ಟರ್‌ಫೈನಲ್, ಸೆಮಿಫೈನಲ್ಸ್ 17 ಮತ್ತು 18ರಂದು ನಿಗದಿಯಾಗಿದ್ದು, 19ರಂದು ಫೈನಲ್ಸ್ ನಡೆಯಲಿದೆ.